# ಅನಿಕೇತನ


ಕರ್ನಾಟಕ ಸಾಹಿತ್ಯ ಅಕಾಡೆಮಿಯ ತ್ರೈಮಾಸಿಕ

ಜುಲೈ–ಸೆಪ್ಟೆಂಬರ್ ೨೦೨೦

ಸಂಚಿಕೆ ೧೧೫



ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಡಾ. ಎ. ರಘುರಾಂ**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು – ೫೬೦ ೦೦೨

ದೂರವಾಣಿ : ೦೮೦–೨೨೨೧೧೭೩೦ / ೨೨೧೦೬೪೬೦

ಇ–ಮೇಲ್ : sahithya.academy@gmail.com

ವೆಬ್‌ಸೈಟ್ : www.karnatakasahithyaacademy.org

**ANIKETHANA** (A quarterly journal of Kannada Language and Literature) July 2020 - September 2020. Edited by : Dr. A. Raghuram, Published by : Kariyappa N., Registrar, Karnataka Sahithya Academy, Kannada Bhavana, J.C. Road, Bengaluru - 560 002.

ಪ್ರಧಾನ ಸಂಪಾದಕರು
**ಡಾ. ಬಿ.ವಿ. ವಸಂತಕುಮಾರ್**
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಂಪಾದಕರು
**ಡಾ. ಎ. ರಘುರಾಂ**

ಜುಲೈ–ಸೆಪ್ಟೆಂಬರ್ ೨೦೨೦

ಮುದ್ರಣ : ೨೦೨೧
ಪ್ರತಿಗಳು : ೨೦೦೦
ಬೆಲೆ : ರೂ. ೬೦/–
ಪುಟಗಳು : viii+೧೯೫=೨೦೩
ಮುಖಪುಟ ಚಿತ್ರ : ಏಕಾಕ್ಷರ ಪ್ರಿಂಟರ್ಸ್

Pages : viii+195=203
Price : Rs. 60/-
First Impression : 2021
Copies : 2000

**ಬಿಡಿ ಪ್ರತಿ** : ರೂ. ೬೦/–
**ವಾರ್ಷಿಕ ಪ್ರತಿ** : ರೂ. ೨೫೦/–
**ಆಜೀವ ಚಂದಾ** : ರೂ. ೧೫೦೦/–

ಪ್ರಕಾಶಕರು
**ಕರಿಯಪ್ಪ ಎನ್,** ರಿಜಿಸ್ಟ್ರಾರ್
**ಕರ್ನಾಟಕ ಸಾಹಿತ್ಯ ಅಕಾಡೆಮಿ.**

ಮುದ್ರಕರು
**ಏಕಾಕ್ಷರ ಪ್ರಿಂಟರ್ಸ್**
ನಂ. 2, 5ನೇ 'ಬಿ' ಮುಖ್ಯರಸ್ತೆ, ಬ್ಯಾಂಕ್ ಆಫ್ ಬರೋಡಾ ರಸ್ತೆ
ಕಾಮಾಕ್ಷಿಪಾಳ್ಯ, ಬೆಂಗಳೂರು – 560 079. ಮೊಬೈಲ್ : 9844365538

# ಪ್ರಧಾನ ಸಂಪಾದಕರ ಮಾತು

ಕರ್ನಾಟಕ ಸಾಹಿತ್ಯ ಅಕಾಡೆಮಿ ೧೯೬೧ರಲ್ಲಿ ಪ್ರಾರಂಭವಾದಂದಿನಿಂದ ಹಲವು ಮಹತ್ವದ ಮೈಲಿಗಲ್ಲುಗಳನ್ನು ನಿರ್ಮಿಸುತ್ತಾ ಬಂದಿದೆ. ಅವುಗಳಲ್ಲಿ 'ಅನಿಕೇತನ' ತ್ರೈಮಾಸಿಕ ಪತ್ರಿಕೆ ಒಂದು. ಹಿಂದೆ ಅದು ಅನುವಾದಗಳನ್ನೂ ಒಳಗೊಂಡು ಪ್ರಕಟವಾಗುತ್ತಿತ್ತು. ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಅನುವಾದ ಕ್ಷೇತ್ರಕ್ಕೆ ಮೀಸಲಾಗಿರುವುದರಿಂದ ಪ್ರಾಧಿಕಾರದಿಂದಲೂ 'ಅನುವಾದ' ಲೇಖನಗಳು ಸಂಚಿಕೆಯೊಂದರಲ್ಲಿ ಪ್ರಕಟವಾಗುತ್ತಿರುವುದರಿಂದ 'ಅನಿಕೇತನ'ದ ಸ್ವರೂಪವನ್ನು ಈ ಹಿಂದೆಯೇ ಬದಲಾಯಿಸಲಾಗಿದೆ. 'ಅನಿಕೇತನ' ಒಂದು ವೈವಿಧ್ಯಮಯವಾದ ಬಹುರುಚಿಯ ಸಾಹಿತ್ಯ ಪತ್ರಿಕೆಯಾಗಿ ಬರಬೇಕೆಂಬುದು ನಮ್ಮ ತಂಡದ ಆಶಯ. ಜೊತೆಗೆ ಕೆಲವು ವಿಶೇಷ ಅಗತ್ಯಕ್ಕನುಗುಣವಾಗಿ ಕತ್ತಲೆಯ ಮೇಲೆ ಬೆಳಕು ಚೆಲ್ಲುವ ಹೊಸದಾರಿಗಳನ್ನು ಸೃಷ್ಠಿಸುವ, ಮುಚ್ಚಿ ಹೋಗಿರುವ ಅಥವಾ ಮುಳ್ಳು ಎಸೆದಿರುವ ದೇಸೀದಾರಿಗಳನ್ನು ಪತ್ತೆಹಚ್ಚಿ ಮತ್ತೆ ನಡೆದಾಡಲು ಆಗುವಂತೆ ಮಾಡುವ ವಿಶೇಷ ಸಂಚಿಕೆಗಳನ್ನು ಪ್ರಕಟಿಸಬೇಕೆಂಬುದು ನಮ್ಮೆಲ್ಲರ ಇಚ್ಛೆ. ಒಟ್ಟಾರೆ 'ಅನಿಕೇತನ'ವು ನಮ್ಮನ್ನು ಕತ್ತಲೆಯಿಂದ ಬೆಳಕಿನ ಕಡೆಗೆ, ಅಸತ್ಯದಿಂದ ಸತ್ಯದ ಕಡೆಗೆ, ಮರಣತ್ವದಿಂದ ಅಮರತ್ವದಕಡೆಗೆ ಕೊಂಡೊಯ್ಯಬೇಕೆಂಬುದು ಪರಂಪರಾಗತವಾಗಿ ಬಂದಿರುವ ಪ್ರಾರ್ಥನೆ. ಆ ಸಾಧ್ಯತೆಯು ಒದಗುವುದು ಒಟ್ಟಾಗಿ ಜಾತಿ, ಮತ, ಪಂಥ, ಭಾಷೆ, ಬಣ್ಣ, ವೇಷ, ಲಿಂಗ ವಯಸ್ಸು, ವೃತ್ತಿ ಮೊದಲಾದ ಎಲ್ಲಾ ರೀತಿಯ ತರತಮಗಳನ್ನು ಮೀರಿ ಸಮರಸದಿಂದ ಒಟ್ಟಾಗಿ ಕುಳಿತು ಉಂಡಾಗ, ಒಟ್ಟಾಗಿ ವಾಸಿಸಿದಾಗ, ನಮ್ಮ ನಡುವೆ ಅಡ್ಡಗೋಡೆಗಳನ್ನು ಸೃಷ್ಟಿಸಿರುವ ಪೂರ್ವಾಗ್ರಹ, ಅವಿವೇಕ, ದ್ವೇಷ, ಸ್ವಾರ್ಥ, ಸಣ್ಣತನಗಳನ್ನು ಕಳೆದುಕೊಂಡು ಪರಸ್ಪರ ಪ್ರೀತಿಸುತ್ತಾ ಯಾರನ್ನೂ ಯಾರೂ ದ್ವೇಷಿಸದಂತೆ ಶಾಂತಿಯಿಂದ ಬದುಕಿದಾಗ ನಾವು ನೀವು ಕತ್ತಲೆಯಿಂದ ಬೆಳಕಿನ ಕಡೆಗೆ, ಅಸತ್ಯದಿಂದ ಸತ್ಯದ ಕಡೆಗೆ, ಮರಣತ್ವದಿಂದ ಅಮರತ್ವದಕಡೆಗೆ ಸಾಗಲು ಸಾಧ್ಯ. ಪರಮಶಾಂತಿಯ ಮೈಮನಸ್ಸುಗಳ ಮೂಲಕ ವಿಶ್ವಶಾಂತಿಯನ್ನು ಸೃಷ್ಟಿಸಲು ಸಾಧ್ಯ. ಅದನ್ನು ಉಪನಿಷತ್ತುಗಳಾದಿಯಾಗಿ ಕುವೆಂಪು ಅವರ 'ಅನಿಕೇತನ' ಕವಿತೆಯ ವಿಶ್ವ ಮಾನವ ಸಂದೇಶದವರೆಗೆ ಭಾರತೀಯ ಸಾಹಿತ್ಯ, ಕನ್ನಡ ಸಾಹಿತ್ಯ ಸಾರುತ್ತಾ ಬಂದಿದೆ. ಅದರ ಪ್ರತೀಕ 'ಅನಿಕೇತನ'.

ಇಂಥ 'ಅನಿಕೇತನ'ವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರಾರಂಭಿಸಿ ಮುನ್ನಡೆಸಿಕೊಂಡು ಬಂದಿದೆ. ೧೩೦೦ ಕ್ಕೂ ಹೆಚ್ಚು ಸಹೃದಯರು 'ಅನಿಕೇತನ' ಪತ್ರಿಕೆಯ ಆಜೀವ ಚಂದಾದಾರರಾಗಿದ್ದಾರೆ. ಆಜೀವ ಚಂದಾಹಣ ೧೦೦೦–೦೦

ರೂಪಾಯಿಗಳಾಗಿರುತ್ತದೆ. ಇನ್ನೂ ಹೆಚ್ಚಿನ ಓದುಗರು ಅನಿಕೇತನದ ಆಜೀವ ಚಂದಾದಾರರಾಗಬೇಕೆಂದು ವಿನಂತಿಸುತ್ತೇನೆ. ೧೩೦೦ ಜನರಿರುವ ಸಂಖ್ಯೆಯನ್ನು ೫೦೦೦ಕ್ಕೆ ಏರಿಸಬೇಕೆಂಬುದು ನಮ್ಮ ಉದ್ದೇಶವಾಗಿದೆ. ದಯಮಾಡಿ ತಾವು ಚಂದಾದಾರರಾಗಿರದಿದ್ದಲ್ಲಿ ಚಂದಾದಾರರಾಗಬೇಕು ಹಾಗೂ ತಮ್ಮ ಬಂಧು ಮಿತ್ರರೂ ಚಂದಾದಾರರಾಗುವಂತೆ ಪ್ರೋತ್ಸಾಹಿಸಬೇಕೆಂದು ಈ ಮೂಲಕ ಮನವಿ ಮಾಡುತ್ತೇನೆ. ಲೇಖಕರು ಹೆಚ್ಚಿನ ಸಂಖ್ಯೆಯಲ್ಲಿ ಅನಿಕೇತನಕ್ಕೆ ತಮ್ಮ ಉತ್ತಮ ಲೇಖನಗಳನ್ನು ಕಳಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಲೇಖಕರು, ಓದುಗರ ನಡುವೆ ಅಕಾಡೆಮಿಯು ಅನಿಕೇತನದ ಮೂಲಕ ಒಂದು ರಸಸೇತುವೆಯಾಗಬಯಸುತ್ತದೆ. ಆದ್ದರಿಂದ ಕನ್ನಡಿಗರು 'ಅನಿಕೇತನ'ಕ್ಕೆ ನಿಕೇತನರಾಗಬೇಕೆಂದು ಕೋರುತ್ತೇನೆ.

ನಮ್ಮ ತಂಡ ೨೦೧೯ ಅಕ್ಟೋಬರ್ ತಿಂಗಳಲ್ಲಿ ಜವಾಬ್ದಾರಿವಹಿಸಿಕೊಂಡ ಬಳಿಕ ಅಮೂಲ್ಯವಾದ ಕೆಲವು ಪುಸ್ತಕಗಳನ್ನು ಮರುಮುದ್ರಿಸುವ ನಿರ್ಣಯ ಕೈಗೊಂಡೆವು. ವಿಶೇಷ ಘಟಕ ಹಾಗೂ ಗಿರಿಜನ ಯೋಜನೆಯಡಿಯಲ್ಲಿ ಪ.ಜಾ/ಪ.ಪಂ ಸಮುದಾಯಗಳಿಗಾಗಿ ಬಿಡುಗಡೆಯಾಗಿದ್ದ ಹಣ ಸಂಪೂರ್ಣ ಬಳಕೆಯಾಗದಿರುವುದನ್ನು ಗಮನಿಸಿ ಅದರ ಸದ್ಬಳಕೆಗಾಗಿ ಕಾರ್ಯಕ್ರಮ ರೂಪಿಸಲು ಮುಂದಾದೆವು. ಅದೇ ಸಂದರ್ಭದಲ್ಲಿ ೨೦೨೦ನೆಯ ಸಾಲಿನ 'ಅನಿಕೇತನ' ಪತ್ರಿಕೆಯ ಸಂಚಿಕೆಗಳನ್ನು ಸಂಪಾದಿಸಿಕೊಡಲು ಡಾ.ಎ.ರಘುರಾಂ ಅವರನ್ನು ಕೋರುವುದೆಂದು ತೀರ್ಮಾನಿಸಿದೆವು. ಡಾ.ಎ.ರಘುರಾಂ ಅವರು ನಮ್ಮ ಮನವಿಯನ್ನು ಒಪ್ಪಿ ೨೦೨೦ನೆಯ ಸಾಲಿನಲ್ಲಿ ನಾಲ್ಕು ಸಂಚಿಕೆಗಳನ್ನು ಸಂಪಾದಿಸಿಕೊಡಲಿದ್ದಾರೆ. ಅವರಿಗೆ ನಾನು ವೈಯ್ಯಕ್ತಿಕವಾಗಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪರವಾಗಿ ವಂದಿಸುತ್ತೇನೆ.

ಪ್ರಸ್ತುತ 'ಅನಿಕೇತನ' ಸಂಚಿಕೆಯಲ್ಲಿ ಒಟ್ಟು ೧೮ ಲೇಖನಗಳಿವೆ. ವಿವಿಧ ವಿಷಯಗಳ ಮೇಲೆ ವಿದ್ವತ್ಪೂರ್ಣ ಲೇಖನಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರಿಗೂ ವಂದಿಸುತ್ತೇನೆ. ಸುಂದರವಾಗಿ ಮುದ್ರಿಸಿದ ಬಳಗಕ್ಕೂ, ನಮ್ಮ ಸಿಬ್ಬಂದಿ ವರ್ಗಕ್ಕೂ, ಸರ್ವ ಸದಸ್ಯರಿಗೂ ಹಾಗೂ ಎಲ್ಲ ಓದುಗರಿಗೂ ವಂದಿಸುತ್ತೇನೆ.

**– ಡಾ. ಬಿ.ವಿ. ವಸಂತಕುಮಾರ್**
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

# ಸಂಪಾದಕೀಯ

'ಅನಿಕೇತನ' ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರಕಟಿಸುತ್ತಿರುವ ತ್ರೈಮಾಸಿಕ. ಇದು 115ನೆಯ (ಜುಲೈ– ಸೆಪ್ಟೆಂಬರ್ 2020) ಸಂಚಿಕೆಯಾಗಿದೆ. ಕನ್ನಡ ಸೃಜನಶೀಲ ಭಾಷೆ ಎಂದು ಪ್ರೀತಿಸುವವರು ತಮ್ಮದೇ ಆದ ನೆಲೆಗಳಲ್ಲಿ ಕನ್ನಡ ಕಟ್ಟಲು ಪ್ರಯತ್ನಿಸುತ್ತಿರುವುದು ಸಂತೋಷದ ಸಂಗತಿ. ಕನ್ನಡ ಸಾಹಿತ್ಯದಲ್ಲಿ ಹೊಸ ಹೊಸ ಪುಸ್ತಕಗಳು ಪ್ರಕಟವಾಗುತ್ತಿರುವುದು ನಮ್ಮ ಭಾಷೆಯ ಜೀವಂತಿಕೆಯ ಲಕ್ಷಣವೇ. ಇದು ಆಶಾದಾಯಕ ಹಾಗೂ ನಮ್ಮನ್ನು ನಾವೇ ಬೆನ್ನು ತಟ್ಟಿಕೊಳ್ಳಬೇಕಾದ ಸಂಗತಿ. ಹೊಸ ತಲೆಮಾರಿನ ಅನೇಕ ಕವಿಗಳು, ಕತೆಗಾರರು, ವಿಮರ್ಶಕರು ಹೊಸ ಅಲೆಯನ್ನೇ ಸೃಷ್ಟಿಸುತ್ತಿದ್ದಾರೆ. ಈ ನಿರಂತರ ಯಾನ ಹೀಗೆ ಮುಂದುವರಿಸಲು ಇಂತಹ ಸಾಹಿತ್ಯ ಸಂಚಿಕೆಗಳು ನೆಪ ಮಾತ್ರ. ಕನ್ನಡ ವಿದ್ವತ್ ವಿವೇಕ ಸೃಷ್ಟಿಸಿದ ದಾರಿ ದೊಡ್ಡದು ಅದು ಮಹಾ ಮಾರ್ಗವಾಗಿ ಎಂದೂ ಉಳಿಯಬೇಕೆನ್ನುವುದೇ ಕನ್ನಡಿಗರೆಲ್ಲರ ಕನಸೂ ಕೂಡ. ನಾಡಿನ ಸಾಹಿತ್ಯಾಸಕ್ತರು, ಚಿಂತಕರು ತಮಗೆ ತೋರಿದ ಕೆಲವು ವಿಷಯಗಳ ಮೇಲೆ ಚರ್ಚಿಸಿದ್ದಾರೆ. ಸಾಹಿತ್ಯ ಅಕಾಡೆಮಿ ಪುರಸ್ಕಾರ ಪಡೆದ ಪುಸ್ತಕಗಳನ್ನೇ ಕೇಂದ್ರ ಮಾಡಿಕೊಂಡು ಒಂದು ಸಂಚಿಕೆಯನ್ನು ರೂಪಿಸಬೇಕೆಂದು ಉದ್ದೇಶಿಸಿದ್ದೆವು. ಈ ಸಂಚಿಕೆ ಹಾಗೂ ಮುಂದಿನ ಸಂಚಿಕೆಗಳಲ್ಲಿ ಕಳಿಸಿದ ಲೇಖನಗಳನ್ನು ಪ್ರಕಟಿಸಲಾಗುವುದು. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಪ್ರಕಟಿಸಲಾಗಿದೆ.

ಸಂಪಾದಕನಾಗಿ ಜವಾಬ್ದಾರಿ ನಿರ್ವಹಿಸಲು ಹೇಳಿದ ನಂತರ ಮೊದಲ ಸಂಚಿಕೆಯನ್ನು ನೋಡಿ, ಉತ್ತಮವಾಗಿ ರೂಪಿಸಿದ್ದೀರಿ ಎಂದು ಹುರಿದುಂಬಿಸಿದ ಆತ್ಮೀಯ ಗೆಳೆಯರೂ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರೂ ಆದ ಡಾ. ಬಿ.ವಿ. ವಸಂತಕುಮಾರ್ ಅವರಿಗೆ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಆದ ಶ್ರೀ ಕರಿಯಪ್ಪ.ಎನ್ ಅವರಿಗೆ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಎಲ್ಲ ಸಿಬ್ಬಂದಿ ವರ್ಗಕ್ಕೆ, 'ಅನಿಕೇತನ' ಸಂಚಿಕೆಗೆ ಲೇಖನಗಳನ್ನು ನೀಡಿ ಸಹಕರಿಸಿದ ಲೇಖಕರಿಗೆ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನ ಬಂದ ಕೃತಿಗಳನ್ನು ವಿಮರ್ಶಿಸಿ, ಲೇಖನ ಕಳುಹಿಸಿದ ಲೇಖಕರಿಗೆ, ಅಕ್ಷರ ಜೋಡಣೆ

ಮಾಡಿದ ಶ್ರೀಮತಿ ಪ್ರಭಾ. ಜಿ ಅವರಿಗೆ ಹಾಗೂ ಅನಿಕೇತನ ಸಂಚಿಕೆಯನ್ನು ಎಂದಿನಂತೆ ಪ್ರೋತ್ಸಾಹಿಸುತ್ತಾ ಬಂದ ಓದುಗ ವರ್ಗಕ್ಕೆ ಧನ್ಯವಾದಗಳು.

**ಡಾ. ಎ. ರಘುರಾಂ,**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಮಹಾರಾಣಿ ಮಹಿಳಾ ಕಲಾ, ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು,
ಶೇಷಾದ್ರಿ ರಸ್ತೆ, ಬೆಂಗಳೂರು –560 001

# ಪರಿವಿಡಿ

೧. **ಗೋಪಾಲಕೃಷ್ಣ ಅಡಿಗರ 'ಮೋಹನ ಮುರಲಿ' – ಒಂದು ವಿಮರ್ಶೆ**
ಡಾ.ಸಿ.ಪಿ. ಸಿದ್ಧಾಶ್ರಮ

೨. **ಮಲಯಾಳಂನಲ್ಲಿ ಮಹಾಭಾರತಗಳು**
ಡಾ. ಮೋಹನ ಕುಂಟಾರ್

೩. **ಜಾನಪದ ಸಾರಸ್ವತಲೋಕದ ನೇಗಿಲಯೋಗಿ ಡಾ. ಕ್ಯಾತನಹಳ್ಳಿ ರಾಮಣ್ಣ**
ಡಾ. ಹಾಲತಿ ಸೋಮಶೇಖರ್

೪. **ಮಾರಿ ಆರಾಧನೆ : ಒಂದು ಜಾನಪದೀಯ ಅಧ್ಯಯನ**
ಡಾ.ಜಿ. ಸಣ್ಣಹನುಮಪ್ಪ

೫. **ಬೌದ್ಧಿಕ ದಾಸ್ಯದ ಬಿಡುಗಡೆಯ ದಾರಿಗಳು**
ಡಾ. ರೋಹಿಣಾಕ್ಷ ಶಿರ್ಲಾಲು

೬. **ಕನಕದಾಸ ಮತ್ತು ಶಿಶುನಾಳ ಶರೀಫರ ಕಾವ್ಯದಲ್ಲಿ ಸಮಾಜೋ–ಧಾರ್ಮಿಕ ಸಂವೇದನೆ**
ಡಾ. ವಿಠಲ್‌ರಾವ್ ಟಿ. ಗಾಯಕ್ವಾಡ್

೭. **ಶ್ರೀರಾಮಾಯಣ ದರ್ಶನದಲ್ಲಿ ಸ್ವಪ್ನಸಾಲು**
ಡಾ.ಕೆ.ವೈ. ನಾರಾಯಣಸ್ವಾಮಿ

೮. **ಕುವೆಂಪು–ಬೇಂದ್ರೆ ಕಾವ್ಯ ಪ್ರಣೀತ ರಾಷ್ಟ್ರೀಯತೆಯ ಪರಿಕಲ್ಪನೆ**
ಡಾ. ಅಪ್ಪಗೆರೆ ಸೋಮಶೇಖರ್

೯. **ಜಗವೆಲ್ಲ ನಗುತಿರಲಿ ಎಂದು ಆಶಿಸಿದ ಕವಿ ಈಶ್ವರ ಸಣಕಲ್ಲ**
ಅನಿತ ಕೆ.ವಿ.

೧೦. **ಹೆಗ್ಗೋಡಿಗೆ ಕೋಡು ಮೂಡಿಸಿದ ಕೆ.ವಿ.ಸುಬ್ಬಣ್ಣ**
ಡಾ. ಚನ್ನೇಶ್ ಹೊನ್ನಾಳಿ

೧೧. **ಚರಿತ್ರೆಯಲ್ಲಿ ಕಡಿದಷ್ಟು ಕುಡಿಯೊಡೆದ ಕುರನ್ಗ**
ಡಾ. ರವಿಕುಮಾರ ನೀಹ

೧೨. **ವಿಜಯಶಂಕರ ಅವರ 'ವಸುಧಾವಲಯ'ವನ್ನು ಕುರಿತ ಕೆಲವು ಮಾತುಗಳು**
ಡಾ. ಕೇಶವಶರ್ಮ. ಕೆ

೧೩. **ಜಿ.ಕೆ.ರವೀಂದ್ರಕುಮಾರ್ ಅವರ 'ತಾರಸಿ ಮಲ್ಹಾರ'**
ಪ್ರಜ್ಞಾ ಮತ್ತಿಹಳ್ಳಿ

೧೪. **ಒಳನೋಟಗಳ 'ಮೂರನೇ ಕಣ್ಣು!'**
ಡಾ. ನವೀನ್ ಕುಮಾರ್ ಎಚ್.ಸಿ

೧೫. **ಭರವಸೆಯ ಬೆಳಕು**
ಮೀನಾ ಮೈಸೂರು

೧೬. **ಮಾಯೆಗೆ ಮೂಡಿದ ಕಣ್ಣು**
ಡಾ.ಎ. ರಘುರಾಂ

೧೭. **ಪ್ರಖರ ಸ್ತ್ರೀತ್ವದ ಪ್ರತೀಕವಾಗಿ 'ಅಂಬೆ'**
ಡಾ. ಚೈತಾಲಿ ಕೆ.ಎಸ್.

೧೮. **ಚಿಕ್ಕಮನೆ :** ಉರ್ದುಮೂಲ **: ಜಯಂತ್ ಪರ್‌ಮಾರ್**
ಕನ್ನಡಕ್ಕೆ : ಸಿ.ಹೆಚ್. ಭಾಗ್ಯ

# ಗೋಪಾಲಕೃಷ್ಣ ಅಡಿಗರ 'ಮೋಹನ ಮುರಲಿ' ಒಂದು ವಿಮರ್ಶೆ

* ಡಾ.ಸಿ.ಪಿ.ಸಿದ್ಧಾಶ್ರಮ

ಕನ್ನಡದ ಶ್ರೇಷ್ಠ ಕವಿ ಗೋಪಾಲಕೃಷ್ಣ ಅಡಿಗರ 'ಮೋಹನ ಮುರಲಿ' ಕವನವು ಅಡಿಗರ ಕವನಗಳಲ್ಲಿ ಮಾತ್ರವಲ್ಲ ಇಡೀ ಕನ್ನಡ ಕವಿತೆಗಳಲ್ಲೆ ತುಂಬ ಜನಪ್ರಿಯವಾದ ಪ್ರಸಿದ್ಧವಾದ ಕವನವೆನ್ನಬೇಕು. ಅಡಿಗರು ಇದಕ್ಕಿಂತ ಉತ್ತಮವಾದ, ಶ್ರೇಷ್ಠವಾದ ಕವಿತೆಗಳನ್ನು ರಚಿಸಿದ್ದರೂ ಈ ಕವಿತೆ ಹೆಚ್ಚು ಜನಪ್ರಿಯವಾಗಲು ಇದರ ಗೇಯಗುಣ ಮತ್ತು ಆಧ್ಯಾತ್ಮಿಕ ಸಂವೇದನೆ ಕಾರಣವೆನ್ನಬೇಕು. ಒಂದು ಕವನ ಉತ್ತಮ ಕವಿತೆಯಾಗಿ ಜನಪ್ರಿಯತೆಯನ್ನೂ ಹೊಂದುವುದು ಅಪರೂಪದ ಸಂಗತಿಯೆನ್ನಬೇಕು. ಲೌಕಿಕ ನೆಲೆಯ ಸಾಂಸಾರಿಕ ಸುಖದಲ್ಲಿಯೇ ತನ್ಮಯವಾದ ಅದೇ ನೈಜಸುಖ, ನೈಜಬಾಳು ಎಂದುಕೊಂಡಿದ್ದ ಕವಿಯ ಮನಸ್ಸು ಇದ್ದಕಿದ್ದ ಹಾಗೆ ಅಲೌಕಿಕ ಸುಖದತ್ತ ಹೊರಳುವುದು, ಅದನ್ನು ಪಡೆಯಲು ತೀವ್ರತರವಾಗಿ ಹಂಬಲಿಸುವುದು ಹಾಗೂ ಲೌಕಿಕ ಬದುಕಿನ ಬಂಧನದಿಂದ ಬಿಡುಗಡೆ ಹೊಂದಲು ಹಾತೊರೆಯುವುದು ಈ ಕವಿತೆಯ ಮುಖ್ಯ ಆಶಯವೆನ್ನಬೇಕು.

ಯಾವ ಮೋಹನ ಮುರಲಿ ಕರೆಯಿತು ದೂರ ತೀರಕೆ ನಿನ್ನನು?
ಯಾವ ಬೃಂದಾವನವು ಸೆಳೆಯಿತು ನಿನ್ನ ಮಣ್ಣಿನಕಣ್ಣನು?

ಇವು ಕವಿತೆಯ ಆರಂಭದ ಚರಣಗಳು. 'ಮಣ್ಣಿನಕಣ್ಣು' ಎನ್ನುವಲ್ಲಿ ಕೇವಲ ಲೌಕಿಕ ಬದುಕಿನಲ್ಲಿ ಇಲ್ಲಿಯವರೆಗೆ ಆಸಕ್ತನಾಗಿದ್ದ ಕವಿಗೆ ಕೃಷ್ಣನ ಮನಮೋಹಕವಾದ ಕೊಳಲ ದನಿ ಕೇಳಿ ಅವನನ್ನು ಲೌಕಿಕ ಸೆಳೆತದಿಂದ ಬಿಡಿಸಿ ಆಧ್ಯಾತ್ಮದತ್ತ ಸೆಳೆದುಕೊಳ್ಳುತ್ತಿರುವ ಸೂಚನೆ ಸಿಗುತ್ತದೆ. ಅದು ಕೇವಲ ಸೂಚನೆ ಮಾತ್ರವಾಗಿರದೆ ಆಧ್ಯಾತ್ಮದ ಸಂವೇದನೆ ತುಂಬಿರುವ ಆ ಕೊಳಲ ದನಿ ಅವನನ್ನು 'ದೂರತೀರಕೆ' ಅಂದರೆ ಅಲೌಕಿಕವಾದ ಆಧ್ಯಾತ್ಮದತ್ತ ಕರೆಯುತ್ತಿರುವ ಸ್ಪಷ್ಟ ಸಂದೇಶವಿರುವುದು ಕಂಡು ಬರುತ್ತದೆ. ಕೃಷ್ಣನ ಆಧ್ಯಾತ್ಮಿಕ ಸತ್ವಕ್ಕೆ ಸಂಕೇತವಾದ 'ಬೃಂದಾವನ' ಎಂಬ

ಪದಪ್ರಯೋಗವೂ ಇದನ್ನೆ ಸೂಚಿಸುತ್ತದೆ. 'ಬೃಂದಾವನ' ಸೆಳೆಯುವುದೆಂದರೆ ಕೊಳಲದನಿಯ ಮೂಲಕ ಕವಿಗಾಗುತ್ತಿರುವ ಆಧ್ಯಾತ್ಮದ ಸೆಳೆತದ ಸ್ಪಷ್ಟತೆಯನ್ನು ಸೂಚಿಸುವ ಕ್ರಮವೆಂದರಿಯಬೇಕಾಗುತ್ತದೆ.

ಹೂವು ಹಾಸಿಗೆ ಚಂದ್ರಚಂದನ ಬಾಹುಬಂಧನ ಚುಂಬನ
ಬಯಕೆತೋಟದ ಬೇಲಿಯೊಳಗೆ ಕರಣಗಣದಿ ರಿಂಗಣ
ಒಲಿದ ಮಿದುವೆದೆ ರಕ್ತಮಾಂಸದ ಬಿಸುದು ಸೋಂಕಿನ ಪಂಜರ
ಇಷ್ಟೆ ಸಾಕೆಂದಿದ್ದೆಯಲ್ಲೋ! ಇಂದು ಏನಿದು ಬೇಸರ?

ಈ ನಾಲ್ಕು ಚರಣಗಳಲ್ಲಿ ಲೌಕಿಕ ಸುಖವನ್ನು ಕವಿ ಪಡೆದು ಅದರಲ್ಲೇ ಸಂತೃಪ್ತಿ ಹೊಂದಿರುವ ಭಾವ ಸೂಚಿತವಾಗುತ್ತದೆ. 'ಹೂವು, ಹಾಸಿಗೆ, ಚಂದ್ರ, ಚಂದನ, ಬಾಹುಬಂಧನ, ಚುಂಬನ, ಒಲಿದ ಮಿದುವೆದೆ' ಎಂಬಿತ್ಯಾದಿ ಪದ ಪ್ರಯೋಗಗಳಲ್ಲಿ ಕವಿ ತಾನು ಸಾಂಸಾರಿಕ ನೆಲೆಯ ಲೌಕಿಕ ಸುಖವನ್ನು ಯಥೇಚ್ಛವಾಗಿ ಪಡೆದು ಭೋಗ ಜೀವನದಲ್ಲಿ ಸಾಕಷ್ಟು ಸಮಾಧಾನ ಸಂತೃಪ್ತಿ ಹೊಂದಿದ ಭಾವ ಅತ್ಯಂತ ಧ್ವನಿಪೂರ್ಣವಾಗಿ ಪ್ರಕಟಗೊಂಡಿದೆ ಎನ್ನಬೇಕು. ಆದರೆ 'ಬಯಕೆ ತೋಟದ ಬೇಲಿಯೊಳಗೆ ಕರಣ ಗಣದಿ ರಿಂಗಣ' ಎಂಬಲ್ಲಿ ಕವಿ ತಾನು ಪಡೆದ ಲೌಕಿಕ ನೆಲೆಯ ಸುಖ ಸಂತೋಷದಲ್ಲಿ ಒಂದು ಬಗೆಯ ಬೇಲಿಯಿದ್ದು, ಅಂದರೆ ಬಂಧನವಿದ್ದು ಅದು ಪೂರ್ಣತ್ವವನ್ನು ಪಡೆದುಕೊಂಡಿಲ್ಲ ಎಂಬ ಭಾವವೂ ಇರುವುದು ಇಲ್ಲಿ ಮುಖ್ಯ ಸಂಗತಿಯಾಗಿ ನಿಂತುಕೊಳ್ಳುತ್ತದೆ. ಇದರರ್ಥ ಕೇವಲ ಲೌಕಿಕ ನೆಲೆಯ ಸುಖ–ಸಂತೋಷ ಮಾನವನಿಗೆ ಸಂಪೂರ್ಣ ತೃಪ್ತಿಯನ್ನು ತಂದುಕೊಡಲಾರದೆಂಬ ಧ್ವನಿ ಇರುವುದನ್ನು ಗಮನಿಸಬೇಕಾಗುತ್ತದೆ. 'ಪಂಜರ' ಎಂಬ ಪದವೂ ಇದೇ ಅರ್ಥವನ್ನು ಧ್ವನಿಸುತ್ತಿದ್ದು ಅದು ಬಂಧನದ ಸಂಕೇತವಾಗಿಯೇ ನಿಂತುಕೊಳ್ಳುತ್ತದೆ. ಮಾನವಜೀವಿ ಲೌಕಿಕ ಬದುಕಿನ ಆಸೆ ಆಕಾಂಕ್ಷೆಗಳನ್ನು ಈಡೇರಿಸಿಕೊಂಡು ಸಂತೃಪ್ತಿ ಹೊಂದುವುದು ಒಂದು ಕ್ರಮವಾದರೆ ಲೌಕಿಕ ಬದುಕಿನ ಸುಖ ಸಂತೋಷವನ್ನು ಮೀರಿದ ಅಲೌಕಿಕ ನೆಲೆಯ ಆಧ್ಯಾತ್ಮಿಕ ಸುಖ–ನೆಮ್ಮದಿ ಪಡೆಯಬೇಕೆಂಬ ಹಂಬಲವೂ ಅವನ ಅಂತರಂಗದಲ್ಲಿರುವುದೂ ಅಷ್ಟೇ ಸಹಜವೆಂಬ ಸತ್ಯವೂ ಇಲ್ಲಿ ಧ್ವನಿತವಾಗಿರುವುದನ್ನು ಕಾಣಬಹುದಾಗಿದೆ. 'ಇಷ್ಟೆ ಸಾಕೆಂದಿದ್ದೆಯಲ್ಲೋ! ಇಂದು ಏನಿದು ಬೇಸರ' ಎಂಬಲ್ಲಿ ಇದರ ಸೂಚನೆ ಇರುವುದನ್ನು ಕಾಣಬಹುದಾಗಿದೆ.

ಏನಿದೇನಿದು ಹೊರಳುಗಣ್ಣಿನ ತೇಲು ನೋಟದ ಸೂಚನೆ?
ಯಾವ ಸುಮಧುರ ಯಾತನೆ? ಯಾವ ದಿವ್ಯದ ಯಾಚನೆ?

ಮರದೊಳಡಗಿದ ಬೆಂಕಿಯಂತೆ ಎಲ್ಲೊ ಮಲಗಿದೆ ಬೇಸರ
ಏನೊ ತೀಡಲು ಏನೊ ತಾಗಲು ಹೊತ್ತಿ ಉರಿವುದು ಕಾತರ
ಸಪ್ತಸಾಗರದಾಚೆಯೆಲ್ಲೋ ಸುಪ್ತಸಾಗರ ಕಾದಿದೆ
ಮೊಳೆಯದಲೆಗಳ ಮೂಕಮರ್ಮರ ಇಂದು ಇಲ್ಲಿಗು ಹಾಯಿತೆ?

ಕವಿತೆಯ ಈ ಪಂಕ್ತಿಗಳು ವ್ಯಕ್ತಿಯ ಆಧ್ಯಾತ್ಮಿಕ ಸೆಳೆತವನ್ನು ಇನ್ನಷ್ಟು ಸ್ಫುಟಗೊಳಿಸುತ್ತವೆ. ಈ ಪಂಕ್ತಿಗಳ ಭಾವವನ್ನು ಇನ್ನಷ್ಟು ವಿವೇಚನೆಗೆ ಒಳಪಡಿಸಬೇಕಾಗುತ್ತದೆ. 'ಹೊರಳುಗಣ್ಣಿನ ತೇಲುನೋಟದ' ಸೂಚನೆಯೂ ಇಲ್ಲಿ ಸಿಕ್ಕುತ್ತದೆ. ಇಲ್ಲಿಯವರೆಗೆ ಲೌಕಿಕದಲ್ಲಿ ಮಾತ್ರ ದೃಷ್ಟಿನೆಟ್ಟಿದ್ದ, ಲೌಕಿಕ ಸುಖ–ಸಂತೋಷವೇ ಮುಖ್ಯವೆಂದುಕೊಂಡಿದ್ದ ಕವಿಗೆ ಈಗ 'ಹೊರಳುಗಣ್ಣಿನ ತೇಲುನೋಟ'ದ ಸೂಚನೆ ಸಿಗುತ್ತಿದೆ ಎಂದರೆ ಲೌಕಿಕದಲ್ಲಿ ನೆಟ್ಟದೃಷ್ಟಿ ಈಗ ಬೇರೆಡೆಗೆ ಅಂದರೆ ಆಧ್ಯಾತ್ಮದತ್ತ ಹೊರಳುತ್ತಿದೆ ಎಂದು ಅರ್ಥವಾಗುತ್ತದೆ. 'ತೇಲುನೋಟ' ಎಂದರೆ ಇಲ್ಲಿಯವರೆಗೆ ಲೌಕಿಕವೇ ಮುಖ್ಯವೆಂದುಕೊಂಡು ಆ ಕಡೆಗೆ ಮಾತ್ರ ಹರಿದಿದ್ದ ದೃಷ್ಟಿ ಈಗ ಅದನ್ನು ಉಪೇಕ್ಷಿಸಿ ಬೇರೆಕಡೆಗೆ ನೋಡುವ ಕಾತರತೆ ಎದ್ದು ಕಾಣುತ್ತಿದೆ. ಕವಿಗಾಗುತ್ತಿರುವ ಅಲೌಕಿಕವಾದ ಆಧ್ಯಾತ್ಮಿಕ ಅನುಭವ ಒಂದು ಬಗೆಯಲ್ಲಿ 'ಸುಮಧುರಯಾತನೆ' ಎಂಬುದು ಕವಿಯ ಇಂಗಿತ. ಲೌಕಿಕದ ಯಾತನೆ ಅದು ಕೇವಲ ನೋವು ನೀಡುವ ಸಂದರ್ಭವಾಗಬಹುದು. ಆದರೆ ಅಲೌಕಿಕ ನೆಲೆಯ ಆಧ್ಯಾತ್ಮಿಕ ಸುಖದ ಯಾತನೆ ಅದು ನೋವು ನೀಡದೆ ಸುಮಧುರವಾದ ಸುಖದ ಯಾತನೆಯಾಗುತ್ತದೆ ಮತ್ತು ದಿವ್ಯದ ಯಾಚನೆಯಾಗಿ ಬೋಧೆಯಾಗುತ್ತದೆ. ಮರದಲ್ಲಿ ಸುಪ್ತವಾಗಿ ಅಡಗಿರುವ ಬೆಂಕಿ ಮೇಲುನೋಟಕ್ಕೆ ಕಾಣುವುದಿಲ್ಲ. ಸಂದರ್ಭ ಒದಗಿ ಬಂದರೆ ಮರವೇ ಬೆಂಕಿಯಾಗಿ ಉರಿಯತೊಡಗುವಂತೆ ಲೌಕಿಕದಲ್ಲಿ ಮುಳುಗಿ ಹೋದ ಜೀವಿಗೆ ಸಂದರ್ಭ ಒದಗಿದರೆ ಆತ ಅಲ್ಲಮನಂತೆ ಆಧ್ಯಾತ್ಮಿಕ ಜ್ಞಾನಜ್ಯೋತಿಯನ್ನು ಪಡೆದು ಅದನ್ನು ಪ್ರಕಾಶಿಸಬಲ್ಲ ಎಂಬ ಧ್ವನಿ ಇಲ್ಲಿನದು. ಅಂಥ ಸಂದರ್ಭ ಒದಗಿ ಬರುವುದನ್ನು 'ಏನೊ ತೀಡಲು ಏನೊ ತಾಗಲು ಹೊತ್ತಿ ಉರಿವುದು ಕಾತರ' ಎಂಬ ಈ ಪಂಕ್ತಿಯಲ್ಲಿ ಕಾಣಿಸಲಾಗಿದೆ. ಸಪ್ತಸಾಗರದ ಆಚೆ ಸುಪ್ತಸಾಗರ ಇರುವಂತೆ ಲೌಕಿಕದಲ್ಲಿ ಮುಳುಗಿರುವ ಜೀವಿ ಅಷ್ಟಕ್ಕೇ ಸೀಮಿತವಾಗದೆ ಆಧ್ಯಾತ್ಮಜ್ಞಾನವನ್ನು, ಆತ್ಮಜ್ಞಾನವನ್ನು ಪಡೆಯಬಹುದಾದ ಶಕ್ತಿ ಸಾಮರ್ಥ್ಯ ಹೊಂದಿರುವವನೂ ಆಗಿದ್ದಾನೆಂಬ ಸೂಚನೆ ಇಲ್ಲಿರುವುದನ್ನು ಕಾಣಬಹುದಾಗಿದೆ. ಅದನ್ನು "ಮೊಳೆಯದಲೆಗಳ ಮೂಕ ಮರ್ಮರ ಇಂದು ಇಲ್ಲಿಗು ಹಾಯಿತೆ?" ಎನ್ನುವಲ್ಲಿ ಸ್ಪಷ್ಟಪಡಿಸಲಾಗಿದೆ. "ವಿವಶವಾಯಿತು ಪ್ರಾಣ;ಹಾ! ಪರವಶವು ನಿನ್ನೀ

ಚೇತನ" ಎಂಬಲ್ಲಿ ಕವಿಯ ಪ್ರಾಣ ಆಧ್ಯಾತ್ಮದ ಸೆಳೆತಕ್ಕೆ ಸಿಕ್ಕು ವ್ಯಾಕುಲಗೊಂಡದ್ದು ಮಾತ್ರವಲ್ಲ ಪರತತ್ವದಲ್ಲಿ ಲೀನವಾಗಿ ಪರತತ್ತ್ವವೇ ತಾನಾದ ಪರವಶದ ಸಂದರ್ಭವೂ ಪ್ರಕಟವಾಗುವುದನ್ನು ನೋಡಬಹುದಾಗಿದೆ. 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ?' ಎಂಬ ಪಂಕ್ತಿ ಬದುಕಿನ ನೈಜ ಮಾರ್ಗವನ್ನು ಸೂಚಿಸುವುದರೊಂದಿಗೆ ಸತ್ಯದ ಸಾಕ್ಷಾತ್ಕಾರವನ್ನು ಮಾಡಿಸುತ್ತದೆನ್ನಬೇಕು. ಮೋಹನ ಮುರಲಿಯ ಕರೆ ಮತ್ತು ಬೃಂದಾವನದ ಮಿಂಚಿನಕೈಯ ಚಾಚುವಿಕೆ ಕವಿಯಲ್ಲಿನ ಬದಲಾವಣೆಗೆ ಕಾರಣವಾಗಿರಬಹುದಾದ ಸಾಧ್ಯತೆಯನ್ನು ನೀಡುತ್ತದೆನ್ನಬೇಕು.

ಹೀಗೆ ಇಲ್ಲಿ ಲೌಕಿಕದ ಸುಖ–ಸಂತೋಷದಲ್ಲಿ ಮುಳುಗಿದ್ದ ಕವಿಯ ಚೇತನ ಇದ್ದಕ್ಕಿದ್ದ ಹಾಗೆ ಕೃಷ್ಣನ ಮೋಹನ ಮುರಲಿಯ ಕರೆಯಿಂದಾಗಿ, ಬೃಂದಾವನದ ಮಿಂಚಿನ ಕೈಯಚಾಚುವಿಕೆಯಿಂದಾಗಿ ಆಧ್ಯಾತ್ಮದ ಸೆಳೆತಕ್ಕೆ ಸಿಲುಕಿ, ಲೌಕಿಕದ ಬಂಧನದಿಂದ ಮುಕ್ತವಾಗಿ ಪರತತ್ತ್ವದತ್ತ, ಪರಾತ್ಪರಜ್ಞಾನದತ್ತ ವಾಲಿ ಪರಾತ್ಪರನಲ್ಲಿ ಪರವಶವಾಗುವ ಉತ್ಕಟಭಾವಕ್ಕೆ ಪಕ್ಕಾಗುವ ಸಂದರ್ಭವನ್ನು ಕವಿ ಗೋಪಾಲಕೃಷ್ಣ ಅಡಿಗರು ಅತ್ಯಂತ ಸಾರ್ಥಕವಾಗಿ, ಧ್ವನಿಪೂರ್ಣವಾಗಿ ಕಟ್ಟಿಕೊಟ್ಟಿರುವುದು ಶ್ಲಾಘನೀಯ ಸಂಗತಿಯೆನ್ನಬೇಕು. ಒಟ್ಟಿನಲ್ಲಿ ಈ ಕವಿತೆ ಲೌಕಿಕ ನೆಲೆಯ ಸುಖ–ಸಂಭ್ರಮ ಒಂದು ಹಂತದವರೆಗೆ ನಿಜ ಎನಿಸಿದರೂ ಅದನ್ನೂ ಮೀರಿದ ಪಾರಲೌಕಿಕ, ಆಧ್ಯಾತ್ಮಿಕ ಸುಖ–ಸಂತೋಷ ಮಾನವ ಜೀವನದ ಮುಖ್ಯ ಗುರಿಯಾಗಬೇಕಾದ ಸತ್ಯ ದರ್ಶನವನ್ನು ಮಾಡಿಸುತ್ತದೆನ್ನಬೇಕು. ಅಡಿಗರಂಥ ನವ್ಯ ಸಂಪ್ರದಾಯದ ವಾಸ್ತವವಾದಿ ಕವಿ ಬದುಕಿನ ಸಾರ್ಥಕತೆಯನ್ನು ಈ ಬಗೆಯಾಗಿ ಆಧ್ಯಾತ್ಮದ ಸಂವೇದನೆಯಲ್ಲಿ ಕಾಣಿಸಿರುವುದು ಆಶ್ಚರ್ಯವಾದರೂ ಸಂತಸದ ಸಂಗತಿಯೆನ್ನಬೇಕು.

# ಮಲಯಾಳಂನಲ್ಲಿ ಮಹಾಭಾರತಗಳು

* ಡಾ. ಮೋಹನ ಕುಂಟಾರ್

ಭಾರತದ ಪ್ರಾಚೀನ ಬೃಹತ್ ಕಾವ್ಯಗಳಾದ ರಾಮಾಯಾಣ, ಮಹಾಭಾರತಗಳ ಪುನರ್ ನಿರೂಪಣೆಗಳು ಭಾರತದ ಎಲ್ಲಾ ಭಾಷೆಗಳಲ್ಲಿಯೂ ಕಾಣಿಸಿಕೊಂಡಿವೆ. ಲಿಖಿತ ಪರಂಪರೆಯಲ್ಲಷ್ಟೇ ಅಲ್ಲದೆ ಮೌಖಿಕ ಪರಂಪರೆಯಲ್ಲಿಯೂ ಅನೇಕ ನಿರೂಪಣೆಗಳಿರುವುದನ್ನು ಗಮನಿಸಬಹುದು. ಮಲಯಾಳಂ ಭಾಷೆಯೂ ಇದಕ್ಕೆ ಹೊರತಲ್ಲ. ಮಲಯಾಳಂನಲ್ಲಿ ಮಹಾಭಾರತ ಕೃತಿಗಳನ್ನು ರಚಿಸಿದ ಅನೇಕ ಕವಿಗಳಿದ್ದಾರೆ.

ಮಲಯಾಳಂನಲ್ಲಿ ಮುಖ್ಯವಾಗಿ ಹನ್ನೆರಡನೆಯ ಶತಮಾನದಿಂದ ಎರಡು ಸಾಹಿತ್ಯ ಧಾರೆಗಳು ಕಾಣಿಸಿಕೊಂಡಿರುವುದನ್ನು ಗುರುತಿಸಲಾಗಿದೆ. ತಮಿಳು ಪ್ರಭಾವದ ಸ್ಥಳೀಯ ಮಲಯಾಳಂ ಭಾಷೆಯಲ್ಲಿ ನಿರೂಪಿತವಾದ ಜಾನಪದ ಸಾಹಿತ್ಯ ಪರಂಪರೆ ಒಂದು. ಮಲಯಾಳಂ ಮತ್ತು ಸಂಸ್ಕೃತ ಮಿಶ್ರಿತವಾದ 'ಮಣಿಪ್ರವಾಳ' ಸಾಹಿತ್ಯ ಪರಂಪರೆ ಇನ್ನೊಂದು. ಇವುಗಳಲ್ಲಿ ಪಂಡಿತ ವರ್ಗದ ಒಲವು ಸಂಸ್ಕೃತ ಸಾನ್ನಿಧ್ಯವುಳ್ಳ ಮಣಿಪ್ರವಾಳದ ಕಡೆಗಿತ್ತು. ಹಾಗಾಗಿ ತಮಿಳು ಪ್ರಭಾವದ ಮಲಯಾಳಂ ಆಡುನುಡಿಯ ಸಾಹಿತ್ಯ ಲಿಖಿತ ಪರಂಪರೆಯಲ್ಲಿ ಮುಂದುವರಿಯಲಿಲ್ಲ. ತಮಿಳು ಮಿಶ್ರಿತ ದೇಸಿ ಮಲಯಾಳಂನ ಸೊಗಡನ್ನು ಅಂತರಂಗದಲ್ಲಿ ಒಳಗೊಂಡಿರುವ ಮಲಯಾಳಂ ಜಾನಪದ ಪರಂಪರೆಯಲ್ಲಿ ಪದ್ಯಸಾಹಿತ್ಯ ಅಥವಾ ಗಾನಸಾಹಿತ್ಯ ಪರಂಪರೆ ಇರುವುದನ್ನು ಸಾಹಿತ್ಯ ಚರಿತ್ರೆಕಾರರು ಗುರುತಿಸಿದ್ದಾರೆ. ತಮಿಳು ಛಂದೋಬಂಧಗಳನ್ನೆ ಹೊಂದಿರುವ ಪಾಟ್ಟು ಸಾಹಿತ್ಯವೇ ಮಲಯಾಳಂನಲ್ಲಿ ದಾಖಲಿಸಿದ ಪ್ರಾಚೀನ ಸಾಹಿತ್ಯ ಪರಂಪರೆ. ಇದುವರೆಗೆ ಲಭ್ಯವಾದ ಪಾಟ್ಟು ಸಾಹಿತ್ಯ ಕೃತಿಗಳಲ್ಲಿ ಅತ್ಯಂತ ಪ್ರಾಚೀನ ಕೃತಿ 12ನೇ ಶತಮಾನದ ರಾಮಚರಿತ ಪಾಟ್ಟು. ಪ್ರಾಚೀನ ಮೌಖಿಕ ಪರಂಪರೆಯ ಭಾಗವಾಗಿ ರಚಿಸಿದ ಈ ಕೃತಿಯ ಕರ್ತೃ ಶ್ರೀ ವೀರ ರಾಮವರ್ಮ(ಕ್ರಿ.ಶ. 1195–1208) ಎಂದು ವಿದ್ವಾಂಸರು ಗುರುತಿಸಿದ್ದಾರೆ. ಈ ಜನಪದ ಮಟ್ಟಿನ ಕಾವ್ಯದ ಮಾದರಿಯಲ್ಲಿಯೇ ಅನೇಕ ಕೃತಿಗಳು

ಮಲಯಾಳಂನಲ್ಲಿ ರಚನೆಯಾಗಿವೆ. ಇದರಲ್ಲಿ 'ಭಾರತ ಗಾಥಾ' ಅಥವಾ 'ಮಹಾಭಾರತಂ ಪಾಟ್ಟ್' ಎಂಬ ಕೃತಿ ಪ್ರಸಿದ್ಧವಾಗಿದೆ. ಮಹಾಭಾರತ ಕತೆಯನ್ನು ಜಾನಪದ ಹಾಡಿನ ರೂಪದಲ್ಲಿ ನಿರೂಪಿಸಿದ ಕೃತಿಯಿದು.

14ನೆಯ ಶತಮಾನದ ಉತ್ತರಾರ್ಧ ಅಥವಾ 15ನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ಕಣ್ಣಶ್ಶ ಕವಿಗಳೆಂದೇ ಪ್ರಸಿದ್ಧರಾದ ಮಾಧವ ಪಣಿಕ್ಕರ್, ಶಂಕರ ಪಣಿಕ್ಕರ್ ಮತ್ತು ರಾಮ ಪಣಿಕ್ಕರ್ ಒಂದೇ ಕುಟುಂಬಕ್ಕೆ ಸೇರಿದವರು. 'ಕರುಣೇಶನ್' ಎಂಬ ಕುಟುಂಬದ ಹಿರಿಯನಿಂದ 'ಕಣ್ಣಶ್ಶನ್' ಎಂದು ಆ ಕುಟುಂಬಕ್ಕೆ ಹೆಸರು ಬಂತೆಂದು ಹೇಳಲಾಗುತ್ತದೆ. ತಿರುವಾಂಕೂರಿನ ತಿರುವೆಲ್ಲಾ ತಾಲೂಕಿನ 'ನಿರಣಂ' ಎಂಬುದು ಈ ಕವಿಗಳ ಜನ್ಮಸ್ಥಳ. ಹಾಗಾಗಿ ಇವರನ್ನು 'ನಿರಣಂ' ಕವಿಗಳು ಎಂದು ಹೇಳುವುದೂ ಇದೆ. ಕಣ್ಣಶ್ಶ ಕವಿಗಳು ಭಾರತ, ಭಾಗವತ, ಭಗವದ್ಗೀತೆಗಳಿಗೆ ವ್ಯಾಖ್ಯಾನವನ್ನು ಬರೆದು ಪ್ರಸಿದ್ಧರಾದವರು.

ಕಣ್ಣಶ್ಶ ಕವಿಗಳಲ್ಲಿ ಎರಡನೆಯವನಾದ ಶಂಕರ ಪಣಿಕ್ಕರನ 'ಭಾರತಮಾಲ' ವ್ಯಾಸಭಾರತದ ಸಂಕ್ಷಿಪ್ತಾನುವಾದ ಎಂದೇ ಹೇಳಲಾಗುತ್ತದೆ. ಮೂಲ ಆಶಯಕ್ಕೆ ಧಕ್ಕೆಯಾಗದಂತೆ ಔಚಿತ್ಯಪೂರ್ಣವಾಗಿ 1364 ಸಾಲುಗಳಲ್ಲಿ ಸಂಕ್ಷೇಪಿಸಿರುವುದೇ ಇದರ ವೈಶಿಷ್ಟ್ಯ. ಇದನ್ನು ಮಹಾಭಾರತವನ್ನು ಆಧರಿಸಿ ಮಲಯಾಳಂನಲ್ಲಿ ರಚಿಸಿದ ಮೊದಲ ಉಪಲಬ್ಧ ಕೃತಿಯೆಂದೇ ಹೇಳಲಾಗಿದೆ. ಕವಿ ಪ್ರತಿಭೆಯ, ಭಾಷಾಶೈಲಿಗಳ ಸ್ಥಳೀಯತೆಯಲ್ಲದೆ ಮೂಲ ಕತೆಗೆ ಹೊಸ ಬಗೆಯ ವ್ಯಾಖ್ಯಾನವನ್ನೇನು ಪ್ರಸ್ತುತ ಕೃತಿಯಲ್ಲಿ ನೀಡಿಲ್ಲ. ಮಹಾಭಾರತ ಕತೆಯನ್ನು ಮಲಯಾಳಂನಲ್ಲಿ ಜನ ಸಾಮಾನ್ಯರಿಗೂ ಅರ್ಥವಾಗುವಂತೆ ಸರಳವಾಗಿ ಪ್ರಚಾರ ಮಾಡುವುದೇ ಪ್ರಸ್ತುತ ಕೃತಿಯ ಉದ್ದೇಶ. ಮುಂದೆ ಎಳುತ್ತಚ್ಚನ್‌ನ ಶ್ರೀ ಮಹಾಭಾರತಂ ರಚನೆಗೆ ಮಾದರಿಯಾದ ಕೃತಿಯೆಂದು ವಿದ್ವತ್‌ಲೋಕ ಭಾವಿಸಿದೆ. ಶಂಕರ ಪಣಿಕ್ಕರ್‌ನ ಭಾರತಮಾಲಾದ ಶ್ರೀಕೃಷ್ಣ ನೇರವಾಗಿ ಎಳುತ್ತಚ್ಚನ್‌ನ ಹೃದಯ ಪ್ರವೇಶಿಸಿದ್ದಾನೆ ಎಂದು ತೌಲನಿಕವಾಗಿ ಪರಿಶೀಲಿಸಿದವರು ಹೇಳಿದ್ದಿದೆ.

ಕಣ್ಣಶ್ಶ ಕವಿಗಳಲ್ಲಿ ಮೂರನೆಯವನಾದ ರಾಮಪಣಿಕ್ಕರ್ ಸಹ 'ಭಾರತಂ' ಎಂಬೊಂದು ಕೃತಿಯನ್ನು ರಚಿಸಿದ್ದಾನೆ. ಸಂಸ್ಕೃತ ಸಾಹಿತ್ಯದ ಸೊಗಸು ಹಾಗೂ ತತ್ವಚಿಂತನೆಯನ್ನು ಮಲಯಾಳಂನಲ್ಲಿ ಉಳಿಸಿಕೊಂಡ ಕೃತಿಯಾಗಿ ಪ್ರಸ್ತುತ ಕೃತಿಗೆ ಮಹತ್ವವಿದೆ.

ಪ್ರಾಚೀನ ಮಲಯಾಳಂ ಸಾಹಿತ್ಯದಲ್ಲಿ ಮಣಿಪ್ರವಾಳ ಕವಿತೆಗಳ ಸಾಲಿನಲ್ಲಿ ಕಣ್ಣಶ್ಶ ಕವಿಗಳ ಕೃತಿಗಳಿಗೆ ಪ್ರಮುಖ ಸ್ಥಾನವಿದೆ. ಈ ಎಲ್ಲಾ ಕವಿಗಳು ರಾಮಾಯಣ, ಮಹಾಭಾರತ, ಭಾಗವತಗಳನ್ನು ಆಕರಗಳಾಗಿಸಿ ಹೆಚ್ಚಿನ ಸಂಖ್ಯೆಯಲ್ಲಿ ಕೃತಿ ರಚನೆ ಮಾಡಿದ್ದಾರೆ. ಇವರೆಲ್ಲರನ್ನು ಭಕ್ತಿ ಪರಂಪರೆಯ ಆರಂಭಿಕ ಕವಿಗಳೆಂದೇ ಹೇಳಬಹುದು.

ಮಧ್ಯಕಾಲೀನ ಭಕ್ತಿ ಪರಂಪರೆಯಲ್ಲಿ ಮಲಯಾಳಂನಲ್ಲಿ ಕಾಣಿಸಿಕೊಂಡ ಬಹುಮುಖ್ಯ ಕವಿ ತುಂಜತ್ತ್ ರಾಮಾನುಜನ್ ಎಳುತ್ತಚ್ಚನ್. ಈತನ ಕಾಲದ ಬಗೆಗೆ ಖಚಿತವಾಗಿ ತಿಳಿದು ಬರುವುದಿಲ್ಲ. ಆದರೆ ಕ್ರಿ.ಶ. 1425–1625ರ ಅವಧಿಯಲ್ಲಿ ಈತ ಬದುಕಿ ಬಾಳಿದನೆಂಬುದು ಒಪ್ಪಿತ ವಿಚಾರ. ಈತ ಬರೆದ ಅಧ್ಯಾತ್ಮ ರಾಮಾಯಣ ಕಿಳಿಪ್ಪಾಟ್ ಪ್ರಸಿದ್ಧವಾಗಿದೆ. ಹಾಗೆಯೇ ಈತನ ಇನ್ನೊಂದು ಕೃತಿ 'ಶ್ರೀ ಮಹಾಭಾರತ' ಕಿಳಿಪ್ಪಾಟ್. ಗಿಳಿಯ ಮೂಲಕ ಕಾವ್ಯ ಹೇಳಿರುವುದರಿಂದ ಈತನ ಕೃತಿಗಳಿಗೆ ಗಿಳಿಪ್ಪಾಟ್ (ಗಿಳಿ ಹಾಡು) ಎಂದು ಕರೆಯಲಾಗುತ್ತದೆ.

ಶ್ರೀಮಯವಾದ ರೂಪವನ್ನರಸುವ ಹೆಣ್ಗಿಳಿಯೇ
ಸೀಮೆಯಿಲ್ಲದ ಸುಖವನು ನೀಡಬೇಕೆನಗೆ ನೀನು
ಶ್ಯಾಮಲಕೋಮಲನಾದ ನಾರಾಯಣ
ತಾವರೆಗಣ್ಣನ ಕತೆಯ ಕೇಳಲು ಬಯಸಿದೆ ನಾನು
ಅತಿಶಯ ಭಕ್ತಿಯಿಂದೆನ್ನೊಡನದನು
ನೇರವಾಗಿ ಹೇಳಬೇಕೆಂದು ನಾನು ನೆನೆದಾಗ
ಕಾರಣನಾದ ಕರುಣಾನಿಧಿ ನಾರಾಯಣನ
ಕಾರುಣ್ಯದಿಂದ ನಿನ್ನನ್ನು ಕಾಣಲು ಬಂದೆನೀಗ
ಹಸಿವು ದಾಹಗಳ ಕಳೆದು ತಡಮಾಡದೆ ಹೇಳಬೇಕು
ಮಾಯಾ ಸ್ವರೂಪಿ ಕೃಷ್ಣನ ಕಥಾಮೃತವನು

ಹೀಗೆಂದು ಶುಕ ತರುಣಿಯಲ್ಲಿ ಕವಿ ಕಾವ್ಯಾರಂಭದಲ್ಲಿಯೇ ಭಿನ್ನವಿಸಿ–ಕೊಳ್ಳುತ್ತಾನೆ. ಮುಂದೆ ಪ್ರತೀ ಪರ್ವಾರಂಭದಲ್ಲಿಯೂ ಕತೆಯನ್ನು ವಿಸ್ತರಿಸುವಂತೆ ಕವಿ ಗಿಳಿಯಲ್ಲಿ ಕೇಳಿಕೊಳ್ಳುತ್ತಾನೆ.

ಭಾರತೀಯ ಭಾಷೆಗಳಲ್ಲಿ ಮಧ್ಯಕಾಲೀನ ಯುಗದಲ್ಲಿ ವೈಷ್ಣವ ಕವಿಗಳು ಭಕ್ತಿಯಿಂದ ಕಾವ್ಯರಾಧನೆ ಮಾಡಿ ಸಮೃದ್ಧಗೊಳಿಸಿದ್ದಾರೆ. ವಿವಿಧ ಜಾತಿಗಳಿಗೆ ಸೇರಿದ

ಜನವರ್ಗದ ಕವಿಗಳೂ ವೈಷ್ಣವ ಕಾವ್ಯಗಳ ರಚನೆಯ ಮೂಲಕ ಭಕ್ತಿ ಸಾಹಿತ್ಯವನ್ನು ಪೋಷಿಸಿದ್ದಾರೆ. ಭಕ್ತಿ ಸಾಹಿತ್ಯ ಪರಂಪರೆಯು ಜನಸಾಮಾನ್ಯರೆಡೆಗೂ ವಿಸ್ತರಿಸಿದ್ದು ಈ ಯುಗದ ವೈಶಿಷ್ಟ್ಯ. ಪರಿಣಾಮವಾಗಿ ಜನಸಾಮಾನ್ಯರಲ್ಲಿಯೂ ಭಕ್ತರು ಹುಟ್ಟಿಕೊಂಡರು.

ಕನ್ನಡದಲ್ಲಿ ಕನಕದಾಸ, ಮರಾಠಿಯಲ್ಲಿ ತುಕಾರಾಮ ಹಾಗೆಯೇ ಮಲಯಾಳಂನಲ್ಲಿ ಎಳುತ್ತಚ್ಚನ್ ಬ್ರಾಹ್ಮಣೇತರ ಭಕ್ತಿ ಕವಿಗಳ ಸಾಲಿನಲ್ಲಿ ಕಾಣಿಸಿಕೊಂಡರು. ಆರ್ಯ ಸಂಸ್ಕೃತಿಯ ಭಕ್ತಿಯ ಜೊತೆಗೆ ದ್ರಾವಿಡ ಸಂಸ್ಕೃತಿಯನ್ನು ಜೋಡಿಸಿ ಭಕ್ತಿ ಪರಂಪರೆಯನ್ನು ಹೊಸ ಧಾಟಿಯಲ್ಲಿ ನಿರೂಪಿಸಿದ ಕೀರ್ತಿ ಎಳುತ್ತಚ್ಚನ್‌ನದು. ಶೂದ್ರಕವಿಯೊಬ್ಬ ಭಕ್ತಿ ಕಾವ್ಯ ರಚಿಸಿದ ಸಂದರ್ಭದಲ್ಲಿ ಬ್ರಾಹ್ಮಣರ ವಿರೋಧವನ್ನು ಎಳುತ್ತಚ್ಚನ್ ಎದುರಿಸಬೇಕಾಗಿ ಬಂದಿತ್ತು. ಆದರೆ ಎಳುತ್ತಚ್ಚನ್‌ನ ಕಾವ್ಯ ಶಕ್ತಿಯ ಮುಂದೆ ಅವೆಲ್ಲ ಗೌಣವಾದುವು. ಎಳುತ್ತಚ್ಚನ್ ಮೂಲತಃ ಭಕ್ತಿಕವಿ. ರಾಮಚರಿತದಿಂದಲೇ ಮಲಯಾಳಂನ ಭಕ್ತಿ ಪರಂಪರೆಯ ಆವಿರ್ಭಾವವನ್ನು ಗುರುತಿಸಬಹುದಾದರೂ ಎಳುತ್ತಚ್ಚನ್‌ನ ಕಾಲಕ್ಕೆ ಅದು ಉತ್ತುಂಗ ಸ್ಥಿತಿಯನ್ನು ತಲುಪಿತು. ನೆಲದ ಭಾಷೆಯಾದ ಮಲಯಾಳವನ್ನು ಗ್ರಾಂಥಿಕ ಭಾಷೆಯಾದ ಪ್ರೌಢ ಮಣಿಪ್ರವಾಳ ಶೈಲಿಯ ನಡುವೆ ಸಮನ್ವಯದ ದಾರಿಯಲ್ಲಿ ಕಾವ್ಯ ರಚನೆ ಮಾಡಿದ ಎಳುತ್ತಚ್ಚನ್ ಏಕಕಾಲಕ್ಕೆ ಜನಸಾಮಾನ್ಯರನ್ನು ಹಾಗೆಯೇ ಪಂಡಿತವರೇಣ್ಯರನ್ನು ತನ್ನೆಡೆಗೆ ಸೆಳೆದ. ಭಕ್ತಿ ಹಾಗೂ ಅಧ್ಯಾತ್ಮಿಕ ವಿಚಾರಗಳ ಪ್ರತಿಪಾದನೆಗಾಗಿ ಎಳುತ್ತಚ್ಚನ್‌ಗೆ ಅಧ್ಯಾತ್ಮ ರಾಮಾಯಣವನ್ನು ಸಮರ್ಥವಾಗಿ ಬಳಸಿಕೊಂಡ. ಅದಲ್ಲದೆ ವಿಶಾಲವಾದ ವ್ಯಕ್ತಿ ಸಂಘರ್ಷಗಳ ಹಾಗೂ ಕಥಾಪಾತ್ರಗಳ ಬಾಹುಳ್ಯವಿರುವ ಮಹಾಭಾರತವನ್ನು ಸಂಕ್ಷಿಪ್ತವಾಗಿ ಮಲಯಾಳಂನಲ್ಲಿ ಸ್ವತಂತ್ರವಾಗಿ ಮರುರೂಪಿಸುವುದು ಎಳುತ್ತಚ್ಚನ್‌ಗೆ ಒಂದು ಸವಾಲಿನ ಕೆಲಸವೇ ಆಗಿತ್ತು. ರಾಮಾಯಣಕ್ಕಿಂತಲೂ ವಿಶಾಲವಾದ ಭಿತ್ತಿ ಮಹಾಭಾರತದ್ದು ಎಂಬುದು ಇದಕ್ಕೆ ಇರುವ ಮುಖ್ಯ ಕಾರಣಗಳಲ್ಲಿ ಒಂದು. ಪರಿಣಾಮವಾಗಿ ಹಲವು ಸಂದರ್ಭ, ಘಟನೆಗಳನ್ನು ಕೈವಾರಿಸುವಾಗಲೆಲ್ಲ ಒಬ್ಬ ಭಕ್ತನಿಗೂ ಮಿಗಿಲಾದ ಒಬ್ಬ ಕವಿಯನ್ನು ಕಾಣಬಹುದು. ಕತೆಯ ಮಲಯಾಳಂ ರೂಪಕ್ಕೆ ಮಹತ್ವ ಕೊಟ್ಟಷ್ಟೆ ಮಲಯಾಳಂ ಭಾಷೆಯನ್ನು ಪಳಗಿಸಿಕೊಳ್ಳುವಲ್ಲಿಯೂ ಮಹಾಭಾರತ ಒಂದು ಮಾಧ್ಯಮವಾಗಿ ಕವಿಗೆ ಒದಗಿದೆ. ಕಾವ್ಯಭಾಷೆಯಲ್ಲಿ ಸಂಸ್ಕೃತವನ್ನು ದೂರವಿಟ್ಟು ಮಲಯಾಳವನ್ನು ಸುಗಮವಾದ ಕಾವ್ಯ ಶೈಲಿಗೆ ಒಗ್ಗಿಸುವಲ್ಲಿಯೂ ಈ ಮಹಾಭಾರತದ ಮಹತ್ವವಿದೆ.

ಇದೇ ಕವಿಯ ಅಧ್ಯಾತ್ಮ ರಾಮಾಯಣ ಮಲಯಾಳಿಗರು ಮನೆಗಳಲ್ಲಿ ಪಾರಾಯಣ ಮಾಡುವ ಕಾರಣಕ್ಕೆ ಧಾರ್ಮಿಕವಾಗಿ ಮಹತ್ವ ಪಡೆದಿದೆ. ಜನಮಾನಸದಲ್ಲಿ ಮನೆ ಮಾಡಿದ ರಾಮಾಯಣದ ಜನಪ್ರಿಯತೆ ಕೇರಳದಲ್ಲಿ ಪ್ರಸ್ತುತ ಮಹಾಭಾರತಕ್ಕೆ ದೊರೆಯದಿರಬಹುದು. ಆದರೆ ಸಾಹಿತ್ಯಕೃತಿಯಾಗಿ ಭಾಷೆ ಹಾಗೂ ಕಾವ್ಯ ಶೈಲಿಯ ದೃಷ್ಟಿಯಿಂದ ಎಳುತ್ತಚ್ಚನ್ ಮಲಯಾಳಂ ಮಹಾಭಾರತಕ್ಕೆ ಪ್ರಮುಖ ಸ್ಥಾನವಿದೆ. ಮಹಾಭಾರತವನ್ನು ಮನೆಗಳಲ್ಲಿ ಪಾರಾಯಣ ಮಾಡಿದರೆ ಗೃಹಕಲಹಗಳಿಗೆ ಕಾರಣವಾಗುತ್ತದೆ ಎಂಬ ನಂಬಿಕೆಯಿಂದಾಗಿ ಮಹಾಭಾರತ ರಚನೆಗಳಿಗೆ ಕೇರಳದ ಜನಮಾನಸದಲ್ಲಿ ಸ್ಥಾನ ದೊರೆಯಲಿಲ್ಲ. ಆದರೆ ಶೈಕ್ಷಣಿಕ ವಲಯಗಳಲ್ಲಿ ಆಧುನಿಕ ಮಲಯಾಳಂನ ಹೊಸ ಶೈಲಿಯನ್ನು ದಾಖಲಿಸಿದ ಕೃತಿ ಎಂಬ ಕಾರಣಕ್ಕೆ ಎಳುತ್ತಚ್ಚನ್ ಮಹಾಭಾರತ ಗಮನಾರ್ಹವಾಗಿದೆ.

ಎರಡು ಲಕ್ಷದ ಹದಿನೈದು ಸಾವಿರದಷ್ಟು ಸಾಲುಗಳಿರುವ ಸಂಸ್ಕೃತ ಮಹಾಭಾರತವನ್ನು ಎಳುತ್ತಚ್ಚನ್ ಸುಮಾರು, ಇಪ್ಪತ್ತು ಸಾವಿರ ಸಾಲುಗಳಲ್ಲಿ ಸ್ವತಂತ್ರವಾಗಿ ಸಂಕ್ಷೇಪಿಸಿದ್ದಾನೆ. ಮೂಲ ಮಹಾಭಾರತದ ಹದಿನೆಂಟು ಪರ್ವಗಳಿಗೆ ಬದಲಾಗಿ ಎಳುತ್ತಚ್ಚನ್ ಇಪ್ಪತ್ತೊಂದು ಪರ್ವಗಳಾಗಿ ವಿಸ್ತರಿಸಿದ್ದು ವಿಶೇಷವೇ. ಆದಿಪರ್ವದ ಬದಲಿಗೆ ಪೌಲೋಮ, ಆಸ್ತಿಕ, ಸಂಭವಗಳೆಂದು ಮೂರು ಪರ್ವಗಳನ್ನು ಆರಂಭದಲ್ಲಿ ಕವಿ ಹೆಸರಿಸಿದ್ದಾನೆ. ಸೌಪ್ತಿಕ ಮತ್ತು ಸ್ತ್ರೀಪರ್ವಗಳ ನಡುವೆ ಐಷೀಕಪರ್ವವೆಂಬ ಹೊಸಶೀರ್ಷಿಕೆಯನ್ನು ನೀಡಿದ್ದಾನೆ. ಅಶ್ವತ್ಥಾಮನು ವಿರೋಧಿಗಳಾದ ಭೀಮಾರ್ಜುನರನ್ನು ಕೊಲ್ಲಲು ಇಷೀಕವೆಂಬ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದ ಕಥಾಭಾಗವನ್ನು ಒಳಗೊಂಡ ಅಧ್ಯಾಯಕ್ಕೆ ಐಷೀಕಪರ್ವವೆಂಬ ಅನ್ವರ್ಥ ಹೆಸರನ್ನು ನೀಡಿದ್ದಾನೆ.

ವ್ಯಾಸನಲ್ಲಿ ಸುದೀರ್ಘವಾಗಿರುವ ಜಯದ್ರಥ ಪ್ರಕರಣ, ಪಾಂಡವರ ಅಜ್ಞಾತವಾಸ, ಶ್ರೀಕೃಷ್ಣ ದೌತ್ಯ, ದ್ರೋಣವಧೆ, ಕರ್ಣಾರ್ಜುನರ ಯುದ್ಧವೇ ಮೊದಲಾದ ಅನೇಕ ಕಥಾಭಾಗಗಳನ್ನು ಕವಿ ತುಂಬಾ ಸಂಕ್ಷೇಪಿಸಿದ್ದಾನೆ. ಅಲ್ಲದೆ ಅನೇಕ ಉಪಕತೆಗಳಿಗೂ ಕಾವ್ಯದಲ್ಲಿ ಜಾಗಕೊಟ್ಟಿಲ್ಲ.

ಭಗವದ್ಗೀತೆಯಂತಹ ತತ್ವ ಸಿದ್ಧಾಂತಗಳ ಭಾಗವನ್ನು ಎಳುತ್ತಚ್ಚನ್ ಪೂರ್ಣವಾಗಿ ತನ್ನ ಮಹಾಭಾರತದಲ್ಲಿ ಕೈಬಿಟ್ಟಿದ್ದಾನೆ. ಭಗವದ್ಗೀತೆಯ ಮಹತ್ವವನ್ನು ಕವಿ ಅರಿತಿದ್ದಾನೆ. ಆದರೆ ತನ್ನ ಸ್ವತಂತ್ರ ನಡೆಗೆ ಆ ಭಾಗ ತೊಡಕಾಗಬಹುದು ಎಂಬ

ಕಾರಣಕ್ಕಾಗಿ ಮಾತ್ರ ಉಪೇಕ್ಷಿಸಿದ್ದಾನೆ ಎಂದು ತಿಳಿಯಬಹುದು. ಅಷ್ಟೇ ಅಲ್ಲದೆ ಭಗವದ್ಗೀತೆಯಂತಹ ಧಾರ್ಮಿಕ ಕೃತಿಗಳಿಗೆ ಬೇರೆ ರೀತಿಯಲ್ಲಿ ಪ್ರಚಾರ ದೊರೆತಿದೆ. ವೇದ ಸಂಬಂಧಿಯಾದ ಅನೇಕ ವಿಚಾರಗಳೂ ಇರುವುದರಿಂದ ಅವುಗಳನ್ನು ಕೈಬಿಟ್ಟರಬಹುದೆಂಬ ಅಭಿಪ್ರಾಯವೂ ವಿದ್ವಾಂಸರ ವಲಯದಲ್ಲಿದೆ. ಬ್ರಾಹ್ಮಣೇತರ ಕವಿಯಾದ ಎಳುತ್ತಚ್ಚನ್ ಬ್ರಾಹ್ಮಣರನ್ನು ಉದ್ದೇಶಿಸಿದ ವಿಚಾರಗಳನ್ನು ಹೇಳುವುದರ ಮೂಲಕ ಅವರ ಭಾವನೆಗಳಿಗೆ ಅಪಚಾರ ಮಾಡಬಾರದೆಂದು ಆತ ಭಾವಿಸಿರಬಹುದು ಎಂಬ ಅಭಿಪ್ರಾಯವೂ ಇದೆ. ಆಗೆಲ್ಲ ಎಳುತ್ತಚ್ಚನ್ ಸಹ ಒಬ್ಬ ಸನ್ಯಾಸಿಯಾಗಿದ್ದನೆಂಬ ವಿಚಾರವನ್ನು ಈ ಬಗೆಯ ಅಭಿಪ್ರಾಯ ಮಂಡಿಸುವವರು ಮರೆತು ಬಿಡುತ್ತಾರೆ. ವಾಸ್ತವವಾಗಿ ಎಳುತ್ತಚ್ಚನ್‌ಗೆ ವೇದ, ವೇದಾಂಗಗಳಲ್ಲಿ ಅಗಾಧವಾದ ಜ್ಞಾನವೂ ಇತ್ತು. ವೇದಗಳಿಂದ ದೂರವೇ ಉಳಿದ ಬಹುಸಂಖ್ಯಾತ ಜನರಿಗೆ ಅಲ್ಲಿನ ಜ್ಞಾನವನ್ನು ವಿಸ್ತರಿಸುವುದೇ ಎಳುತ್ತಚ್ಚನ್‌ನ ಪ್ರಮುಖ ಲಕ್ಷ್ಯವಾಗಿತ್ತು. ಬ್ರಾಹ್ಮಣರು ಕವಿಗೆ ಸಂಬಂಧಿಸಿದಂತೆ ಆದರಣೀಯರೂ, ಪ್ರೀತಿಪಾತ್ರರೂ ಆಗಿದ್ದರು. ತನ್ನ ಕೃತಿಗಳ ಆರಂಭದಲ್ಲಿ ಕವಿ, ಬ್ರಾಹ್ಮಣರನ್ನು ಗೌರವದಿಂದ ವಂದಿಸುತ್ತಾನೆ. ಹಾಗಾಗಿ ವೇದಶಾಸ್ತ್ರ ಸಂಬಂಧಿತವಾದ ಭಾಗಗಳನ್ನು ಕೈ ಬಿಡುವುದಕ್ಕೆ ಸಾಹಿತ್ಯಿಕವಾದ ಹಾಗೂ ಕಲಾತ್ಮಕವಾದ ಕಾರಣ ಮಾತ್ರವೇ ಆಗಿರಬಹುದು ಎಂದು ಭಾವಿಸಬಹುದು.

ಕವಿಗೆ ರಾಮಾಯಣಕ್ಕಿಂತಲೂ ವಿವರಣೆಗಳಿಗೆ, ಪಾತ್ರ ಸೃಷ್ಟಿಗೆ, ರಸಾವಿಷ್ಕಾರಗಳಿಗೆ ಹೆಚ್ಚು ಅವಕಾಶ ದೊರೆತುದು ಮಹಾಭಾರತದಲ್ಲಿ. ರಾಮಾಯಣದಲ್ಲಿ ನೈತಿಕ ಆದರ್ಶಗಳನ್ನು ಎತ್ತಿ ಹಿಡಿಯುವ ಉನ್ನತ ಪಾತ್ರಗಳೇ ಇವೆ. ಅಲ್ಲಿನ ನಾಯಕನಾದ ಶ್ರೀರಾಮನೂ ಆದರ್ಶ ಪುರುಷ. ಹಾಗಾಗಿ ರಾಮನನ್ನು ರಾಮ ದರ್ಶನವನ್ನು ಕುರಿತಾದ ಸ್ತುತಿಯ ಮೂಲಕವೇ ಕಾವ್ಯ ಧ್ವನಿ ವ್ಯಂಜಿಸಬೇಕು. ಸ್ಥಾಪಿತವಾದ ಆದರ್ಶಗಳ ಚೌಕಟ್ಟಿನಲ್ಲಿ ಪರಿಮಿತ ಆದರ್ಶಗಳ ನಿರ್ಬಂಧಗಳ ನಡುವೆಯೂ ವಿಭಿನ್ನ ಅಭಿರುಚಿಯ ಪಾತ್ರವಾಗಿ ಮಹಾಭಾರತದ ಶ್ರೀಕೃಷ್ಣ ಪ್ರಮುಖನಾಗುತ್ತಾನೆ. ಶ್ರೀಕೃಷ್ಣನ ಪಾತ್ರ ಹೆಚ್ಚು ಸಂಕೀರ್ಣವಾದುದು. ಮೂಲಭೂತವಾದ ಆದರ್ಶ ಹಾಗೂ ಸತ್ಯಗಳನ್ನು ಶ್ರೀಕೃಷ್ಣನ ಪಾತ್ರದಲ್ಲಿ ಪ್ರಾಯೋಗಿಕ ಅಗತ್ಯಗಳಿಗನುಗುಣವಾಗಿ ಸಂಯೋಜಿಸಲಾಗಿದೆ. ರಾಮಾಯಣದಲ್ಲಿ–ರುವುದಕ್ಕಿಂತಲೂ ಅನೇಕ ಬಗೆಯ ವಿಭಿನ್ನ ವ್ಯಕ್ತಿತ್ವಗಳ ಪಾತ್ರಗಳು ಮಹಾಭಾರತದಲ್ಲಿವೆ. ಅಗಾಧ ಕರುಣೆಯ, ವೀರ, ಧೀರ ಪಾತ್ರಗಳು ಮಹಾಭಾರತದಲ್ಲಿವೆ. ಆ ಕಾರಣಕ್ಕಾಗಿ ವ್ಯಾಸ ಪ್ರತಿಭೆಯನ್ನು ಅನುಸರಿಸಿದ ಎಳುತ್ತಚ್ಚನ್‌ಗೆ ಸಂಬಂಧಿಸಿದಂತೆ ಹೇಳುವುದಾದರೆ ಶ್ರೀಕೃಷ್ಣನ ಗುಣಗಾನವೇ ಕಾವ್ಯದ

ಕೇಂದ್ರ ಪ್ರಜ್ಞೆ, ಘಟನಾ ವೈವಿಧ್ಯ, ಉತ್ಕಟವಾದ ಭಾವಗಳ ಹೃದ್ಯನಿರೂಪಣೆ ಇವುಗಳಿಂದೆಲ್ಲ ಮಹಾಭಾರತ ಬೃಹತ್ ಕಾವ್ಯವೇ ಆಗಿದೆ. ಕೃಷ್ಣ ಕತೆಯನ್ನು ನಿರೂಪಿಸುತ್ತಲೇ ಕೃತಿಯ ಮೂಲ ಸತ್ವಕ್ಕೆ ನ್ಯಾಯ ಒದಗಿಸುತ್ತಾನೆ ಕವಿ ಎಳುತ್ತಚ್ಚನ್. ಆದರೆ ಎಳುತ್ತಚ್ಚನ್‌ನ ರಾಮಾಯಣಕ್ಕೂ ಮಹಾಭಾರತಕ್ಕೂ ಇರುವ ಮೂಲಭೂತವಾದ ವ್ಯತ್ಯಾಸವನ್ನು ವಿದ್ವಾಂಸರು ಗುರುತಿಸಿದ್ದಾರೆ. ರಾಮಾಯಣದಲ್ಲಿ ಶ್ರೀರಾಮನ ಕುರಿತಾದ ಕವಿಯ ಭಕ್ತಿ ಅಂತರಾಳದಿಂದ ಪ್ರಕಟವಾದಂತೆಯೇ ಗೋಚರಿಸುತ್ತದೆ. ಆದರೆ ಮಹಾಭಾರತದಲ್ಲಿ ಶ್ರೀಕೃಷ್ಣನ ಕುರಿತಾದ ಭಕ್ತಿ ಕವಿಯಿಂದ ಸಹಜವಾಗಿ ಪ್ರಕಟವಾಗುವುದಿಲ್ಲ. ಏನೇ ಆದರೂ ಎಳುತ್ತಚ್ಚನ್‌ನ ಮಹಾಭಾರತದ ಆತ್ಮ  ಕೃಷ್ಣ ಕತೆಯೇ ಎಂಬುದರಲ್ಲಿ ಸಂದೇಹವಿಲ್ಲ.

ಸಂಸ್ಕೃತ ಮಹಾಭಾರತವನ್ನು ಸಮಗ್ರವಾಗಿ ಅರ್ಥೈಸಿಕೊಂಡು ಅದರ ಸಾರಸಂಗ್ರಹವನ್ನು ಆರಂಭದಲ್ಲಿ ಕವಿ ಹೇಳಿದ್ದಾನೆ. ಪ್ರತಿಯೊಂದು ಪರ್ವಗಳನ್ನು, ಅಧ್ಯಾಯಗಳನ್ನು ಕಾವ್ಯಗಳ ಸಾಲುಗಳನ್ನು ಗುರುತಿಸಿ 21 ಪರ್ವಗಳಲ್ಲಿ ನಿರೂಪಿಸಲಾಗಿದೆ. ಎಳುತ್ತಚ್ಚನ್‌ನ ಕಾಲದಲ್ಲಿ ಕೇರಳದಲ್ಲಿ ಪ್ರಚಾರದಲ್ಲಿದ್ದ ಮಹಾಭಾರತ ಕತೆಯ ಚಿತ್ರಣ ಇದರಲ್ಲಿ ಸಿಗುತ್ತದೆ. ಸಂಸ್ಕೃತ ಮಹಾಭಾರತದ ಪುನರ್ ಸೃಷ್ಟಿಯಿದು. ಕೃತಿಯಲ್ಲಿ ಕವಿ ಬಿಟ್ಟ ಭಾಗಗಳಾದ ಭಗವದ್ಗೀತೆಯಂತಹ ವಿಚಾರಗಳ ಬಗೆಗೆ ಸಾರ ಸಂಗ್ರಹದ ಭಾಗಗಳಲ್ಲಿ ವಿಮರ್ಶಿಸಲಾಗಿದೆ.

ಕತೆಯ ವೀರಕೃತ್ಯಗಳು, ಸ್ತ್ರೀ–ಪುರುಷ ಪಾತ್ರಗಳ ವ್ಯಕ್ತಿತ್ವಗಳು, ನಡವಳಿಕೆಗಳು, ಸನ್ನಿವೇಶಗಳಿಂದಾಗಿ ಮಹಾಭಾರತದಲ್ಲಿ ರಸಾವಿಷ್ಕಾರಗಳಿಗೆ ಆಸ್ಪದವಾಗಿದೆ ಎಂಬುದು ತಿಳಿದ ವಿಷಯವೇ ಆಗಿದೆ. ಅನೇಕ ಸಂದರ್ಭಗಳಲ್ಲಿ ವೀರ ಕರುಣ ರಸಗಳು ಹೊಳೆಯಾಗಿ ಹರಿದಿವೆ. ಬಹುವಿಧದ ಸಿದ್ಧಿಸಾಧನೆಗಳನ್ನು ಸಶಕ್ತ ಭಾವವಿಕಾಸಗಳುಳ್ಳ ಅಮಾನುಷ ಕಥಾಪಾತ್ರಗಳು ಏಕಕಾಲಕ್ಕೆ ಗೌರವಕ್ಕೂ ನಿಂದನೆಗಳಿಗೂ ಒಳಗಾಗುವಂತೆ ವೀರ ಕೃತ್ಯಗಳಲ್ಲಿ ತೊಡಗಿರುವುದನ್ನು ಕಾಣಬಹುದು. ವೀರ ಕೃತ್ಯಗಳ ಉದಾಸೀನ ಭಾವದಿಂದ ನೋಟಕನಾಗಿ ನಿಲ್ಲದೆ ದ್ರೌಪದಿಯಂತಹ ಪಾತ್ರಗಳು ಪುರುಷರನ್ನು ಶಕ್ತವಾಗಿ ಪ್ರಚೋದಿಸಿ ವೀರ ಪರಾಕ್ರಮಗಳತ್ತ ನೂಕಿ ಬಿಡುತ್ತಾರೆ. ವೀರರು, ಹೇಡಿಗಳು, ತರುಣರು,ವೃದ್ಧರು, ಅಪರಾಧಿಗಳು, ನಿಷ್ಕಳಂಕಿತರು ಆಗಿರುವ ಮನುಷ್ಯರ ರಕ್ತದಿಂದ ನೆನೆದ ಮಣ್ಣು ಕುರುಕ್ಷೇತ್ರದ್ದು. ಗಾಂಧಾರಿಯಂತಹ ತಾಯಂದಿರು, ಸಹೋದರಿಯರು, ಮಡದಿಯರು ಹೀಗೆ ಮೊದಲಾದವರ ಪ್ರಲಾಪಗಳು ಅಂತರೀಕ್ಷವನ್ನು ಹರಿದು

ಚಿಂದಿಮಾಡುತ್ತವೆ. ಇವೆಲ್ಲವುಗಳ ನಡುವೆ ಮನುಷ್ಯನ ಆಸೆ ಆಕಾಂಕ್ಷೆಗಳು ಛಿದ್ರ ಛಿದ್ರವಾಗುತ್ತವೆ. ಪಾಂಡವರ ವಿಷಯದಲ್ಲಿ ಆತ್ಯಂತಿಕವಾದ ನಿರರ್ಥಕತೆಯು ಪರಿಶುದ್ಧವಾದ ಕರುಣೆಗೆ ದಾರಿ ಮಾಡಿಕೊಡುತ್ತದೆ. ಎಲ್ಲಾ ಘಟನೆಗಳಿಗೆ ಸಾಕ್ಷಿಯಾಗಿ, ಗುರುವಾಗಿ, ಬಂಧುವಾಗಿ, ಸಾರಥಿಯಾಗಿ, ಕಾರಣ ಪುರುಷನಾಗಿ ಶ್ರೀಕೃಷ್ಣನಿದ್ದಾನೆ.

ಕವಿ, ಭಕ್ತ, ದಾರ್ಶನಿಕ ಎಂಬೀ ನೆಲೆಗಳಲ್ಲಿ ಎಳುತ್ತಚ್ಛನ್‌ನ ಪ್ರತಿಭಾ ಸಾಮರ್ಥ್ಯ ವ್ಯಾಸನ ಅನಶ್ವರ ಕೃತಿಯ ಮರು ನಿರೂಪಣೆಯಲ್ಲಿ ಉದಾತ್ತ ದೃಷ್ಟಿಕೋನವು ಕಳೆದು ಹೋಗದಂತೆ ಮಾನವೀಯತೆಯು ನಷ್ಟವಾಗದಂತೆ ಉಳಿಸಿಕೊಳ್ಳುವುದು ಸಾಧ್ಯವಾಗಿದೆ. ಈ ಉದ್ದೇಶವನ್ನು ಈಡೇರಿಸಲು ವರ್ಣನೆಯಲ್ಲಿ ವಕ್ರೋಕ್ತಿಯನ್ನು ಕವಿ ಬಳಸಿಕೊಂಡಿದ್ದಾನೆ. ಶುಕ್ರಾಚಾರ್ಯ, ಕಚ, ಶರ್ಮಿಷ್ಠೆ, ದೇವಯಾನಿ, ಯಯಾತಿ ಮೊದಲಾದವರಿಗೆ ಸಂಬಂಧಿಸಿದ ಕಾವ್ಯ ಭಾಗಗಳನ್ನು ಪರಿಶೀಲಿಸಬಹುದು. ಕುರುವಂಶದ ಶ್ರೇಷ್ಠತೆಯನ್ನು ಹೇಳುವಾಗ ಪ್ರಮುಖ ಕತೆಯ ಮೂಲವನ್ನು ಎಳುತ್ತಚ್ಛನ್ ಬದಲಿಸಲಿಲ್ಲ. ತನ್ನ ಕಾವ್ಯದ ಸನ್ನಿವೇಶಗಳನ್ನು ಮಾನವೀಯಗೊಳಿಸಲು ಮನಸ್ಸಿನ  ಬಣ್ಣದ ಬದಲಾವಣೆಗಳನ್ನು ಆತ ಮಾಡಿದ್ದಾನೆ. ಜಯದ್ರಥನನ್ನು ಕೊಂದರೆ ತಂಗಿಗೆ ವೈಧವ್ಯ ಬರುತ್ತದೆ ಎಂದು ಯುಧಿಷ್ಠಿರ ಹೇಳಿದ್ದರಿಂದ ಮೀಸೆ ಕುಣಿಸುತ್ತಾ ನಕ್ಕು ಭೀಮ ಅವನನ್ನು ಬಿಟ್ಟುಬಿಡುವ ವಿಷಯ ಎಳುತ್ತಚ್ಛನ್‌ನಲ್ಲಿದೆ. ಕರ್ಣ ಕುಂತಿಯ ಮಗನೆಂಬ ರಹಸ್ಯವನ್ನು ತಿಳಿಸುವುದು, ಕರ್ಣನು ಪ್ರಯೋಗಿಸಿದ ಸರ್ಪಾಸ್ತ್ರವು ಬಂದು ಮರಳಿ ತೊಡುವಂತೆ ಕೇಳಿಕೊಳ್ಳುವುದು ಇತ್ಯಾದಿ ವಿವರಗಳು ಎಳುತ್ತಚ್ಛನ್‌ನಲ್ಲಿ ಇಲ್ಲ. ಯುದ್ಧಾನಂತರ ಧರ್ಮರಾಯನ ಶೋಕವನ್ನು ಭೀಮನ ಸಂತೋಷವನ್ನೂ ವಿವರಿಸುವ ಒಂದೊಂದು ಅಧ್ಯಾಯಗಳು ಮೂಲದಲ್ಲಿವೆ. ಇದನ್ನು  ಸಂಕ್ಷೇಪಿಸಿದ ಎಳುತ್ತಚ್ಛನ್ ಆರಂಭದಲ್ಲಿ ಬರುವ ಅರ್ಜುನ ವಚನವನ್ನು ಕೈಬಿಟ್ಟು ಭೀಮವಚನವನ್ನು ಸೇರಿಸಿದ್ದಾನೆ. ಇಂತಹ ಸಣ್ಣಪುಟ್ಟ ಬದಲಾವಣೆಗಳ ಮೂಲಕ ಕವಿ ಸ್ವಂತಿಕೆಯನ್ನು ಮೆರೆದಿದ್ದಾನೆ.

ಉದಾಹರಣೆಗಾಗಿ ಅಸುರಗುರುವಾದ ಶುಕ್ರಾಚಾರ್ಯರ ಮಗಳು ದೇವಯಾನಿ ಮತ್ತು ಅಸುರ ರಾಜನಾದ ವೃಷಪರ್ವನ ಮಗಳು ಶರ್ಮಿಷ್ಠೆಗೆ ಪರಸ್ಪರ ಜಗಳವಾಯಿತು. ಒಮ್ಮೆ ಅವರು ಸಖಿಯರೊಡಗೂಡಿ ಉದ್ಯಾನದ ಬಳಿಯ ತೊರೆಯಲ್ಲಿ ಸ್ನಾನ ಮಾಡುತ್ತಿರುವುದನ್ನು ಕಂಡ ಇಂದ್ರನು ಗಾಳಿಯರೂಪದಿಂದ ಬಂದು ಅವರು ದಡದಲ್ಲಿ ಬಿಚ್ಚಿಟ್ಟ ಬಟ್ಟೆಗಳನ್ನು ಹಾರಿಸಿದ. ಇದರಿಂದ ಗಾಬರಿಗೊಂಡ ತರುಣಿಯರು ಓಡೋಡಿ ಬಂದು ದಡದಲ್ಲಿ ಸಿಕ್ಕಿದ ವಸ್ತ್ರಗಳನ್ನು ಉಟ್ಟುಕೊಂಡರು.

ಈ ಅವಸರದಲ್ಲಿ ಶರ್ಮಿಷ್ಠೆಗೆ ಸಿಕ್ಕಿದ್ದು ದೇವಯಾನಿಯ ವಸ್ತ್ರಗಳು. ಅದನ್ನು ಮರಳಿ ಕೊಡುವಂತೆ ದೇವಯಾನಿಯ ಕೋರಿಕೆಯನ್ನು ಶರ್ಮಿಷ್ಠೆ ಮನ್ನಿಸಲಿಲ್ಲ. ಇದರ ಕಾರಣವಾಗಿ ಉಂಟಾದ ಮಾತು ಬೆಳೆದು ಹೊಡೆದಾಟದಲ್ಲಿ ಕೊನೆಯಾಯಿತು.

ಶರ್ಮಿಷ್ಠೆ ಶುಕ್ರಾಚಾರ್ಯರ ಬಗೆಗೂ ಅವಹೇಳನ ಮಾತುಗಳನ್ನಾಡಿದಳು. ದೇವಯಾನಿಯನ್ನು ಪಾಳುಬಾವಿಯೊಂದಕ್ಕೆ ನೂಕಿ ಶರ್ಮಿಷ್ಠೆ ಮತ್ತು ಸಖಿಯರು ತಮ್ಮ ದಾರಿ ಹಿಡಿದು ನಡೆದರು. ಕೊನೆಗೆ ಆ ದಾರಿಯಾಗಿ ಬೇಟೆಗೆ ಬಂದ ಯಯಾತಿಯು ಆ ಪಾಳುಬಾವಿಯಲ್ಲಿದ್ದ ತರುಣಿಯನ್ನು ಕಂಡನು. ಮೂಲ ಮಹಾಭಾರತದಲ್ಲಿ ಕತೆ ಹೀಗಿದೆ: ಯಯಾತಿಯು ತರುಣಿ ಯಾರೆಂದು ವಿಚಾರಿಸಿದಾಗ ಆಕೆ ಬ್ರಾಹ್ಮಣ ಕನ್ಯೆಯೆಂದು ತಿಳಿಯಿತು. ಆತ ಅವಳನ್ನು ಬಾವಿಯಿಂದ ಮೇಲೆತ್ತಿ ಕಾಪಾಡಿ ತನ್ನ ದಾರಿ ಹಿಡಿದುಹೋದ. ಎಳುತ್ತಚ್ಚನು ಈ ಕತೆಯನ್ನು ಈ ಕೆಳಗಿನಂತೆ ವರ್ಣಿಸಿದ್ದಾನೆ.

ಅಂದಲ್ಲವೇ ಯಯಾತಿಯು ಬಂದುದಲ್ಲಿಗೆ ಬೇಟೆಗಾಗಿ
ಭೂಪತಿ ದಾಹದಿಂದ ನೀರನ್ನರಸುತ್ತಿರಲು
ಸಮೀಪ ನೀರಿಲ್ಲದ ಬಾವಿ ಕಂಡನದರಲಿ
ಶೋಭಿಸುವ ಮಿಂಚಿನಂದದ ಕನ್ಯಾರತ್ನವನು
ಕ್ಷೋಣೀಪಾಲಕನು ತಾ ಕಾಪಾಡಿದನು
ಕೋಪ ಅಸೂಯೆ ಪ್ರೀತಿ ವಿನಯ
ಭೂಪತಿಯಲಿ ಅನುರಾಗ ಬೆಳೆಯಲು
ಪ್ರೇಮಮ ಮಂದಾಕ್ಷವು ಬಾಷ್ಪವು ಪ್ರಲಾಪವು
ಕಾಮತಾಪವು ಕಮನೀಯವೇಷವು ಅಂತರಂಗದಲಿ
ಭಯವೂ ಮಾನಹಾನಿಯೂ ದುಃಖವೂ
ಕೂಡಿದೊಬ್ಬಳು ಕನ್ಯೆಯನು ಕಂಡು
ರಿಪುಕುಲಾಂತಕನಾದ ಅರಸ ನುಡಿದ:
ಚೆಂದುಟಿ ಚೆಲುವಿನ ಕುಲ ಮೌಲಿಕೆಯೇ! ಬಾಲೆ!
ನಿರ್ಮಲೇ! ನಿರುಪಮಶೀಲೇ! ಹೇಳೀಗ ಎನ್ನೊಡನೆ
ನಿನ್ನ ಮನೋದುಃಖದ ಮೂಲವನು ಮತ್ತೆ ನಿನ್ನ
ಕುಲ ಹೆಸರು ನಿನ್ನ ತಂದೆಯದಾರೆಂದು ಪರಮ
ಸತ್ಯವ ನುಡಿ ನಿನ್ನ ಹಡೆದವರಾರೆಂಬುದನ್ನೆಲ್ಲ

ಕೂಪದಲಿ ಬೀಳಲು ಕಾರಣವಾವುದು
ಭೂಪತಿ ಕೇಳಲು ಕನ್ಯೆ ತಾ ನುಡಿದಳು:
ಅಸುರಾಚಾರ್ಯನಾದ ಶುಕ್ರನ ಮಗಳು ನಾ
ಮಧುರಾಕಾರೆ! ದೇವಯಾನಿಯೆಂದೆನ್ನ ಹೆಸರು.
ಬಾವಿಯಲಿ ಬೀಳಲಿರುವ ಕಾರಣವನ್ನು ನುಡಿದಳಾಗ
ತಾಪಸ ಕುಲವರ ಬಾಲಿಕೆಯಾ ಸಮಯದಿ
ಮುಗುಳ್ನಗೆಯೊಡನೆ ಕೈ ಮುಗಿದು ಹೇಳಿದಳು:
ಕೂಪದಲ್ಲಿ ಪತಿತೆಯಾಗಿ ತಾಪದಲ್ಲಿ ಕಳೆಯುತ್ತಿದ್ದೆ
ನೆನ್ನಾಪತ್ತನ್ನು ಕಳೆದ ಮಾನುಷನಾದ ತಾನು
ಯಾರೆಂದರಿಯುವ ಆಸೆಯಿದೆ ಅಪಾರ
ನೇರವಾಗಿ ಹೇಳಬೇಕೆಂಬ ಭಿನ್ನಹವ ಕೇಳಿದರಸನು
ಮಂದಸ್ಮಿತನಾಗಿ ಕನ್ಯಾರತ್ನವಾದ
ಸುಂದರಿಯನು ಅಭಿನಂದಿಸಿ ನುಡಿದನಂದು:
ಅಹಿತಕುಲ ಕಾಲನಾದ ನರವೀರ
ನಹುಷನ ಮಗನಾದ ಯಯಾತಿ ನಾನು
ಅದಕೇಳಿದೊಡನೆ ನಿಟ್ಟುಸಿರಿನೊಡನೆ ಹೇಳಿದಳು:
ಚಂದ್ರಮುಖಿಯಾದೆನ್ನ ಕೈಪಿಡಿದಿರುದರಿಂದ
ಮತ್ತೊಬ್ಬ ಪುರುಷನು ಸ್ವೀಕರಿಸಬಾರದು
(ಮಹಾಭಾರತ, ಸಂಭವಪರ್ವ, ಶರ್ಮಿಷ್ಠೆಯ ದಾಸ್ಯ)

ಮೂಲ ಮಹಾಭಾರತದಲ್ಲಿ ದೇವಯಾನಿಯನ್ನು ಬಾವಿಯಿಂದ ರಕ್ಷಿಸುವುದಕ್ಕೂ ಪೂರ್ವದಲ್ಲಿ ಯಯಾತಿಯು ಆಕೆ ಯಾರೆಂಬುದನ್ನು ಕೇಳಿ ತಿಳಿದುಕೊಳ್ಳುತ್ತಾನೆ. ಆದರೆ ಎಳುತ್ತಚ್ಚನ್‌ನ ಯಯಾತಿ  ಅವಳನ್ನು ಯಾರೆಂದು ವಿಚಾರಿಸದೆಯೇ ಬಾವಿಯಿಂದ ರಕ್ಷಿಸುತ್ತಾನೆ. ಇದು ಸನ್ನಿವೇಶವನ್ನು ಹೆಚ್ಚು ಮಾನವೀಯ ನೆಲೆಗೆ ತಂದಿಡುತ್ತದೆ. ಅದು ಮೂಲ ಮಹಾಭಾರತದಲ್ಲಿ ಹೀಗಿದೆ: ಯಯಾತಿ ಮಹಾರಾಜ ಶರ್ಮಿಷ್ಠೆ ಮತ್ತು ದೇವಯಾನಿಯನ್ನು ಮತ್ತೊಮ್ಮೆ ಭೇಟಿಯಾಗುತ್ತಾನೆ. ಹಿಂದೆ ಪಾಳುಬಾವಿಯಿಂದ ತನ್ನ ಕೈಹಿಡಿದು ಕಾಪಾಡಿದ ಘಟನೆಯನ್ನು ದೇವಯಾನಿ ನೆನಪಿಸುತ್ತಾಳೆ. ಹಾಗಾಗಿ ಆತನಲ್ಲಿ ಆಕೆ ತನ್ನನ್ನು ಮದುವೆಯಾಗುವಂತೆ ಭಿನ್ನವಿಸುತ್ತಾಳೆ. ಆ ಘಟನೆಯ ನಂತರ ತಾನು ಅನ್ಯರನ್ನು

ಮದುವೆಯಾಗುವುದು ಹೇಗೆಂದು ಆಕೆ ಪ್ರಶ್ನಿಸುತ್ತಾಳೆ. ಬ್ರಾಹ್ಮಣ ಕನ್ಯೆಯಾದರೂ ತನ್ನನ್ನು ಅಂಗೀಕರಿಸಬೇಕೆಂದು ಕ್ಷತ್ರಿಯನಾದ ಅರಸನಲ್ಲಿ ಕೋರುತ್ತಾಳೆ.

ಎಳುತ್ತಚ್ಚನ್‌ನ ರೀತಿ ಹೆಚ್ಚು ಮಾನವೀಯವಾಗಿದೆ. ಯಾವುದೇ ಜಾತಿ, ಧರ್ಮವೆಂಬುದನ್ನು ಗಣನೆಗೆ ತಾರದೆ ಕಷ್ಟದಲ್ಲಿರುವವರನ್ನು ರಕ್ಷಿಸುವ ತತ್‌ಕ್ಷಣದ ನಿಲುವಿನ ಎಳುತ್ತಚ್ಚನ್‌ನ ಯಯಾತಿ ಹೆಚ್ಚು ಮಾನವೀಯ ಅಂತಃಕರಣವುಳ್ಳವನಾಗಿ ಕಾಣಿಸುತ್ತಾನೆ. ಜಾತಿ ಧರ್ಮಗಳ ತಾರತಮ್ಯವಿರುವ ಸಮಾಜದಲ್ಲಿ ಅದಕ್ಕೆ ಅತೀತವಾಗಿರುವ ವ್ಯಕ್ತಿತ್ವವೇ ಹೆಚ್ಚು ಆದರಣೀಯವಾದುದೆಂದು ಕವಿ ನಂಬಿದಂತಿದೆ. ಹೀಗೆ ಕವಿ ಕಾವ್ಯದ ತುಂಬ ಮಾನವೀಯ ಅಂತಃಕರಣದ ಸಂಬಂಧಗಳನ್ನು ಸ್ಫುರಿಸುವಂತೆ ಚಿತ್ರಿಸುವುದನ್ನು ಮಹಾಭಾರತದಲ್ಲಿ ಕಾಣಬಹುದು.

ಎಳುತ್ತಚ್ಚನ್ ವ್ಯಾಸಭಾರತದ ನೇರಾನುವಾದವನ್ನು ಮಾಡಿದವನಲ್ಲ, ಕವಿಯ ಪ್ರತಿಭೆ ಮಹಾಭಾರತವನ್ನು ಸ್ವತಂತ್ರ ಸೃಷ್ಟಿಯಾಗಿಸಿದೆ. ಕಾವ್ಯಾರಂಭದಲ್ಲಿಯೇ ಇದರ ಕುರುಹುಗಳನ್ನು ಕಾಣಬಹುದು. ಬ್ರಾಹ್ಮನೊಡನೆ ವ್ಯಾಸರು ಹೇಳುವ ಮಾತುಗಳಲ್ಲಿ ಮಹಾಭಾರತದ ಸಾರಸಂಗ್ರಹದಲ್ಲಿ ವೇದಗಳನ್ನು, ವೇದರಹಸ್ಯಗಳನ್ನು ಹೇಳುವ ಕವಿ ತನ್ನ ಕೃತಿ ಧರ್ಮಲೋಕವನ್ನು ಕುರಿತೇ ಆಗಿದೆ ಎಂಬುದನ್ನು ಹೇಳಿಕೊಂಡಿದ್ದಾನೆ. ಎಳುತ್ತಚ್ಚನ್ ಒಬ್ಬ ಭಕ್ತಿಕವಿ, ಶ್ರೀಕೃಷ್ಣನಿಗೆ ಸಮರ್ಪಿತವಾದ ಕವಿಮನಸ್ಸು ಆತನದು. ಹಾಗಾಗಿ ಗಿಳಿಯೊಡನೆ ಶ್ರೀಕೃಷ್ಣನ ಕತೆ ಹಾಡಲು ಅಪೇಕ್ಷಿಸಿದ್ದರಿಂದ ಮಹಾಭಾರತವನ್ನು ವರ್ಣಿಸಲು ಆರಂಭಿಸಿತು. ಪುರಾಣ ಕಾವ್ಯವೊಂದು ಬೆಟ್ಟು ಮಾಡುವ ಧರ್ಮಮಾರ್ಗದ ಪ್ರಾಮುಖ್ಯವನ್ನು ನಿರ್ಲಕ್ಷಿಸುವುದಿಲ್ಲ, ಶ್ರೀಕೃಷ್ಣನ ಮೂಲಕ ಧರ್ಮ ಪ್ರವೃತ್ತಗೊಳ್ಳುತ್ತದೆ. ಧರ್ಮಕ್ಷಯವಾಗುವಾಗಲೆಲ್ಲ ಅವತಾರಗಳ ಮೂಲಕ ಅದನ್ನು ಪುನಃ ಸ್ಥಾಪಿಸುತ್ತಾನೆ. ಹಾಗಾಗಿ ಮಹಾಭಾರತ ಆತ್ಯಂತಿಕವಾಗಿ ಶ್ರೀಕೃಷ್ಣನ ಕತೆಯೇ ಆಗಿದೆ. ಮಹಾಭಾರತಕ್ಕೆ ಪ್ರಚಾರ ಹಾಗೂ ಜನಮಾನಸದಲ್ಲಿ ಸ್ಥಾನ ದೊರೆಯಲು ಅದರಲ್ಲಿನ ಭಕ್ತಿ ಭಾವವೇ ಪ್ರಮುಖ ಕಾರಣ. ಎಳುತ್ತಚ್ಚನ್‌ನ ಮಹಾಭಾರತದ ಜನಾಕರ್ಷಣೆಯ ಮೂಲ ಸತ್ವವೇ ತೀವ್ರವಾದ ಭಕ್ತಿ ಭಾವ ಎಂಬುದು ಸುಸ್ಪಷ್ಟ. ಧಾರ್ಮಿಕ ಪಂಥವೊಂದರ ಭಾಗವಾಗಿ ಎಳುತ್ತಚ್ಚನ್ ಕೃತಿಗೆ ದೊರೆತ ಪ್ರಚಾರ ಪ್ರೀತಿ ಮಧ್ಯಕಾಲೀನ ಸಂದರ್ಭದಲ್ಲಿ ಮಲಯಾಳಂನಲ್ಲಿ ಇನ್ನೊಂದು ಕೃತಿಗೆ ದೊರೆತಿಲ್ಲ. ಶ್ರೇಷ್ಠ ಕಾವ್ಯವೊಂದರ ಎಲ್ಲಾ ಲಕ್ಷಣಗಳನ್ನು ಒಳಗೊಂಡ ಬೃಹತ್ ಕಾವ್ಯ ಎಂಬ ನೆಲೆಯಲ್ಲಿಯೂ ಮಲಯಾಳಂನಲ್ಲಿ ಎಳುತ್ತಚ್ಚನ್‌ನ ಮಹಾಭಾರತಕ್ಕೆ ಪ್ರಮುಖ ಸ್ಥಾನವಿದೆ.

ಭಕ್ತಿ ಕವಿಯಾದರೂ ಎಳುತ್ತಚ್ಚನ್ ಶೃಂಗಾರ ರಸ ವರ್ಣನೆಯಂತಹ ಸಂದರ್ಭದಲ್ಲಿಯೂ ಹಿಂದುಳಿಯುವುದಿಲ್ಲ. ಪಾಂಡು ಕುಂತಿ ಮಾದ್ರಿಯರೊಡಗೂಡಿ ಅರಣ್ಯದಲ್ಲಿ ವಿಹರಿಸಿದ ವಿಲಾಸವನ್ನು ಕವಿ ವರ್ಣಿಸುವುದು ಹೀಗೆ:

"ಎರಡು ಹೆಣ್ಣಾನೆಗಳ ಮಧ್ಯದಲ್ಲಿ ಮದಿಸಿದ ಕರಿವೀರನಂತೆ
ತರುಣಿಯರೂ ಗಜಗಮನೆಯರೂ ಆದ ಕುಂತಿಮಾದ್ರಿಯರ ನಡುವೆ
ಯುವಕನೂ ಮದೋನ್ಮತ್ತನೂ ಆದ ಪಾಂಡುವು
ಬತ್ತಳಿಕೆಯನ್ನು ಬೆನ್ನಿಗೆ ಬಿಗಿದು ಹೂಬಾಣಗಳನ್ನು ಹಿಡಿದು
ನಿಂತಿದ್ದ ಮನ್ಮಥನಂತಿದ್ದ. ಅಂತಹ ಪಾಂಡುವನ್ನು ನೋಡಿ
ಮನ್ಮಥ ತನ್ನ ಹೂಬಾಣಗಳನ್ನು ರಭಸದಿಂದ ಪ್ರಯೋಗಿಸಿದ.
ಕರಡಿ ಮಿಥುನಗಳು ಸರಸವಾಡುತ್ತಿದ್ದ
ಗಜ ಮಿಥುನಗಳು ಒಂದನ್ನೊಂದು ಹಿಂಬಾಲಿಸುತ್ತಿದ್ದ,
ಗೂಳಿಗಳು ಹಸುಗಳನ್ನು ಅಟ್ಟಿಸಿಕೊಂಡು ಹೋಗುತ್ತಿದ್ದ.
ಗಂಡು ಹಂದಿಗಳು ಹೆಣ್ಣು ಹಂದಿಗಳೊಂದಿಗೆ ಸರಸವಾಡುತ್ತಿದ್ದ
ಗಂಡು ಹಕ್ಕಿಗಳು ಹೆಣ್ಣು ಹಕ್ಕಿಗಳೊಂದಿಗೆ ಸಂತಸದಿಂದಿದ್ದ,
ದೃಶ್ಯಗಳನ್ನು ನೋಡುತ್ತ ಪಾಂಡುವಿಗೆ ಚಿತ್ತ ಚಾಂಚಲ್ಯವುಂಟಾಯಿತು.
ಕಾಮೋದ್ರಿಕ್ತನಾದ ಪಾಂಡುವಿನ ಕಿವಿಗೆ
ಮಾವಿನ ಮಕರಂದವನ್ನು ಹೀರಿ ಕುಹುರವ ಮಾಡುತ್ತಿದ್ದ ಕೋಗಿಲೆಗಳ
ಗಾನ ಆಗಾಗ ಕೇಳಿಬರುತ್ತಿತ್ತು. ಮಧುಪಾನ ಮಾಡಿದ
ದುಂಬಿಗಳ ಗಾನವನ್ನೂ ಕೇಳುತ್ತಿದ್ದ. ಇವೆಲ್ಲವುಗಳಿಂದ
ಉದ್ರಿಕ್ತನಾದ ಪಾಂಡು ಕುಂತಿ ಮಾದ್ರಿಯರನ್ನು
ದೊಡ್ಡ ಬೆಟ್ಟದ ತುದಿಯವರೆಗೂ ಹಿಂಬಾಲಿಸಿಕೊಂಡು ಹೋದ
ನಿರ್ಮಲ ಶಿಲಾತಲದಲ್ಲಿ ಆ ಪತ್ನಿಯರೊಂದಿಗೆ
ಸರಸ ಸಲ್ಲಾಪಕ್ಕಾರಂಭಿಸಿದ...." (ಮಲಯಾಳಂ ಸಾಹಿತ್ಯ ಚರಿತ್ರೆ, ಪು. 72)

ಹೀಗೆ ಮುಂದುವರಿಯುತ್ತದೆ. ಎಳುತ್ತಚ್ಚನ್ ತನ್ನ ಕಾವ್ಯದಲ್ಲಿ ಭಕ್ತಿ, ಕರುಣೆ, ವೀರರಸಗಳನ್ನು ಉತ್ಸಾಹದಿಂದ ವರ್ಣಿಸಿದ್ದಾನೆ. ಮಹಾಭಾರತದ ಸನ್ನಿವೇಶಗಳನ್ನು ಭಕ್ತಿಯ ಅನಾವರಣಕ್ಕಾಗಿ ಸದುಪಯೋಗ ಮಾಡಿಕೊಂಡಿದ್ದಾನೆ.

ಕುರುಕ್ಷೇತ್ರದಲ್ಲಿ ಪಾರ್ಥಸಾರಥಿಯಾದ ಶ್ರೀಕೃಷ್ಣನನ್ನು ಕಂಡ ಭೀಷ್ಮಾಚಾರ್ಯರಿಂದ ಕವಿ ಹೀಗೆ ಹಾಡಿಸಿದ್ದಾನೆ:

ಕಮಲದಳನಯನ ಮಧುಮಥನ ! ಕರುಣಾನಿಧಿಯೇ
ಕಾಳಮೇಘಾಭಿರಾಮಕೃತೇ ಶ್ರೀಪತಿಯೇ
ಜನನ ಮರಣ ಭಯಹರಣ ನಿಪುಣತರ ಚರಣಯುಗ್ಮ
ಜಂತುಗಳ ಪ್ರಾಣನೆನಿಸಿದ ಜಗತ್ಪತಿಯೇ!
ಸುಮಶರ ಶಮನಕರ ನಳಿನಭವ ನಮಿತಪದ
ನಾರಾಯಣ ಹರೇ ನಾರಾಯಣ ಹರೆ
ಸಲಿಲನಿಧಿತನುಜೆಯ ವರ ! ಸಕಲಜಗ ರಕ್ಷಕ ಕಾತರನೇ!
ಸತ್‌ಚಿತ್‌ಸ್ವರೂಪ ! ಪ್ರಭೋ ನಾಥ ! ಗೋಪತಿಯೇ !
ವೇದಾಗಮಮಯಸದನ ವಿಧುವದನ ಕರುಣಾನಿಧಿಯೇ!
ನಿನ್ನ ಕೈಗಳಿಂದೆನ್ನ ಕೊಂದುಬಿಡು ನೀನು
ನನ್ನ ಮನದ ನಿಯತಭಿಲಾಷೆಯಿದು ಮಾಧವ!

ಚಕ್ರಪಾಣಿಯಾದ ಶ್ರೀಕೃಷ್ಣನನ್ನು ಕಂಡು ಭೀಷ್ಮಾಚಾರ್ಯರು ಭಕ್ತಿಯಿಂದ ಸ್ತುತಿಸುವುದು ಹೀಗೆ:

ಜಯ!ಪರಮ ಪುರುಷ!ಜಯ!ಜಯ!ಸಕಲ ಭುವನಮಯ
ಹುಟ್ಟು ಸಾವುಗಳಿಲ್ಲದ ಜಗತ್ಪ್ರಭೋ!
ಜಯ!ಕಮಲದಳ ನಯನ ಜಯ! ಕಮಲಭವ ಸದನ!
ಎಚ್ಚೆತ್ತವರಿಗೆ ಭ್ರಮೆಯ ಕೊಡುವ ಪ್ರಾಣಿ ಜೀವಾತ್ಮಕ!
ಜಯ!ಕಮಲಸದನ ಜಯ! ಜಯ! ವರದ ಕಮಲಕರ!
ಜಾಡ್ಯನಾಶನೆ! ತ್ರಾಹಿ ಮಾಂ ತ್ರಾಹಿ ಮಾಂ
ಜಯ! ವಿಬುಧ ಮುನಿ ನಮಿತ ಚರಣಸರಸಿರುಹ
ಜಾತ್ಯಭಿಮಾನಾದಿಹೀನ! ಪ್ರಭಾ ನಿಧಿಯೆ!
ಜಯ! ಸಕಲಾ! ಸಗುಣ ಜಯ! ಜಯ ವಿಗುಣ! ವಿಮಲ ! ಜಯ!
ಜಂತು ಧರ್ಮಪ್ರಿಯ! ಶ್ರೀಪತಿಯೇ! ಗೋಪತಿಯೇ!
ಜಯ! ಗಿರೀಶ ನಮಿತಪದ! ಜಯ! ಸಕಲತನುಭವನ!
ಜಂತುವೃಂದಕ್ಷೇತ್ರ! ವೇದ ವೇದಾಂತಗಮನ!
ಕ್ಷಿತಿ ವಿಬುಧಜನ ಹೃದಯ ನಿಲಯನೆ! ನಮೋಸ್ತುತೇ!
ಕೀರ್ತನ ಧ್ಯಾನಾತ್ಯಂತಿಕನೆ ದೇಹಿ ಮೇ! (ಭೀಷ್ಮ ಪರ್ವ)

ಹೀಗೆ ಸಾಗಿದೆ ಭೀಷ್ಮರ ಭಕ್ತಿ. ಹೀಗೆ ಕವಿ ಭಗವಂತನ ನಾಮಸ್ಮರಣೆಯ ಪದಗಳನ್ನು ಜೋಡಿಸುತ್ತಲೇ ಭಕ್ತಿರಸವನ್ನು ಹರಿಸುತ್ತಾನೆ. ಇಂತಹ ನಾಮಗಳನ್ನು ಪೋಣಿಸಿದ ಮೋಹನಮಾಲೆ ಕಾವ್ಯದ ತುಂಬಾ ಇವೆ.

ಕರ್ಣಪರ್ವದಲ್ಲಿ ಪಾರ್ಥ ಸಾರಥಿಯ ವಿಶ್ವಮೋಹಕವಾದ ಚಿತ್ರದ ವರ್ಣನೆ ಬೇರೊಂದು ಬಗೆಯದು:

"ಹೊಳೆ ಹೊಳೆಯುವ ನವಿಲುಗರಿಗಳನ್ನು
ಸಾಲು ಸಾಲಾಗಿ ಅಂದವಾಗಿ ಸಿಕ್ಕಿಸಿಕೊಂಡು
ಮೇಘ ವರ್ಣದಂತಹ ಸೊಂಪಾದ
ತಲೆಗೂದಲಿನ ಮೇಲೆ ನವರತ್ನಖಚಿತವಾದ
ಕಿರೀಟವನ್ನು ಧರಿಸಿ, ಅಲೆ ಅಲೆಯಾಗಿ
ಹಾರಾಡುವ ಧೂಳಿ ಧೂಸರಿತವಾದ
ಮುಂಗುರುಳುಗಳಿಂದ ಬೆವರಿನ
ಹನಿಗಳಿಂದೊದ್ದೆಯಾದ ತಿಲಕದಿಂದ
ಈ ಲೋಕದ ಸೃಷ್ಟಿ ಸ್ಥಿತಿ ಲಯಗಳಿಗೆ
ಕಾರಣವಾದ ಹುಬ್ಬುಗಳ ಸೌಂದರ್ಯದಿಂದ
ಕೂಡಿಯೂ.......
ನನ್ನ ಹೃದಯದಲ್ಲಿ ಶ್ರೀಕೃಷ್ಣನ
ಪಾದ ಪದ್ಮಗಳು ನೆಲೆಸಿರುವಂತೆಯೇ
ಆ ರಥವನ್ನು ಅಲಂಕರಿಸಿದ್ದನ್ನು ಕಂಡೆ
ವಿಜಯನೊಂದಿಗೆ ಕ್ರೀಡಿಸುವುದನ್ನು
ನನ್ನ ಕಣ್ಣುಗಳು ಇನ್ನೂ ಸ್ವಲ್ಪ ಕಾಲ
ನೋಡುವಂತಾಗಲಿ" (ಮಲಯಾಳ ಸಾಹಿತ್ಯ ಚರಿತ್ರೆ, ಪು. 69)

ಹೀಗೆ ಭಕ್ತಿಯಲ್ಲಿ ತನ್ಮಯನಾಗಿ ವರ್ಣಿಸುತ್ತಾನೆ. ಕುರುಕ್ಷೇತ್ರದಲ್ಲಿ ಬಂಧುಗಳ ಶವಗಳನ್ನು ಕಂಡು ಗಾಂಧಾರಿ ದುಃಖಿಸುವ ಸಂದರ್ಭ ಹೃದಯವಿದ್ರಾವಕವಾಗಿದೆ. ಆಕೆ ಅಭಿಮನ್ಯುವಿನ ಶವವನ್ನು ಮೊದಲು ಕಾಣುತ್ತಾಳೆ.

ಧರಣಿಯಲ್ಲಿ ಬಿದ್ದೊರಗಿರುವನಲ್ಲ
ರಕ್ತದೋಕುಳಿಯಲಿ ಶಿವ ಶಿವಾ

ಒಳ್ಳೆಯ ಮರಕತಮಣಿಯಂತೆ
ಮಂಗಳ ರೂಪನಾದ ಮನೋಹರ ಕುವರ
ಹೇಳು ಅರ್ಜುನನ ಸುಕುಮಾರ
ಗೋಪೀವಲ್ಲಭ ನಿನ್ನಳಿಯನನು
ಕೊಲ್ಲಿಸದೆ ಕಾಯಲಿಲ್ಲವೇಕೆ ನಿನಗೆ
ಕೊಲ್ಲಿಸುವುದೊಂದು ವಿನೋದವೇನು (ಸ್ತ್ರೀ ಪರ್ವ)

ಮುಂದೆ ತನ್ನ ಮಗನಾದ ದುರ್ಯೋಧನನ ಶವದ ಮುಂದೆ ಗಾಂಧಾರಿ ಬಿಕ್ಕಿ ಬಿಕ್ಕಿ ಅಳುತ್ತಾಳೆ.

ಕಂದಾ! ಮಗನೇ! ದುರ್ಯೋಧನಾ! ನಿನ್ನ
ಹೊನ್ನ ಕಿರೀಟವು, ಭೂಷಣಾದಿಗಳು
ದೇವತೆಗಳಿಗೆ ಸದೃಶವಾದ ಶೌರ್ಯ ಪ್ರತಾಪಗಳು
ಗಂಭೀರವಾದೊಂದು ಭಾವ ಭಂಗಿಗಳು
ಬಿಟ್ಟು ಕಳೆದೆಲ್ಲವನು
ಪ್ರೀತಿ ಪಾತ್ರರನು ತಂದೆಯನೂ
ತಕ್ಷಣ ಬಿಟ್ಟು ನಡೆದುದೆಲ್ಲಿಗೆ ನೀನು!
ಬಿರಿಯುತ್ತಿದೆಯೆನ್ನ ಮನ ಕಂಡಿದೆಲ್ಲವನು
ಹಂಸತೂಲಿಕಾತಲ್ಪದಲಿ ಪವಡಿಸುವ ನೀನು
ಸತ್ತೊರಗಿರುವೆಯಲ್ಲ ನೆತ್ತರಲಿ
ಕೋಪಾವೇಶದಿಂದ ಮಾರುತಿ ಘಾತಿಸಲು
ತೊಡೆ ಮುರಿದು ಬಿದ್ದುಕೊಂಡಿರುವೆಯಲ್ಲ
ಕಾಣಲಾಗದು ಎನಗಿದನೆಂದು
ದುಃಖದಿಂ ಹಲುಬಿ ಕುಸಿದು ಬಿದ್ದಳು
ಮೋಹಪರವಶಳಾಗಿ ಮತ್ತೆ ಎಚ್ಚೆತ್ತು
ದುಖ:ದಲಿ ದೃಢದಿ ನುಡಿದಳು
ಇಷ್ಟು ಕುಟಿಲತೆಯಿರುವೊಬ್ಬನನೂ
ಪೃಥ್ವಿಯಲಿ ಇದುವರೆಗೂ ನಾ ಕಂಡುದಿಲ್ಲ, ಕೇಶವಾ! (ಸ್ತ್ರೀ ಪರ್ವ)

ಹೀಗೆ ಗಾಂಧಾರಿಯ ದುಃಖ ಕಟ್ಟೆಯೊಡೆದು ಹರಿಯುತ್ತದೆ. ಮೂಲ ಭಾರತದಲ್ಲಿ ದುರ್ಯೋಧನ, ದುಶ್ಯಾಸನ, ಕರ್ಣ ಮೊದಲಾದವರ ಶವಗಳನ್ನು

ನೋಡಿದ ಬಳಿಕ ಅಭಿಮನ್ಯುವಿನ ಶವವನ್ನು ಕಾಣುತ್ತಾಳೆ. ಎಳುತ್ತಚ್ಛನ್ ಮೊದಲು ಅಭಿಮನ್ಯುವನ್ನು ಕಂಡು ನಂತರ ಉಳಿದವರ ಶವವನ್ನು ಕಾಣುವಂತೆ ಚಿತ್ರಿಸಿದ್ದಾನೆ.

ವೀರರಸ ವರ್ಣನೆಯಲ್ಲಿ ಎಳುತ್ತಚ್ಛನ್‌ಗಿರುವ ಸಾಮರ್ಥ್ಯ ಗಮನಾರ್ಹ. ಭೀಮನು ದುಶ್ಯಾಸನನನ್ನು ವಧಿಸುವ ಸಂದರ್ಭದ ರೌದ್ರರಸ ವರ್ಣನೆಯನ್ನು ಗಮನಿಸಬಹುದು.

"ಭೀಮ ದುಶ್ಯಾಸನನ ಕಾಲುಗಳೆರಡನ್ನೂ ತುಳಿದು ಕೆಡಹಿ
ಅವನ ಮೇಲೆ ಹತ್ತಿ ಕುಳಿತು ಅಸಂಖ್ಯಾತ ದೇವತೆಗಳೂ
ಮನುಷ್ಯರೂ ನೋಡುತ್ತಿದ್ದಂತೆಯೇ ತನ್ನ ಖಡ್ಗವನ್ನೆತ್ತಿ
ಅವನ ಎದೆಯನ್ನು ಸೀಳಿ ತನ್ನ ನಖಗಳಿಂದ ಅವನ
ಎದೆಯ ಮೂಳೆಯನ್ನು ಪುಡಿ ಮಾಡಿದಾಗ ಪ್ರವಾಹದಂತೆ
ಹರಿಯುತ್ತಿದ್ದ ಕೆನ್ನೆತ್ತರನ್ನೆಲ್ಲ ಗರ್ಜಿಸುತ್ತ ಆ ಕಂಠ
ಪ್ರಮಾಣ ಕುಡಿದು ಕರುಳುಗಳನ್ನು ಬಗೆದು ಹಾರವನ್ನಾಗಿ
ಹಾಕಿಕೊಂಡು, ಭೂಮಿಯು ನಡುಗುವಂತೆ ಕುಣಿಕುಣಿದು

ಧೂಳನ್ನೆಬ್ಬಿಸಿ, ಆಕಾಶವೆಲ್ಲ ಆ ಧೂಳಿನಿಂದ ಮುಸುಕುವಂತೆ ಮಾಡಿದ (ಮಲಯಾಳ ಸಾಹಿತ್ಯ ಚರಿತ್ರೆ, ಪು. 73)

ಈ ಬಗೆಯಲ್ಲಿ ಚಿತ್ತಕ್ಷೋಭೆಯ ವಿಭಿನ್ನ ನೆಲೆಗಳನ್ನು ಕವಿ ಅಧ್ಯಾತ್ಮಿಕ ವಿಚಾರವನ್ನು ಕುರಿತು ವಿವರಿಸುವಾಗಲೂ ಹಿಂದುಳಿದಿಲ್ಲ.

"ದೇಹ ನಿಮಿತ್ತವಾಗಿ ಅಹಂಕಾರದಿಂದ ಮೋಹಪರವಶರಾಗಿ ವೃಥಾ ಹೀಗೆ ಭಾವಿಸುತ್ತಾರೆ: ನಾನೊಬ್ಬ ಬ್ರಾಹ್ಮಣ, ನಾನೊಬ್ಬ ಗಣ್ಯವ್ಯಕ್ತಿ, ನಾನೊಬ್ಬ ರಾಜ ಎಂದು. ಆದರೆ ಈ ಸಂತೋಷದ ಕಾಲದಲ್ಲಿ ಒಂದು ದಿನ ಇದ್ದಕ್ಕಿದ್ದಂತೆ ಕಾಲನಿಂದ ಭಕ್ಷಿಸಲ್ಪಟ್ಟು ಬೆಂದು ಬೂದಿಯಾಗಿ ಇಲ್ಲವೇ ಭೂಮಿಯೊಳಗೆ ಸೇರಿ ಕ್ರಿಮಿಗಳಾಗಿ ಹೋಗುತ್ತಾರೆ. ಆದುದರಿಂದ ದೇಹಮೋಹ ಒಳ್ಳೆಯದಲ್ಲ."

ಈ ರೀತಿಯಲ್ಲಿ ತತ್ವಚಿಂತನೆಯನ್ನು ಹೇಳುವಾಗಲೂ ಎಳುತ್ತಚ್ಛನ್‌ನ ವಾಗ್ವೈಭವವು ಸಹಜವಾದ ಭಾಷಾ ಪ್ರೌಢಿಮೆಯ ಮೂಲಕ ಸಶಕ್ತವಾಗಿ ಪ್ರಕಟಗೊಳ್ಳುತ್ತದೆ.

ಹದಿನಾರನೆಯ ಶತಮಾನದ ಆರಂಭದಲ್ಲಿ ಮಲಯಾಳಂನಲ್ಲಿ ಚಂಪೂ ಕವಿಗಳ ಪ್ರಾಬಲ್ಯವಿತ್ತು. ಈ ಸಂದರ್ಭದಲ್ಲಿ ರಚನೆಯಾದ ಅನೇಕ ಚಂಪೂ ಕಾವ್ಯಗಳಲ್ಲಿ 'ಭಾರತ ಚಂಪೂ' ಕೂಡಾ ಒಂದು. ಪುನಂ, ನಂಬೂದಿರಿ ಕವಿಯದೆಂದು ಭಾವಿಸಲಾದ ಅನೇಕ ಚಂಪೂ ಕೃತಿಗಳ ಸಾಲಿನಲ್ಲಿ ಪ್ರಸ್ತುತ 'ಭಾರತ ಚಂಪೂ'ವನ್ನು ಸಹ ಸೇರಿಸಲಾಗಿದೆ. ಗದ್ಯ ಪದ್ಯ ಮಿಶ್ರಿತವಾದ ಪ್ರೌಢ ಚಂಪೂ ಶೈಲಿಯಲ್ಲಿ ರಚಿತವಾದ ಬೃಹತ್ ಕಾವ್ಯವಿದು. ಮಹಾಭಾರತ ಕತೆಯನ್ನು ಚಂಪೂ ಶೈಲಿಯಲ್ಲಿ ಹೇಳುವ ಉದ್ದೇಶದಿಂದ ಪ್ರಸ್ತುತ ಕೃತಿಯನ್ನು ರಚಿಸಿದಂತಿದೆ.

ಎಳುತ್ತಚ್ಚನ್‌ನ ನಂತರ ಭಕ್ತಿ ಮತ್ತು ತತ್ವಚಿಂತನೆಯಿಂದ ಕೂಡಿದ ವಿಶಿಷ್ಟ ಸಾಹಿತ್ಯ ಧಾರೆಯೊಂದು ಪೂನ್ತಾನಂ ಎಂಬ ಕವಿಯಿಂದ ಆರಂಭವಾಯಿತು. ಎಳುತ್ತಚ್ಚನ್‌ನ ಭಕ್ತಿಪರಂಪರೆಯ ಮುಂದುವರಿಕೆಯಂತೆ ತೋರುವುದಾದರೂ ಪೂನ್ತಾನಂ ಕವಿಯ ಮಲಯಾಳಂ ಭಾಷಾ 'ಕರ್ಣಾಮೃತಂ' ಸಂಸ್ಕೃತ ವೃತ್ತದಲ್ಲಿರುವ ಒಂದು ಸ್ತೋತ್ರ ಗ್ರಂಥ. ಕರ್ಣನ ದುರಂತ ಕತೆಯನ್ನು ಒಳಗೊಂಡ ಕಾವ್ಯ. ಆದರೆ ಕವಿಯ ಪ್ರತಿಭೆ ನಿಜವಾಗಿ ಅನಾವರಣಗೊಂಡಿರುವುದು ದೇಶೀಯ ವೃತ್ತ ಹಾಗೂ ಭಕ್ತಿಗಾನಗಳ ರಚನೆಗಳಲ್ಲಿ.

ಈ ಕಾಲಘಟ್ಟದಲ್ಲಿ ರಚನೆಯಾದ ರಾಮಾಯಣ ಚಂಪೂ, ಭಾರತ ಚಂಪೂ, ನೈಷಧ ಚಂಪೂ, ರಾವಣ ವಿಜಯಂ, ರುಕ್ಮಿಣಿ ಸ್ವಯಂವರ, ಕಾಮದಹನಂ ಮೊದಲಾದ ಕೃತಿಗಳು ಪ್ರಸಿದ್ಧವಾಗಿವೆ. ಇವುಗಳ ಕರ್ತೃಯಾರೆಂದು ಖಚಿತವಿಲ್ಲ. ಕಲ್ಲಿಕೋಟೆಯ ಸಾಮೂದಿರಿಪಾಡನ(ಝೂಮೋರಿನ್ ಕ್ರಿ.ಶ. 1500) ಆಸ್ಥಾನ ಕವಿಗಳ ಒಬ್ಬನಾದ ಪುನಂ ನಂಬೂದಿರಿಯ ರಚನೆಯಾಗಿರಬೇಕೆಂದು ಕೆಲವು ವಿದ್ವಾಂಸರು ಊಹಿಸಿದ್ದಾರೆ.

20ನೆಯ ಶತಮಾನದ ಆರಂಭದ ದಿನಗಳಲ್ಲಿಯೂ ಮತ್ತೆ ಮಹಾಭಾರತದ ಅನುವಾದಗಳು ಮಲಯಾಳಂನಲ್ಲಿ ಪ್ರಕಟವಾಗಿವೆ. ಕೊಡುಂಗಲ್ಲೂರ್ ಕುಂಜುಕುಟ್ಟನ್ ತಂಬುರಾನ್ ಎಂಬವರು 'ಭಾಷಾ ಭಾರತಂ' ಎಂಬ ಹೆಸರಿನಲ್ಲಿ ವ್ಯಾಸ ಭಾರತವನ್ನು ಪೂರ್ಣ ಶ್ಲೋಕಗಳ ಮಲಯಾಳಂ ಅನುವಾದವನ್ನು ಮಾಡಿದ್ದಾರೆ. ಇವು ಎಂಟು ಸಂಪುಟಗಳಲ್ಲಿ ಪ್ರಕಟವಾಗಿದ್ದು 1906ರಲ್ಲಿ ಮೊದಲ ಮುದ್ರಣವಾಗಿದೆ. ಮತ್ತು 1952ರಲ್ಲಿ ಮರಳಿ ಪ್ರಕಟವಾಗಿದೆ.

'ವ್ಯಾಸ ಭಾರತಂ' ಎಂಬ ಇನ್ನೊಂದು ಅನುವಾದವನ್ನು ವಿದ್ವಾನ್ ಪ್ರಕಾಶ ಅವರು ಮಲಯಾಳಂನಲ್ಲಿ ಪ್ರಕಟಿಸಿದ್ದಾರೆ. 1968ರಲ್ಲಿ ಮೊದಲು ಮುದ್ರಣವಾಗಿದ್ದು ಇದೊಂದು ಗದ್ಯಾನುವಾದ ಕೃತಿಯಾಗಿದೆ.

ಈ ಹಿಂದಿನ 'ಮಹಾಭಾರತ' ಕೃತಿಗಳ ಜನಪ್ರಿಯತೆ ಆಧುನಿಕ ಅನುವಾದಗಳಿಗೆ ಇಲ್ಲದಿರಬಹುದು. ಆದರೆ ಮೂಲ ವ್ಯಾಸ ಮಹಾಭಾರತದ ಯಥಾವತ್ತಾದ ಓದು ಮಲಯಾಳಿಗರಿಗೆ ಈ ಮೂಲಕ ಲಭ್ಯವಾಗಿದೆ ಎಂದಷ್ಟೆ ಹೇಳಬಹುದು.

ಕೆಲವೊಂದು ಕಾದಂಬರಿಗಳಲ್ಲಿ ಮಹಾಭಾರತ ಕತೆ ಮರು ಸೃಷ್ಟಿಯಾಗಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಭಾರತವನ್ನು ದ್ರೌಪದಿಯ ದೃಷ್ಟಿಯಿಂದ ನೋಡುವ ಪಿ.ಕೆ. ಬಾಲಕೃಷ್ಣನ್ ಅವರ "ಇಾನ್‌ಇನಿ ಒರಜಟೆ" (ನಾನಿನ್ನು ನಿದ್ರಿಸುವೆ, ಕನ್ನಡ ಅನು: ಸಾರಾ ಅಬೂಬಕ್ಕರ್) ಪಾಂಡವರಲ್ಲಿ ಎರಡನೆಯನೆಯವನಾದ ಭೀಮನ ದೃಷ್ಟಿಯಿಂದ ನೋಡುವ ರಂಡಾಮುಟಂ (ಭೀಮಾಯಣ, ಕನ್ನಡ ಅನು: ಸಿ.ರಾಘವನ್) ಎಂಬಿತ್ಯಾದಿಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆಧುನಿಕ ಕವಿಗಳು 'ಕಾಳಿಯ ಮರ್ದನಂ' (ಸುಗತಕುಮಾರಿ), ಶ್ಯಾಮಮಾಧವ (ಪ್ರಭಾವರ್ಮ), ಕರ್ಣಭೂಷಣಂ ಮೊದಲಾದ ಕವಿತೆಗಳನ್ನು ರಚಿಸಿದ್ದಾರೆ. ಕುಟ್ಟಿಕೃಷ್ಣನ್ ಮಾರಾರ್ ಅವರ 'ಭಾರತ ಪರ್ಯಟನ' ಮಹಾಭಾರತವನ್ನು ಎಡಪಂಥೀಯ ನೆಲೆಯಿಂದ ಪರಾಮರ್ಶಿಸಿದ ಕೃತಿ. ತುರವೂರು ವಿಶ್ವಂಭರನ್ ಅವರ 'ಮಹಾಭಾರತ ಪರ್ಯಟನಂ' ಮಹಾಭಾರತದ ಕುರಿತ ಆಧುನಿಕ ವ್ಯಾಖ್ಯಾನ ಕೃತಿ. ಅಲ್ಲದೆ ಅನೇಕ ಕಥಕಳಿ ಪ್ರಸಂಗ-ಆಟ ಕಥಾ ಸಾಹಿತ್ಯ-ಗಳಲ್ಲಿ ಮಹಾಭಾರತ ಕತೆಗಳು ಮರು ನಿರೂಪಣೆಗೊಂಡಿರುವುದನ್ನು ಸಹ ಮರೆಯುವಂತಿಲ್ಲ. ಮಹಾಭಾರತವನ್ನು ಆಧಾರವಾಗಿಟ್ಟುಕೊಂಡಿರುವ ಬಕವಧಂ, ಕಲ್ಯಾಣ ಸೌಂಗಧಿಕಂ, ಕಿಮ್ಮೀರವಧಂ, ಕಾಲಕೇಯವಧಂ, ಕೀಚಕ ವಧಂ, ದುಶ್ಯಾಸನ ವಧಂ, ದುರ್ಯೋಧನ ವಧಂ ಮೊದಲಾದವುಗಳು ಪ್ರಸಿದ್ಧ ಆಟಕಥಾ ಸಾಹಿತ್ಯ ಕೃತಿಗಳು. ಮಲಯಾಳಂ ಕವಿಗಳು ಕಾವ್ಯಗಳಲ್ಲಿ ಭಕ್ತಿಯಿಂದ ಶ್ರೀಕೃಷ್ಣನನ್ನು ಸ್ತುತಿಸಿದರೆ ಆಟಕಥಾ ಸಾಹಿತ್ಯ ರಚನಕಾರರು ಬಹುತೇಕ ಭೀಮನ ಪಾತ್ರ ಕೇಂದ್ರೀಕರಿಸಿದ ಕಥಾನಕಗಳನ್ನು ಆಯ್ದುಕೊಂಡಿರುವುದನ್ನು ಕಾಣಬಹುದು.

ಹೀಗೆ ಮಲಯಾಳಂನಲ್ಲಿ ಪ್ರಾಚೀನ ಕಾಲದಿಂದ ಆರಂಭಿಸಿ ಆಧುನಿಕ ದಿನಗಳ ವರೆಗೆ ಮಹಾಭಾರತದ ಕತೆಗಳು ಅನೇಕ ಪ್ರಕಾರಗಳಲ್ಲಿ ಕಾಲದ ಅಗತ್ಯಕ್ಕೆ

ಅನುಗುಣವಾಗಿ ಬರಹಗಾರರು ಮರು ನಿರೂಪಣೆ ಮಾಡುತ್ತಾ ಬಂದಿದ್ದಾರೆ. ಮಹಾಭಾರತಹಂತಹ ಸಂಸ್ಕೃತದ ಬೃಹತ್ ಕಾವ್ಯವನ್ನು ವಶೀಕರಿಸಿ ಮಲಯಾಳಿಗರಿಗೆ ಕೊಡುವ ಉದ್ದೇಶವಿರಿಸಿಕೊಂಡ ರಚನೆಗಳಾಗಿಯೇ ಇವು ಮುಖ್ಯವಾಗುತ್ತವೆ. ಮಹಾಭಾರತದ ಕೃಷ್ಣ ಭಕ್ತಿಯೊಂದು ಕಾರಣವಾಗಿ ಪೂಜನೀಯ ಕಾವ್ಯವಾಗಿದೆಯೇ ಹೊರತು ಮೂಲ ಕತೆಯನ್ನು ಸಮಕಾಲೀನ ರಾಜಕೀಯ ಸಾಂಸ್ಕೃತಿಕ ಹಿತಾಸಕ್ತಿಗಳಿಗೆ ಅನುಗುಣವಾಗಿ ಬದಲಾಯಿಸಿಕೊಂಡ ಉದಾಹರಣೆಗಳಿಲ್ಲ. ಹಾಗೆಯೇ ಮೂಲ ವ್ಯಾಸನ ಕೃತಿಯುನ್ನು ಸ್ಫೂರ್ತಿಯಾಗಿರಿಸಿಕೊಂಡು ಸ್ವತಂತ್ರವಾಗಿ ಕಥಾ ಸನ್ನಿವೇಶಗಳನ್ನು ಪುನರ್‌ಸೃಷ್ಟಿ ಎಂಬ ನೆಲೆಯಲ್ಲಿ ಮಹಾಭಾರತವನ್ನು ಮರುರೂಪಿಸಿದವರು ಮಲಯಾಳಂನಲ್ಲಿ ಇಲ್ಲ. ಅವರ ಮರುಸೃಷ್ಟಿ ಏನಿದ್ದರೂ ಬೃಹತ್ ಕಾವ್ಯವನ್ನು ಸಂಕ್ಷಿಪ್ತವಾಗಿ ಸಾರರೂಪದಲ್ಲಿ ಹಿಡಿದಿಡುವ ಪ್ರಯತ್ನದ ಭಾಗವಾಗಿಯೇ ಇದೆ. ಪಂಪ, ರನ್ನನೇ ಮೊದಲಾದ ಕನ್ನಡ ಕವಿಗಳ ಸ್ವತಂತ್ರಾಭಿವ್ಯಕ್ತಿಯ ಪ್ರಯತ್ನಗಳಂತೂ ಇಲ್ಲವೇ ಇಲ್ಲ. ಮಲಯಾಳಂ ಕವಿಗಳು ಸಂಸ್ಕೃತ ವ್ಯಾಸಭಾರತವನ್ನು ಪೂಜ್ಯಭಾವನೆಯಿಂದಲೇ ಕಂಡಿದ್ದಾರೆ. ಹಾಗಾಗಿ ಆ ಭಕ್ತಿ ಮಲಯಾಳಂ ಭಾಷೆಯ ಮೂಲಕ ಸ್ಥಳೀಯವಾಗಿ ಹಲವರಿಂದ ಅಭಿವ್ಯಕ್ತಗೊಂಡಿದೆ ಎಂದು ಹೇಳಬಹುದು.

ಹೀಗೆ ಮಹಾಭಾರತವು ಮಲಯಾಳಂನಲ್ಲಿ ಭಕ್ತಿ ಪರಂಪರೆಯ ಉಜ್ಜೀವನಕ್ಕಾಗಿ ಬೇರೆ ಬೇರೆ ಕಾಲಘಟ್ಟಗಳಲ್ಲಿ ಕವಿಗಳಿಂದ ಮರುನಿರೂಪಣೆಗೊಂಡು ಪ್ರಕಟವಾಗಿವೆ. ಆಧುನಿಕ ದಿನಗಳಲ್ಲಿ ವಿಭಿನ್ನ ದೃಷ್ಟಿಕೋನಗಳಿಂದ ಕಾದಂಬರಿ, ಕಾವ್ಯ, ವಿಮರ್ಶೆಗಳ ರೂಪದಲ್ಲಿ ಹೊಸ ಬಗೆಯಲ್ಲಿ ದಾಖಲಾಗಿದ್ದು ಅನೇಕ ಬಗೆಯ ಹೊಸ ಚಿಂತನೆಗಳಿಗೆ ದಾರಿ ಮಾಡಿ ಕೊಟ್ಟಿದೆ.

**ಪರಾಮರ್ಶನ ಗ್ರಂಥಗಳು**


1. ಕಯ್ಯಾರ ಕಿಞ್ಞಣ್ಣ ರೈ, (ಅನು) (1976), ಮಲಯಾಳಂ ಸಾಹಿತ್ಯ ಚರಿತ್ರೆ, ಪರಮೇಶ್ವರನ್ ನಾಯರ್ ಪಿ.ಕೆ., ಸಾಹಿತ್ಯ ಅಕಾಡೆಮಿ, ಹೊಸದೆಹಲಿ

2. ಮೋಹನ ಕುಂಟಾರ್ (2018), ಮಲಯಾಳಂ ಸಮಾಜ ಮತ್ತು ಸಂಸ್ಕೃತಿ, ಯಾಜಿ ಪ್ರಕಾಶನ, ಹೊಸಪೇಟೆ.

**ಮಲಯಾಳಂ ಕೃತಿಗಳು**


3. ದೇಶಮಂಗಲ ರಾಮಕೃಷ್ಣನ್, (ಅನು)(1997), ಎಳುತ್ತಚ್ಚನ್, ಇಂಗ್ಲಿಷ್ ಮೂಲ: ಕೆ. ರಾಘವನ್ ಪಿಳ್ಳೈ, ಸಾಹಿತ್ಯ ಅಕಾಡೆಮಿ, ನವದೆಹಲಿ

4. ತುಂಜತ್ತ್ ಎಳುತ್ತಚ್ಚನ್ (2003 ಪುನರ್ಮುದ್ರಣ), (ಸಂ) ಪ್ರೊ. ಪಿ.ವಿ. ಕೃಷ್ಣನ್ ನಾಯರ್, ಶ್ರೀ ಮಹಾಭಾರತಂ, ಕೇರಳ ಸಾಹಿತ್ಯ ಅಕಾಡೆಮಿ, ತೃಶೂರ್.

# ಜಾನಪದ ಸಾರಸ್ವತಲೋಕದ ನೇಗಿಲಯೋಗಿ
# ಡಾ. ಕ್ಯಾತನಹಳ್ಳಿ ರಾಮಣ್ಣ

* ಡಾ. ಹಾಲತಿ ಸೋಮಶೇಖರ್

ಮಂಡ್ಯದ ಮಣ್ಣಿನ ಕಸುವನ್ನು ಮೈಗೆಮೆತ್ತಿಕೊಂಡು ಇಟ್ಟ ಹೆಜ್ಜೆಯನ್ನು ಆಳವಾಗಿಯೂ ಮತ್ತು ದೃಢವಾಗಿಯೂ ಇಡುತ್ತಾ ಉತ್ತರ ಕರ್ನಾಟಕ ಮತ್ತು ಮಲೆನಾಡಿನ ಜನಪದರನ್ನು ಮುಟ್ಟಿ ಮಾತನಾಡಿಸುತ್ತಾ ಅವರು ಹೇಳಿದ್ದನ್ನು, ಹಾಡಿದ್ದನ್ನು ಅಮೂಲ್ಯವೆಂದು ಸಂಗ್ರಹಿಸುತ್ತಾ ಸಂಗ್ರಹ ಕಾರ್ಯವನ್ನೇ ಸಂಭ್ರಮಿಸುತ್ತಾ ಕ್ಷೇತ್ರಕಾರ್ಯದ ಹಾದಿಯಲ್ಲಿ ನಡೆದ ಘನ ವ್ಯಕ್ತಿತ್ವವುಳ್ಳವರು ಡಾ. ಕ್ಯಾತನಹಳ್ಳಿ ರಾಮಣ್ಣನವರು. (ಜನನ 12/08/1942)

ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ಅಧ್ಯಯನ ವಿಭಾಗದಲ್ಲಿ ಸಹಾಯಕ ಸಂಶೋಧಕರಾಗಿ ಮೂರು ದಶಕಗಳ ಕಾಲ ಸೇವೆ ಸಲ್ಲಿಸಿದ ರಾಮಣ್ಣನವರು, ವಿದ್ವಾಂಸರಾದ ದೇಜಗೌ, ಜೀಶಂಪ ಮತ್ತು ಹಾಮಾನಾ ಅವರ ಪ್ರಭಾವಕ್ಕೆ ಒಳಗಾದವರು. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆದವರು ಅಧ್ಯಯನಶೀಲರಾದವರು. ರಾಮಣ್ಣನವರಿಗಿರುವ ಗುಣವೆಂದರೆ ಯಾವ ಕೆಲಸ ಹೇಳಿದರು ತುಂಬುನಿಷ್ಠೆಯಿಂದ ಪ್ರಾಮಾಣಿಕವಾಗಿ ಅತ್ಯಂತ ಜವಾಬ್ದಾರಿಯಿಂದ ಮಾಡುವುದು ಅವರ ಗುಣಸ್ವಭಾವಕ್ಕೆ ತಕ್ಕಂತೆ ಕನ್ನಡ ಜಾನಪದ ಕ್ಷೇತ್ರದಲ್ಲಿ ಆಗಬೇಕಾದ ಕೆಲಸ ಕುರಿತು ಕೆಲಸ ಹೇಳುವ ಯೋಗ್ಯ ನಾಯಕರು ಅವರಿಗೆ ಆರಂಭದಲ್ಲಿಯೇ ದೊರೆತರು. ಮೊದಲಿಗೆ ಕಥೆಗಾರ ರಾಮಣ್ಣನವರ ಮೊದಲ ಕಥಾ ಸಂಕಲನ 'ತಿಳಿಜಲ' (1967) ಪ್ರಕಟವಾಗಿತ್ತು. ಅನಂತರ ಜಾನಪದ ಸಾಹಿತ್ಯ ಸಂಗ್ರಹದ ಕಡೆಗೆ ವಾಲಿದರು. ಇದಕ್ಕೆ ಕಾರಣವೂ ಇದೆ. ಒಮ್ಮೆ ಡಾ. ಬೆಸಗರಹಳ್ಳಿ ರಾಮಣ್ಣನವರು ಡಾ. ಕ್ಯಾತನಹಳ್ಳಿ ರಾಮಣ್ಣನವರನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗಿ ಪ್ರೊ. ಜೀಶಂಪ ಅವರಿಗೆ ಕ್ಯಾತನಹಳ್ಳಿಯವರ ಕಥಾಸಂಕಲನವೊಂದನ್ನು ಕೊಟ್ಟು ಪರಿಚಯಿಸಿದರು. ಆಗಿನ್ನೂ ಇಬ್ಬರೂ

ಡಾಕ್ಟರುಗಳಾಗಿರಲಿಲ್ಲ. ಬೆಸಗರಹಳ್ಳಿಯವರು ಮೈಸೂರು ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಯಾಗಿದ್ದರೆ, ಕ್ಯಾತನಹಳ್ಳಿಯವರು ಮಹಾರಾಜ ಕಾಲೇಜಿನ ವಿದ್ಯಾರ್ಥಿಯಾಗಿದ್ದರು. ಆದರೆ ಇಬ್ಬರೂ ಆ ವೇಳೆಗಾಗಲೇ ಕಥೆಗಾರರಾಗಿ ನಾಡಿನಾದ್ಯಂತ ಪ್ರಸಿದ್ಧರಾಗಿದ್ದರು. ಅದಿರಲಿ, ಜೀಶಂಪ ಅವರು ಕ್ಯಾತನಹಳ್ಳಿಯವರ ಕಥಾಸಂಕಲನವನ್ನು ನೋಡಿ ಬರೆವಣಿಗೆ ಚೆನ್ನಾಗಿದೆ, 'ನೀವು ಜನಪದ ಸಾಹಿತ್ಯವನ್ನೇನಾದರೂ ಸಂಗ್ರಹಿಸಿದ್ದೀರೇನ್ರಿ' ಎಂದು ಕೇಳಿದರು. ಅದಕ್ಕೆ ರಾಮಣ್ಣನವರು ಇಲ್ಲ ಎಂದರು. 'ನಿಮ್ಮೂರಿನಲ್ಲಿ ಜನಪದಗೀತೆ ಹಾಡುವವರು, ಕಥೆ ಹೇಳುವವರು, ಗಾದೆ, ಒಗಟು ಸೇರಿಸಿ ಮಾತನಾಡುವವರು ಇಲ್ಲವೇನ್ರಿ, ಮೊದಲು ಅವರ ಹತ್ರ ಹೋಗಿ ಅವರಿಂದ ಹಾಡು, ಕಥೆ, ಗಾದೆ, ಒಗಟುಗಳನ್ನು ಸಂಗ್ರಹಿಸಿ. ಅಕಸ್ಮಾತ್ತಾಗಿ ಅವರು ಸತ್ತು ಹೋದರೆ ಅವರ ಹಿಂದೆಯೇ ಅವರಲ್ಲಿರುವ ಜನಪದ ಸಾಹಿತ್ಯ ಹೋಗಿ ಬಿಡುತ್ತೆ ಮೊದಲು ಅದನ್ನು ಸಂಗ್ರಹಿಸಿ' ಎಂದರಂತೆ. ಇದು ರಾಮಣ್ಣನವರ ಎದೆಗೆ ನಾಟಿತು. ಕತೆಗಳ ರಚನೆಯನ್ನು ಕೈಬಿಟ್ಟು ಜನಪದ ಸಾಹಿತ್ಯ ಸಂಗ್ರಹದ ಕಡೆಗೆ ವಾಲಿದರು. ಅನಂತರ ಎರಡು ಕಥಾ ಸಂಕಲನಗಳು ವಜ್ರವರ್ತುಲ (1975), ಎಂದು ಬಂದೀತೋ ಮಳೆ (2000) ಪ್ರಕಟವಾದವು. ಆದರೂ ರಾಮಣ್ಣನವರ ಒಲವು ನಿಲುವು ಜಾನಪದವಾಯಿತು.

ಕಥನಕಲೆ ಗೊತ್ತಿರುವ ರಾಮಣ್ಣನವರು ನಾಡಿನ ಜನಪದರ ಸಾಹಿತ್ಯವನ್ನು ಗ್ರಹಿಸುವ ರೀತಿಯೇ ಬೇರೆ; ಅವರ ಐದು ಜನಪದ ಕಥನಗೀತೆಗಳು (1970), ಗೊಂದಲಿಗರ ಕಥೆಗಳು (1972), ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು (1972), ಶಿವಮೊಗ್ಗ ಜಿಲ್ಲೆಯ ಗೊಂದಲಿಗರ ಕಥೆಗಳು (1975), ಬೀದರ್ ಜಿಲ್ಲೆಯ ಜನಪದ ಕಥೆಗಳು (1976), ಗುಲ್ಬರ್ಗ ಜಿಲ್ಲೆಯ ದೊಡ್ಡಾಟ–ಭೀಮವಿಲಾಸ (1978), ಬಿಜಾಪುರ ಜಿಲ್ಲೆಯ ಲಾವಣಿಗಳು (1979) ಹೀಗೆ ಪುಸ್ತಕದ ಶೀರ್ಷಿಕೆಗಳೇ ಜನಪದ ರೂಪಕಗಳಾಗಿವೆ. ರಾಮಣ್ಣನವರ ಅಧ್ಯಯನದ ವ್ಯಾಪ್ತಿ, ಪಾಂಡಿತ್ಯದ ಆಳ ಹಾಗೂ ಸಂಶೋಧನೆಯ ಗಾಂಭೀರ್ಯ ಕನ್ನಡ ಜಾನಪದ ಲೋಕಕ್ಕೆ ಲಭ್ಯವಾದ ಭಾಗ್ಯ. ಜನಪದ ಸಾಹಿತ್ಯ ಸಂಗ್ರಹಣೆ ಮಾತ್ರವಲ್ಲ; ಅದರ ಅಧ್ಯಯನದ ವಿನ್ಯಾಸಗಳನ್ನು ಹೇಳಿಕೊಟ್ಟವರು ರಾಮಣ್ಣ. ಜಾನಪದ ವಿಹಾರ (1977), ಗೊಂದಲಿಗರು ಒಂದು ಅಧ್ಯಯನ (1982), ಕೊಂತಿ ಪೂಜೆ ಒಂದು ಅಧ್ಯಯನ (1985) ಜನಪದ ನಿಘಂಟು (1987), ಕ್ಷೇತ್ರಕಾರ್ಯದ ಹಾದಿಯಲ್ಲಿ (1997) ಹೀಗೆ

ತಮ್ಮೊಳಗೆ ಮುಪ್ಪುರಿಗೊಳಿಸಿಕೊಂಡ ಅವರ ಸಂಶೋಧನಾ ಬಗೆಯೇ ಅನನ್ಯ. ವೈಯಕ್ತಿಕವಾಗಿ ದಿವ್ಯ ಮೌನಿಯಾದ ರಾಮಣ್ಣ ಎಲ್ಲಿಯೂ ಭಾವುಕರಾಗುವುದಿಲ್ಲ, ಬೌದ್ಧಿಕ ನೆಲೆಗಟ್ಟನ್ನು ಬಿಟ್ಟು ಅಳ್ಳಾಡುವುದಿಲ್ಲ. ಹಲವು ವಿಚಾರಗಳಲ್ಲಿ ಅವರು ನಿಷ್ಠುರರಾಗಿ ನಡೆದುಕೊಂಡರೂ ಅವರ ನಡೆ ನುಡಿಗಳು ನಿಷ್ಠುರ ಎನಿಸುವುದಿಲ್ಲ. ಕನ್ನಡ ಜಾನಪದ ಸಾಹಿತ್ಯದ ಮೊದಲ ಸಂಗ್ರಹಕಾರರಾದ ಅರ್ಚಕ ರಂಗಸ್ವಾಮಿಯವರು ಮಂಡ್ಯ ಜಿಲ್ಲೆಯ ಹೇಮಗಿರಿಯ ರಂಗನಾಥನನ್ನು ಪೂಜಿಸುವ ಅರ್ಚಕರಾಗಿದ್ದವರು. ಅವರು ಸ್ವಂತ ಆಸಕ್ತಿಯಿಂದ 'ಪಾಮರ ಸಾಹಿತ್ಯವೆಂದು ಅಲ್ಲಗಳೆಯಬೇಡಿ' ಎಂದು ತಮ್ಮ ಊರಿನ ಅನಕ್ಷರಸ್ಥ ಸಮುದಾಯದಲ್ಲಿದ್ದ ಜನಪದ ಗೀತೆಗಳನ್ನು ಸಂಗ್ರಹಿಸಿ 1933ರಲ್ಲಿ 'ಹುಟ್ಟಿದ ಹಳ್ಳಿ, ಹಳ್ಳಿಯ ಹಾಡು' ಎಂಬ ಕೃತಿಯನ್ನು ಪ್ರಕಟಿಸಿದರು. ಅವರ ಪ್ರಭಾವಕ್ಕೆ ಒಳಗಾಗಿದ್ದ ರಾಮಣ್ಣನವರು ಮಂಡ್ಯದ ನೆಲದಿಂದ ಹೊರಟು ಮುಟ್ಟಿದ್ದು ಉತ್ತರ ಕರ್ನಾಟಕದ ಬರದ ನಾಡಾದ ಬಿಜಾಪುರ, ಬೀದರ್, ಗುಲ್ಬರ್ಗಾ ಜಿಲ್ಲೆಗಳನ್ನು.

ಕ್ಷೇತ್ರಕಾರ್ಯ, ಓದು ಮತ್ತು ಪರಂಪರೆಯೊಡನೆ ರಾಮಣ್ಣನವರಿಗಿರುವ ಸಾತತ್ಯ ಅವರನ್ನು ಭಿನ್ನ ಜಾನಪದ ವಿದ್ವಾಂಸರನ್ನಾಗಿಸಿತು. ಜನಪದ ಸಾಹಿತ್ಯದಲ್ಲಿ ಬರುವ ದತ್ತವಾದ ಪಾತ್ರಗಳನ್ನು ಗಂಭೀರವಾಗಿ ನಿಭಾಯಿಸುವ ಅವರ ಗುಣ ಅವರನ್ನು ಉತ್ತಮ ನಾಟಕಕಾರನನ್ನಾಗಿ ರೂಪಿಸಿತು. ಅವರ ಬರೆವಣಿಗೆಯ ಶಿಸ್ತು, ಕ್ಷೇತ್ರಕಾರ್ಯದಲ್ಲಿನ ಶ್ರಮಶೀಲ ಅಧ್ಯಯನ, ಎಲ್ಲಿಯೂ ತಮ್ಮನ್ನು ತಾವು ಕಳೆದುಕೊಳ್ಳದೆ ಖಚಿತವಾಗಿ ಜಾನಪದ ವಿನ್ಯಾಸವನ್ನು ರೂಪಿಸಿಕೊಂಡು ವಿಸ್ತರಿಸುತ್ತಾ ಹೋಗುವಂತೆ ಮಾಡಿತು. ಆದ್ದರಿಂದ ಕೇವಲ ಎಂಟು ಪುಟದ ಹಲಗಲಿಯ ಬೇಡರು ಲಾವಣಿ ಅವರ ಕೈಯಲ್ಲಿ ಎಂಬತ್ತು ಪುಟದ ನಾಟಕ ರೂಪ ಪಡೆಯಿತು. ಫ್ಲೀಟರು ಸಂಗ್ರಹಿಸಿದ ಲಾವಣಿಗಳು ಅದರ ಇನ್ನಿತರ ಅಧ್ಯಯನದ ಆಯಾಮಗಳನ್ನು ವಿಸ್ತರಿಸಿಕೊಳ್ಳುತ್ತಾ ಮುಂದಿನ ಪ್ರಕಟಣೆಯಲ್ಲಿ ವ್ಯಕ್ತವಾದವು. ಹೀಗಾಗಿ ರಾಮಣ್ಣನವರು ತಮ್ಮ ಜೀವಮಾನದುದ್ದಕ್ಕೂ ಜನಪದರ ಜೀವನಾಡಿಯೊಂದನ್ನೆ ಹುಡುಕುವಂತೆ ಕಾಣುತ್ತಾರೆ.

ಜಾನಪದ ಶೋಧನೆಯ ಅವರ ಆಸಕ್ತಿಯನ್ನು ಮೆಚ್ಚಲೇಬೇಕು. ರಾಮಣ್ಣನವರ ಮುಂದೆ ಹಲವು ಮಾದರಿಗಳಿದ್ದವು. ಮಂಡ್ಯ ಜಿಲ್ಲೆಯ ಸೀಮಿತ ಪರಿಧಿಯಲ್ಲಿ ನೋಡಿದರೂ ಅರ್ಚಕ ರಂಗಸ್ವಾಮಿ, ಜೀಶಂಪ, ಎಚ್.ಎಲ್. ನಾಗೇಗೌಡ, ಕರಾಕೃ

ಈ ಎಲ್ಲಾ ಮಾದರಿಗಳಾಚೆ ಜಿಗಿಯಲು ಏಣಿ ಹಾಕಿದವರು ಜೀಶಂಪ ಅವರು. ರಾಮಣ್ಣನವರು ಕನ್ನಡ ಎಂ.ಎ ಮುಗಿಸಿ ಊರಿಗೆ ತೆರಳುವ ತಯಾರಿಯಲ್ಲಿದ್ದಾಗ ಜೀಶಂಪ ಅವರು 'ಅಲ್ಲಿಗೆ ಹೋಗಿ ಏನುಮಾಡುತ್ತೀರಿ. ಗ್ರಂಥಾಲಯದಲ್ಲಿ ಕುಳಿತು ಫ್ಲೀಟರು ಸಂಗ್ರಹಿಸಿರುವ ಐತಿಹಾಸಿಕ ಲಾವಣಿಗಳನ್ನು ಸಂಗ್ರಹಿಸಿ' ಎಂದರಂತೆ. ಇದು ಅವರ ಮುಂದಿನ ಆಸಕ್ತಿಗೆ ನಾಂದಿ ಹಾಡಿತು. ಅದನ್ನು ಕಾರ್ಯಗತಗೊಳಿಸಿದರು. ಹೀಗಾಗಿ ಜನಪದ ಸಾಹಿತ್ಯ ಮತ್ತು ಸಂಶೋಧನೆಯೊಂದಿಗೆ ಅನುಸಂಧಾನ ಸಾಧ್ಯವಾಯಿತು. ದೇಜಗೌ ಅವರ ಸಂಕಲ್ಪ ಬಲದಿಂದ (1967) ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಆಗ ತಾನೆ ಜಾನಪದ ವಿಷಯ ಎಂ.ಎ ತರಗತಿಗಳಿಗೆ ಪ್ರವೇಶವಾಗಿದ್ದ ಅವಧಿಯಲ್ಲಿ ಅಭ್ಯಾಸಿಗಳ ಅಧ್ಯಯನದ ಹಸಿವು ನೀಗಿಸಲು ಮೇವು ಹುಡುಕಲು ಹೊರಟವರಂತೆ ರಾಮಣ್ಣನವರು ಕರ್ನಾಟಕದ ಉತ್ತರ ದಿಕ್ಕಿಗೆ ಪಯಣಿಸಿದರು. ಅಲ್ಲಿ ಸಿಕ್ಕ ಎಲ್ಲವನ್ನು ಅಮೂಲ್ಯವೆಂಬಂತೆ ಸಂಗ್ರಹಿಸಿದರು. ಜಾನಪದ ಸಂಶೋಧನೆಯ ವಿದ್ವತ್ ಚರ್ಚೆಯ ಸಮೀಪದಲ್ಲಿ ಕುಳಿತು ಮೌನವಾಗಿ ತಾವು ಸಂಗ್ರಹಿಸಿ ತಂದಿದ್ದನ್ನೆಲ್ಲ ತೌಲನಿಕವಾಗಿ ನೋಡಿ ಶೋಧಿಸಿ ಅವುಗಳಿಗೆ ಆಕಾರ ನೀಡಿ, ಆಕೃತಿ ಮಾಡಿದರು.

'ನಾನೇರುವೆತ್ತರಕ್ಕೆ ನೀನೇರಬಲ್ಲೆಯಾ' ಎನ್ನುವವರೆದುರು ರಾಮಣ್ಣನವರು ನಿಲ್ಲಲೂ ಇಲ್ಲ, ಪ್ರತಿಕ್ರಿಯಿಸಲೂ ಇಲ್ಲ. "ಓ ಅಲ್ಪವೇ ನೀ ಅನಂತದಿಂ ಗುಣಿಸಿಕೋ, ನೀ ಅನಂತವಾಗುವೇ" ಎಂದು ತಮಗೆ ತಾವೇ ಹೇಳಿಕೊಂಡರು. ಇದರಿಂದಾಗಿ ಅವರು ಏರಿದ ಎತ್ತರವೇ ಮಹತ್ವದ್ದಾಯಿತು. ರಾಮಣ್ಣನವರು ಇನ್ನೂ ಏನೇನೋ ಆಗಬಹುದಿತ್ತು ಎಂದವರಿಗೆ, ಇಲ್ಲ ಎಲ್ಲವೂ ಸಿಕ್ಕಿದೆ ಎಂಬ ತೃಪ್ತಿಯ ನಗೆ ಬೀರಿದರು. ರಾಮಣ್ಣನವರ ಈ ಗುಣದಿಂದಲೆ ಕನ್ನಡ ನಾಡು ಅವರನ್ನು ಯಶಸ್ವಿ ಜಾನಪದ ಸಂಶೋಧಕರನ್ನಾಗಿ ನೋಡುವಂತೆ ಮಾಡಿತು. ರಾಮಣ್ಣನವರಲ್ಲಿ ನಿಚ್ಚಳವಾಗಿ ಸಂಗ್ರಹ ಪ್ರತಿಭೆಯ ಜತೆಗೆ ಸೃಜನಶೀಲ ಪ್ರತಿಭೆಯೂ ಇದೆ. ಆದ್ದರಿಂದಲೇ ಜನಪದರಿಂದ ಸಂಗ್ರಹಿಸಿದ ಸಾಹಿತ್ಯವನ್ನು ನಮ್ಮ ಮುಂದೆ ಯಥಾವತ್ತಾಗಿಡುವುದಿಲ್ಲ. ಅದರ ಅಧ್ಯಯನದ ವಿನ್ಯಾಸಗಳೊಂದಿಗೆ ತಾತ್ವಿಕ ನೆಲೆಯಲ್ಲಿ ನಿರೂಪಿಸುತ್ತಾರೆ. ಆ ವಸ್ತುವನ್ನಿಟ್ಟುಕೊಂಡೇ ಅವರು ಕಥೆ, ನಾಟಕಗಳನ್ನು ಬರೆಯುತ್ತಾರೆ. ಇತ್ತ ಗೊಂದಲಿಗರ ಅಧ್ಯಯನ, ಕೊಂತಿ ಪೂಜೆಯ ಅಧ್ಯಯನಗಳನ್ನು ಮಾಡುತ್ತಾರೆ. ರಾಮಣ್ಣನವರ ಬರೆವಣಿಗೆಯ ವಿಸ್ತಾರ ಎಂಥವರನ್ನು ನಿಬ್ಬೆರಗಾಗಿ ನೋಡುವಂತೆ

ಮಾಡುತ್ತದೆ. ಅವರ ಅಧ್ಯಯನ ಶಿಸ್ತು, ಏಕಾಗ್ರತೆ 'ಕಾಯುವುದೇ ತಪಂ' ಎಂಬಂಥ ತಾಳ್ಮೆ, ಉಳುಮೆ ನನ್ನದು ಫಲಾಫಲ ಮಳೆರಾಯನದು ಎಂಬಂತೆ, ಹಸಿವು ನೀರಡಿಕೆಯನ್ನು ಲೆಕ್ಕಿಸದೆ ಟೊಂಕಕಟ್ಟಿ ಜಾನಪದ ನೆಲದಲ್ಲಿ ಉಕ್ಕೆ ಹೊಡೆಯುತ್ತಾರೆ. ತಾವು ಬದುಕಿದ್ದ ಪರಿಸರದ ಜನಪದರ ಅಭಿವ್ಯಕ್ತಿಗೆ ಬರವಣಿಗೆಯ ರೂಪ ನೀಡಿ, ಅದನ್ನು ಕಥೆ (ಕಬ್ಬಾಳು ಕುಳಿಯಲ್ಲಿ ಹುಲಿ – 1980), ಕವಿತೆ (ಜನಪದ ಕಥನ ಗೀತೆಗಳು – 1970), ಕಾವ್ಯ (ಸುಬ್ಬಕ್ಕ ಹಾಡಿದ ನಂಜುಂಡೇಶ್ವರ ಕಾವ್ಯ – 1980), ನಾಟಕ (ಹಲಗಲಿಯ ಬೇಡರು–1988) ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ವಿಂಗಡಿಸಿ ಪ್ರತಿಯೊಂದನ್ನು ಸವಿಯುತ್ತಾ ಕ್ಯಾತನಹಳ್ಳಿಯನ್ನು ಪ್ರಖ್ಯಾತಗೊಳಿಸುತ್ತಾರೆ. ವಾಸ್ತವವಾಗಿ ರಾಮಣ್ಣನವರೇ ಹೇಳುವಂತೆ ರಾಮಣ್ಣ ಎಂದರೆ ನಾನು ಹೋಗಿ ಯಾರ ಮುಂದೆಯಾದರೂ ನಿಂತು ನಾನು ರಾಮಣ್ಣ ಎಂದರೆ ಗೊತ್ತಾಗುವುದಿಲ್ಲ. ಯಾವ ರಾಮಣ್ಣ ಎನ್ನುತ್ತಾರೆ. ಆದರೆ ಕ್ಯಾತನಹಳ್ಳಿ ರಾಮಣ್ಣ ಎಂದರೆ ಗೊತ್ತು ಎನ್ನುತ್ತಾರೆ. ಅದನ್ನು ಹೀಗೆ ವಿವರಿಸಿಕೊಳ್ಳುತ್ತಾರೆ; ರಾಮಣ್ಣ ಎಂದರೆ ಸೊನ್ನೆ ಅದರ ಹಿಂದಕ್ಕೆ ಒಂದು ಸೇರಿದರೆ ಹತ್ತಾಗುತ್ತೆ. ಹಾಗೆಯೇ ಕ್ಯಾತನಹಳ್ಳಿ ಇದ್ದರೆ ರಾಮಣ್ಣನಿಗೆ ಬೆಲೆ. ಅದಕ್ಕೆ ಅವರು ಹೇಳುತ್ತಾರೆ. ನಾನು ಬೆಳೆಯಲಿಲ್ಲ ನಿಜ, ಆದರೆ ಕ್ಯಾತನಹಳ್ಳಿ ಬೆಳೆಯುತ್ತಾ ಹೋಯಿತು ಎನ್ನುತ್ತಾರೆ.

ಕ್ಯಾತನಹಳ್ಳಿಯವರು ಗುಲ್ಬರ್ಗಾ, ಬಿಜಾಪುರ, ಬೀದರ್, ಶಿವಮೊಗ್ಗ ಜಿಲ್ಲೆಗಳನ್ನು ಸುತ್ತಾಡಿ ಹೊಸ ಜಾಗ, ಹೊಸ ಜನಗಳ ನಡುವೆ ಪರಿಚಯಿಸಿಕೊಂಡು, ಅವರು ಕೊಟ್ಟ ಜೋಳದ ರೊಟ್ಟಿ, ಖಾರ, ಈರುಳ್ಳಿಯನ್ನು ತಿಂದು ಅವರು ಕುಂತಲ್ಲಿ ಕುಂತು ಮಲಗಿದ್ದಲ್ಲಿ ಮಲಗಿ ಅವರು ಹೇಳಿದ್ದನ್ನೆಲ್ಲ ಕುಡುಮಿಯಂತೆ ಸಂಗ್ರಹಿಸುತ್ತಾರೆ. ಸಂಗ್ರಹಿಸಿದ್ದನ್ನೆಲ್ಲಾ ತಂದು ಗುಡ್ಡೆ ಹಾಕುವುದಿಲ್ಲ. ಅದನ್ನು ರುಚಿಗೊಳಿಸುತ್ತಾರೆ. ಅದು ಅರುಚಿಯಾಗದಂತೆ ಕಾಪಿಟ್ಟುಕೊಳ್ಳುತ್ತಾರೆ. ಇಂಥ ಪ್ರಯತ್ನದಿಂದಲೇ ಪಾಶ್ಚಾತ್ಯ ಜ್ಞಾನಶಾಖೆಗಳಿಗೆ ಆಕರ್ಷಿತರಾಗಿ ನಮ್ಮ ವಿದ್ವಾಂಸರು ಅಲ್ಲಿನ ಪಥ್ಯ ಮತ್ತು ಟೂಲ್‌ಗಳ ಮೂಲಕ ಇಲ್ಲಿನ ಪಥ್ಯಕ್ಕೆ ಸಂಶೋಧನಾ ವಿನ್ಯಾಸವನ್ನು ರೂಪಿಸುತ್ತಿದ್ದ ಕಾಲಘಟ್ಟದಲ್ಲಿಯೇ, ನಮ್ಮ ಹಳ್ಳಿಯಲ್ಲಿಯೇ ಅಧ್ಯಯನ ಯೋಗ್ಯ ವಸ್ತು ವಿಷಯಗಳಿವೆ, ಹೊಸ ವಿನ್ಯಾಸಗಳಿವೆ ಎಂದು ಗ್ರಹಿಸಿ ದೇಸಿಯ ನೆಲೆಯಲ್ಲಿ ಪಥ್ಯವನ್ನು ಕಟ್ಟಿಕೊಟ್ಟವರು ರಾಮಣ್ಣನವರು. ಇದರಿಂದಾಗಿ ರಾಮಣ್ಣನವರ ಸಕಲ ಸಾಹಿತ್ಯ ಕಾರ್ಯಕ್ಕೂ ನೇಟಿವಿಟಿ ಪ್ರಾಪ್ತವಾಯಿತು. ಹೊಸ

ಜಾಗದಲ್ಲಿ ಹೊಸ ಜನರನ್ನು ನೋಡಿ, ಅವರಿಂದ ಕೇಳಿ ತಿಳಿಯುವುದರ ಕಡೆ ಮುಖಮಾಡಿದ ರಾಮಣ್ಣನವರು ಪಂಡಿತ ಪ್ರತಿಭೆಯಲ್ಲ ನಿಜ. ಆದರೆ ಜೀವನ ಸಾತತ್ಯ ಪ್ರತಿಭೆ, ಆದ್ದರಿಂದಲೇ ಒಳಗಿದ್ದರೂ ಹೊರಗುಳಿದವರ ಜೀವನಕ್ರಮದಿಂದಲೇ ಹುಟ್ಟುವ ಅನುಭವಜನ್ಯ ಸಾಲುಗಳನ್ನು ಅವಿಚ್ಛಿನ್ನವಾಗಿ ನೋಡುವ, ಅದನ್ನು ಅಮೂಲ್ಯವೆಂದು ಸಂಗ್ರಹಿಸುವ, ಸಂಗ್ರಹಿಸಿದ್ದನ್ನು ನೇರ್ಪುಗೊಳಿಸಿ ಸಾದರಪಡಿಸುವ ಗುಣ ಬೆಳೆಸಿಕೊಂಡರು, ಯಾವುದು ಶಿಷ್ಟಸಾಹಿತ್ಯದ ಅನಾದರಕ್ಕೆ ಒಳಗಾಗಿತ್ತೋ ಯಾವುದು ನೇಪಥ್ಯಕ್ಕೆ ಸರಿದಿತ್ತೋ ಅದೇ ಸಾನುರಾಗದ ಸಾಕ್ಷಾತ್ಕಾರ ಪಡೆದು ಶಿಷ್ಟ ಸಾಹಿತ್ಯದ ಬೇರುಗಳಾಗಿ ಕಂಡಿತು.

ಸಿಪಾಯಿ ದಂಗೆಯ ಪರಿಣಾಮದಿಂದ ಬ್ರಿಟೀಷರು ಜಾರಿಗೆ ತಂದ "ನಿಶ್ಯಸ್ತ್ರೀಕರಣ ಕಾಯಿದೆ"ಯ ಪರಿಣಾಮ ಮುಧೋಳ ಸಂಸ್ಥಾನಕ್ಕೆ ಸೇರಿದ ಹಲಗಲಿ ಎಂಬ ಹಳ್ಳಿಯ ಬೇಡರು ಕಾಯಿದೆ ವಿರುದ್ಧ ದನಿಯೆತ್ತಿದರು. ಆಯುಧಗಳಿಂದಲೇ ಬೇಟೆಯಾಡಿ ಬದುಕುತ್ತಿದ್ದ ಬೇಡರಿಗೆ ಈ ಕಾಯಿದೆಯಿಂದ ಆಂಗ್ಲರಿಗೆ ಆಯುಧ ಒಪ್ಪಿಸಲು ಸಾಧ್ಯವಿಲ್ಲ ಎನಿಸಿದಾಗ, ಬ್ರಿಟೀಷರ ವಿರುದ್ಧ ದಂಗೆ ಎದ್ದರು. ಆಂಗ್ಲ ಅಧಿಕಾರಿ ಸಂಚುರೂಪಿಸಿ ಬ್ರಿಟೀಷ್ ಸೈನಿಕರು ನಡುರಾತ್ರಿಯಲ್ಲಿ ಹಲಗಲಿಯನ್ನು ಮುತ್ತಿಗೆ ಹಾಕಿ ಬೇಡರನ್ನು ಕೊಲ್ಲುತ್ತಾರೆ. ಕೆಲವರನ್ನು ಸೆರೆಹಿಡಿಯುತ್ತಾರೆ. ಈ ಕಥೆ ಫ್ಲೀಟರು ಸಂಗ್ರಹಿಸಿದ ಲಾವಣಿಯಲ್ಲಿ ಕೇವಲ 8 ಪುಟಗಳಲ್ಲಿದೆ. ಇದನ್ನೇ ರಾಮಣ್ಣನವರು 80 ಪುಟಗಳ ಹಲಗಲಿಯ ಬೇಡರು ಎಂಬ ಸೃಜನಶೀಲ ನಾಟಕವನ್ನು ರಚಿಸುತ್ತಾರೆ. 1988ರಲ್ಲಿ ಈ ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯು ಸಿಗುತ್ತದೆ.

ದೇಜಗೌ, ಹಾಮಾನಾ, ಜೀಶಂಪ ಅವರ ಮಾರ್ಗದರ್ಶನದಂತೆ ಕ್ಷೇತ್ರಕಾರ್ಯದಲ್ಲಿ ತೊಡಗಿಕೊಂಡಿದ್ದ ರಾಮಣ್ಣನವರಿಗೆ ಕ್ಷೇತ್ರಕಾರ್ಯ ವಿಷಯ ಕುರಿತು ಎಂ.ಎ ತರಗತಿಗೆ ಬೋಧನೆ ಮಾಡುತ್ತಿದ್ದ ರಾಗೌ ಅವರು ಒಂದು ಸೂಚನೆ ಕೊಡುತ್ತಾರೆ. ಅದೇನೆಂದರೆ ಸಂಗ್ರಹಕಾರ್ಯವೆಂದರೆ ವಕ್ತೃಗಳು ಹೇಳಿದ್ದನ್ನು ಬರೆದುಕೊಳ್ಳುವುದಷ್ಟೇ ಅಲ್ಲ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಆದ ಅನುಭವಗಳನ್ನು ಬರೆಯಿರಿ ಎಂದರು. ಇದು ಹೆಚ್ಚು ಪ್ರಯೋಜನವಾಯಿತು. ರಾಮಣ್ಣನವರು ಹಳ್ಳಿಯಿಂದ ಹಳ್ಳಿಗೆ ಪಯಣಿಸುತ್ತಾ ಸಿಕ್ಕವರನ್ನು ಮಾತನಾಡಿಸುತ್ತಾ ಸಾಗುವಾಗ ಎದುರಿಸಿದ ಎಲ್ಲ ಸವಾಲುಗಳನ್ನು ದಾಖಲಿಸುತ್ತಾ ಸಾಗಿದರು. ಅದಕ್ಕೆ ಕೆನ್ನೆತ್

ಗೋಲ್ಡ್‌ಸ್ಟನ್‌ನು ಬರೆದಿದ್ದ ಜಾನಪದ ಕ್ಷೇತ್ರಕಾರ್ಯ ಕುರಿತ ಅಧ್ಯಯನ ಸಹಾಯಕ್ಕೆ ಬಂತು. ರಾಮಣ್ಣನವರು ಕ್ಷೇತ್ರಕಾರ್ಯದ ಬಗೆಯನ್ನು ಕುರಿತು ತಮ್ಮ ಅನುಭವದ ಹಿನ್ನೆಲೆಯಿಂದ ತಾತ್ವಿಕವಾಗಿ ನಿರೂಪಿಸಿದರು. ವಾಸ್ತವವಾಗಿ ಜಾನಪದ ಕ್ಷೇತ್ರಕಾರ್ಯಕ್ಕೆ ಸಂಬಂಧಿಸಿದಂತೆ ಯಾವುದೇ ಪುಸ್ತಕ ಕನ್ನಡದಲ್ಲಿ ಇಲ್ಲದಿದ್ದ ಸಂದರ್ಭದಲ್ಲಿ ರಾಮಣ್ಣನವರ 'ಕ್ಷೇತ್ರಕಾರ್ಯದ ಹಾದಿಯಲ್ಲಿ' ಪ್ರಕಟವಾಯಿತು. ಇದು ಜಾನಪದ ಕೇತ್ರಕಾರ್ಯ ಮಾಡುವವರಿಗೆ ತೋರು ಮರವಾಯಿತು. ಕರ್ನಾಟಕ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿಯು (1997) ಲಭ್ಯವಾಯಿತು.

ರಾಗೌ ಮತ್ತು ಶಿವರಾಮುಕಾಡನಕುಪ್ಪೆ ಅವರು ಕ್ಯಾತನಹಳ್ಳಿಯವರಿಗೆ ಇನ್ನೊಂದು ಮಾತು ಹೇಳಿದರು. ಜಾನಪದ ಅಭ್ಯಾಸಿಗಳಿಗೆ ಜನಪದ ಸಾಹಿತ್ಯ ನಿಘಂಟುಗಳಿಲ್ಲ, ಶಿಷ್ಟ ಸಾಹಿತ್ಯಕ್ಕೆ ಸಾವಿರಾರು ನಿಘಂಟುಗಳಿವೆ. ಆದ್ದರಿಂದ ಒಂದು ಜಾನಪದ ನಿಘಂಟು ರಚಿಸಿ ಎಂದರು. ರಾಮಣ್ಣನವರ ಸ್ವಭಾವವೇ ಹಾಗೆ ಯಾರು ಏನೇ ಹೇಳಿದರೂ ಅದು ಯುಕ್ತವೆಂದು ತೋರಿದಲ್ಲಿ ಅದನ್ನು ಗಂಭೀರವಾಗಿ ತೆಗೆದುಕೊಂಡು ಅಧ್ಯಯನ ಮತ್ತು ಬರವಣಿಗೆಯಲ್ಲಿ ತೊಡಗುವುದು ಅವರ ಮೂಲಭೂತ ಗುಣ. ಆದ್ದರಿಂದ ಎರಡು ದಶಕಗಳ ಕಾಲ ಜನಪದ ಶಬ್ದಗಳಿಗೆ ಅರ್ಥ ಬರೆಯುವ ಕಾಯಕದಲ್ಲಿ ತೊಡಗಿದರು. ಆವರೆಗೆ ಕನ್ನಡದಲ್ಲಿ ಜನಪದ ನಿಘಂಟು ರಚನೆಯಾಗಿರಲಿಲ್ಲ. 1987ರಲ್ಲಿ ಜಾನಪದ ನಿಘಂಟು ರಚಸಿ ಪ್ರಕಟಿಸಿದರು. ಈ ಕೃತಿಯು ಜನಪದ ಶಬ್ದಗಳಿಗೆ ನಿಘಂಟಿಲ್ಲ ಎಂಬ ಶೂನ್ಯವನ್ನು ತುಂಬಿತು. ಇದು ಜನಪದ ಅಧ್ಯಯನಕಾರರಿಗೆ ಇಂದಿಗೂ ತುಂಬಾ ಪ್ರಯೋಜನವಾಗುತ್ತಿದೆ. ಇದಕ್ಕೆ 1987ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿಯೂ ಲಭ್ಯವಾಯಿತು.

ಹೀಗೆ ಅವರ ಕೃತಿಗಳು ಹಲವು ಮೊದಲುಗಳಿಗೆ ಕಾರಣವಾದವು. ಮುಂದೆ ಕರ್ನಾಟಕದ ಹಲವು ವಿಶ್ವವಿದ್ಯಾನಿಲಯಗಳಲ್ಲಿ ಜಾನಪದ ಎಂ.ಎ ಪತ್ರಿಕೆಗೆ ರಾಮಣ್ಣನವರ ಅನೇಕ ಕೃತಿಗಳು ಪಠ್ಯವಾದವು. ಡಾ. ಕ್ಯಾತನಹಳ್ಳಿ ರಾಮಣ್ಣನವರು ಗಂಭೀರ ಜಾನಪದ ತಜ್ಞರು ನಿಜ. ಆದರೆ ಅವರು ವಿನೋದಪ್ರಿಯರು. ಆ ವಿನೋದ ವಿಡಂಬನೆ, ವ್ಯಂಗ್ಯ, ಕುಚೋದ್ಯಗಳನ್ನು ನೋಡಬೇಕೆಂದರೆ ಅವರ 'ಗಾಳಿಗುದ್ದು' ಕೃತಿಯನ್ನು ಓದಬೇಕು.

1980ರ ದಶಕದಲ್ಲಿ ಡಾ. ಎಚ್.ಸಿ. ವಿಷ್ಣುಮೂರ್ತಿ ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ 'ಸಂಜೆ ಸಮಾಚಾರ' ಪತ್ರಿಕೆಯಲ್ಲಿ ನಿರಂತರವಾಗಿ 'ಗಾಳಿಗುದ್ದು' ಎಂಬ ಅಂಕಣದಲ್ಲಿ ಹನಿಗವನ, ವಿಡಂಬನೆಗಳನ್ನು ಬರೆಯುತ್ತಿದ್ದ ರಾಮಣ್ಣ ಟೀಯೆಸ್ಸಾರ್ ಅವರ ಛೂ ಬಾಣದ ಪ್ರಭಾವದಲ್ಲಿ ಬರೆದರು. ಓದುಗನ ಜೊತೆ ಸಂಭಾಷಣೆ ಮಾಡುವ ರೀತಿಯಲ್ಲಿರುವ ಈ ಅಂಕಣ ಬರೆಹಗಳು ಸಮಕಾಲೀನ ವಿಡಂಬನೆಯಾಗಿ ಅತ್ಯಂತ ಮೊನಚಾಗಿವೆ. ಪ್ರೀತಿಯ ಬರೆವಣಿಗೆಗಳಾಗಿವೆ, ಇಲ್ಲಿನ ಅತಿವಾಚ್ಯವೂ ಗುಣವೇ ಆಗಿದೆ. ಉದಾಹರಣೆಗೆ –

'ಮೈಸೂರು ನಗರಪಾಲಿಕೆ ಸದಾ ಜನಗಳಿಗೋಸ್ಕರವೇ ಕೆಲಸ ಮಾಡುತ್ತಿರುವಂತೆ ಕಾಣಲು ಈ ರಸ್ತೆಗಳೇ ಕಾರಣ. ಹೇಗೇಂತೀರೋ? ನೋಡಿ. ನಗರ ಪಾಲಿಕೆಯವರು ಸದಾ ಒಂದಲ್ಲಾ ಒಂದು ಕಡೆ ರಸ್ತೆ ರಿಪೇರಿ ಮಾಡುತ್ತಲೇ ಇರುತ್ತಾರೆ. ಅವರು ಗುಳಿಗಳನ್ನು ಮುಚ್ಚುವ ರೀತಿ ನೋಡಿದರೆ ರಸ್ತೆಗಳಿಗೆ ಕಜ್ಜಿ ಹತ್ತಿದಂತೆ ಕಾಣುತ್ತದೆ! ಒಂದು ಕಡೆಯಿಂದ ಕಜ್ಜಿ ಅಂಟಿಸುತ್ತ ಹೋಗುತ್ತಾರೆ. ಇನ್ನೊಂದು ಕಡೆಯಿಂದ ಹೊಸ ಹೊಸ ಕಜ್ಜಿ ಉಂಟಾಗುತ್ತ ಬರುತ್ತವೆ. ಇಡೀ ರಸ್ತೆಗೆ ಟಾರು ಹಾಕುತ್ತಾರೆನ್ನಿ. ಮೂರು ತಿಂಗಳಲ್ಲೇ ಅಲ್ಲೂ ಕಜ್ಜಿಯ ಗುಳಿಗಳು ಹಾಜರ್! ಇತ್ತೀಚಿನ ಒಂದು ಉದಾಹರಣೆ ನೋಡಿ : ಕುಕ್ಕರಹಳ್ಳಿಯ ಪಕ್ಕದಲ್ಲಿ ಕುವೆಂಪು ನಗರದ ಜೋಡಿ ರಸ್ತೆ ಇದೆ. ಇದಕ್ಕೆ ಕಜ್ಜಿ ಅಂಟಿಸಿ ಸಾಕಾಗಿ ಕೊನೆಗೆ ಈಗ ಮೂರು ತಿಂಗಳಿಂದೀಚೆಗೆ ಸಂಪೂರ್ಣ ದುರಸ್ತಿ ಮಾಡಲಾಯಿತು. ಆಗಲೇ ಅದು ಗುಳಿ ಬೀಳತೊಡಗಿದೆ. ಇಷ್ಟರಲ್ಲಿ ಕಜ್ಜಿ ಅಂಟಿಸುವ ಕೆಲಸವನ್ನು ನಿರೀಕ್ಷಿಸಬಹುದು?'

'ಗಾಂಧಿ ಜಯಂತಿಯಂದು
ಮಾಂಸ ತಿನ್ನುವುದಿರಲಿ
ಗಾಂಧಿಯನ್ನೆ ತಿಂದ
ಜನ
ಜಯಂತಿಯಂದು ಪ್ರತಿಜ್ಞೆ
ಸ್ವೀಕರಿಸುವುದ ಕಂಡು
ಮುಸಿಮುಸಿ ನಗುತ್ತಾಳೆ
ನಮ್ಮ ನೀಲು.'

ಕನ್ನಡ ಪರವಾದ ಸಂಗತಿಗಳನ್ನು ಕುರಿತು ಎರಡು ವಾರಗಳ ಹಿಂದೆ ಈ ಕಾಲಂನಲ್ಲಿ ನೀವು ಓದಿದ್ದು ನೆನಪಿದೆಯಷ್ಟೆ? ಅಲ್ಲಿ ಹಲವು ಪತ್ರಿಕೆಗಳನ್ನು ಹೆಸರಿಸಿ, ಈ

ಪತ್ರಿಕೆಗಳು ಪ್ರಾಮಾಣಿಕವಾಗಿ ಕಚ್ಚೆ ಕಟ್ಟಿ ನಿಂತರೆ ಬೆಂಗಳೂರನ್ನೂ ಗಡಿ ಪ್ರದೇಶದ ಇನ್ನಿತರ ಕನ್ನಡ ಪ್ರದೇಶಗಳನ್ನೂ ಉಳಿಸಿಕೊಳ್ಳಬಹುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೆವಲ್ಲವೆ?

ಆ ನಮ್ಮ ಅಭಿಪ್ರಾಯಗಳಿಗೆ ಸಂಬಂಧಿಸಿದಂತೆ ನಮ್ಮ ಓದುಗರಿಂದ ಆಕ್ಷೇಪಣಾ ಪತ್ರಗಳು ಬಂದಿವೆ. ಆ ಪತ್ರಗಳಲ್ಲಿ ಕಂಡುಬಂದದ್ದು ಎರಡೇ ಆಕ್ಷೇಪಣೆಗಳು!

ಒಂದು ಆಕ್ಷೇಪಣೆಯೆಂದರೆ, ನಾವು ಕನ್ನಡ ಪರವಾದ ಹೋರಾಟಕ್ಕೆ ಪಟ್ಟಿ ಮಾಡಿದ ಪತ್ರಿಕೆಗಳಲ್ಲಿ ಲಂಕೇಶ್ ಪತ್ರಿಕೆಯೂ  ಸೇರಿದೆ ಎಂಬುದು! ಈ ಆಕ್ಷೇಪಣೆಗೆ ಕಾರಣವೇನೆಂದರೆ, ಬಣ್ಣದ ಮುದ್ರಣಕ್ಕಾಗಿ ತಮಿಳುನಾಡಿನಲ್ಲಿರುವ ಶಿವಕಾಶಿಯನ್ನು ಆಶ್ರಯಿಸಿರುವ ಲಂಕೇಶ ಪತ್ರಿಕೆಯಿಂದ ಕನ್ನಡ ಪರವಾದ "ಪ್ರಾಮಾಣಿಕ" ಹೋರಾಟ ಸಾಧ್ಯವೆ? ಹೀಗೆ ತಮಿಳುನಾಡನ್ನು ಆಶ್ರಯಿಸಿದ ಪತ್ರಿಕೆಯೊಂದರಲ್ಲಿ ಕನ್ನಡದ ಪ್ರಾಮಾಣಿಕ ವಿದ್ವಾಂಸರಾದ ಡಾ॥ ಎಂ. ಚಿದಾನಂದಮೂರ್ತಿಯವರ ಕನ್ನಡ ಪರವಾದ ಲೇಖನ ಪ್ರಕಟವಾಗಿರುವುದು ಎಷ್ಟರಮಟ್ಟಿಗೆ ಸಮಂಜಸ?

'ಹವಳದ ಕುಡಿ
ಹವಳದ ಕುಡಿ
ಎಂದು ಹೇಳೇ ನೀಲು
ಎಂದರೆ
ಅವಳದ ಕುಡಿ
ಅವಳದ ಕುಡಿ
ಎನ್ನುತ್ತಾಳೆ ನೀಲು.'

ಹೀಗೆ ರಾಮಣ್ಣನವರು ತಮ್ಮೆದುರು ಕಾಣುವ ಸಕಲ ವಿದ್ಯಮಾನಗಳನ್ನು ಅವರು ಗ್ರಹಿಸಿದ ಬಗೆಯಲ್ಲಿಯೇ ನಿರೂಪಿಸುತ್ತಾರೆ. ಗೋಕಾಕ್ ಚಳವಳಿ, ಡಾ. ರಾಜ್‌ಕುಮಾರ್ ಅವರ ಕನ್ನಡಪರ ಹೋರಾಟ, ಕನ್ನಡ ಚಳವಳಿಗಳು, ರೈತ ಚಳವಳಿ, ರಾಜಕಾರಣ  ಹೀಗೆ ಅನೇಕ ಸಂಗತಿಗಳು ಇಲ್ಲಿ  ಸ್ಥಾನ ಪಡೆದಿವೆ. ವರ್ತಮಾನದ ಆಗುಹೋಗುಗಳಿಗೆ ಹಾಸ್ಯ, ವಿಡಂಬನೆ, ವ್ಯಂಗ್ಯಗಳ ಮೂಲಕ ತೀವ್ರ ಕುತೂಹಲದ ಸ್ಪಂದನ ನೀಡಿರುವುದನ್ನು ಇವರ 'ಗಾಳಿಗುದ್ದು' ಕೃತಿಯಲ್ಲಿ ಕಾಣಬಹುದಾಗಿದೆ.

ಕ್ಯಾತನಹಳ್ಳಿ ಅವರ ವ್ಯಕ್ತಿತ್ವವನ್ನು ಕುರಿತು ಡಾ. ರಾಗೌ ಅವರು ಬಹಳ ಅರ್ಥಪೂರ್ಣವಾಗಿ ಹೇಳುತ್ತಾರೆ – "ಡಾ. ಕ್ಯಾತನಹಳ್ಳಿ ರಾಮಣ್ಣ ನಮ್ಮ ನಡುವೆ ಇರುವ ಒಬ್ಬ ಅಪರೂಪದ ವ್ಯಕ್ತಿ. ಬಹಳ ಸಾರಿ ಮೌನಿಯಾಗಿ ತೋರುವ ಮಿತಭಾಷಿ." 'ಮಾತು ಬೆಳ್ಳಿ ಮೌನ ಬಂಗಾರ' ಎಂಬ ಮಾತು ಅವರಿಗೆ ಒಪ್ಪು, 'ಮಾತನಾಡಿದರೆ ಮುತ್ತು ಸುರಿದಾವೆ' ಎಂಬ ರೀತಿಯ ಸ್ವಭಾವ ಅವರದು. 'ಮೆಲ್ಪು ಬಲ್ಪನರಿಗುಂ' – ಇದು ಪಂಪನ ಹೇಳಿಕೆ : ರಾಮಣ್ಣನವರ ದಾರಿ, ಧ್ಯೇಯ ಕೂಡ, ಅಂದ ಮಾತ್ರಕ್ಕೆ ಯಾವುದನ್ನು ಪ್ರಶ್ನಿಸದೆ ಒಪ್ಪಿಕೊಳ್ಳುತ್ತಾರೆ ಎಂಬ ಅರ್ಥವಲ್ಲ. ತಮಗೆ ರುಚಿಸದ್ದನ್ನು ನೇರವಾಗಿ ನಿರಾಕರಿಸುವ ಜಾಯಮಾನ ಅವರದು; ಅನ್ಯಾಯದ ವಿರುದ್ಧ ಹೋರಾಡುವ ವ್ಯಕ್ತಿತ್ವವೂ ಅವರದ್ದೇ. ತತ್ವಕ್ಕೆ ಅಂಟಿಕೊಳ್ಳುವ, ಮೌಲ್ಯಗಳಿಗೆ ಕಟಿಬದ್ಧರಾಗುವ ನಿಲುವು ರಾಮಣ್ಣನವರದು. ಹಾಗೆಂದು ಅವರೆಂದೂ ತಮ್ಮನ್ನು ಪೂರ್ಣವಾಗಿ ವ್ಯಕ್ತಮಾಡಿಕೊಂಡವರಲ್ಲ; ಕೆಲವೊಮ್ಮೆ ನಿಗೂಢವಾಗಿ ಉಳಿದುಕೊಂಡು ಬಿಡುವರು. ರಾಮಣ್ಣ ಒಬ್ಬ ಸ್ನೇಹಜೀವಿ ಕೂಡ. ಸೌಜನ್ಯ ಸೌಶೀಲ್ಯಗಳು ಅವರ ಎರಡು ಕಣ್ಣುಗಳು, ಸಂಪ್ರದಾಯದ ಚೌಕಟ್ಟಿನಲ್ಲಿ ಆಧುನಿಕತೆಯ ಹಣತೆಯ ಬೆಳಗ ಹೊರಟ ರಾಮಣ್ಣ, ಅದಕ್ಕೆ ಭಾವವನ್ನು ಬುದ್ಧಿಯನ್ನು ಬತ್ತಿ ಮಾಡ ಹೊರಟವರು. 'ತಿಳಿಜಲ' ಅವರ ಒಂದು ಪುಸ್ತಕದ ಹೆಸರು; ರಾಮಣ್ಣನವರ ಮನಸ್ಸು ಕೂಡ ತಿಳಿಜಲದ ಹಾಗೆಯೇ. ಅದರ 'ಅಂತರ್ಜಲ'ವನ್ನು ಹುಡುಕುವ ಕೆಲಸದಲ್ಲಿ ಕೆಲವೊಮ್ಮೆ 'ವಜ್ರವರ್ತುಲ'ವನ್ನು ಕಟ್ಟಿಕೊಂಡದ್ದೂ ಇದೆ. ರಾಮಣ್ಣನವರ ಜೀವನ ವರ್ಣರಂಜಿತ ಆಗದಿರಬಹುದು; ಆದರೆ ನೀರಿನ ಮೂಲಗುಣದ ಹಾಗೆ ಸ್ವಚ್ಛ ಸ್ಫಟಿಕ. (ಜಾನಪದ ತತ್ವಾರ್ಥ ಪ್ರವೇಶ, ಡಾ. ರಾಗೌ, ಶ್ರೀ ಎಂ.ಎಲ್ ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ, ಕರ್ನಾಟಕ ಸಂಘ (ರಿ) ಮಂಡ್ಯ – 2009 ಪು.ಸಂ. 632)

ರಾಮಣ್ಣನವರು ಪ್ರಶಸ್ತಿ ಅರಸುತ್ತಾ ಬರೆದವರಲ್ಲ. ಆದರೆ ಹಲವು ಪ್ರಶಸ್ತಿಗಳು ಅವರನ್ನು ಅರಸುತ್ತಾ ಬಂದವು. ರಾಮಣ್ಣನವರಿಗೆ ಸಾಹಿತ್ಯ ಕೃಷಿಯನ್ನು ಗುರುತಿಸಿ ಹಲವು ಪ್ರಶಸ್ತಿ ಗೌರವಗಳು ಬಂದಿವೆ. ಅವುಗಳಲ್ಲಿ ಮುಖ್ಯವಾಗಿ 1998ರಲ್ಲಿ ಕರ್ನಾಟಕ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ 'ಜಾನಪದ ತಜ್ಞ' ಪ್ರಶಸ್ತಿ ಸಿಕ್ಕಿತು. 2006ರಲ್ಲಿ 7ನೇ ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದರು, 2015ರಲ್ಲಿ ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿ ದೊರೆಯಿತು.

ಕ್ಯಾತನಹಳ್ಳಿ ಅವರದು ತಾಯ್ತನದ ಗುಣ, ಅವರು ಹುಟ್ಟಿದ ಕೆಲವು ದಿನಗಳಲ್ಲಿಯೇ ಅವರ ತಾಯಿ ತೀರಿಕೊಂಡರಂತೆ. ಅದೂ ಅವರಿಗೆ ತಿಳಿಯದು. ಅವರು ತಾಯಿಯ ಮುಖವನ್ನೇ ನೋಡದವರು; ಸೋದರತ್ತೆ ಅಚ್ಚಮ್ಮ ಅವರನ್ನು ಸಾಕಿ ಬೆಳೆಸಿದರು. 'ನನಗೆ ತಾಯಿ ಇರಲಿಲ್ಲ, ಅವರಿಗೆ ಮಕ್ಕಳಿರಲಿಲ್ಲ' ಎನ್ನುವ ರಾಮಣ್ಣ ಸೋದರತ್ತೆಯಲ್ಲಿ ತಾಯಿಯನ್ನು ಕಂಡರು. ತದ ನಂತರ 'ನನ್ನ ಹೆಂಡತಿಯೇ ನನಗೆ ತಾಯಿ' ಎನ್ನುತ್ತಾರೆ.

ರಾಮಣ್ಣನವರು ಮೂಲತಃ ನೇಗಿಲಯೋಗಿ ಆದ್ದರಿಂದಲೇ ಅವರು ಕೇವಲ ಪ್ರತಿಭೆಯನ್ನು ನೆಚ್ಚಿಕೊಂಡು ಕುಳಿತವರಲ್ಲ, ಪರಿಶ್ರಮವನ್ನು ನೆಚ್ಚಿಕೊಂಡು ಬೆವರಿಳಿಸಿದವರು. ಜನರ ನಡುವೆಯಲ್ಲಿ ಅವರಿಗಿದ್ದ ಪ್ರತಿಭೆ ಮತ್ತು ಪರಿಶ್ರಮಗಳೆಂಬ ತಮ್ಮೆರಡು ಬಾಹುಗಳಿಂದ ಜಾನಪದವನ್ನು ತಬ್ಬಿಕೊಂಡು ಬೆಳೆದರು; ಬೆಳೆಸಿದರು. 'ಹೃದಯ ಎಂಬುದು ಕೃಷಿಗೆ ಯೋಗ್ಯವಾದ ಭೂಮಿ ಇದ್ದಂತೆ ಅದರಲ್ಲಿ ಪ್ರೀತಿ, ದ್ವೇಷ, ತ್ಯಾಗ, ಹಗೆತನ, ಅಸೂಯೆ, ಮತ್ಸರಗಳೆಂಬ ಬೀಜಗಳಲ್ಲಿ ಯಾವುದನ್ನು ಬಿತ್ತಿದರೂ ಫಲಕೊಡುತ್ತದೆ. ಯಾವುದನ್ನು ಬಿತ್ತಬೇಕೆಂಬ ತೀರ್ಮಾನ ನಮ್ಮದು.' ಈ ತಿಳಿವಳಿಕೆ ರಾಮಣ್ಣನವರಿಗಿದೆ. ಅವರು ಸರಿಯಾದ ತೀರ್ಮಾನಕ್ಕೆ ಬರುತ್ತಾರೆ. ಪ್ರೀತಿಯನ್ನೇ ಬಿತ್ತುತ್ತಾರೆ, ಅದನ್ನೇ ಬೆಳೆಯುತ್ತಾರೆ, ಆದ್ದರಿಂದಲೇ ಅವರೊಬ್ಬ ನೇಗಿಲಯೋಗಿ, ಜಾನಪದ ಜೋಗಿ.

# ಮಾರಿ ಆರಾಧನೆ : ಒಂದು ಜಾನಪದೀಯ ಅಧ್ಯಯನ

* ಡಾ.ಜಿ.ಸಣ್ಣಹನುಮಪ್ಪ

**ಪ್ರವೇಶ:** ಮಾತೃ ಪ್ರಧಾನ ಸಂಸ್ಕೃತಿಯ ಆರಾಧನೆಯ ದೈವವೇ ಈ ಮಾರಿಕಾಂಬೆ. ಪ್ರಕೃತಿ ಪೂಜಕರಾದ ದ್ರಾವಿಡ ಪರಂಪರೆಯ ದೈವವಾಗಿ ಮಾರಿಕಾಂಬೆಗೆ ಮಹತ್ವದ ಸ್ಥಾನವಿದೆ. ಪ್ರಕೃತಿಯ ಚೈತನ್ಯ ಸ್ವರೂಪಿ ದೇವತೆಗಳಾದ 'ಶಿವ-ಶಕ್ತಿ'ಗಳನ್ನು ಅತೀವ ಶ್ರದ್ಧೆ-ಭಕ್ತಿಗಳಿಂದ ಪೂಜಿಸುತ್ತಾ ಬಂದ ಪರಂಪರೆ ದೊಡ್ಡದಿದೆ. ಆದಿಮ ಸಮಾಜಗಳಾದ ಆದಿವಾಸಿ, ಅಲೆಮಾರಿ ಮತ್ತು ಬುಡಕಟ್ಟು ಸಮುದಾಯಗಳ ನಾಯಕ ದೈವಗಳೇ ಈ 'ಶಿವ-ಶಕ್ತಿ'ಯರು. ಆದಿ ಮಾನವನು ಕಾಡು-ಮೇಡುಗಳಲ್ಲಿ ಪ್ರಾಕೃತಿಕ ಜೀವನ ಪದ್ಧತಿಯಲ್ಲಿ ಬದುಕಿದ್ದಾನೆ. ನಿಸರ್ಗದಲ್ಲಿ ಸಂಭವಿಸುವ ರೌದ್ರ ವಿರಾಟ್‌ರೂಪಗಳಿಗೆ ಬೆದರಿ ಭಯ-ಭೀತಿಗೊಂಡು ಅತಿಮಾನುಷ ಶಕ್ತಿಗೆ ತನ್ನನ್ನು ಕಾಪಾಡುವಂತೆ ಮಣಿದು ಮೊರೆಯಿಟ್ಟಿದ್ದಾನೆ. ಈ ಬಗೆಯ ನಡೆವಳಿಕೆಗಳೇ ಅವನಲ್ಲಿ ದೈವ ಜಾಗೃತಿಯನ್ನು ಉಂಟು ಮಾಡಿದೆ. ತನ್ನ ಜೀವನಾವಶ್ಯಕ ಮೂಲಭೂತ ಅಗತ್ಯಗಳಾದ ಅನ್ನ-ಅರಿವೆ, ನೀರು-ಸೂರುಗಳಿಗಾಗಿ ಪ್ರಯತ್ನ ಮಾಡಿದ್ದಾನೆ. ಇದು ಬೇಟೆ ಪಶುಪಾಲನೆ ಮತ್ತು ಕೃಷಿಯಂಥ ಚಟುವಟಿಕೆಗಳನ್ನು ಕಂಡುಕೊಳ್ಳಲು ಅವನಿಗೆ ಸಾಧ್ಯವಾಗಿದೆ. ಇಂಥ ಜೀವನವಿಧಾನಗಳನ್ನು ರೂಪಿಸಿಕೊಳ್ಳುವಾಗ ಅದರ ಜೊತೆಯಲ್ಲಿಯೇ ಉಪಉತ್ಪನ್ನವಾಗಿ ಮೈದಾಳುವ ಸಂಸ್ಕೃತಿಯ ವಾಹಕವೇ ಜಾನಪದ.

**ಮಾರಿದೇವತೆಯ ಕಲ್ಪನೆ:** ಜನಪದರ ಪ್ರಕೃತಿ ಪೂಜೆಯಲ್ಲಿ ಮಹತ್ವದ ಸ್ಥಾನ ಪಡೆದುಕೊಂಡಿರುವುದು ಮರದ ಪೂಜೆ. ತನ್ನ ವಾಸಕ್ಕೆ ಪೊಟರೆ, ಹಸಿವೆಗೆ ಹಣ್ಣು, ಬಿಸಿಲಿಗೆ ನೆರಳಾಗಿ ಕಲ್ಪವೃಕ್ಷದಂತೆ ಮೂಲ ಆದಿವಾಸಿಗೆ ಕಂಡಿರಬೇಕು. ಇದು ಮರವನ್ನು ಪೂಜೆ ಮಾಡುವ ಸಂಪ್ರದಾಯಕ್ಕೆ ಅಡಿಪಾಯವಾಗಿದೆ. ಇದುವೇ ಬರುಬರುತ್ತಾ ಒಂದು ಸಂಪ್ರದಾಯವಾಗಿ ರೂಢಿಯಲ್ಲುಳಿದು ಬಂದಿದೆ. ಈ ದಿಸೆಯಲ್ಲಿ ಮರದವ್ವ>ಮರದಮ್ಮ>ಮರಮ್ಮ>ಮಾರಮ್ಮ>ಮಾರಿಕಾಂಬೆ ಎಂದು ಆಗಿರುವುದು ಭಾಷಾಶಾಸ್ತ್ರೀಯ ಹಿನ್ನೆಲೆಯಲ್ಲಿ ಸರಿಯಾಗಿಯೇ ಇದೆ. ಸೃಷ್ಟಿಯ

ಮತ್ತು ಸಮೃದ್ಧಿಯ ಬಲಿಷ್ಠ ಸಂಕೇತವಾಗಿ ಕೋಣವನ್ನು ಪರಿಗಣಿಸಲಾಗಿದೆ. ಮಾರಿಜಾತ್ರೆಯಲ್ಲಿ ಕೋಣ ಕಡಿದು ಅದರ ರಕ್ತವನ್ನು ಹೊಲಕ್ಕೆ ಚೆರುಗ ಚೆಲ್ಲುವ ಮೂಲಕ ಬೆಳೆ ಹುಲುಸಾಗಿ ಬೆಳೆಯಲೆಂಬ ಆಶಯವೇ ಈ ಹಬ್ಬದಾಚರಣೆ. ಹೀಗಾಗಿ ಮರದವ್ವನೆಂಬ ಮಾರವ್ವ ಸಸ್ಯಧಿದೇವತೆಯಾಗಿ ಜನಪದರ ಭಕ್ತ-ಭಾವಗಳಲ್ಲಿ ನೆಲೆಸಿದ್ದಾಳೆ. ಈ ಮೂಲಕ ಬಲಿ ಆಚರಣೆ ಮಾಡಿ ಉಗ್ರ ಸ್ವರೂಪಿಯಾದ ಮಾರಿದೇವತೆಯನ್ನು ತೃಪ್ತಿ ಮತ್ತು ಸಮಾಧಾನಪಡಿಸಬಹುದೆಂಬ ಬಲವಾದ ನಂಬಿಕೆ ಜನಪದರಲ್ಲಿ ಬೇರೂರಿದೆ. ಇಂದಿಗೂ ಬನ್ನಿಮರ, ಬೇವಿನಮರ, ಆಲದಮರ ಮತ್ತು ಅರಳಿಮರ ಮುಂತಾದವುಗಳನ್ನು ನಮ್ಮ ಜನಪದರು ಅತ್ಯಂತ ಭಕ್ತಿ-ಗೌರವಗಳಿಂದ ಕಾಣುವ ಸಂಪ್ರದಾಯಗಳಿರುವುದನ್ನು ಇಲ್ಲಿ ನೆನೆಯಬೇಕು. ಹೀಗೆ ತಾನು ನಂಬಿದ ದೈವದ ಮೊರೆಹೊಕ್ಕ ಮನುಷ್ಯ ಅನ್ಯಶಕ್ತಿಗಳಿಂದ ತನ್ನನ್ನು ಮತ್ತು ತಾನು ನೆಲ ನಿಂತ ಗ್ರಾಮವನ್ನು ಕಾಪಾಡುವಂತೆ ಈ ಪ್ರಕೃತಿ ದೇವತೆಯಲ್ಲಿ ಪ್ರಾರ್ಥಿಸಿದ್ದಾನೆ. ಪ್ರಾಕೃತಿಕ ವಿಕೋಪಗಳು, ರೋಗ-ರುಜಿನಗಳಂಥ ವಿಪತ್ತುಗಳಿಂದ ರಕ್ಷಿಸುತ್ತಾಳೆಂಬ ನಂಬಿಕೆ ಹಾಗೂ ನಿರೀಕ್ಷೆಗಳು ಸಹಜವಾಗಿಯೇ ಈ ಮಾರಿಯ ಆರಾಧನೆಯ ಹಿನ್ನೆಲೆಗಿರುವುದನ್ನು ನೋಡಬಹುದು.

ಆದಿಮಾನವನಿಂದ ಆಧುನಿಕ ಮಾನವನವರೆಗೆ ಮಾನವಕುಲದ ವಿಕಾಸಕ್ರಮದಲ್ಲಿ ದೇವರು ಧರ್ಮ, ಪೂಜೆ, ಆರಾಧನೆ, ಆಧ್ಯಾತ್ಮದಂತಹ ಧಾರ್ಮಿಕ ಆಚರಣೆಗಳು ಜನ-ಜಾತಿ-ಸಮುದಾಯಗಳ ಬದುಕನ್ನು ಆವರಿಸಿ ನಿಂತಿವೆ. ಹಲವು ಸಂದರ್ಭಗಳಲ್ಲಿ ಒಂದೊಂದು ಕಾರಣಕ್ಕೆ ಒಂದೊಂದು ದೇವತೆಗಳನ್ನು ನಮ್ಮ ಜನರು ಸೃಷ್ಟಿಸಿಕೊಂಡಿದ್ದಾರೆ. ಮನುಷ್ಯ ತನ್ನ ಸುಖ ಶಾಂತಿ ನೆಮ್ಮದಿ ಮತ್ತು ಸಮೃದ್ಧಿಗಳಿಗಾಗಿ ಭೌತಿಕ ವಸ್ತು ವಿಷಯಗಳನ್ನು ಆವಿಷ್ಕರಿಸಿದ್ದಾನೆ. ಹಾಗೆಯೇ ತನ್ನ ಆಂತರಿಕ ಮನಃಶಾಂತಿಗೆ ಆನಂದಕ್ಕೆ ದೇವರನ್ನು ಸೃಷ್ಟಿಸಿದ್ದಾನೆ. ಈ ದೃಷ್ಟಿಯಿಂದ ಮಾರಮ್ಮನನ್ನು ಸಸ್ಯದೇವತೆಯಾಗಿ 'ಕೃಷಿ ಸಮೃದ್ಧಿ'ಗೆ ಫಲವಂತಿಕೆಯ ಸಂಕೇತವಾಗಿಯೂ ಆರಾಧಿಸುವ ಪರಂಪರೆ ಬೆಳೆದುಬಂದಿತೆನ್ನಬೇಕು.

ಜಗತ್ತಿನ ಜನಸಂಖ್ಯೆಯಲ್ಲಿ ಶೇಕಡ 50ರಷ್ಟು ಮಹಿಳೆಯರು ಭೂಮಿಯ ಮೇಲಿನ ಬದುಕಿನಲ್ಲಿ ಪಾಲುದಾರರು. ಕೃಷಿ ಚಟುವಟಿಕೆಗಳು ಆರಂಭವಾದುದೇ ಹೆಣ್ಣಿನಿಂದ. ಕೃಷಿಯಿಂದಲೇ ಜಗತ್ತಿನಲ್ಲಿ 'ಸಂಸ್ಕೃತಿ' ಎಂಬುದು ಸೃಷ್ಟಿಯಾಗಿದೆ. ಮಾನವನ ಉಳಿವಿಗೆ, ಕುಟುಂಬದ ಏಳಿಗೆಗೆ, ಸಾಮಾಜಿಕ ಬದುಕಿನ ಸಂಪನ್ನತೆಗೆ

ಹೆಣ್ಣು ಕೇಂದ್ರಸ್ಥಾನದಲ್ಲಿರುವುದನ್ನು ನಾವು ಗಮನಿಸಬೇಕು. 'ಹೆಣ್ಣು ಕುಟುಂಬದ ಕಣ್ಣು', 'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ' ಎಂಬ ಗಾದೆ ಮಾತುಗಳ ಹಿಂದೆ ಸ್ತ್ರೀ ಶಕ್ತಿಯ ಪೋಷಣೆ, ರಕ್ಷಣೆ ಹಾಗು ಮಾನವಕುಲದ ಉದ್ಧಾರದ ಸೂತ್ರವೊಂದು ಅಡಕವಾಗಿರುವಂತೆ ತೋರುತ್ತಿದೆ. ಸ್ತ್ರೀ ಶಕ್ತಿ ಪ್ರಧಾನವಾದ ದ್ರಾವಿಡ ಪರಂಪರೆಯ ಮಾತೃದೇವತಾ ಆರಾಧನೆಯ ಪ್ರಭಾವವು ಪಿತೃ ಪ್ರಧಾನ ವ್ಯವಸ್ಥೆಯ ವೈದಿಕ, ಜೈನ, ಬೌದ್ಧ ಧರ್ಮಗಳಲ್ಲೂ ಸ್ತ್ರೀಗೆ ಪ್ರಾಮುಖ್ಯತೆ ದೊರೆತುದು ಚಾರಿತ್ರಿಕ ಸತ್ಯ. "ಎಲ್ಲಿ ಸ್ತ್ರೀಯು ಗೌರವಿಸಲ್ಪಡುತ್ತಾಳೋ ಅಲ್ಲಿ ದೇವತೆಗಳು ನೆಲೆಸುತ್ತಾರೆ" ಎನ್ನುತ್ತದೆ ಸಂಸ್ಕೃತೋಕ್ತಿ. ಹೀಗಾಗಿ ಆದಿಶಕ್ತಿಯ ಸ್ವರೂಪವನ್ನು ಪಡೆದುಕೊಂಡ ಭಾರತದ ಮಾತೃಮೂಲೀಯ ವ್ಯವಸ್ಥೆಯಲ್ಲಿ ಸ್ತ್ರೀಶಕ್ತಿಯ ವಿಭಿನ್ನ ರೂಪಗಳು ದೇಶಾದ್ಯಂತ ಆರಾಧನೆಗೊಳ್ಳುತ್ತಿವೆ. ಶಾಕ್ತಪುರಾಣ, ದೇವಿಪುರಾಣ, ಮಾರ್ಕಂಡೇಯ ಪುರಾಣಗಳು ಶಕ್ತಿ ದೇವತೆಯ ಉಪಾಸನೆಯ ತತ್ತ್ವವನ್ನು ಎತ್ತಿಹಿಡಿದಿವೆ.

ದುರ್ಗೆ, ಚಂಡಿ, ಚಾಮುಂಡಿ, ಮಾತಂಗಿ, ಲಕ್ಷ್ಮೀ, ಸರಸ್ವತಿ, ಮುಂತಾದ ಹೆಸರಿನಲ್ಲಿ ಶಕ್ತಿದೇವತೆ ಪೂಜೆಗೊಳ್ಳುತ್ತಾಳೆ. ಉಗ್ರಸ್ವರೂಪಿಣಿಯಾದ 'ಮಾರಿ'ಯ ಬಗೆಗೆ ಮೌಖಿಕ ಜನಪದ ಸಮುದಾಯಗಳಲ್ಲಿ ಎಲ್ಲೆಡೆ ವಿವಿಧ ಕಥೆ ಪುರಾಣಗಳು ಚಾಲ್ತಿಯಲ್ಲಿವೆ. ಅವುಗಳಲ್ಲಿ ಬಹುಮುಖ್ಯವೆನಿಸಿದ ಮಾರಿಪುರಾಣವೊಂದನ್ನು ಈ ಮುಂದಿನಂತೆ ಸಂಗ್ರಹಿಸಬಹುದು.

**ಮಾರಿ ಪುರಾಣ:** 'ಶೂದ್ರನೆಂದು ತಿಳಿಯದೆ ಮದುವೆಯಾಗಿ ಮಕ್ಕಳನ್ನು ಪಡೆದಿದ್ದ ಬ್ರಾಹ್ಮಣ ಯುವತಿ ಒಮ್ಮೆ ಹಿತ್ತಲಿನಲ್ಲಿ ಬಾಳೆಪಟ್ಟೆಯಿಂದ ಎಕ್ಕಡ ಹೊಲಿಯುತ್ತಿರುವ ಮಗನನ್ನು ನೋಡುತ್ತಾಳೆ. ಆಶ್ಚರ್ಯ, ಅನುಮಾನ, ಜುಗುಪ್ಸೆಗಳಿಂದ ಮಗನನ್ನು ವಿಚಾರಿಸಿದಾಗ, 'ಅಪ್ಪ ದಿನಾ ಮಾಡುವುದು ಇದೇ ಕೆಲಸ, ನಾನು ಅದನ್ನೇ ಕಲಿಯುತ್ತಿದ್ದೇನೆ' ಎನ್ನುತ್ತಾನೆ. ಹೀಗಾಗಿ ತನ್ನ ಗಂಡ ಬ್ರಾಹ್ಮಣನಲ್ಲ, ಹೊಲೆಯರ ಜಾತಿಗೆ ಸೇರಿದವನೆಂದು ತಿಳಿಯುತ್ತದೆ. ನಾನು ಮೋಸದಿಂದ ಜಾತಿ ಭ್ರಷ್ಟಳಾದ ಬಗ್ಗೆ ಕೋಪಗೊಂಡ ತಾಯಿ ಮಗನನ್ನು ಹಿಡಿದು ಬಡಿಯಲು ಮುಂದಾಗುತ್ತಾಳೆ. ತಾಯಿಯ ರೌದ್ರಾವತಾರಕ್ಕೆ ಹೆದರಿದ ಹುಡುಗ ತಪ್ಪಿಸಿಕೊಂಡು ಓಡುತ್ತಾನೆ. ಕೂಡಲೇ ಕಲ್ಲೊಂದನ್ನು ತೆಗೆದು ಅವನೆಡೆಗೆ ಬಲವಾಗಿ ಬೀಸುತ್ತಾಳೆ. ಅದು ಹುಡುಗನ ತಲೆಗೆ ಬಡಿಯುತ್ತದೆ. ತಲೆಯೊಡೆದು ರಕ್ತ

ಸೋರುತ್ತಿದ್ದರೂ ಪ್ರಾಣಭಯದಿಂದ ಓಡಿ ಹೋಗಿ ಎತ್ತಲೋ ತಲೆಮರೆಸಿಕೊಳ್ಳುತ್ತಾನೆ. ಮಗನನ್ನು ಕಾಣದ ಇವಳು ಅದೇ ಆವೇಶದಲ್ಲಿ ಗಂಡನನ್ನು ಅರಸಿ ಹೊರಡುತ್ತಾಳೆ. ಇವಳ ಬರುವನ್ನೇ ನೋಡಿ ಭೀತಿಗೊಂಡ ಅವನು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಕೆದರಿದ ತಲೆ, ಉರಿಗಣ್ಣು–ಹೀಗೆ ಭಯಂಕರವಾಗಿ ಕಾಣುತ್ತಿದ್ದ ಇವಳು ಅವನು ಎಲ್ಲಿ ಹೊಕ್ಕರೂ ಬಿಡುವಂತೆ ಕಾಣುವುದಿಲ್ಲ. ದಾರಿಕಾಣದೆ ಅವನು ಕೋಣದ ಹೊಟ್ಟೆಯೊಳಗೆ ಹೋಗಿ ಸೇರಿಬಿಡುತ್ತಾನೆ. ಅವಮಾನ, ನಿರಾಸೆ, ದುಃಖಗಳಿಂದಾಗಿ ಅವಳು ಊರಿಗೆ ಹಿಂದಿರುಗುವುದಿಲ್ಲ.

ಗಂಡ–ಮಕ್ಕಳನ್ನು ಕಳೆದುಕೊಂಡಿದ್ದೂ ಅಲ್ಲದೆ ತೌರನ್ನು ಮರೆತು ಹೇಗೊ ಒಂದೆಡೆ ಕಾಲಕಳೆಯುತ್ತಿರುತ್ತಾಳೆ. ಒಂದು ದಿನ ಆಗಲೇ ಸಂಜೆ: ಮುತ್ತುರತ್ನಗಳನ್ನು ಮಾರುತ್ತಾ ಯಾರೋ ಒಬ್ಬ ಯುವಕ ಇವಳ ಮನೆ ಕಡೆಗೆ ಬರುತ್ತಾನೆ. ಆ ಯುವಕನನ್ನು ಕಂಡ ಕೂಡಲೇ ಇವಳ ಮನಸ್ಸು ಚಂಚಲವಾಗುತ್ತದೆ. ಹತ್ತಾರು ವರ್ಷಗಳಿಂದ ಅದುಮಿಟ್ಟುಕೊಂಡಿದ್ದ ಆಸೆ–ಆಕಾಂಕ್ಷೆಗಳು ಒಮ್ಮೆಗೇ ಕೆರಳುತ್ತವೆ. ಯಾಕೊ ಏನೋ ಕ್ಷಣಾರ್ಧದಲ್ಲಿ ಆ ಯುವಕನಲ್ಲಿ ಆಕರ್ಷಿತಳಾಗುತ್ತಾಳೆ. ಅವನೊಡನೆ ಯಾವುದೋ ಸಂಬಂಧ ಬಲವಾಗಿ ಕಾಡಿದಂತಾಗುತ್ತದೆ. ಹೀಗಾಗಿ ವ್ಯಾಪಾರ ಮಾಡುವ ನೆವದಲ್ಲಿ ಅವನನ್ನು ಕರೆದು ಮಾತಾಡಿಸುತ್ತಾಳೆ. ಕೊನೆಗೆ ಸಂಜೆಯ ನೆವವೊಡ್ಡಿ ತನ್ನ ಮನೆಯಲ್ಲೇ ಆ ರಾತ್ರಿ ಉಳಿಸಿಕೊಳ್ಳುತ್ತಾರೆ. ತನ್ನ ಹತ್ತಾರು ವರ್ಷದ ಕಾಮದಾಹ ಈ ಯುವಕನಿಂದ ಆ ರಾತ್ರಿ ತೀರುತ್ತದೆ.

ಬೆಳಗ್ಗೆ ಎದ್ದು ಸ್ನಾನ ಮಾಡುವಾಗ ಅವನ ಬೆನ್ನು, ತಲೆಗಳನ್ನು ಉಜ್ಜುತ್ತಾಳೆ. ಅವನ ತಲೆಯ ಮೇಲೆ ಯಾವುದೋ ಗಾಯದಿಂದಾಗಿ ಕೂದಲು ಬೆಳೆಯದೆ ಇರುವುದನ್ನು ಗಮನಿಸುತ್ತಾಳೆ. ತಟ್ಟನೆ ತನ್ನ ಮಗನ ನೆನಪು ಬರುತ್ತದೆ. ಕುತೂಹಲಕ್ಕಾಗಿ ಈ ಗಾಯ ಹೇಗಾಯಿತು? ಏಕಾಯಿತು? ಎಂದು ವಿಚಾರಿಸುತ್ತಾಳೆ. ಅವನು ಹಿಂದಿನದ್ದೆಲ್ಲವನ್ನೂ ವಿವರವಾಗಿ ಹೇಳುತ್ತಾನೆ. ಇವನೇ ತನ್ನ ಮಗನೆಂದು ತಿಳಿದು ಹೋಗುತ್ತದೆ. ಜಾತಿಭ್ರಷ್ಟಳಾಗಿದ್ದಲ್ಲದೆ ತನ್ನ ಮಗನನ್ನೇ ತಾನು ಕೂಡಿದ ಪಾಪಿಯಾದೆನಲ್ಲ ಎಂಬ ಜಿಗುಪ್ಸೆಯಿಂದ ಕೆಂಡಕೊಂಡವಾಗಲು ನಿರ್ಧರಿಸುತ್ತಾಳೆ. ಆತ್ಮಾರ್ಪಣೆಗೆ ಮುನ್ನ ಇಷ್ಟಕ್ಕೆಲ್ಲ ಕಾರಣನಾದ ಕೋಣನ ರೂಪದ ತನ್ನ ಗಂಡನನ್ನು ಮಾರಿಯಾಗಿ ಜನ್ಮ ತಳೆದು ಬಲಿ ತೆಗೆದುಕೊಳ್ಳುವುದಾಗಿ ಶಪಥ ಮಾಡಿ ಬೆಂಕಿಗೆ

ಹಾರುತ್ತಾಳೆ. ನಂತರ ಮಾರಿ ದೇವತೆಯಾಗಿ ಹುಟ್ಟಿ ಕೋಣವನ್ನು ಬಲಿತೆಗೆದುಕೊಳ್ಳುತ್ತಾಳೆ.

ಇಂತಹವೇ ಆಶಯಗಳುಳ್ಳ ಹಲವು ಮಾರಿ ಪುರಾಣಗಳಲ್ಲಿ ಬರುವ ಕಥೆಗಳು ವರ್ಣಸಂಕರ ಮತ್ತು ಅದರ ಪರಿಣಾಮಗಳನ್ನೇ ವಿವರಿಸುತ್ತವೆ. ಶ್ರೇಣಿ ವ್ಯವಸ್ಥೆಯಲ್ಲಿ ಅನುಲೋಮ ವಿವಾಹ ಪದ್ಧತಿಯನ್ನು ಕಟ್ಟುನಿಟ್ಟಾಗಿ ನಿಷೇಧಿಸಿರುವುದು ಕಂಡುಬರುತ್ತದೆ. ಮಾತೃಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣಿನ ಸ್ವಾತಂತ್ರ್ಯ ಮತ್ತು ಸಮಾನತೆ, ಅಧಿಕಾರ ಹಾಗು ನಿರ್ಣಯಗಳನ್ನು ಮಾಡುವ ಹಕ್ಕು ಹೆಣ್ಣಿಗಿತ್ತು. ಆದರೆ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣಿನ ಸರ್ವಸಮಾನತೆಯ ಹಕ್ಕನ್ನು ಕಸಿದುಕೊಂಡದ್ದರ ಪರಿಣಾಮವಾಗಿ ಮಾರಮ್ಮನ ಈ ಬಗೆಯ ನಡವಳಿಕೆ ಕಂಡು ಬರುತ್ತದೆ. ಕರ್ನಾಟಕದ ಬಲಿ ಆಚರಣೆಯನ್ನು ಪಡೆಯುವ ಗ್ರಾಮ ದೇವತೆಗಳ ಹಬ್ಬಗಳು ಈಗೀಗಂತು ತುಂಬಾ ವಿಜೃಂಭಣೆಯಿಂದಲೇ ನಡೆಯುತ್ತವೆ.

ಮಾರಿ ಜಾತ್ರೆಯ ಆಚರಣಾ ವಿಧಾನ : ಕರ್ನಾಟಕದಲ್ಲಿ ಉತ್ತರಕನ್ನಡದ ಶಿರಸಿ ಮತ್ತು ಶಿವಮೊಗ್ಗ ಜಿಲ್ಲೆಯ ಸಾಗರದ ಮಾರಿ ಜಾತ್ರೆಗಳು ರಾಜ್ಯದಲ್ಲಿ ಐತಿಹಾಸಿಕ ಪ್ರಸಿದ್ದಿ ಪಡೆದಿವೆ. ಸಾಗರದ ಮಾರಿಕಾಂಬೆ ಜಾತ್ರೆ ಪ್ರತೀ ಮೂರು ವರ್ಷಗಳಿಗೊಮ್ಮೆ ಜರುಗುತ್ತದೆ. ಪಶ್ಚಿಮ ಘಟ್ಟಗಳ ಬದಿಗೆ ಕಂಗೊಳಿಸುವ ಮಲೆನಾಡಿನ ಸುಂದರ ಪರಿಸರದ ಸಾಗರದ ಮಾರಿಕಾಂಬೆಯನ್ನು ಆದಿ ಶಂಕರಾಚಾರ್ಯರು ಪ್ರತಿಷ್ಠಾಪಿಸಿದ್ದಾರೆ ಎಂದು ಹೇಳಲಾಗಿದೆ. ಕೆಳದಿ–ಇಕ್ಕೇರಿ ಸಂಸ್ಥಾನದ ಸದಾಶಿವನಾಯಕ ತಮ್ಮ ಯುದ್ಧ ಸಾಮಗ್ರಿಗಳನ್ನು ಈ ಊರಿನಲ್ಲಿ ಸಂಗ್ರಹಿಸಿ, ಅವುಗಳ ರಕ್ಷಣೆಗಾಗಿ ಈ ದೇವತೆಯ ಪೂಜೆ ನಿರಂತರವಾಗಿ ನಡೆಯಲೆಂದು ಜಾತ್ರೆ–ಉತ್ಸವಗಳನ್ನು ಮಾಡಲು ಪ್ರೋತ್ಸಾಹಿಸಿದರೆಂದು ಪ್ರಸಿದ್ಧಿ ಇದೆ. ಆದ್ದರಿಂದ ಸಾಗರದ ಮಾರಿಯನ್ನು ದಂಡಿನ ಮಾರಮ್ಮ ಎಂದೇ ಕರೆಯಲಾಗಿದೆ. ಎಲ್ಲ ಗ್ರಾಮದೇವತೆಗಳ ಬಗೆಗೆ ಹೊಂದಿರುವಂತೆ ಇಲ್ಲಿಯೂ ಮಾರಕ ಪ್ಲೇಗ್ ಮತ್ತು ಕಾಲರಾ ಗಳಂತಹ ಸಾಂಕ್ರಾಮಿಕ ರೋಗಗಳಿಂದ ಸಂಪೂರ್ಣವಾಗಿ ಕಾಪಾಡಿದ ದಿವ್ಯ ಶಕ್ತಿಯ ಬಗೆಗೆ ಜನಪದರಲ್ಲಿ ಗಾಢವಾದ ಭಕ್ತಿ ಮನೆಮಾಡಿದೆ.

ಈ ಹಬ್ಬದಲ್ಲಿ ಬಹುಪಾಲು ಭಾಗವಹಿಸಿ ವಿಜೃಂಭಣೆಯಿಂದ ಆಚರಿಸುವವರು ಶ್ರೇಣೀಕೃತ ಜಾತಿವ್ಯವಸ್ಥೆಯಲ್ಲಿನ ತಳಸಮುದಾಯದವರು. ಅಬ್ರಾಹ್ಮಣರು

ಪೂಜಿಸುವ ಇಲ್ಲಿ ಮಾರಿ ಜಾತ್ರೆಗೆ ಸಂಬಂಧಿಸಿದ ಎಲ್ಲ ಕಾರ್ಯಗಳನ್ನು ವಿವಿಧ ಜಾತಿ ಸಮಾಜಗಳಿಗೆ ಹಂಚಿಕೆ ಮಾಡಲಾಗಿದೆ. ಇದು ಶ್ರೇಣಿ ಸಮಾಜದ ಯಥಾಸ್ಥಿತಿಯನ್ನು ಕಾಪಾಡಿಕೊಂಡು ಬರುವ ಮೇಲ್ಜಾತಿಗಳ ವ್ಯವಸ್ಥಿತ ಹುನ್ನಾರವೆಂದೇ ಪ್ರಗತಿಪರ ಚಿಂತನೆಗಳು ಭಾವಿಸುತ್ತವೆ. ಇದೇನೆ ಇದ್ದರೂ ಅನಕ್ಷರಸ್ಥ ತಳ ಸಮಾಜ ಸಮುದಾಯಗಳು ತೀವ್ರ ಶ್ರದ್ಧೆ ಮತ್ತು ಭಕ್ತಿಯಿಂದ ತಮ್ಮ ಪಾಲಿನ ಕಾಯಕವನ್ನು ನಿರ್ವಹಿಸುತ್ತವೆ. ಮಾತ್ರವಲ್ಲ ಅದು ಎಷ್ಟರಮಟ್ಟಿಗೆ ಮಾನಸಿಕವಾಗಿ ಗಟ್ಟಿಗೊಂಡಿದೆ ಎಂದರೆ ತಮ್ಮ ಈ ಕಾಯಕವನ್ನು ಹಕ್ಕಾಗಿ ಪ್ರತಿಪಾದಿಸುವುದು ವಿಚಿತ್ರವೆನಿಸುತ್ತದೆ. ಬಹುಶ ಅಕ್ಷರ ಮತ್ತು ಅರಿವಿನ ಕೊರತೆಯೇ ಇದಕ್ಕೆ ಮೂಲವೆಂಬುದು ನಿಶ್ಚಿತ.

**ಉಪ್ಪಾರರು:** ಇಲ್ಲಿ ಎರಡು ದೇವಸ್ಥಾನಗಳಿವೆ. ಗಂಡನ ಮನೆಯಲ್ಲಿ ಉಪ್ಪಾರರು ಪೂಜಾರಿಗಳಾಗಿದ್ದಾರೆ. ಮಾರಮ್ಮನ ಮೂರ್ತಿ ಮಾಡಲು ಮರ ಕಡಿಯುವವರು ಹಾಗೂ ಅಂಕೆ ಹಾಕುವವರು ಇವರೇ. ತಮ್ಮ ಬೀದಿಯಲ್ಲಿ 'ಚಿಕ್ಕಮ್ಮ'ನನ್ನು ಸ್ಥಾಪಿಸುತ್ತಾರೆ. ದೇವಿಯ ಉತ್ಸವ ತವರು ಮನೆಯಿಂದ ಹೊರಡುವಾಗ 'ಪೋತರಾಜ' ಪಾತ್ರ ನಿರ್ವಹಿಸಿ ಚಾಟಿ ಸೇವೆಯನ್ನು ಇವರೇ ಮಾಡುತ್ತಾರೆ.

**ಗುಡಿಗಾರರು:** ಮರ ಕೆತ್ತಿ ವಿಗ್ರಹ ಮಾಡುವವರು.

**ಭೋವಿಗಳು:** ಊರಾಚೆ ಬಿಟ್ಟ ಮಾರಿಯ ಮೂರ್ತಿಯನ್ನು ವಾಪಾಸ್ಸು ತರುತ್ತಾರೆ.

**ಕೊಂಕಣಿ ಆಚಾರ್ಯರು:** ದೇವಿಯ ಅಲಂಕಾರದ ಸಿದ್ಧತೆ ಇವರದು.

**ಮಡಿವಾಳರು:** ಮಾರಿ ದೇವಸ್ಥಾನಗಳ ಚಪ್ಪರವನ್ನು ಹಾಕುವವರು.

**ಭಾವಕ್ಷತ್ರಿಯರು:** ಮಾರಮ್ಮನಿಗೆ ಬಟ್ಟೆ ತೊಡಿಸಿ ಅಲಂಕಾರ ಮಾಡುವವರು.

**ಹರಿಜನರು:** ದೇವಿಯ ಉತ್ಸವದಲ್ಲಿ ಆರಾಧನಾ ವಿಧಿಗಳಲ್ಲಿ ಕೋಣನ ಪೂರ್ತಿ ಜವಾಬ್ದಾರಿ ಇವರದ್ದು.

**ಚಮ್ಮಾರರು:** ಉತ್ಸವದಲ್ಲಿ ದೀಪ ಹಿಡಿಯುವುದು ಮತ್ತು ಇತರೆ ಕಾರ್ಯಗಳನ್ನು ಇವರು ನೆರವೇರಿಸಬೇಕು.

**ಅಸಾದಿ:** ಅಸ್ಪೃಶ್ಯ ಹೊಲೆಯನಾದ ಇವನು ಆರಾಧನಾ ವಿಧಿಗಳಲ್ಲಿ ಪಾಲ್ಗೊಳ್ಳಬೇಕು. ಮಾರಮ್ಮನ ಆರಾಧಕನಾಗಿ ದೀಕ್ಷೆ ಪಡೆದ ನಂತರ 'ಅಸಾದಿ'ಯಾಗಿ ದೇವಿಯ ಸೇವೆಗೆ ತನ್ನ ಜೀವನ ಮುಡಿಪಾಗಿಡುತ್ತಾನೆ. ಮಾರಿ ಆರಾಧನಾ ವಿಧಿಗೆ

ಸಂಬಂಧಿಸಿದ ಮಾತಂಗಿ, ಮಾರಾಣಿ ಮುಂತಾದ ಪಾತ್ರಗಳನ್ನು ನಿರ್ವಹಿಸುತ್ತಾರೆ. ಹಬ್ಬ ನಡೆಯುವ ಏಳು ದಿನ ದೇವಿ ಗುಡಿಯ ದೀಪ ಹಚ್ಚಿ ಕಾಪಿಡುತ್ತಾರೆ. ದೇವಿಗೆ ಹೊಗಳುವ ಕಾಯಕ ಇವರದು.

**ಶೋಷಿತ ವಿನ್ಯಾಸ:**

ವರ್ಣಾಶ್ರಮ ಪದ್ಧತಿಯ ಬಳುವಳಿಯ ರೂಪವೇ ಈ ಮಾರಿಜಾತ್ರೆ. ಒಂಭತ್ತು ದಿನಗಳ ಈ ಬಗೆಯ ವಿಧಾನಗಳಲ್ಲಿ ಮಾರಿಹಬ್ಬದ ಕೆಲಸಗಳ ಹಂಚಿಕೆ ಸಾಮಾನ್ಯವಾಗಿ ಎಲ್ಲ ಕಡೆ ನಡೆಯುತ್ತದೆ. ಇದು ವೈದಿಕ ಪ್ರಣೀತ ಅಸಮಾನ ನೆಲೆಗಳ ಸಾಮಾಜಿಕ ವ್ಯವಸ್ಥೆಯನ್ನು ಗಟ್ಟಿಗೊಳಿಸುವುದೇ ಆಗಿದೆ. ಬಹಳ ವಿಚಿತ್ರವೆಂದರೆ ಈ ಬಗೆಯ ವಿವಿಧ ಕಾಯಕಗಳಲ್ಲಿ ಕರ್ತವ್ಯ ನಿರ್ವಹಿಸುವ ತಳಸಮಾಜಗಳಿಗೆ ಜಾತಿವ್ಯವಸ್ಥೆ ತಂದೊಡ್ಡಿರುವ ಕ್ರೌರ್ಯಗಳ ಅರಿವು ಇಲ್ಲದೆಯೇ ಅಭಿನಯಿಸುತ್ತಾರೆ. ಅನಕ್ಷರತೆ ಅಜ್ಞಾನ, ಮೌಢ್ಯ, ಕಂದಾಚಾರಗಳ ಪಳಯುಳಿಕೆಯಾಗಿ ಈ ಜಾತ್ರೆಗಳನ್ನು ನೋಡುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗುವುದಿಲ್ಲ. ಪಾಳೆಗಾರಿಕೆ ವ್ಯವಸ್ಥೆಯ ಸಾಮಾಜಿಕ ಈ ರಚನೆಗಳು ಜಾತಿ ವ್ಯವಸ್ಥೆಯನ್ನು ಅತ್ಯಂತ ಜತನವಾಗಿ ಪೋಷಿಸುತ್ತದೆ. ಶೋಷಣೆಯ ಆಶಯಗಳನ್ನು ತನ್ನ ಗರ್ಭದಲ್ಲಿಟ್ಟುಕೊಂಡಿರುವ ಈ ಆಚರಣಾತ್ಮಕ ಆರಾಧನೆ ತಳಸಮುದಾಯಗಳಿಗೆ ಶಾಪವೇ ಹೌದು. ತಮ್ಮ ನಿತ್ಯದ ಬದುಕಿನ ಜಂಜಾಟಗಳಿಗೆ ಆರ್ಥಿಕ ಸ್ಥಿತಿ ಭಯಾನಕವಾಗಿದ್ದರೂ ಈ ಹಬ್ಬದ ಮೂಲಕ ಆರ್ಥಿಕ ಶೋಷಣೆಯ ಜಾಲಕ್ಕೆ ಸಿಲುಕಿಕೊಳ್ಳುವುದನ್ನು ಅರಿಯದಿರುವುದು ಅಸಮಾನ ವ್ಯವಸ್ಥೆಯ ಉಳಿವೇ ಆಗಿದೆ. ಭಾರತೀಯ ಸಾಮಾಜಿಕ ರಚನೆಯಲ್ಲಿ ನೇರ ಶೋಷಣೆಗಿಂತ ಸಾಂಸ್ಕೃತಿಕ ಮತ್ತು ಅಂಧ ಶ್ರದ್ಧೆಯ ಧಾರ್ಮಿಕ ಆಚರಣೆಗಳ ಒಳಗೆ ಹರಿಯಬಿಟ್ಟು ಆರ್ಥಿಕ ಶೋಷಣೆಯ ನೆಲೆಗಳನ್ನು ಭದ್ರಪಡಿಸಲಾಗಿದೆ. ಆದ್ದರಿಂದಲೇ ಭಕ್ತಿಯ ಪರಾಕಾಷ್ಠತೆಯ ಹೆಸರಿನಲ್ಲಿ ತಳ ಸಮಾಜಗಳು ತಮಗೆ ಅರಿವಿಲ್ಲದಂತೆ ಶೋಶಣೆಯ ವ್ಯವಸ್ಥೆಗೆ ಬಂಧಿಯಾಗಿದ್ದಾರೆ ಎನ್ನಬೇಕು. ಹೀಗಾಗಿ ಆಚರಣೆಗಳಲ್ಲಿ ನಂಬಿಕೆಗಳನ್ನು ಪ್ರಭಾವಿಸಿದ ಈ ಪರಿಯ ವ್ಯವಸ್ಥೆಗೆ ಪ್ರಶ್ನಿಸದೇ ಶತಮಾನಗಳಿಂದ ಅನುಸರಣೆಯಲ್ಲಿ ಅನುಕರಣೆಯಲ್ಲಿ ಅನಕ್ಷರಸ್ಥ ದುಡಿಯುವ ವರ್ಗಗಳು ಆರ್ಥಿಕ ಶೋಷಣೆಯಲ್ಲಿ ನಲುಗುತ್ತಿವೆ.

**ಸಾಂಸ್ಕೃತಿಕ ಸ್ವರೂಪ:**

ಆದಿಮ ಸಂಸ್ಕೃತಿಯಿಂದ ಹೊತ್ತು ತಂದ ಅನೇಕ ಆಶಯಗಳು ಜಾನಪದದಲ್ಲಿ ಅಭಿವ್ಯಕ್ತಿ ಪಡೆಯುತ್ತವೆ. ಮಾರಿಯ ಈ ಹಬ್ಬದಲ್ಲಿ ಕೋಣನ ಬಲಿಯ ಆಚರಣೆಯು ಕೂಡ ಒಂದರ್ಥದಲ್ಲಿ ಸಾಂಸ್ಕೃತಿಕ ವಿದ್ಯಮಾನವೆ. ಮಾಂಸ ಆಹಾರದ ಸಮುದಾಯಗಳು ಈ ಹಬ್ಬಗಳಲ್ಲಿ ಅತ್ಯಂತ ಉತ್ಸಾಹದಲ್ಲಿ ಕೋಣ, ಕುರಿ, ಕೋಳಿ, ಮೇಕೆ ಮುಂತಾದ ಪ್ರಾಣಿಗಳನ್ನು ದೇವತೆಗೆ ಹರಕೆ ಒಪ್ಪಿಸಿ ಬಲಿ ಆಚರಿಸುತ್ತವೆ. ಮಾಂಸ ಆಹಾರ ಸೇವನೆಯನ್ನು ದೇವರ ಹೆಸರಿನಲ್ಲಿ ನೈವೇದ್ಯ ಮಾಡುವ ಈ ಮೂಲಕ ಭಕ್ತಿಭಾವಗಳನ್ನು ಸಹಜವಾಗಿ ಅತಿಮಾನುಷಶಕ್ತಿಗೆ ಅರ್ಪಿಸುವುದು ಎದ್ದು ಕಾಣುತ್ತದೆ. ಘಟೆ ತರುವುದು, ಪೋತರಾಜನ ಕುಣಿತ, ತಮಟೆ ಬಾರಿಸುವುದು, ಅಸಾದಿ ಬೈಗುಳ ಮುಪ್ಪುರಿಗೊಂಡು ವಿಭಿನ್ನ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತವೆ. ನಾಟಕ, ಯಕ್ಷಗಾನ, ರಾಷ್ಟ್ರಮಟ್ಟದ ಕುಸ್ತಿ ಪಂದ್ಯಾವಳಿಗಳು ಈ ಜಾತ್ರೆಯ ಜನರಂಜನೆಯನ್ನು ಹೆಚ್ಚಿಸಿವೆ. ಈ ಬಗೆಯ ಚಟುವಟಿಕೆಗಳಲ್ಲಿ ಸಮುದಾಯಗಳ ಪಾಲ್ಗೊಳ್ಳುವಿಕೆ ಕೂಡಿಬಾಳುವ ಸಾಮಾಜಿಕ ವಿನ್ಯಾಸ ಕೂಡ ಆಗಿರುವುದು ಇಲ್ಲಿನ ವಿಶೇಷ. ಬಂಧು-ಬಾಂಧವರನ್ನ, ಕುಟುಂಬದ ಹೆಣ್ಣುಮಕ್ಕಳನ್ನ ಹಬ್ಬಕ್ಕೆ ಬರಮಾಡಿಕೊಂಡು ಕೆಲವು ದಿನ ತಮ್ಮೆಲ್ಲ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಸಂಭ್ರಮದಲ್ಲಿ ಹಬ್ಬ ಆಚರಿಸುವುದು ಕಂಡುಬರುತ್ತದೆ. ಅಸಾದಿ ಪದಗಳಲ್ಲಿ ಮೇಲ್ವರ್ಗಗಳ ಕುರಿತ ಅಸಹನೆಯನ್ನು ವ್ಯಕ್ತಮಾಡುವ ಸ್ವಾತಂತ್ರ್ಯ ಇಲ್ಲಿ ಮಾತ್ರ ಕಂಡುಬರುತ್ತದೆ. ಉಳಿದಂತೆ ಶೋಷಿತ ತಳಸಮುದಾಯಗಳು ಗೌಡ, ಪಟೇಲ ಮತ್ತು ಶಾನುಭೋಗರ ಹಿಡಿತಕ್ಕೆ ಸಿಕ್ಕಿ ನರಳಿದ ನೋವುಗಳನ್ನು ಬೈಗುಳದ ಹಾಡಾಗಿ ಅಭಿವ್ಯಕ್ತಿಸುತ್ತಾರೆ. ಇವು ಪ್ರತ್ಯೇಕ ಅಧ್ಯಯನಕ್ಕೆ ವಸ್ತುಗಳಾಗುತ್ತವೆ.

**ಆರ್ಥಿಕ ವಿನ್ಯಾಸ:**

ಬಹುತ್ವ ಭಾರತದ ಆರ್ಥಿಕ ಚಲನೆಗಳು ವಿಶಿಷ್ಟವಾಗಿವೆ. ಹತ್ತಾರು ಸಮುದಾಯಗಳು ತಲೆಮಾರುಗಳಿಂದ ತಮ್ಮ ಮನೆತನದ ವೃತ್ತಿಗಳನ್ನು ಮುಂದುವರೆಸುತ್ತವೆ. ಇಲ್ಲಿ ಏಕಮಾದರಿಯ ಆರ್ಥಿಕ ಆಯಾಮ ಇರುವುದಿಲ್ಲ. ಮನುಷ್ಯನ ಮೂಲಭೂತ ಅಗತ್ಯ ಅನಿವಾರ್ಯಗಳಿಗೆ ತಕ್ಕಂಥ ವೃತ್ತಿಗಳನ್ನು ಪರಸ್ಪರ ಪೂರಕವಾಗಿ ನಿರ್ವಹಿಸಿದ್ದಾರೆ. ಇದುವೇ ಭಾರತದ ಸಂಕೀರ್ಣ ಆರ್ಥಿಕ ಸ್ಥಿತಿಗೆ

ಕಾರಣವಾಗಿದೆ. ಕಸುಬು ಉಪಕಸುಬುಗಳ ಮೂಲಕ ತನ್ನ ಕುಟುಂಬದ ಅಗತ್ಯಗಳನ್ನು ಪೂರೈಸುವ ದಾರಿಗಳು ಬಲು ರೋಚಕವೆನಿಸುತ್ತವೆ. ಹೀಗೆ ಪರಂಪರೆಯಿಂದಲೂ ಸಾಧಿಸಿಕೊಂಡು ಬಂದ ವೃತ್ತಿ ಸಮುದಾಯಗಳು ಕೂಡಿಕೊಂಡು ಆಚರಿಸುವ ಈ ಜಾತ್ರೆಗಳು ಕೇವಲ ಧಾರ್ಮಿಕ ಆಧ್ಯಾತ್ಮಿಕ ಸಂಗತಿಗಳಾಗಿ ಉಳಿದಿಲ್ಲ.

ಸಾಗರದಂಥ ಮಾರಿಜಾತ್ರೆಗಳ ಆರ್ಥಿಕ ವಹಿವಾಟು ಹಲವು ಕೋಟಿಗಳನ್ನು ದಾಟಿದೆ. ಭಕ್ತಿ, ಆರಾಧನೆ, ಆಚರಣೆ, ಸಂಪ್ರದಾಯ, ವಿಧಿ, ನಿಷೇಧಗಳಿಗಲ್ಲದೆ ಖರ್ಚು ಮಾಡುವ ಹೊಸದಾರಿಗಳು ತೆರೆದುಕೊಂಡಿವೆ. ವಾರ್ಷಿಕವಾಗಿ ಕುಟುಂಬಗಳಿಗೆ ಬೇಕಾದ ವಸ್ತು-ಒಡವೆಗಳು, ಬಟ್ಟೆ-ಬರಿಗಳು, ಪೀಠೋಪಕರಣಗಳನ್ನು ಕೊಳ್ಳುವ ವಹಿವಾಟು ಇಲ್ಲಿ ಬಲು ಜೋರು. ಮಕ್ಕಳ ಆಟಿಕೆಗಳು, ಶೃಂಗಾರ ಸಾಮಗ್ರಿಗಳು ಕೂಡ ಜಾತ್ರೆಯಲ್ಲಿ ಮಾರಲ್ಪಡುತ್ತವೆ. ಹಲವು ಲಕ್ಷಗಳ ವಹಿವಾಟಿನ ಮನೋರಂಜನೆಯ ಅಮ್ಯೂಸ್‌ಮೆಂಟ್ ಈ ಜಾತ್ರೆಯ ವಿಶೇಷ. ಸಾಗರದ ಜಾತ್ರೆಯ ವಿಶೇಷವೆಂದರೆ ಯಾವುದೇ ರಾಜಕೀಯ ಪಕ್ಷಗಳ ಬೇಧ-ಭಾವಗಳಿಲ್ಲದೆ ಎಲ್ಲರೂ ಒಟ್ಟಾಗಿ ಕೂಡಿ ಆಚರಿಸುವ ಸಂಪ್ರದಾಯವು ಅನುಕರಣಿಯವಾಗಿದೆ. ಎಲ್ಲ ಮಿತಿಗಳ ನಡುವೆಯೂ ಇಲ್ಲಿ ನೆಲೆಸಿರುವ ಮತ ಧರ್ಮಗಳ ಜನ ಸೌಹಾರ್ದತೆಯಿಂದ ಹಬ್ಬ ಆಚರಿಸುವುದು ಪ್ರಧಾನವಾಗಿ ಇಲ್ಲಿ ಕಂಡುಬರುತ್ತದೆ.

# ಬೌದ್ಧಿಕ ದಾಸ್ಯದ ಬಿಡುಗಡೆಯ ದಾರಿಗಳು

* ಡಾ. ರೋಹಿಣಾಕ್ಷ ಶಿರ್ಲಾಲು

ಭಾರತವನ್ನು ಭಾರತವಾಗಿ ನೋಡಲು ಇರುವ ಸಮಸ್ಯೆಗಳೇನು? ಎನ್ನುವುದನ್ನು ಕುರಿತು ಚಿಂತನೆ ನಡೆಸಿದರೆ, ಭಾರತೀಯರ ಮೇಲೆ ಉಂಟಾಗಿರುವ ವಸಾಹತುಶಾಹಿ ಆಳ್ವಿಕೆಯ ಪರಿಣಾಮವೇ ಮೂಲ ಸಮಸ್ಯೆ ಎನ್ನುವುದು ಅರಿವಾಗುತ್ತದೆ. ವಸಾಹತುಶಾಹಿ ಆಳ್ವಿಕೆಯು ಉಂಟುಮಾಡಿದ ಬೌದ್ಧಿಕ ಪರಿಣಾಮದಿಂದ ನಾವು ಇನ್ನೂ ಮುಕ್ತವಾಗಿಲ್ಲ. ಸ್ವಾತಂತ್ರ್ಯಾನಂತರ ನಮ್ಮ ಶಿಕ್ಷಣವೂ ಸೇರಿದಂತೆ ಬ್ರಿಟಿಷ್ ಅಗತ್ಯಗಳಿಗೆ ಬೇಕಾದಂತೆ ನಿರೂಪಿತಗೊಂಡ ಸಂಗತಿಗಳಿಂದ ನಾವು ಪೂರ್ಣವಾಗಿ ಬಿಡುಗಡೆಗೊಳ್ಳದೇ ಹೋದುದರಿಂದ ಇಂದಿಗೂ ಭಾರತವನ್ನು ನೋಡುವ ಸರಿಯಾದ ದೃಷ್ಟಿಯನ್ನು ನಾವು ಪಡೆಯಲು ಸಾಧ್ಯವಾಗಲಿಲ್ಲ. ಈ ಕುರಿತ ಚರ್ಚೆಗಳು ಬ್ರಿಟಿಷ್ ಆಳ್ವಿಕೆಯ ಕಾಲದಲ್ಲೇ ಆರಂಭವಾಗಿತ್ತು. ಅಂತಹ ತಡೆಗಳನ್ನು ನಿವಾರಿಸಿಕೊಳ್ಳುವ ಪ್ರಯತ್ನವೂ ಆ ಕಾಲಘಟ್ಟದಲ್ಲಿ ಆರಂಭವಾಗಿತ್ತು. ಶ್ರೀ ಅರವಿಂದ, ಶ್ರೀ ಆನಂದ ಕುಮಾರಸ್ವಾಮಿ, ಶ್ರೀ ಧರ್ಮಪಾಲ್ ಮೊದಲಾದ ಚಿಂತಕರು ಭಾರತವನ್ನು, ಭಾರತೀಯ ಮನಗಳನ್ನು ಆವರಿಸಿದ್ದ ಪರಕೀಯತೆಯ ಪೊರೆಬಿಡಿಸಿ ಭಾರತೀಯ ದೃಷ್ಟಿಯನ್ನು ಸರಿಪಡಿಸುವ ಪ್ರಯತ್ನವನ್ನು ಮಾಡಿದರು. ಒಂದು ಶತಮಾನಕ್ಕೂ ಹಿಂದೆ ಆರಂಭಗೊಂಡ ಈ ಪ್ರಯತ್ನ ಇಂದಿಗೂ ಪೂರ್ಣವಾಗಿ ಗುರಿಮುಟ್ಟಿಲ್ಲ. ಆದರೆ ಶತಮಾನಗಳ ಹಿಂದೆ ನಡೆದ ಪ್ರಯತ್ನವನ್ನು ಮರೆಯಬಾರದು.

ಈ ಹಿನ್ನೆಲೆಯಿಂದ ಶ್ರೀ ಆನಂದ ಕುಮಾರಸ್ವಾಮಿ, ಶ್ರೀ ಅರವಿಂದರು ಮತ್ತು ಶ್ರೀ ಧರ್ಮಪಾಲ್ ಇವರುಗಳ ಪ್ರಾತಿನಿಧಿಕ ಪಠ್ಯಗಳು ಭಾರತವನ್ನು ಅರ್ಥೈಸಿಕೊಳ್ಳಲು ಹೇಗೆ ಮಾದರಿಗಳಾಗಬಹುದೆಂದು ಅವಲೋಕಿಸುವ ಒಂದು ಪ್ರಯತ್ನ ಈ ಲೇಖನ. ಇಲ್ಲಿ ಆನಂದ ಕುಮಾರಸ್ವಾಮಿಯವರು 1909 ರಲ್ಲಿ ಬರೆದ "Essays In National Idealism" ಕೃತಿ, 1920–1921 ರ ನಡುವೆ ಶ್ರೀ ಅರವಿಂದರು ಬರೆದ "The Renaissance in India" ಮತ್ತು "The Foundations of Indian

Culture" ಕೃತಿಗಳನ್ನೂ, 1983 ರಲ್ಲಿ ಧರ್ಮಪಾಲ್ ಬರೆದ "The Beautiful Tree" ಕೃತಿಯನ್ನೂ ಪ್ರಾತಿನಿಧಿಕ ಪಠ್ಯಗಳನ್ನಾಗಿ ಇರಿಸಿಕೊಳ್ಳಲಾಗಿದೆ. ಈ ಕೃತಿಗಳು ರಚನೆಯಾದ ಇಷ್ಟು ಕಾಲದ ನಂತರವೂ ಇಲ್ಲಿ ಪ್ರತಿಪಾದಿತವಾದ ವಿಚಾರಗಳಿಗೆ ಮುಪ್ಪು ಬಂದಿಲ್ಲ. ಅವುಗಳ ಮೌಲ್ಯ ಕಡಿಮೆಯಾಗಿಲ್ಲ ಎನ್ನುವುದೇ ಈ ಬರವಣಿಗೆಗಳ ಹಿರಿಮೆ.

**ಆನಂದ ಕುಮಾರಸ್ವಾಮಿ :**

ಆನಂದ ಕುಮಾರಸ್ವಾಮಿ ಶ್ರೇಷ್ಠ ಕಲಾಚಿಂತಕ. ಭಾರತೀಯ ಕಲೆ, ಸಂಸ್ಕೃತಿಯ ಹಿರಿಮೆಯನ್ನು ಪರಿಣಾಮಕಾರಿಯಾಗಿ ಪ್ರಸ್ತುಪಡಿಸಿದವರು. ಪಶ್ಚಿಮ ಪ್ರಭಾವದ ಕುರುಡುಗಣ್ಣಿನಿಂದ ಭಾರತವನ್ನು ನೋಡುತ್ತಾ, ಭಾರತದ ನೈಜತೆಯನ್ನು ಅರಿಯಲಾಗದೇ ಹೋದ ಜನಾಂಗಕ್ಕೆ ಇಲ್ಲಿನ ಇತಿಹಾಸ, ಪುರಾಣ, ಧರ್ಮ, ಜಾನಪದ ಮೊದಲಾದ ಸಂಗತಿಗಳನ್ನು ನೋಡಬೇಕಾದ ನೋಟ ಯಾವುದೆಂದು ತೋರಿಸಿಕೊಟ್ಟ ದಾರ್ಶನಿಕ. ಕಲಾ ದರ್ಶನದ ಮೂಲಕವೇ ಭಾರತೀಯ ರಾಷ್ಟ್ರೀಯತೆಯ ಶ್ರೇಷ್ಟತೆಯನ್ನು ಪ್ರತಿಪಾದಿಸಿ, ಭಾರತೀಯರ ರಾಷ್ಟ್ರೀಯತೆಯ ಭಾವ ಮತ್ತೊಮ್ಮೆ ಪುಟಿದೇಳುವಂತೆ ಮಾಡಿದರು. 50ಕ್ಕಿಂತಲೂ ಅಧಿಕ ಕೃತಿಗಳನ್ನು ರಚಿಸಿದ ಆನಂದಕುಮಾರಸ್ವಾಮಿಯವರು 1909 ರಲ್ಲಿ ಪ್ರಕಟಿಸಿದ "Essays In National Idealism" 15 ಲೇಖನಗಳುಳ್ಳ ಮಹತ್ವದ ಕೃತಿ. ಭಾರತೀಯ ರಾಷ್ಟ್ರೀಯತೆಯ ಶ್ರೇಷ್ಟತೆಯನ್ನು ಪ್ರತಿಪಾದಿಸಿದ ಈ ಕೃತಿಯಲ್ಲಿ ಇಲ್ಲಿ ನಡೆಯುತ್ತಿದ್ದ ರಾಷ್ಟ್ರೀಯ ಹೋರಾಟ, ಇಲ್ಲಿನ ಕಲೆಯ ಗುರಿ, ಇಲ್ಲಿನ ಶಿಕ್ಷಣ, ಸ್ವದೇಶಿ ಮೊದಲಾದ ವಿಷಯಗಳನ್ನು ಕುರಿತು ಚರ್ಚಿಸಿದ ಕೃತಿಯಿದು. ಅವರು ರಾಷ್ಟ್ರೀಯತೆಯ ಮಹತ್ವವನ್ನು ಪ್ರತಿಪಾದಿಸಿದ್ದು ಕಲೆಯ ಕುರಿತ ನಿರೂಪಣೆಯ ಮೂಲಕ. ಅವರೇ ಹೇಳುವಂತೆ "To a few it may appear strange that in a book devoted to the ends of Indian Nationalism, so much space should be given to art, so little said of politics. It is because nations are made by artists and by poets , not by traders and politicians. Arts contains in itself the deepest principles of life, the truest guied to the greastest art, the Art of living. The true life, the ideal of Indian culture is itself a unity and an art, because of its inspiration by one rulling passion, the desire to realise a

spiritual inheritance"ಎನ್ನುತ್ತಾರೆ. The true Nationalist is an Idealist; and for him that deeper causer of the Unrest is the longing for self – realisation" ಎನ್ನುತ್ತಾ ಬೌದ್ಧಿಕ ದಾಸ್ಯದಿಂದ ಬಿಡುಗಡೆಗೊಳ್ಳುವುದು ರಾಷ್ಟ್ರೀಯತೆಯ ಸಾಧನೆ ಎಂದು ಪ್ರತಿಪಾದಿಸುತ್ತಾರೆ. ಭಾರತದ ಸ್ವಾತಂತ್ರ್ಯ ಸಮರವು ಬಹು ತೀವ್ರವಾಗಿಯೇ ನಡೆಯುತ್ತಿದ್ದಾಗ, ಈ ಸಮರದ ಉದ್ದೇಶವೇನು? ಎನ್ನುವುದನ್ನು ಸ್ಪಷ್ಟ ಪಡಿಸಿಕೊಳ್ಳುತ್ತಾರೆ. "India for the Indians ! True; but why?" ಎಂದು ಪ್ರಶ್ನೆ ಮಾಡಿಕೊಳ್ಳುತ್ತಲೇ ಕೇವಲ ರಾಜಕೀಯ ಅಧಿಕಾರಕ್ಕಾಗಿ ಅಥವಾ ಭೌತಿಕ ಲಾಭಕ್ಕಿಂತ, ಭಾರತೀಯರ ಗೆಲುವು ಮಾನವತೆಯ ಗೆಲುವಾಗುತ್ತದೆ ಎನ್ನುವ ಮೂಲಕ ಭಾರತೀಯರ ಸ್ವಾತಂತ್ರ್ಯಕ್ಕೆ ಇರುವ ವಿಶ್ವಕಲ್ಯಾಣದ ಮುಖವನ್ನು ಅನಾವರಣಗೊಳಿಸುತ್ತಾರೆ. ಅದು ಸಾಮ್ರಾಜ್ಯವಾದದ ವಿರುದ್ಧ ರಾಷ್ಟ್ರೀಯವಾದದ ಗೆಲುವು ಎನ್ನುತ್ತಾರೆ. ಬ್ರಿಟಿಷ್ ಸಾಮ್ರಾಜ್ಯವಾದವು ಗುಲಾಮರನ್ನು ಸೃಷ್ಟಿಸಿದರೆ, ಭಾರತೀಯ ರಾಷ್ಟ್ರೀಯವಾದವು ವಿಶ್ವಾತ್ಮಕತೆಯನ್ನು ಬೆಳೆಸುತ್ತದೆ ಎನ್ನುತ್ತಾರೆ. ಭಾರತದ ಸ್ವಾತಂತ್ರ್ಯ ಸಮರದ ಅರ್ಥವನ್ನೇ ವಿಸ್ತರಿಸುತ್ತಾರೆ.

ವಿಶ್ವದ ಹಲವು ರಾಷ್ಟ್ರಗಳು ರೂಪುಗೊಂಡ ಮೂಲಧಾತುವನ್ನು ಗುರುತಿಸುವ ಆನಂದ ಕುಮಾರಸ್ವಾಮಿ ಅವುಗಳಿಗಿಂತ ಭಿನ್ನವಾದ ಮೂಲಧಾತು ಭಾರತೀಯ ರಾಷ್ಟ್ರೀಯತೆಗಿದೆ ಎನ್ನುವುದನ್ನು ನಿದರ್ಶನಾತ್ಮಕವಾಗಿ ಪ್ರಸ್ತುಪಡಿಸುತ್ತಾರೆ. ಐಕ್ಯತೆಯ ಹಲವು ರೂಪಗಳನ್ನು ತೋರಿಸಿಕೊಡುತ್ತಲೇ ಭಾರತದ ಐಕ್ಯತೆಯ ವೈಶಿಷ್ಟ್ಯವನ್ನು ಗುರುತಿಸುತ್ತಾರೆ. "Two essentials of nationality there are - a geographical unity, and a common historic evolution or culture. These two India possesses superabundantly, beside many lesser unities which strenthen the historical tradition. The fact of Indian geographical unity is apparent on the map, and is never, I Think , disputed.The recognition of social unity is at least as evident to the student of Indian culture" ಎನ್ನುತ್ತಾ ಭಾರತೀಯ ಐಕ್ಯತೆಯ ಸ್ವರೂಪದ ಬೇರೆ ಬೇರೆ ಆಯಾಮಗಳನ್ನು ಅದರ ಪೌರಾಣಿಕ, ಜಾನಪದೀಯ ಮೂಲಗಳ ಉದಾಹರಣೆಯೊಂದಿಗೆ ಮಂಡಿಸುತ್ತಾರೆ. ಭಾರತೀಯ ಸಂಸ್ಕೃತಿಯ ಮೂಲಪುರುಷರಾದ ಋಷಿ–ಮುನಿಗಳು ಈ ಐಕ್ಯತೆಯ ಹಿರಿಮೆಯನ್ನು

ಅರಿತಿದ್ದರು. ಈ ಐಕ್ಯತೆಯು ಕೃತ್ರಿಮವಾಗಿ ರೂಪುಗೊಂಡದ್ದಲ್ಲ. ಅದರ ಹಿಂದೆಯೂ ಒಂದು ತಪಸ್ಸಿದೆ. ಈ ತಪಸ್ಸು ಸಾವಿರಾರು ವರ್ಷಗಳಲ್ಲಿ ಫಲಕೊಟ್ಟಿದೆ. ಹಾಗಾಗಿ ಇಲ್ಲಿನ ತೀರ್ಥಕ್ಷೇತ್ರಗಳು ಭೌಗೋಳಿಕವಾಗಿ ದೂರದೂರದಲ್ಲಿದ್ದರೂ ಉತ್ತರ ದಕ್ಷಿಣವೆನ್ನುವ ಬೇಧವಿಲ್ಲದೆ ಭಾರತೀಯರೆಲ್ಲರಿಗೂ ಪವಿತ್ರವಾಗಿದೆ. ಇಲ್ಲಿನ ನದಿಗಳು ಮಂತ್ರದ ರೂಪದಲ್ಲಿ ಉಲ್ಲೇಖವಾಗುತ್ತಲೇ ಭಾರತವನ್ನೆಲ್ಲ ಬೆಸೆಯುತ್ತದೆ. " Is it for nothing that India's sacred shrines are many and far apart;that one who would visit more than one or two of these must pass over hundreds of miles of Indian soil?. . . . .Is there no meaning in the sacred reverence for the Himalayas which every Indian feels? . . . .Is the passionate adoration of the Indian people for the Gangaes thrown away? How much is involved in such phrases as 'The Seven Great Rivers'(of India)! ( ಓಂ ಗಂಗೇಚ ಯಮುನೇ ಚೈವಾ . . . ) The Buddhist in Ceylon uses the same prayer on a similar occasion" ಎಂದು ಸಾಂಸ್ಕೃತಿಕ ಐಕ್ಯತೆಯ ವಿಸ್ತಾರದ ವೈಶಿಷ್ಟ್ಯವನ್ನು ನಿರೂಪಿಸುತ್ತಾರೆ. ಈ ಐಕ್ಯತೆಯೇ ಭಾರತವನ್ನು ರಾಷ್ಟ್ರವನ್ನಾಗಿಸಿರುವುದರ ಕಡೆಗೆ ಗಮನ ಸೆಳೆಯುತ್ತಾರೆ. ಭರತಭೂಮಿ ಎನ್ನುವ ಕಲ್ಪನೆ ಮತ್ತು ಭಾರತೀಯ ಸಂಸ್ಕೃತಿ ಹೇಗೆ ಅವಿಚ್ಛಿನ್ನವಾಗಿ ಬೆಸೆದಿದೆ ಎನ್ನುವುದಕ್ಕೆ ಶ್ರೀಲಂಕಾದ ಉದಾಹರಣೆಯನ್ನು ನೀಡುತ್ತಾರೆ. ಆ ಮೂಲಕ ಈ ಸಂಸ್ಕೃತಿ ಹೇಗೆ ಎಲ್ಲರನ್ನೂ ಬೆಸೆದಿದೆ ಎನ್ನುವುದನ್ನು ನಿರೂಪಿಸುತ್ತಾರೆ. " . . . And just in such wise are all the different parts of India bound together by a common historical tradition and ties of spiritual kinship;none can be spared, nor can any live independent of the other" ಎನ್ನುತ್ತಾ ಇಲ್ಲಿನ ನೆಲ, ಜಲ, ಸಂಸ್ಕೃತಿಯು ಹೇಗೆ ಎಲ್ಲವನ್ನೂ ಬೆಸೆದಿದೆ? ಮತ್ತು ಆ ಸೂತ್ರ ಯಾವುದೆನ್ನುವುದನ್ನು ಎತ್ತಿ ತೋರಿಸುತ್ತಾರೆ. ಪಶ್ಚಿಮ ಭಾರತದೊಳಗೆ ಸ್ಥಾಪಿಸಿರುವ ಸಾಮ್ರಾಜ್ಯವನ್ನು ಮನುಕುಲದ ಕಳಂಕವೆಂದೇ ಗುರುತಿಸುತ್ತಾರೆ. ಈ ಗ್ರಂಥದಲ್ಲಿ ಭಾರತೀಯ ಕಲೆಯ ಬಗೆಗಿನ ಚಿಂತನೆಯನ್ನು ಹಾಗೂ ಭಾರತೀಯ ಶಿಕ್ಷಣದ ಬಗೆಗಿನ ಚರ್ಚೆಯನ್ನು ಪ್ರತ್ಯೇಕವಾಗಿಯೇ ಪರಿಶೀಲಿಸಬೇಕು. ಆದರೆ ಇಡೀ ಕೃತಿಯ ಸಾರವೇ ಭಾರತೀಯ ರಾಷ್ಟ್ರೀಯತ್ವದ ಸೌಂದರ್ಯದ ವಿಶ್ಲೇಷಣೆಯಾಗಿದೆ ಎನ್ನಬಹುದು. ಭಾರತದ ರಾಷ್ಟ್ರೀಯತೆಯೇ ಭಾರತೀಯ ಸಂಸ್ಕೃತಿಯನ್ನು

ಶ್ರೀಮಂತಗೊಳಿಸಲು ಕಾರಣ. ಯಾಕೆಂದರೆ ಪಶ್ಚಿಮದಂತೆ ಇಲ್ಲಿನ ರಾಷ್ಟ್ರೀಯತೆ ರಾಜಕೀಯ ಚೌಕಟ್ಟಿಗೆ ಬಂಧಿಯಾಗದೆ, ಸಾಂಸ್ಕೃತಿಕ ಸ್ವರೂಪದ ನೆಲೆಗಟ್ಟಿನ ಮೇಲೆ ನಿಂತಿತು. ಸಾಂಸ್ಕೃತಿಕ ಹಾಗೂ ಕಲಾತ್ಮಕ ಪ್ರಜ್ಞೆಯೇ ತಳಪಾಯ. ಈ ಸೂಕ್ಷ್ಮತೆಯನ್ನು ಅರಿಯದೇ ಹೋದರೆ ಭಾರತೀಯತೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಇಲ್ಲಿನ ಧಾರ್ಮಿಕತೆ, ಆಧ್ಯಾತ್ಮಿಕತೆಯ ಬೆಲೆಯನ್ನು ಅರಿಯದೇ ಹೋದರೆ, ಕಲೆಯನ್ನು ತಿಳಿಯದೇ ಹೋದರೆ ಭಾರತ ಮತ್ತೊಂದು ಯುರೋಪ್ ಆಗುತ್ತದೆ. ಬ್ರಿಟಿಷ್ ದಾಸ್ಯಕ್ಕೆ ಸಿಲುಕಿ ತನ್ನ ಸ್ಮರಣೆಯನ್ನು ಕಳೆದುಕೊಂಡು ಬುದ್ಧಿ-ಭಾವಗಳು ವಿದೇಶಿಯಾಗುತ್ತಿದ್ದ ಕಾಲಕ್ಕೆ ಭಾರತವನ್ನು ನೋಡುವ ಬಗೆಯನ್ನು ಬಗೆದು ತೋರಿಸಿದವರು ಆನಂದ ಕುಮಾರಸ್ವಾಮಿಯವರು.  ಭಾರತೀಯ ಎನ್ನುವ ಚಿಂತನಕ್ರಮ ಇದೆಯೇ ಎಂದು ಪ್ರಶ್ನೆಗಳನ್ನು ಕೇಳುವವರು ಆನಂದ ಕುಮಾರಸ್ವಾಮಿಯವರನ್ನು ಓದಿದ್ದರೆ ಭಾರತೀಯತೆಯ ಸ್ವರೂಪದ ಅರಿವನ್ನು ಪಡೆದುಕೊಳ್ಳುತ್ತಿದ್ದರು. ಭಾರತೀಯತೆಯನ್ನು ನಿರಾಕರಿಸುವ, ಅಥವಾ ಅದನ್ನು ಕತ್ತಲೆ, ಅಜ್ಞಾನದ ಜತೆ ಸಮೀಕರಿಸುವ ಜಡ ಮನಸ್ಸುಗಳು ಕಲಾ ತಪಸ್ವಿಯ ಬರಹಗಳಿಗೆ ಮುಖಾಮುಖಿಯಾದರೆ ಅವರೊಳಗಿನ ಅಜ್ಞಾನದ ಪೊರೆ ಹರಿದು ಜ್ಞಾನದ ಬೆಳಕು ಮೂಡಲು ಸಾಧ್ಯವಿದೆ.

**ಶ್ರೀ ಅರವಿಂದರು :** ಭಾರತವನ್ನು ಅರ್ಥಮಾಡಿಕೊಳ್ಳಲು ನಾವು ಬಳಸುತ್ತಿರುವ ಆಕರಗಳೇನು? ಈ ಆಕರಗಳ ಅಧಿಕೃತತೆಯೇನು? ಅಥವಾ ನಮ್ಮ ಆಕರಗಳೇ ಪರಕೀಯವೇ? ಪರಕೀಯ ಎಂದಾದರೆ ನಿಜದ ಭಾರತ ತಿಳಿಯುವುದಾದರೂ ಹೇಗೆ? ಎನ್ನುವ ಪ್ರಶ್ನೆ ಸಹಜವಾದುದು. ಭಾರತವನ್ನು ಅದು ಇರುವಂತೆಯೇ ಅರ್ಥಮಾಡಿಕೊಳ್ಳದ ಪರಿಣಾಮ ಇಂದು ನಮ್ಮ ಮುಂದಿದೆ. ಇಂದಿನ ತಲೆಮಾರಿಗೂ ಭಾರತವನ್ನು ಅದರ ಮೂಲ ಸ್ವರೂಪದಲ್ಲೇ ಗ್ರಹಿಸಲು ಇರುವ ಜ್ಞಾನದ ಆಕರಗಳನ್ನು ಶೋಧಿಸಲು ಹೊರಟರೆ ಕಣ್ಮುಂದೆ ಕಾಣಿಸಿಕೊಳ್ಳುವ ಜ್ಞಾನನಿಧಿ ಸ್ವರೂಪದ ಶಿಖರಗಳಲ್ಲಿ ಶ್ರೀ ಅರವಿಂದರ ವಿಚಾರಧಾರೆಯೂ ಒಂದು. 1920 ರಲ್ಲಿ ಪ್ರಕಟವಾದ ಅವರ ಒಂದು ಕಿರು ಗ್ರಂಥ 'The Renaissance in India' ಇಂದಿನ ಪೀಳಿಗೆಗೂ ಭಾರತವನ್ನು ಕಾಣಿಸುವ ಜ್ಞಾನದ ಕನ್ನಡಕದಂತಿದೆ. ಈ ಕೃತಿ ಮೂಲತಃ 4 ಪ್ರಬಂಧಗಳ ಸಂಕಲನ. 1920 ರಲ್ಲಿ ಪರಿಷ್ಕೃತಗೊಂಡು ಗ್ರಂಥರೂಪದಲ್ಲಿ ಪ್ರಕಟವಾಗುವ ಪೂರ್ವದಲ್ಲಿ 1918ರಲ್ಲಿ 'ಆರ್ಯ' ಮಾಸಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಮಿ.ಜೇಮ್ಸ್ ಕಝಿನ್ಸ್ ಎಂಬ ವಿದ್ವಾಂಸರು ಬರೆದ ಭಾರತದ ನವೋತ್ಥಾನ ಎನ್ನುವ

ವಿಚಾರಪೂರ್ಣಗ್ರಂಥದ ಹಿನ್ನೆಲೆಯಲ್ಲಿ ಈ ಪ್ರಬಂಧಸರಣಿ ಹುಟ್ಟಿಕೊಂಡು, ಭಾರತೀಯ ನವಜನ್ಮದ ಲಕ್ಷಣಗಳನ್ನು ವಿಚಾರಪೂರ್ಣವಾಗಿ ಮಂಡಿಸುತ್ತದೆ. ಪಶ್ಚಿಮವನ್ನು ಎದುರಾಗಿರಿಸಿಕೊಂಡು ಭಾರತೀಯ ಸಮಾಜ, ಸಂಸ್ಕೃತಿ, ಲೋಕದೃಷ್ಟಿ ಹೇಗೆ ಭಿನ್ನವೂ ವಿಶಿಷ್ಟವೂ ಆಗಿದೆ ಎನ್ನುವುದನ್ನು ತೋರಿಸಿಕೊಡುತ್ತಾರೆ. ಪಶ್ಚಿಮದ ಪ್ರಭಾವದಿಂದ ಭಾರತದ ಚಿತ್ರಣ ಮಸುಕಾಗುತ್ತಿದ್ದ ಕಾಲಕ್ಕೆ ಭಾರತ ಎನ್ನುವ ಲೋಕ ವಿಶಿಷ್ಟ ರತ್ನಕ್ಕೆ ಆವರಿಸಿದ್ದ ಕೊಳೆ ತೊಳೆದು ಅದರ ಹೊಳಪನ್ನು ಮತ್ತೆ ತೋರಿಸಿಕೊಟ್ಟ ಕೀರ್ತಿ ಶ್ರೀ ಅರವಿಂದರ ಈ ಪ್ರಬಂಧಮಾಲೆಗೆ ಸಲ್ಲುತ್ತದೆ. ನವಜನ್ಮವನ್ನು ಪಡೆಯುತ್ತಿರುವ ಭಾರತದಿಂದ ಲೋಕಹಿತ – ಮನುಕುಲದ ಹಿತ ಅಡಗಿರುವುದನ್ನು ಗುರುತಿಸುತ್ತಾರೆ. "This new birth in India , if it is a fact, must become a thing of immense importance both to herself and the world" ಎನ್ನುತ್ತಾರೆ.

ಭಾರತದ ನವಜನ್ಮವು ಪಶ್ಚಿಮ ದೇಶಗಳಲ್ಲಿ ನಡೆದ ನವಜನ್ಮದ ಚಳವಳಿಗಳಿಗಿಂತ ಭಿನ್ನ ಎನ್ನುವುದನ್ನು ಗುರುತಿಸುತ್ತಲೇ, ಭಾರತ ತನ್ನ ಮೇಲೆ ಹೇರಿದ ಪರಕೀಯತೆಯ ಭಾರದ ನಡುವೆಯೂ ತನ್ನ ಜೀವಸತ್ವವನ್ನು ಉಳಿಸಿಕೊಂಡಿರುದನ್ನು, ಸ್ವತ್ವದ ಸತ್ವವನ್ನು ಕಳೆದುಕೊಳ್ಳದೆ ಬದುಕುಳಿದುದನ್ನು ಗುರುತಿಸುತ್ತಲೇ, ಒಂದುವೇಳೆ ಇಂತಹುದೇ ಭಾರದ ಕೆಳಗೆ ಬೇರೆ ಯಾವುದೇ ದೇಶವಾದರೂ ಸಿಲುಕಿಕೊಂಡಿದ್ದರೆ ಅಂತಹ ದೇಶಗಳ ಅಸ್ತಿತ್ವವೇ ಕರಗಿಹೋಗಿರುತ್ತಿತ್ತು ಎನ್ನುತ್ತಾರೆ. ಹಾಗಾದರೆ ಭಾರತವನ್ನು ಉಳಿಸಿದ ಶಕ್ತಿ ಯಾವುದು? "Spirituality is indeed the master-key of the Indian mind" ಎನ್ನುತ್ತಾರೆ. ತನ್ನ ಅಂತರ್‌ದೃಷ್ಟಿಯನ್ನು ಕುರುಡಾಗಿಸದ ಪರಿಣಾಮವೇ ಭಾರತ ಲೋಕ ಬದುಕಿನ ಎಚ್ಚರವನ್ನು ಕಳೆದುಕೊಳ್ಳಲಿಲ್ಲ. ಭಾರತದ ಪಾರಮಾರ್ಥಿಕತೆ ನೆಲದ ಆಧಾರವಿಲ್ಲದ ಮೋಡದೊಳಗಿನ ಗಿರಿಶಿಖರವಲ್ಲ, ಕನಿಷ್ಟ ಮೂರು ಸಾವಿರ ವರ್ಷಗಳಿಗೂ ಹೆಚ್ಚುಕಾಲ ಅವಿಶ್ರಾಂತವಾಗಿ ನಡೆಸಿದ ಸೃಷ್ಟಿಕಾರ್ಯದ ಫಲವೇ ಇಲ್ಲಿನ ಸಾಮ್ರಾಜ್ಯಗಳು, ವಿಜ್ಞಾನ ಶಾಸ್ತ್ರಗಳು, ಕಲೆ ಕಾವ್ಯಗಳು, ಮಂದಿರ ದೇವಾಲಯಗಳು, ಯೋಗ, ಮನೋವಿಜ್ಞಾನ, ರಾಜನೀತಿ–ಅರ್ಥಶಾಸ್ತ್ರಗಳ ಬೆಳವಣಿಗೆ ಇಷ್ಟಕ್ಕೆ ಭಾರತ ದಣಿಯಲಿಲ್ಲ, ವಿಶ್ವಕ್ಕೆಲ್ಲಾ ತನ್ನ ಜ್ಞಾನವನ್ನು ಹಂಚಿತು. "India has been preeminently the land of the Dharma

and the Shastra" ಎನ್ನುತ್ತಾರೆ. ಭಾರತದ ಬೌದ್ಧಿಕ ಪ್ರವೃತ್ತಿಗೆ ಸರಿಸಾಟಿಯೇ ಇಲ್ಲ. ಅತ್ಯುನ್ನತ ವಾಙ್ಮಯ ಸೃಷ್ಟಿ, ಅರವತ್ತನಾಲ್ಕು ಕಲೆಗಳ ಸಹಿತ ಬೆಳೆದ ಜ್ಞಾನ ಸೃಷ್ಟಿಯೇ ಇಲ್ಲಿನ ನಿರ್ಮಾಣ ಶಕ್ತಿಗೆ ಅತ್ಯುನ್ನತ ನಿದರ್ಶನ ಎಂದು ತೋರಿಸಿಕೊಡುತ್ತಾರೆ.

ಭಾರತೀಯ ಚಿತ್ತದ ವೈಶಿಷ್ಟ್ಯವನ್ನು ಗುರುತಿಸುತ್ತಾ, ಭಾರತದ ಪಾರಮಾರ್ಥಿಕತೆಯು ಅಭಾವದಲ್ಲಿ ರೂಪುಗೊಂಡುದಲ್ಲ. ಪಾರಮಾರ್ಥಿಕ, ಬೌದ್ಧಿಕ, ನೈತಿಕ, ಪ್ರಾಪಂಚಿಕ ಸರಣಿಯ ತುಟ್ಟತುದಿಗೆ ಹೋಗಿಯೂ, ಆಳದ ನೆಲದ ನೆಲೆ ಮುಟ್ಟಿ ನೋಡಿಯೂ ಬರಬೇಕೆಂಬ ಪ್ರಚೋದನೆಯೂ ನಮ್ಮ ಚಿತ್ತದ ನೆಲೆ ಎನ್ನುತ್ತಾರೆ. ಯಾವುದು ಭಾರತದ ನಿಜ ಚಿತ್ರಣ? ಎಂದು ಹುಡುಕುವುದಾದರೆ "For the Indian mind is not only spirtitual and ethical, but intellectual and artistic" ಎಂದು ತೋರಿಸುತ್ತಾರೆ. ಅದರ ಒಂದು ತುದಿ ರಾಜ ವೈಭವವಾದರೆ, ಇನ್ನೊಂದು ತುದಿ ದಿಗಂಬರತೆಯಾಗಿದೆ. ನರನಲ್ಲಿ ನಾರಾಯಣನನ್ನು ಕಾಣುವ ಸ್ವರೂಪದ್ದು. ಪಾರಮಾರ್ಥಿಕತೆ ಮತ್ತು ಇಂದ್ರಿಯ ಭೋಗಗಳನ್ನು ವಿರೋಧದ ಅತಿರೇಕದಲ್ಲಿ ಲೋಕ ತಾಳತಪ್ಪದಂತೆ ನೋಡಿತು. ಪ್ರತಿ ಅತಿರೇಕದಲ್ಲೊಂದು ಧರ್ಮವನ್ನು, ಅದರ ಪ್ರಯೋಗದಲ್ಲಿ ಒಂದು ನಿಯಮವನ್ನು ಅದು ಹುಡುಕಿಕೊಂಡಿತು. ಪರಕೀಯ ಕೈಗೆ ಸಿಲುಕಿ ಭಾರತ ಅನುಭವಿಸಿದ ಅವನತಿಯು ನಿದ್ರಾಕಾಲದಂತೆ. ಆದರೆ ನಿಜವಾದ ಭಾರತ ಅದರ ಎಚ್ಚರದ ಕಾಲ. ಭಾರತ ಪಡೆಯುವ ನವಜನ್ಮಕ್ಕೂ ಆಧ್ಯಾತ್ಮವೇ ಶ್ರುತಿಯಾಗಬೇಕು. ಯಾಕೆಂದರೆ ಅದು ಭಾರತದ ತಪಸ್ಸಿನ ಫಲ. ಎಂಥಾ ಅವನತಿಯ ಕಾಲಕ್ಕೂ ಭಾರತ ಕಳೆದುಕೊಳ್ಳದ ಆಸ್ತಿ ಎಂದರೆ ಆಧ್ಯಾತ್ಮವೇ ಎನ್ನುತ್ತಾರೆ. ಇಂಥ ಶ್ರೀಮಂತ ಸಂಸ್ಕೃತಿ ಒಂದೊಮ್ಮೆ ಕುಂಟಿದೆಯಾದರೂ ಮತ್ತೆ ಅದು ಬೆಳಗುವ ಜ್ಯೋತಿಯಾಗುತ್ತದೆ ಎನ್ನುವ ಭರವಸೆಯನ್ನು ಮೂಡಿಸುತ್ತಾರೆ.

ಯುರೋಪಿನ ಪ್ರಭಾವಕ್ಕೆ ಸಿಲುಕಿದ ಭಾರತ ಎದುರಿಸಿದ ಗಂಡಾಂತರ ಕಿರಿದಲ್ಲ. ನಿಜವಾದ ಸತ್ವ ಪರೀಕ್ಷೆಯ ಕಾಲವದು. ಒಂದುವೇಳೆ ಸತ್ವಹೀನವಾದುದಾದರೆ ಈ ಹೋರಾಟದಲ್ಲಿ ಉಳಿದು ಬಾಳಲು ಸಾಧ್ಯವಾಗುತ್ತಿರಲಿಲ್ಲ. ಚರಿತ್ರೆಯಲ್ಲಿ ಅನೇಕ ನಾಗರಿಕತೆಗಳು, ರಾಷ್ಟ್ರಗಳು ಇಂತಹ ಸಂಕಷ್ಟಕ್ಕೆ ಸಿಲುಕಿ ನಾಶವಾದ ಉದಾಹರಣೆಗಳಿವೆ. ಆದರೆ ಭಾರತದ ಸಂದರ್ಭದಲ್ಲಿ ಅದರ ಸುಪ್ತ ಪ್ರಾಣಶಕ್ತಿ ಮತ್ತೆ ಪ್ರಕಟವಾಯಿತು. "But fortunately the energy

of life was there, sleeping only the moment, not dead, and, given that energy, the evil carried within itself its own cure" ಎಂದು ಭಾರತ ಪಾರಾದ ಬಗೆಯನ್ನು ನಿರೂಪಿಸುತ್ತಾರೆ. ಭಾರತ ಮರಳಿ ತನ್ನ ಶಕ್ತಿಯನ್ನು ಪಡೆದು ಮುಂದಡಿಯಿಟ್ಟಿತು. ಪಶ್ಚಿಮವನ್ನು ಕುರುಡಾಗಿ ಅನುಸರಿಸಲು ಹೊರಟವರಿಗೆ ಭಾರತದ ಅತಃಸತ್ವ ಹೇಗೆ ಭಿನ್ನವೆನ್ನುತ್ತಾ, ಅದರ ಅನುಕರಣೆ ತನ್ನ ಬೇರುಗಳಿಂದ ಕಳಚಿಕೊಂಡಂತೆ ಎಂದು ಎಚ್ಚರಿಸುತ್ತಾರೆ. ಅದಕ್ಕಾಗಿ ಭಾರತೀಯ ನವ ಜನ್ಮವೆನ್ನುವುದು "The beginning of this process of original creation in every sphere of her national activity will be the sign of the integeral self – finding of her renaissance" ಎನ್ನುತ್ತಾರೆ. ಯುರೋಪ್ ತಾನು ವಸಾಹತುಗಳನ್ನು ಸ್ಥಾಪಿಸಿದಲ್ಲೆಲ್ಲಾ ಅಲ್ಲಿನ ಸಂಸ್ಕೃತಿಯನ್ನು ನಾಶಮಾಡಿದೆ. ವಿಜ್ಞಾನ – ತಂತ್ರಜ್ಞಾನದ ಮೋಹದೊಳಗೆ ಸೆಳೆದು ಸಾಂಸ್ಕೃತಿಕ ಅಸ್ಮಿತೆಯನ್ನು ನಾಶಮಾಡುತ್ತಾ ಬಂದಿದೆ. ಆದರೆ ಅದೇ ಯುರೋಪ್‌ಗೆ ಬೇಡವೆಂದು ಬಿಸಾಕಿದ ಕೊಳೆ ಕಸಗಳನ್ನು ನಾವು ರಸವಾಗಿ ಸ್ವೀಕಾರ ಮಾಡುತ್ತಿರುವ ಪ್ರವೃತ್ತಿಯ ಬಗ್ಗೆ ಶ್ರೀ ಅರವಿಂದರು ಒಂದು ಶತಮಾನದ ಹಿಂದೆಯೇ ಎಚ್ಚರಿಸಿದ್ದರು. ನಮ್ಮ ಸಾಂಸ್ಕೃತಿಕ ಅಸ್ತಿತ್ವಕ್ಕೆ ಧಕ್ಕೆಯಾಗುವಂತೆ ಪಶ್ಚಿಮವನ್ನು ಅನುಕರಣೆ ಮಾಡುವುದು ಅಪಾಯಕಾರಿ. ನಮ್ಮ ಧರ್ಮ, ಸಂಸ್ಕೃತಿ, ಭಾರತೀಯತೆ ಕೇವಲ ಅಲಂಕಾರಿಕ ಅಥವಾ ಪ್ರದರ್ಶನದ ಸರಕುಗಳಲ್ಲ. ಅದು ಬಾಳಿಗೆ ಬೇಕಾದ ಸೂತ್ರ. ಆದರೆ ಭಾರತೀಯತ್ವವನ್ನು ಅಲಂಕಾರಿಕವಾಗಿ ಬಳಸಿ ಜೀವನ ವ್ಯವಹಾರಕ್ಕೆ ಪಶ್ಚಿಮವನ್ನು ಶ್ರೇಷ್ಠವೆನ್ನುವುದು ಸರಿಯಲ್ಲ ಎನ್ನುತ್ತಾರೆ. ನಮ್ಮಲ್ಲಿ ಉಂಟಾಗಬೇಕಾದ ಬದಲಾವಣೆ ಪಶ್ಚಿಮದ ಪಡಿಯಚ್ಚಾಗಬೇಕಾಗಿಲ್ಲ. ನಮ್ಮದೇ ಸಾಂಸ್ಕೃತಿಕ ಎರಕದಲ್ಲಿ ಅದು ರೂಪುಗೊಳ್ಳಬೇಕು. ಆಗ ಮಾತ್ರ ಅದು ಸರಿಯಾದ ಪರಿವರ್ತನೆಯಾಗುತ್ತದೆ.

ಸಾವಿರಾರು ವರ್ಷಗಳ ಅವಿಚ್ಛಿನ್ನ ಸಾಂಸ್ಕೃತಿಕ ಪರಂಪರೆ ಇದ್ದರೂ ದೇಶ ಅನ್ಯರ ವಶವಾಯಿತು. ತನ್ನತನವನ್ನು ಮರೆತಿತು. ಪರಿಣಾಮ ಗುಲಾಮಿತನವೂ ಅವಮಾನವಾಗಿ ಬಾಧಿಸಲಿಲ್ಲ. ಇಂತಹ ಸನ್ನಿವೇಶದಲ್ಲಿ ಭಾರತವನ್ನು ಎಚ್ಚರಿಸುವ, ಅದರ ನಿಜ ಸ್ವರೂಪವನ್ನು ಪರಿಚಯಿಸಿಕೊಡುವಂಥ ಕೆಲಸವನ್ನು ಅರವಿಂದರು ಮಾಡುತ್ತಾರೆ. ಆಧ್ಯಾತ್ಮಿಕ ಶ್ರೀಮಂತಿಕೆಯನ್ನು ಕಂಡುಕೊಳ್ಳುವುದೇ ಭಾರತಕ್ಕೆ ತನ್ನನ್ನು ತಾನು ಕಂಡುಕೊಳ್ಳಲು ಇರುವ ದಾರಿ ಎನ್ನುವುದನ್ನು ಒಂದು ಶತಮಾನದ ಹಿಂದೆಯೆ ಎಚ್ಚರಿಸಿದ್ದರು. ದುರಂತವೆಂದರೆ ಇಂದಿಗೂ ಭಾರತಕ್ಕಿರುವ ನಿಜವಾದ

ಸಮಸ್ಯೆ ಎಂದರೆ ತನ್ನನ್ನು ತಾನು ಯಾವ ಸ್ವರೂಪದಲ್ಲಿ ಗುರುತಿಸಿಕೊಳ್ಳಬೇಕೆನ್ನುವುದೇ ಆಗಿದೆ. ಸ್ವಾತಂತ್ರ್ಯಾನಂತರವೂ ನಮ್ಮ ದೇಶದ ಮೂಲಭೂತ ಸಂಗತಿಗಳಲ್ಲಿ ನಾವು ನಮ್ಮತನದ ಹುಡುಕಾಟಕ್ಕೆ ಇಳಿಯದ ಪರಿಣಾಮ ಬುದ್ಧಿ- ಮನಸ್ಸುಗಳಿಂದ, ಕನಸು – ಅಭಿಲಾಷೆಗಳಿಂದ ಬ್ರಿಟಿಷರಾಗಿ, ಚರ್ಮದ ಬಣ್ಣದಿಂದ ಮಾತ್ರ ಭಾರತೀಯರಾಗಿರುವ ಮೆಕಾಲೆ ಪ್ರಣೀತ ಅಸ್ತಿತ್ವದಲ್ಲೆ ಸಂಭ್ರಮಿಸುತ್ತಿದ್ದೇವೆ. ಮಾನಸಿಕವಾಗಿ ಭಾರತೀಯರಾಗಿ ಉಳಿಯದ ಜನರ ನಡುವೆ ಶ್ರೀ ಅರವಿಂದರ ಭಾರತ ದರ್ಶನದ ದಾರಿಯೊಂದನ್ನು ನೆನಪಿಸಿಕೊಳ್ಳಬೇಕಾಗಿದೆ.

ವಿಲಿಯಂ ಆರ್ಚರ್ ಎಂಬ ಇಂಗ್ಲಿಷ್ ನಾಟಕಕಾರನೊಬ್ಬ ಭಾರತವನ್ನು 'ಅನಾಗರಿಕ ದೇಶ' ಎಂದು ನಿಂದಿಸುವುದಕ್ಕಾಗಿಯೇ ಬರೆದ ಕೃತಿಯೊಂದಕ್ಕೆ ಉತ್ತರವನ್ನು ನೀಡುವ ಸಲುವಾಗಿ ಸರ್ ಜಾನ್ ವುಡ್ರೂಫ್ ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ಸಾರಲು "Is India Civilised?" ಎನ್ನುವ ಹೆಸರಿನಲ್ಲಿ ಕೃತಿಯೊಂದನ್ನು ಬರೆದಿದ್ದರು. ಇವೆರಡು ಕೃತಿಗಳಿಗೆ ಉತ್ತರ ರೂಪವಾಗಿ ಶ್ರೀ ಅರವಿಂದರು 1918 – 1921 ರ ನಡುವೆ 'ಆರ್ಯ' ಎನ್ನುವ ಪತ್ರಿಕೆಯಲ್ಲಿ ಬರೆದ ಲೇಖನಗಳ ಸಂಕಲನವೆ "The Foundations of Indian Culture". ಕೃತಿಯ 'The Issue : Is India Civilesed?' ಭಾಗದ ಮೂರು ಅಧ್ಯಾಯಗಳು ಭಾರತದ ನಾಗರಿಕತೆಯ ಕುರಿತು ನೀಡಿದ ಅತ್ಯಂತ ಪ್ರೌಢವಾದ ಉತ್ತರ ಎನ್ನಬಹುದು. ವಿಲಿಯಂ ಆರ್ಚರ್ ಭಾರತದ ತತ್ವಶಾಸ್ತ್ರ, ಧರ್ಮ, ಕಲೆ, ಕಾವ್ಯ, ಉಪನಿಷತ್, ರಾಮಾಯಣ, ಮಹಾಭಾರತ ಆದಿಯಾಗಿ ಎಲ್ಲವನ್ನು ಖಂಡಿಸಿ ಅವೆಲ್ಲವೂ ಅನಾಗರಿಕ ಎಂಬ ಪೂರ್ವಾಗ್ರಹಪೀಡಿತ ತೀರ್ಮಾನಕ್ಕೆ ಬಂದಿದ್ದ. ಜಾನ್ ವುಡ್ರೂಫ್ ಅದಕ್ಕೆ ಉತ್ತರವನ್ನು ನೀಡಿದ್ದರೂ, ಅದರಾಚೆಗೆ ಭಾರತದ ನಾಗರಿಕತೆಯ ಹಿರಿಮೆಯನ್ನು ಪಶ್ಚಿಮಕ್ಕೆ ಮಾತ್ರವಲ್ಲ, ಮರೆತು ಹೋಗಿದ್ದ ಭಾರತೀಯರಿಗೂ ನೀಡುವ ಅನಿವಾರ್ಯತೆ ಇತ್ತು. ಶ್ರೀ ಅರವಿಂದರು ಭಾರತದ ನಾಗರಿಕತೆಯ ಆಂತರ್ಯದ ಸಾರವನ್ನು ತೆರೆದು ತೋರಿಸುವ ಪ್ರಯತ್ನವನ್ನು ಈ ಪ್ರಬಂಧಗಳಲ್ಲಿ ಮಾಡಿದ್ದಾರೆ. ಶ್ರೀ ಅರವಿಂದರು ಶರೀರ, ಬುದ್ಧಿ ಮತ್ತು ಚೇತನದ ನಡುವೆ ಸಾಮರಸ್ಯವನ್ನು ಕಾಪಾಡುವುದರಲ್ಲೇ ಒಂದು ನಾಗರಿಕತೆಯ ಮೌಲ್ಯ ಅಡಗಿದೆ ಎನ್ನುತ್ತಾರೆ. " A civilisation must be judged by the manner in which all its principles, ideas, forms, ways of living work to bring that

harmony out, manage its rhythmic play and secure its continuance or development of its motives". ನಾಗರಿಕತೆಗಳನ್ನು ಪರಸ್ಪರ ತೌಲನಿಕವಾಗಿ ನೋಡುತ್ತಾ, ಆಧುನಿಕ ಯುರೋಪ್, ಪುರಾತನ ಗ್ರೀಕ್–ರೋಮನ್‌ಗಳ ಭೌತಿಕ ಹಾಗೂ ಬೌದ್ಧಿಕ ನಾಗರಿಕತೆಗಳೊಂದಿಗೆ ಇನ್ನೂ ಜೀವಂತಿಕೆಯನ್ನು ಉಳಿಸಿಕೊಂಡಿರುವ ಭಾರತದ ಆಧ್ಯಾತ್ಮಿಕತೆಯ ನೆಲೆಗಟ್ಟಿನ ನಾಗರಿಕತೆಯನ್ನು ಮುಖಾಮುಖಿಯಾಗಿಸುತ್ತಾರೆ. ಭಾರತೀಯ ನಾಗರಿಕತೆಯ ಔನ್ನತ್ಯ "India's central conception is that of the Eternal, the spirit here incased in matter, involved and immanent in it and evolving on the material plane by rebirth of the individual up the scale of being till in mental man it enters the world of ideas and realm of conscious morality, Dharma" ಎನ್ನುತ್ತಾರೆ. ಭಾರತದ ನಾಗರಿಕತೆಯು ಆಧ್ಯಾತ್ಮಿಕತೆಯಲ್ಲಿ ಹೊಂದಿದ ತಾದಾತ್ಮ್ಯತೆಯೇ ಅದರ ವೈಶಿಷ್ಟ್ಯ ಎಂದು ಗುರುತಿಸುತ್ತಾರೆ. ಈ ಲೋಕದೃಷ್ಟಿಯೇ ಇಲ್ಲಿನ ಸಾಮಾಜಿಕ ರಚನೆಯ ಹಿಂದಿದೆ. ಇಲ್ಲಿನ ತತ್ವಶಾಸ್ತ್ರವೂ ಇದೇ ಪ್ರಮೇಯವನ್ನಾಧರಿಸಿದೆ. ಆಕೆಯ ಧಾರ್ಮಿಕತೆಯು ಆಧ್ಯಾತ್ಮಿಕ ಪ್ರಜ್ಞೆಯ ಫಲವಾಗಿದೆ, ಕಲೆ–ಸಾಹಿತ್ಯದ ಗತಿ ಇದೇ ಕಾರಣದಿಂದ ಊರ್ಧ್ವಮುಖಿಯಾಗಿದೆ, ಕಾನೂನು ಇದೇ ತಳಹದಿಯ ಮೇಲೆ ನಿಂತಿದೆ. ಇದು ಇಲ್ಲಿನ ನಾಗರಿಕತೆಯ ಗುಣಾತ್ಮಕ ಮೌಲ್ಯ ಎಂದು ಪ್ರತಿಪಾದಿಸುತ್ತಾರೆ.

"India is the Bharata Shakti, the living energy of a great spiritual conception. . . this alone has been the secret of her amazing persistence and perpetual force of survival and revival" ಎಂದು ಭಾರತದ ನಾಗರಿಕತೆಯ ಸ್ವವಿಶಿಷ್ಟ ಶಕ್ತಿಯನ್ನು ಕಾಣಿಸುತ್ತಾರೆ. ಯುರೋಪಿಯನ್ ನಾಗರಿಕತೆ ಜಗತ್ತಿಗೆ ಹೇಗೆ ಶಾಪವಾಗಿ ಪರಿಣಮಿಸುತ್ತಿದೆ? ಅದರ ಭೌತಿಕತೆಯ ವ್ಯಾಮೋಹ ಲೂಟಿಕೋರ ಪ್ರವೃತ್ತಿಯಾಗಿ ಏಷ್ಯಾ ದೇಶಗಳನ್ನು ಲೂಟಿ ಹೊಡೆಯಲು ಹೇಗೆ ಕಾರಣವಾಗಿದೆ? ಸಂಘರ್ಷಕ್ಕೆ ಕಾರಣವಾದ ಆಕ್ರಮಣ ಪ್ರವೃತ್ತಿಯ ಫಲವಾಗಿ ಮಾನವ ಸ್ವಭಾವವಾದ ಆಂತರಿಕ ಹಾಗೂ ಬಾಹ್ಯ ಸಾಮರಸ್ಯವನ್ನು ಹೇಗೆ ಕಳೆದುಕೊಳ್ಳುತ್ತಿದೆ? ಎನ್ನುತ್ತಾ, ಯಾವುದು ನಾಗರಿಕತೆಯ ನಿಜವಾದ ಶೋಭೆಯಾಗಬೇಕಾಗಿತ್ತೋ (ಅಂದರೆ ಆಂತರಿಕ–ಬಾಹ್ಯ ಸಾಮರಸ್ಯ)

ಅದನ್ನೇ ಯುರೋಪ್ ಕಳೆದುಕೊಂಡಿದೆ ಎನ್ನುತ್ತಾರೆ. ಜತೆಗೆ ಅವರಿಂದ ಆಕ್ರಮಣಕ್ಕೊಳಗಾದ ನಮ್ಮ ದೇಶದ ಸಂಸ್ಕೃತಿ ಮತ್ತು ನಾಗರಿಕತೆಯನ್ನು ಕೂಡ ಹಾಳುಗೆಡಹಬಹುದು. “ . . . But she has now been physically occupied by Europe and this physical conquest must necessarily be associated with an attempt at cultural conquest, . . . otherwise have submerged and broken her civilization”ಎಂದು ಎಚ್ಚರಿಸುತ್ತಾರೆ. ಇದು ಭಾರತದ ಉಳಿವು ಅಥವಾ ನಾಶದ ಪ್ರಶ್ನೆ. ಎಚ್ಚೆತ್ತುಕೊಳ್ಳದಿದ್ದರೆ ಭವಿಷ್ಯವಿಲ್ಲ ಎನ್ನುವುದನ್ನು ಹೇಳಿದ್ದು ಮಾತ್ರವಲ್ಲ, ಪಶ್ಚಿಮದ ಗಾಢ ಪ್ರಭಾವದ ನಡುವೆಯೂ ಭಾರತ ತನ್ನ ನಾಗರಿಕತೆಯ ಸತ್ವವನ್ನು ಕಳೆದುಕೊಳ್ಳದೆ ಕಾಪಾಡಿಕೊಳ್ಳಬೇಕಾದರೆ ತನ್ನದೇ ಕಾರ್ಯತಂತ್ರವನ್ನು ರೂಪಿಸಿಕೊಳ್ಳಬೇಕಾದ ಕಡೆಗೆ ಗಮನ ಸೆಳೆದು, “India must defend herself by reshaping her ancient ideal. Her aggression must lead the waves of the light thus liberated in triumphant self expanding rounds all over the world which it once possessed or at least enlightened in far of ages” ಎಂದು ಬಿಡುಗಡೆಗಿರುವ ದಾರಿಯನ್ನು ತೋರಿಸಿಕೊಡುತ್ತಾರೆ.

ಭಾರತದ ನಾಗರಿಕತೆಯು ಗ್ರೀಕ್, ರೋಮನ್, ಕ್ರೈಸ್ತ ಅಥವಾ ಇಸ್ಲಾಮಿಕ್, ಆಧುನಿಕ ಯುರೋಪ್ ನಾಗರಿಕತೆಗಳಿಗಿಂತ ಶ್ರೇಷ್ಠ ಸಂಸ್ಕೃತಿಯ ಫಲವಾಗಿದೆ ಎನ್ನುವ ಶ್ರೀ ಅರವಿಂದರು, ಕೇವಲ ಹೇಳಿಕೆಯಾಗಿಸದೆ ತಾರ್ಕಿಕ ಸಮರ್ಥನೆಯನ್ನು ನೀಡುತ್ತಾರೆ. “The secret of our ultimate perfection is to be discovered deeper within us and things and Nature; it is to be sought centrally in spiritual self – knowledge and self-perfection and in the founding of life on that self – knowledge” ಎಂದು ಭಾರತದ ನಾಗರಿಕತೆಯ ಸಾರವನ್ನು ಗುರುತಿಸುತ್ತಾರೆ. ಯಾವುದು ಪಶ್ಚಿಮ ನಾಗರಿಕತೆಯ ಹೆಮ್ಮೆ ಎಂದು ಪರಿಗಣಿಸಲಾಗಿತ್ತೋ ಅಂತಹ ವಿಜ್ಞಾನವೂ ಕೂಡ ಅಂತಿಮವಾಗಿ ಜಡ ಭೌತೀಯ ಸಿದ್ಧಾಂತಗಳಾಚೆ ಬಂದು ಭಾರತದ ವೇದ – ವೇದಾಂತದ ಧ್ವನಿಯನ್ನು ಅಂಗೀಕರಿಸಲಾರಂಭಿಸಿದೆ. ಭಾರತದ ಆಧ್ಯಾತ್ಮಿಕ ಪರಿಭಾಷೆಗಳಿಂದು ವಿಜ್ಞಾನದ ಭಾಷೆಯಲ್ಲಿ ಸಮರ್ಥನೆಗೆ ಒಳಗಾಗುತ್ತಿರುವುದನ್ನು

ನಿದರ್ಶನರೂಪವಾಗಿ ನೀಡುತ್ತಾ ನಾಗರಿಕತೆಯ ಶ್ರೇಷ್ಠತೆಗೆ ಬೆಳಕು ಹಿಡಿಯುತ್ತಾರೆ. ಪಶ್ಚಿಮದ ನೆಲದಲ್ಲಿ ನಾಗರಿಕತೆಗಳು ವಿಕಾಸವಾಗುವ ಪೂರ್ವದಲ್ಲಿ ಭಾರತದಲ್ಲಿ ಬೆಳೆದಿದ್ದ ಮನೋವಿಜ್ಞಾನ, ಕಲೆ, ಸಾಹಿತ್ಯ ಮೊದಲಾದ ಜ್ಞಾನಶಾಸ್ತ್ರಗಳನ್ನು, ಭಾರತ ರೂಪುಗೊಳಿಸಿದ ಪ್ರಮೇಯಗಳ ಆಧಾರದಲ್ಲಿ ಯುರೋಪಿಯನ್ ಆಧುನಿಕ ವಿಜ್ಞಾನವು ಸಮರ್ಥಿಸಿಕೊಳ್ಳುತ್ತಿದೆ. "More and more the seekers of new truth are finding their spiritual home in India or owe to her much of their inspiration or at least acknowledge her light and undergo her influence" ಎಂದು ಬದಲಾಗುತ್ತಿರುವ ಭಾರತದ ಚಿತ್ರಣವನ್ನು ಮುಂದಿಡುತ್ತಾರೆ ಭೌತಿಕತೆಯ ತಳಹದಿಯ ಮೇಲೆ ನಿಂತ ಪಾಶ್ಚಾತ್ಯ ನಾಗರಿಕತೆಯನ್ನು ಆಧ್ಯಾತ್ಮಿಕ ತಳಹದಿಯ ಮೇಲೆ ನಿಂತ ಭಾರತದ ನಾಗರಿಕತೆಯೊಂದಿಗೆ ತುಲನಾತ್ಮಕವಾಗಿ ಪರಿಶೀಲಿಸುವ ಶ್ರೀ ಅರವಿಂದರು ಭಾರತದ ಚೈತನ್ಯದ ನವಸೃಷ್ಟಿಯಲ್ಲಿ ವಿಶ್ವದ ಸಮಸ್ಯೆಗೆ ಉತ್ತರವನ್ನು ಕಂಡುಕೊಳ್ಳುತ್ತಾರೆ.

ಮನುಕುಲಕ್ಕೆ ಗ್ರೀಕ್, ರೋಮ್, ಈಜಿಪ್ಟ್ ಮೊದಲಾದ ಪ್ರಾಚೀನ ನಾಗರಿಕತೆಗಳು ನೀಡಿದ ಉನ್ನತ ಕಾಣ್ಕೆಗಳಿಗಿಂತ ಮಿಗಿಲಾದುದನ್ನು ಭಾರತೀಯ ನಾಗರಿಕತೆ ನೀಡಿದೆ. ಇದು ಯಾವುದೋ ಒಂದು ಕಾಲಘಟ್ಟಕ್ಕೆ ಮಾತ್ರ ಸೀಮಿತವಾಗಿ ಅಲ್ಲ. ಭಾರತದ ಕಾಣ್ಕೆ ಭವಿಷ್ಯದ ಕುರಿತಾದುದು ಕೂಡ. "And we in India hold that they are capable of developing out of themselves by contact with new need and idea as good and better solution of the problems before us than those which are offered to us second hand from Western source". ಹೀಗಿದ್ದರೂ ಭಾರತ ಇತಿಹಾಸದ ಪುಟಗಳಲ್ಲಿ ಕರಾಳ ದಿನಗಳಿಗೆ ಸಾಕ್ಷಿಯಾಗಬೇಕಾಯಿತು. ಆದರೂ ತನ್ನ ಅಂತಃಸಾಮರ್ಥ್ಯದಿಂದ ಅದು ತನ್ನ ನಾಗರಿಕತೆಯ ಉಚ್ಚತಮ ಗುಣಗಳನ್ನು ಕಳೆದುಕೊಳ್ಳಲಿಲ್ಲ. ಕತ್ತಲೆ ಕಳೆದಾಗ ಮತ್ತೇ ಅದೇ ಚೈತನ್ಯವನ್ನು ಕಾಣುವುದಕ್ಕೆ ಸಾಧ್ಯವಾಯಿತು. "Even in the decline all was not lost; there were needed developments, there were spiritual and other gains of the greatest importance for the future. And in the worst period of decline and failure the spirit was not dead in India, but only torpid concealed and shackled" ವಾಸ್ತುಶಿಲ್ಪ, ಸಾಹಿತ್ಯ, ಚಿತ್ರಕಲೆ ಮೊದಲಾದ ಕ್ಷೇತ್ರಗಳಲ್ಲಿ ಮತ್ತೆ ತನ್ನ

ಭವ್ಯತೆಯನ್ನು, ಉದಾತ್ತತೆಯನ್ನು ಮರೆಯಿತು. ತನ್ನ ಸಾಂಸ್ಕೃತಿಕ ಮೂಲವನ್ನು ಕಂಡುಕೊಳ್ಳುವುದರಲ್ಲಿ ಶಕ್ತವಾದ ಸ್ಥಿತಿಯನ್ನು ಗುರುತಿಸುತ್ತಲೇ, ಶ್ರೀ ಅರವಿಂದರು ಈ ನಾಗರಿಕತೆಯ ಕುಸಿತದ ಕಾರಣಗಳ ಶೋಧವನ್ನೂ ಮಾಡುತ್ತಾರೆ. ಸನಾತನ ಚೈತನ್ಯ ಅದರ ನೈಜಗುಣವನ್ನು ಕಳೆದುಕೊಂಡುದುದೆಲ್ಲಿ? ಎನ್ನುವ ಹುಡುಕಾಟದಲ್ಲಿ ಕಂಡುಕೊಂಡ ಸತ್ಯವೆಂದರೆ, ಉನ್ನತ ಆದರ್ಶ ಜನರ ಬದುಕಿನ ಭಾಗವಾಗದೇ ಹೋದಾಗ ಆಪತ್ತಿಗೆ ಸಿಲುಕಿದ್ದು ಪತ್ತೆಯಾಯಿತು. ಆಕ್ರಮಣದ ಪರಿಣಾಮ ಸನಾತನ ಚೈತನ್ಯ ಉದಾತ್ತತೆಯನ್ನು ಕಳೆದುಕೊಂಡಿತು. ಮತ್ತೊಮ್ಮೆ ತತ್ವಶಾಸ್ತ್ರ, ಧರ್ಮ, ಕಲೆ, ಸಾಹಿತ್ಯ, ರಾಜಕೀಯ ಆರ್ಥಿಕ, ಸಾಮಾಜಿಕ ಚಿಂತನೆಗಳು ಆಧ್ಯಾತ್ಮಿಕ ಚೈತನ್ಯವನ್ನು ಒಳಗೊಳ್ಳಬೇಕು, ಹಾಗೆ ಒಳಗೊಳ್ಳುವ ಸಾಮರ್ಥ್ಯವೂ ಈ ನಾಗರಿಕತೆಗಿದೆ ಎನ್ನುವುದನ್ನು ವಿಶ್ವಾಸಪೂರ್ವಕವಾಗಿ ನಿರೂಪಿಸುತ್ತಾರೆ.

**ಶ್ರೀ ಧರ್ಮಪಾಲ್ :** ಭಾರತವು ಬ್ರಿಟಿಷ್ ವಸಾಹತುವಾಗುವ ಪೂರ್ವದಲ್ಲಿ ತನ್ನದೇ ಆದ, ವ್ಯವಸ್ಥಿತವಾದ ಶಿಕ್ಷಣವ್ಯವಸ್ಥೆಯೊಂದನ್ನು ಹೊಂದಿತ್ತೇ? ಎನ್ನುವುದರ ಬಗ್ಗೆ ಸಾಕಷ್ಟು ವಿದ್ವತ್‌ಪೂರ್ಣ ಚರ್ಚೆಗಳು ನಡೆದಿವೆ. ಈ ಚರ್ಚೆಯಲ್ಲಿ ಒಂದು ಗುಂಪು ಬ್ರಿಟಿಷರಿಂದಲೇ ನಮ್ಮಲ್ಲಿ ಶಿಕ್ಷಣ ವ್ಯವಸ್ಥೆಯೂ ರೂಪುಗೊಂಡಿತು ಎನ್ನುವ ವಾದವನ್ನು ಮಂಡಿಸುವವರು. ಈ ಬಗೆಯ ಉತ್ತರವನ್ನು ಭಾರತೀಯರ ಮೆದುಳುಗಳಿಗೆ ತುಂಬಿಸಿದವರು ಬ್ರಿಟಿಷರೇ ! ತಾವು ಭಾರತಕ್ಕೆ ಬರುವ ಮೊದಲು ಇಲ್ಲೊಂದು ಶಿಕ್ಷಣ ಪದ್ಧತಿಯೆನ್ನುವುದು ವ್ಯವಸ್ಥಿತವಾಗಿರಲಿಲ್ಲ, ಸಾರ್ವತ್ರಿಕವಾಗಿರಲಿಲ್ಲ ಎನ್ನುವ ಸುಳ್ಳನ್ನು ಬುದ್ಧಿಪೂರ್ವಕವಾಗಿಯೇ ಬಿತ್ತಿ ಪ್ರಚಾರಮಾಡಿಕೊಂಡು ಬಂದರು. ಹೀಗೆ ಪ್ರಚಾರಮಾಡುತ್ತಲೇ ಇಲ್ಲಿಂದ ಶಿಕ್ಷಣ ವ್ಯವಸ್ಥೆಯನ್ನು ಬುಡಸಹಿತ ನಾಶಮಾಡುತ್ತಾ ಬಂದರು. ಬ್ರಿಟಿಷರ ಈ ಬಗೆಯ ಆಕ್ರಮಣವನ್ನು ಗುರುತಿಸಿದ ಮಹಾತ್ಮ ಗಾಂಧಿ 1931ರ ಲಂಡನ್‌ನ ದುಂಡು ಮೇಜಿನ ಸಮ್ಮೇಳನದಲ್ಲಿ ತರ್ಕಬದ್ಧವಾದ ಉತ್ತರವೊಂದನ್ನು ನೀಡಿದ್ದರು. ಅಂದು ನೀಡಿದ ಉತ್ತರ ಭಾರತದ ಇತಿಹಾಸದಲ್ಲೇ ಹೊಸದೊಂದು ಅನ್ವೇಷಣೆಗೆ ನಾಂದಿ ಹಾಡಿದ್ದು ವಿಶೇಷ. ಅಂದು ಮಾತನಾಡಿದ ಗಾಂಧಿ 'ಈ ದೇಶದಲ್ಲಿ ಉತ್ತಮವಾದ ಶಿಕ್ಷಣ ವ್ಯವಸ್ಥೆಯೇ ಇತ್ತು. ಬ್ರಿಟಿಷ್ ಆಡಳಿತಗಾರರು ಭಾರತಕ್ಕೆ ಬಂದು ನಮ್ಮ ಶಿಕ್ಷಣ ವ್ಯವಸ್ಥೆಯ ಬುಡವನ್ನೇ ಕಿತ್ತು ಹಾಕುವ ಕೆಲಸಕ್ಕೆ ಕೈಹಾಕಿದರು. ಸುಂದರವಾದ ಶಿಕ್ಷಣ ವೃಕ್ಷದ ಬೇರುಗಳನ್ನೇ ಕಿತ್ತು ಹಾಕುವ ಪ್ರಯತ್ನದಲ್ಲಿ ಈ ವೃಕ್ಷ ನೆಲಕ್ಕುರುಳಿತು' ಎನ್ನುತ್ತಾರೆ. ಯಾವ ಶಿಕ್ಷಣ ವ್ಯವಸ್ಥೆ ತಾನೇ ಆಗಿ ವಿನಾಶ ಹೊಂದುವುದಕ್ಕೆ ಯೋಗ್ಯ ಎಂದು ಬ್ರಿಟಿಷರು

ಭಾವಿಸಿದ್ದರೋ, ಅಂತಹ ಶಿಕ್ಷಣ ವ್ಯವಸ್ಥೆಯ ಬಗ್ಗೆ ಬ್ರಿಟಿಷರೇ ಸಂಗ್ರಹಿಸಿದ ಅಮೂಲ್ಯ ದಾಖಲೆಗಳನ್ನು ಇಂಗ್ಲೆಂಡ್‌ನ ಆರ್ಕೈವ್‌ಗಳಿಂದಲೇ ಸಾವಿರಾರು ಪುಟಗಳಲ್ಲಿ ಸಂಗ್ರಹಿಸಿ, ಬ್ರಿಟಿಷರೇ ಸೃಷ್ಟಿಸಿದ ಶಿಕ್ಷಣದ ಕಥನವನ್ನು ಸುಳ್ಳೆಂದು ನಿರೂಪಿಸಿದ ವಿದ್ವಾಂಸರೆಂದರೆ ಶ್ರೀ ಧರ್ಮಪಾಲ್. ಅವರ ಅಧ್ಯಯನ ಪೂರ್ಣ ಕೃತಿಯೇ "The Beautiful Tree"

ಗಾಂಧಿ 1931ರಲ್ಲಿ ದುಂಡುಮೇಜಿನ ಸಮ್ಮೇಳನದಲ್ಲಿ ಆಡಿದ ಮಾತಿಗೆ ಸಾಕ್ಷ್ಯರೂಪದಲ್ಲಿ ಧರ್ಮಪಾಲರ 'The Beautiful Tree' 1983 ರಲ್ಲಿ ಪ್ರಕಟವಾಯಿತು. ಈ ಕೃತಿ ವಸಾಹತುಶಾಹಿ ಮಾನಸಿಕತೆಯಿಂದ ಬಿಡಿಸಿಕೊಳ್ಳಬೇಕಾದ ಅಧ್ಯಯನದ ಕ್ರಮವೊಂದಕ್ಕೆ ನಿದರ್ಶನವೂ ಹೌದು. ಭಾರತ ಬೌದ್ಧಿಕದಾಸ್ಯದಿಂದ ಕಳಚಿಕೊಳ್ಳಬೇಕಾದರೆ ತನ್ನ ಕಣ್ಣುಗಳಿಂದಲೇ ತನ್ನ ಪೂರ್ವವನ್ನು ನೋಡಿಕೊಳ್ಳುವ ದೃಷ್ಟಿ ಪ್ರಾಪ್ತವಾಗಬೇಕಾಗಿದೆ. ಸೋಲು, ಶರಣಾಗತಿ, ಅನಾಗರಿಕತೆ, ಮೌಢ್ಯಗಳೇ ನಮ್ಮ ಚರಿತ್ರೆ ಎಂದು ನಿರೂಪಿಸುವ ಇತಿಹಾಸ, ಸಮಾಜ ವಿಜ್ಞಾನ, ಸಾಹಿತ್ಯ ಪಠ್ಯಗಳು ಕತ್ತಲಯುಗದ ಚಿತ್ರಣಗಳನ್ನು ನಿರಾಧಾರವಾಗಿ ನಮ್ಮ ಮೆದುಳುಗಳಿಗೆ ಇಂದಿಗೂ ತುಂಬಿಸುತ್ತಿರುವುದನ್ನು ಕಂಡು ಮೆಕಾಲೆಯ ಆತ್ಮ ನಕ್ಕಿರಬಹುದು!! ಧರ್ಮಪಾಲ್ ನಿರೂಪಿಸಿದ 18ನೇ ಶತಮಾನದ ದೇಶಿ ಶಿಕ್ಷಣದ ಚಿತ್ರಣಗಳು ನಮ್ಮನ್ನು ಅದಕ್ಕಿಂತಲೂ ಪೂರ್ವದ ನಮ್ಮದೇ ಪೂರ್ವಜರ ಮೌಲ್ಯಯುತ ಪರಂಪರೆ, ಸಾಧನೆಯ ಶೋಧಕ್ಕೆ ತೆರೆದುಕೊಳ್ಳುವಂತೆ ಪ್ರೇರೇಪಿಸುತ್ತದೆ.

1822ರಲ್ಲಿ ಸರ್ ಥಾಮಸ್ ಮನ್ರೋ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ, ಆಡಮ್ 1836ರಲ್ಲಿ ಬಂಗಾಳದಲ್ಲಿ, ಲೈಟನರ್ 1882ರಲ್ಲಿ ಪಂಜಾಬ್‌ನಲ್ಲಿ ದೇಶಿಯ ಶಿಕ್ಷಣದ ಕುರಿತು ಕಲೆಕ್ಟರ್‌ಗಳಿಂದ ಮಾಡಿಸಿದ ಸರ್ವೇಕ್ಷಣೆಯಿಂದ ಸಂಗ್ರಹಿಸಿದ ಅಂಕಿ ಅಂಶಗಳೇ ಈ ಕೃತಿಯೊಡಲಿನ ದಾಖಲೆಗಳು. ಭಾರತದ ಶಿಕ್ಷಣ ಪದ್ಧತಿ, ಅದರ ಪಾಠ ಕ್ರಮ, ಒಂದೊಂದು ನಿರ್ದಿಷ್ಟ ಪ್ರದೇಶಗಳಲ್ಲಿ ಇರುವ ಶಿಕ್ಷಣ ಸಂಸ್ಥೆಗಳ ಸಂಖ್ಯೆ, ಕಲಿಕೆಯ ಅವಧಿ ಹಾಗೂ ಶಿಕ್ಷಣ ಪಡೆಯುತ್ತಿದ್ದವರ ಸಾಮಾಜಿಕ ಹಿನ್ನೆಲೆಯ ಕುರಿತು ಸಂಗ್ರಹಿಸಿದ ದಾಖಲೆಗಳು ಈ ಸರ್ವೆಯಲ್ಲಿದೆ. ಈ ದಾಖಲೆಗಳು ಹೇಳುವ ಅಂಕಿ ಅಂಶಗಳ ಆಧಾರದಲ್ಲೇ ಅಂದಿನ ಇಂಗ್ಲೆಂಡಿನ ಶಿಕ್ಷಣ ಪದ್ಧತಿಗಿಂತ ಭಾರತದ ಶಿಕ್ಷಣ ಪದ್ಧತಿ ಯಾವ ನೆಲೆಯಿಂದಲೂ ಕಡಿಮೆಯದ್ದಾಗಿರಲಿಲ್ಲ ಎಂದು ತಿಳಿಯುತ್ತದೆ.

ಇಂಗ್ಲೆಂಡಿನ ವಿದ್ಯಾರ್ಥಿಗಳು ಕಲಿಯುತ್ತಿದ್ದ ಪಾಠಕ್ರಮಕ್ಕಿಂತ, ಅಧ್ಯಾಪನಕ್ಕಿಂತ, ವಿದ್ಯಾಭ್ಯಾಸದ ಅವಧಿಗಿಂತ, ಭಾರತದ ವಿದ್ಯಾರ್ಥಿಗಳ ಪಾಠಕ್ರಮಗಳು ಮೇಲ್ಮಟ್ಟದ್ದಿದ್ದಿತು, ಅಧ್ಯಾಪನವು ಮೇಲ್ದರ್ಜೆಯದ್ದಾಗಿತ್ತು, ವಿದ್ಯಾಭ್ಯಾಸದ ಅವಧಿಯು ಹೆಚ್ಚಿನದ್ದಾಗಿತ್ತು. "In the documents reproduced in this work, or in those others of the eighteenth, or early nineteenth century on the subject of education in India, while there is much on the question of higher learning, especially of Theology, Law, Medicine, Astronomy and Astrology, there is scarcely any reference to the teaching and training in the scores of technologies , and crafts which had then existed in India. There is also little mention of training in Music and Dance." ಎನ್ನುವ ಮಾತುಗಳೇ ಅಂದಿನ ಕಲಿಕಾಕ್ರಮಕ್ಕೆ ಸಾಕ್ಷಿ. ಅಂದಿನ ಶಾಲೆಗಳಲ್ಲಿ ನಡೆಯುತ್ತಿದ್ದ ಪಾಠ ಪ್ರವಚನಗಳು ಸ್ವಾಭಾವಿಕವಾಗಿದ್ದ ಕಾರಣದಿಂದ ವಿದ್ಯಾರ್ಥಿಗಳಿಗೆ ಉಸಿರುಗಟ್ಟಿಸುವಂತಿರಲಿಲ್ಲ, ಶಿಕ್ಷಣವು ಸಮಾಜದ ಎಲ್ಲಾ ವರ್ಗದ–ಜಾತಿಯ ಜನರಿಗೂ ಮುಕ್ತವಾಗಿತ್ತು. ಬ್ರಿಟಿಷ್ ಪೂರ್ವದ ಭಾರತದಲ್ಲಿ ಶಿಕ್ಷಣಕ್ಕಾಗಿಯೇ ಮೀಸಲಾದ ಆರ್ಥಿಕ ವ್ಯವಸ್ಥೆಯೊಂದು ಸದೃಢವಾಗಿದ್ದ ಕಾರಣದಿಂದ ರಾಜಕೀಯ ವ್ಯತ್ಯಾಸಗಳ ಹೊರತಾಗಿಯೂ ಶಿಕ್ಷಣವು ಸುಸೂತ್ರವಾಗಿ ನಡೆಯುತ್ತಿತ್ತು ಎನ್ನುವ ವಿವರಗಳು ಬ್ರಿಟಿಷರೇ ಸಂಗ್ರಹಿಸಿದ ದಾಖಲೆಗಳಲ್ಲಿದೆ. ಈ ವಿವರಗಳು ಬ್ರಿಟಿಷ್ ಹಸ್ತಕ್ಷೇಪಕ್ಕಿಂತ ಪೂರ್ವದ ಭಾರತದಲ್ಲಿ ನಡೆಯುತ್ತಿದ್ದ ಶಿಕ್ಷಣ ವ್ಯವಸ್ಥೆಯ ಕುರಿತು ಲಭ್ಯವಾಗುವ ಅಪೂರ್ವ ದಾಖಲೆಗಳು ಎಂದೇ ಹೇಳಬೇಕು.

ಒಂದೊಂದು ಜಿಲ್ಲೆಯ ಕಲೆಕ್ಟರ್‌ಗಳೂ ಸಂಗ್ರಹಿಸಿದ ಅಂಕಿ ಅಂಶಗಳು ಕುತೂಹಲಕಾರಿಯಾಗಿ ಕಾಣುತ್ತವೆ. ಉದಾಹರಣೆಗೆ ಮದ್ರಾಸ್ ಕಲೆಕ್ಟರ್‌ನ ವರದಿಯು ಹೇಳುವಂತೆ 'ವಿದ್ಯಾರ್ಥಿಗಳು 13ನೇ ವಯಸ್ಸಿಗೆ ಬರುತ್ತಿದ್ದಂತೆಯೇ ಬೇರೆ ಬೇರೆ ವಿಷಯಗಳಲ್ಲಿ ಅವರ ಜ್ಞಾನವು ಅಸಾಧಾರಣ ಮಟ್ಟಕ್ಕೆ ಏರುತ್ತಿತ್ತು' ಎನ್ನುತ್ತದೆ. ಅಂದಿನ ಶಾಲೆಗಳಲ್ಲಿ ಕಲಿಸಲಾಗುತ್ತಿದ್ದ ಸಾಮಾನ್ಯ ಪಠ್ಯಗಳಿಂದ ತೊಡಗಿ ಉನ್ನತ ವಿದ್ಯಾಸಂಸ್ಥೆಗಳು, ಅಲ್ಲಿ ಕಲಿಸಲಾಗುತ್ತಿದ್ದ ವಿಷಯಗಳವರೆಗಿನ ವಿವರಗಳಿವೆ. ವೇದ, ಶಾಸ್ತ್ರ, ಕಾನೂನು, ಖಗೋಳ, ಗಣಿತಶಾಸ್ತ್ರ ಮೊದಲಾದ ವಿಷಯಗಳನ್ನು

ಕಲಿಸಲಾಗುತ್ತಿದ್ದ ಈ ಸಂಸ್ಥೆಗಳಲ್ಲಿ ಬೇರೆ ಬೇರೆ ಜಾತಿ ಸಮುದಾಯಗಳಿಗೆ ಸೇರಿದ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಪಡೆಯುತ್ತಿದ್ದರು. ಕಾನೂನು, ಖಗೋಳಶಾಸ್ತ್ರ, ವೈದ್ಯವಿಜ್ಞಾನ, ಶಸ್ತ್ರಚಿಕಿತ್ಸೆಯೇ ಮೊದಲಾದ ವೃತ್ತಿಪರತೆಯನ್ನು ಬಯಸುವ ವಿದ್ಯೆಗಳನ್ನು ಬ್ರಾಹ್ಮಣೇತರರೇ ಹೆಚ್ಚು ಸಂಖ್ಯೆಯಲ್ಲಿ ಕಲಿಯುತ್ತಿದ್ದರು. ಬಿಹಾರ – ಬಂಗಾಳಗಳಲ್ಲಿ ನಡೆಸಿದ ಸಮೀಕ್ಷೆಯು ಗುರುತಿಸುವಂತೆ ಪ್ರತಿಯೊಂದು ಹಳ್ಳಿಯೂ ಒಂದು ಶಾಲೆಯನ್ನು ಹೊಂದಿದೆ. ಅದರಲ್ಲಿಯೂ 1830ರ ಕಾಲಕ್ಕೆ ಈ ಪ್ರಾಂತಗಳ ಒಟ್ಟು 1,50,748 ಹಳ್ಳಿಗಳ ಪೈಕಿ 1,00,000 ಹಳ್ಳಿಗಳಲ್ಲಿ ಪ್ರಸ್ತುತ ಶಾಲೆಗಳಿವೆ ಎಂದು ದಾಖಲಿಸುತ್ತಾರೆ. ಆಡಮ್ ನಡೆಸಿದ ಈ ಸಮೀಕ್ಷೆಯ ದಾಖಲೆಗಳ ಅನುಸಾರ ಸಮಾಜದ ಎಲ್ಲಾ ಸ್ತರಗಳ ಜನಗಳಿಗೂ ಪ್ರಾಥಮಿಕ ಶಿಕ್ಷಣ ದೊರೆಯುತ್ತಿತ್ತು. ಸಮಾಜದ ಎಲ್ಲಾ ಜಾತಿ ಸಮುದಾಯಗಳಿಗೆ ಸೇರಿದವರೂ ಪ್ರಾಥಮಿಕ ಶಾಲೆಯ ಅಧ್ಯಾಪಕರಾಗಿದ್ದರು ಎನ್ನುತ್ತದೆ.

ಕೃಷಿ ಉಪಕರಣಗಳ ತಯಾರಿ, ಉಕ್ಕಿನ ಉತ್ಪಾದನೆ, ಉಡುಪು ತಯಾರಿಕೆ, ಲೋಹದ ಕೆಲಸವೇ ಮೊದಲಾದ ತಾಂತ್ರಿಕ ಪರಿಣತಿಯು ಈ ಸಮಾಜದಲ್ಲಿ ಕುಲಕಸುಬಾಗಿ ವಂಶಪಾರಂಪರ್ಯವಾಗಿ ಬರುತ್ತಿತ್ತು. ಬ್ರಿಟಿಷ್ ಆಡಳಿತಕ್ಕೆ ಪೂರ್ವದಲ್ಲಿ ಸಾಕಷ್ಟು ಅಭಿವೃದ್ಧಿಯನ್ನು ಸಾಧಿಸಿದ್ದ ನಮ್ಮ ಸಮಾಜವು ಬ್ರಿಟಿಷ್ ಆಳ್ವಿಕೆಯ  ಹಿಡಿತಕ್ಕೆ ಸಿಲುಕಿದ ಕೆಲವೇ ದಶಕಗಳಲ್ಲಿ ಅವನತಿಯ ಹಂತಕ್ಕೆ ಬಂದು ತಲುಪಿತು ಎನ್ನುವ ಸತ್ಯವನ್ನೂ ಅನಾವರಣ ಮಾಡುತ್ತದೆ. ಅತಿಯಾದ ಹಸ್ತಕ್ಷೇಪ, ವಿನಾಶಕ್ಕಾಗಿ ಸರ್ವ ಪ್ರಯತ್ನಗಳ ಹೊರತಾಗಿಯೂ ಭಾರತೀಯ ವಿದ್ಯೆ, ಸಂಸ್ಕೃತಿ, ಪರಿಣತಿಗಳು ಸ್ವಾತಂತ್ರ್ಯ ಹೊಂದುವ ಕಾಲದವರೆಗೆ ಉಳಿದುಕೊಂಡಿದ್ದರೆ ಅದಕ್ಕೆ ಭಾರತೀಯ ಸಮಾಜದ ಅನೌಪಚಾರಿಕ ಕಲಿಕೆ, ಸಾಂಸ್ಕೃತಿಕ ಸಮೃದ್ಧಿಯೇ ಕಾರಣ ಎನ್ನುವ ಅರಿವಾಗುತ್ತದೆ. ಬ್ರಿಟಿಷ್ ಮಾದರಿಯ ಶಿಕ್ಷಣ ಪಡೆದು ಪಾಶ್ಚಾತ್ಯ ಪ್ರಭಾವಕ್ಕೆ ಒಳಗಾದ ಅಂದಿನ 'ಎಲೈಟ್ ಕ್ಲಾಸ್'ನ ಜನರಿಗೆ ಬ್ರಿಟಿಷರ ಕಾರಣದಿಂದ ಭಾರತೀಯ ಕಲೆ, ಕೈಗಾರಿಕೆ, ಶಿಕ್ಷಣ ವ್ಯವಸ್ಥೆಗಳೆಲ್ಲವೂ ನಾಶವಾದವು ಎಂಬ ಅರಿವಾಗಲೇ ಇಲ್ಲ. ಬದಲಾಗಿ ಈ ವಾದಗಳೆಲ್ಲಾ ಕಪೋಲಕಲ್ಪಿತ ಎಂದೇ ಭಾವಿಸಲಾಯಿತು.

ಹಳ್ಳಿ ಹಳ್ಳಿಗಳಲ್ಲಿ ಇದ್ದ ಶಾಲೆಗಳು ಆಡಳಿತದ ಪ್ರೋತ್ಸಾಹದ ಕೊರತೆಯಿಂದ ನಾಶವಾಯಿತು. ಹೀಗೆ ನಾಶವಾದದ್ದು ಭೌತಿಕ ರೂಪದಲ್ಲಿದ್ದ ಶಾಲೆಗಳಷ್ಟೇ ಅಲ್ಲ. ನಿಧಾನವಾಗಿ ಭಾರತೀಯ ಮೆದುಳುಗಳೂ ನಾಶವಾಗತೊಡಗಿತು. ಇಂಗ್ಲಿಷ್

ವಿದ್ಯಾಭ್ಯಾಸಕ್ಕೆ ತೆರೆದುಕೊಂಡ ಆಧುನಿಕ ಭಾರತೀಯ ವರ್ಗ ಭಾರತವನ್ನು ಅಜ್ಞಾನ, ಅನಾಗರಿಕತೆಯ ನೆಲವೆಂದೇ ಭಾವಿಸಿತು. ಆಧುನಿಕಗೊಳ್ಳುವುದು, ನಾಗರಿಕರಾಗುವುದು ಎಂದರೆ ಬ್ರಿಟಿಷರನ್ನು ಭೌತಿಕವಾಗಿ, ಬೌದ್ಧಿಕವಾಗಿ ಅನುಸರಿಸುವುದು ಎಂಬ ಸ್ಥಿತಿಗೆ ತಲುಪಿದರು. ಮೂಲಭೂತ ಅವಶ್ಯಕತೆಗಾಗಿ ಸ್ವಾವಲಂಬಿಗಳಾಗಿದ್ದ ಭಾರತದ ಹಳ್ಳಿಗಳು, ವ್ಯವಸ್ಥಿತ ಆಡಳಿತ ಪದ್ಧತಿ, ತೆರಿಗೆ ಪದ್ಧತಿ, ಶಿಕ್ಷಣ ವ್ಯವಸ್ಥೆಗಳೆಲ್ಲವೂ ಬ್ರಿಟಿಷ್ ಆಳ್ವಿಕೆಯಲ್ಲಿ ವಿನಾಶದ ಅಂಚಿಗೆ ತಲುಪಿದವು. "Unfortunately, due to their British - oriented education or because of some deeper causes (like the scholastic and hair splitting tendency of Brahmanical learning) Indians have become since the past century , too literal , too much caught up with mere words and phrases. They have lost practically all sense of symboic nature of what is said or written." ಎನ್ನುತ್ತಾರೆ. ಮೆಕಾಲೆಯ 'ಭಾರತದ ಜ್ಞಾನ ಮತ್ತು ವಿದ್ವತ್ತು ಎನ್ನುವುದು ಇಂಗ್ಲೆಂಡಿನ ಉತ್ತಮ ಗ್ರಂಥಾಲಯದಲ್ಲಿರುವ ಒಂದು ಕಪಾಟಿಗೂ ಸರಿಸಮವಲ್ಲ' ಎಂಬ ಮಾತನ್ನು ನಂಬಿಸಲಾಯಿತು. ಭಾರತೀಯ ಜ್ಞಾನ ಪರಂಪರೆ ಅಸಂಗತವೆಂದು ಸಾರಿದ ಮೆಕಾಲೆಯ ಮೋಡಿಗೊಳಗಾದ ಭಾರತೀಯ ಹೊಸ ವಿದ್ಯಾವಂತ ವರ್ಗ ಭಾರತವನ್ನೇ ಅಸಂಗತವೆಂದು ನಂಬಿಬಿಟ್ಟಿತು. ಈ ವರ್ಗದ ಸಹಾಯದಿಂದ ಸಾಂಸ್ಕೃತಿಕವಾಗಿ ಮತ್ತು ಸಾಮಾಜಿಕವಾಗಿ ಅತ್ಯಂತ ಸೂಕ್ಷ್ಮವಾದ ಪಾತ್ರವನ್ನು ವಹಿಸುತ್ತಿದ್ದ ಇಲ್ಲಿಯ ಶಿಕ್ಷಣ ವ್ಯವಸ್ಥೆಯನ್ನೇ ನಾಶಪಡಿಸಲಾಯಿತು. ಆತ್ಮಾಭಿಮಾನವನ್ನು ಮರೆತ ಭಾರತೀಯ ಸಮಾಜ ಬ್ರಿಟಿಷ್ ಮಾನಸಿಕತೆಯಿಂದ ಬಿಡುಗಡೆಗೊಳ್ಳಲಿಲ್ಲ. ಹೀಗಾಗಿ ತನ್ನ ಬಗ್ಗೆ ಅಭಿಮಾನದ, ಹೆಮ್ಮೆಯ ಮಾತು – ಸಂಗತಿಗಳ ಬಗ್ಗೆ ತನಗೇ ಅನುಮಾನ, ತನ್ನ ಪರಂಪರೆಯ ಬಗ್ಗೆ ತನಗೇ ಕೀಳರಿಮೆ ಭಾವನೆ ಉಳಿಯಿತು. ಇದರ ಕಾರಣವನ್ನು ಶ್ರೀ ಧರ್ಮಪಾಲ್ ಆಧಾರ ಸಹಿತವಾಗಿ ಗುರುತಿಸುತ್ತಾರೆ ಮತ್ತು ಭಾರತವನ್ನು ನೋಡಲು ಸರಿಯಾದ ದೃಷ್ಟಿ ಯಾವುದೆನ್ನುವುದನ್ನೂ ನಿರೂಪಿಸುತ್ತಾರೆ. ಆದರೆ ನಮ್ಮ ಶಿಕ್ಷಣ ಕುರಿತ ನೀತಿ ನಿರೂಪಣೆಯಲ್ಲಿ ಇನ್ನೂ ಕೂಡ ಈ ಚರ್ಚೆಗಳು ಮುನ್ನೆಲೆಗೆ ಬರಲೇ ಇಲ್ಲ! ಆನಂದ ಕುಮಾರಸ್ವಾಮಿ, ಅರವಿಂದರು ಹಾಗೂ ಧರ್ಮಪಾಲ್ ಈ ಮೂವರೂ ವಿದ್ವಾಂಸರು ಬ್ರಿಟಿಷ್ ಮಾನಸಿಕತೆಯಿಂದ ಭಾರತವನ್ನು ಬಿಡುಗಡೆಗೊಳಿಸಲುಬೇಕಾದ

ಬಹುಮುಖ್ಯ ಚಿಂತನೆಗಳನ್ನು ಸೂತ್ರರೂಪದಲ್ಲಿ ಮುಂದಿಟ್ಟಿದ್ದರು. ಇತ್ತೀಚಿನ ದಿನಗಳಲ್ಲಿ ನಿರ್ವಸಾಹತೀಕರಣದ ಕುರಿತ ಚಿಂತನೆಗಳು ಅಕಡೆಮಿಕ್ ವಲಯದೊಳಗೆ ಯಾವ ಪ್ರಸ್ತಾಪವನ್ನು ಮಂಡಿಸಲಾಗುತ್ತಿದೆಯೋ, ಅದನ್ನು ವಸಾಹತುಶಾಹಿಯ ಕಾಲಘಟ್ಟದಲ್ಲೇ ಗ್ರಹಿಸಿ ಅದಕ್ಕೊಂದು ದೃಢವಾದ ತಾತ್ವಿಕ ಸ್ವರೂಪವನ್ನು ನೀಡಲು ಈ ವಿದ್ವಾಂಸರು ಗಣನೀಯವಾಗಿ ಶ್ರಮಿಸಿದ್ದಾರೆ. ಈ ಲೇಖನದೊಳಗೆ ಪ್ರಸ್ತುತ ವಿದ್ವಾಂಸರ ಚಿಂತನೆಯನ್ನರಿಯಲು ಪ್ರಾತಿನಿಧಿಕವಾದ ಒಂದೊಂದು ಪಠ್ಯಗಳನ್ನು ಉಲ್ಲೇಖಿಸಲಾಗಿದೆ. ಈ ಚಿಂತಕರುಗಳ ಸಮಗ್ರವಾದ ಬರಹಗಳನ್ನು ಗಂಭೀರವಾದ ಅಧ್ಯಯನಕ್ಕೆ ಒಳಪಡಿಸಿದಾಗ ಮಾತ್ರವೇ ನಮ್ಮನ್ನು ನಾವು ಕಂಡುಕೊಳ್ಳಲು ಬೇಕಾದ ಬೆಳಕಿನ ಕಿರಣಗಳು ಮೂಡಬಹುದಾಗಿದೆ.

# ಕನಕದಾಸ ಮತ್ತು ಶಿಶುನಾಳ ಶರೀಫರ ಕಾವ್ಯದಲ್ಲಿ ಸಮಾಜೋ-ಧಾರ್ಮಿಕ ಸಂವೇದನೆ

* ಡಾ. ವಿಠಲರಾವ್ ಟಿ. ಗಾಯಕ್ವಾಡ್

ಭಾರತ ಪಾರಂಪರಿಕವಾಗಿ ಸಾಧುಸಂತರ ದೇಶವೆಂದೇ ಪ್ರಸಿದ್ಧವಾಗಿರುವುದು. ಅಂದಿನಿಂದ ಇಂದಿನವರೆವಿಗೂ ಅವರು ಮಾನವ ಸಮಾಜವನ್ನು ಧಾರ್ಮಿಕ ಮತ್ತು ನೈತಿಕ ಆಯಾಮಗಳಲ್ಲಿ ಪ್ರಚೋದಿಸುತ್ತಾ, ಪ್ರೇರೇಪಿಸುತ್ತಾ, ಪ್ರಭಾವಿಸುತ್ತಾ ಬಂದಿರುವುದು ವಿಶಿಷ್ಟವಾಗಿ ಗಮನಿಸಲೇಬೇಕಾದಂತಹ ವಿಷಯವಾಗಿದೆ. ಧರ್ಮದ ನೈತಿಕ ಮತ್ತು ಸಾಮಾಜಿಕ ಆಯಾಮವು ಬಹಳ ಗಂಭೀರ ವಾದುದು ಎಂಬುದನ್ನು ಮರೆಯುವಂತಿಲ್ಲ. ಇಲ್ಲಿ ಯಾವುದೇ ಮತಧರ್ಮದ ಬಗೆಗೆ ಸಂಘರ್ಷ ಅಥವಾ ನಿಂದನೆಗಳಾಗಲೀ, ವೈರಗಂಭೀರ ಯುದ್ಧಗಳಾಗಲೀ ಇರುವುದೇ ಇಲ್ಲ. ಮಾತ್ರವಲ್ಲದೆ ಮತಧರ್ಮದ ಸಾಮಾನ್ಯ ಅಂಶವಾಗಿರುವ ಯಥಾಸ್ಥಿತಿ ವಾದಕ್ಕೂ ಇಲ್ಲಿ ಕೊಂಚವೂ ಅವಕಾಶವಿರುವುದಿಲ್ಲ. ಬದಲಾಗಿ ಸಮಾಜವನ್ನು ಮಾನವೀಯ ನೆಲೆಯಲ್ಲಿ ಅತ್ಯಂತ ಪುರೋಗಾಮಿಯಾಗಿ ಮುನ್ನಡೆಸಿಕೊಂಡು ಹೋಗುವುದಾಗಿರುತ್ತದೆ ಇದರ ಮೂಲ ನೆಲೆ. 'ಧರ್ಮ ಸ್ವರೂಪೋ ಹೀ ಧರ್ಮಃ; ಧಾರಣಾಯುಕ್ತದ್ಧರ್ಮಃ' ಎಂಬ ಮಾತುಗಳಲ್ಲಿನ ಮುಖ್ಯ ಧ್ವನಿಯೂ ಇದೇ ಆಗಿದೆ. ಅಂದರೆ ಮಾನವ ಸಮಾಜ ಸಾಂಸ್ಕೃತಿಕವಾಗಿ ತನ್ನ ಜೀವನಕ್ಕೆ ಬೇಕಾದ ನೈತಿಕ ಮೌಲ್ಯಗಳನ್ನು ರೂಪಿಸಿಕೊಂಡು ಜೀವನದ ಪ್ರಮುಖ ನೆಲೆಗಳನ್ನು ರೂಪಿಸಿಕೊಳ್ಳುತ್ತಾ ಬಂದಿರುವುದು ಗಮನಾರ್ಹ. ಯಾವಾಗೆಲ್ಲ ಧರ್ಮವು ಅರ್ಥಾತ್ ಮತಧರ್ಮವು ಸಂಪ್ರದಾಯದ ಚೌಕಟ್ಟಿನಲ್ಲಿ ಸಿಲುಕಿ ಪುರೋಹಿತಶಾಹಿಗಳ ಕೈಯಲ್ಲಿ ಸಿಲುಕಿ ಜೀವನ ಸಂಕೀರ್ಣವಾಗುವುದೋ ಆಗೆಲ್ಲ ಸಾಧು ಸಂತರುಗಳು ಸಮಕಾಲೀನ ಜೀವನ ಸಂಕೀರ್ಣತೆಗಳಿಗೆ ತಮ್ಮ ನೈತಿಕ ನಡೆನುಡಿಗಳ ಮೂಲಕ ವಿಶೇಷ ಚಿಂತನೆಗಳು, ದೃಷ್ಟಿ ಧೋರಣೆಗಳು ಮತ್ತು ಭಕ್ತಿ ದಾರ್ಶನಿಕತೆಯ ಮೂಲಕ ವಿಶಿಷ್ಟ ದೃಷ್ಟಿಕೋನ ಒಂದನ್ನು ಪ್ರರೂಪಿಸುವ ಮೂಲಕ ಸಮಾಜವನ್ನು ತಿದ್ದುತ್ತಾ ಬಂದಿದ್ದಾರೆ. ಈ ಸಾಧುಸಂತರುಗಳ ಜೀವನ ಮಾರ್ಗವು

ಆಧ್ಯಾತ್ಮಿಕ, ತಾತ್ವಿಕ ಮತ್ತು ದಾರ್ಶನಿಕವಾದುದು. ಜೀವನದ ಸಂಕೀರ್ಣತೆಗಳಿಗೆ ಪರಿಶುದ್ಧವೂ ನೈತಿಕವೂ ಆದ ಮೌಲ್ಯಗಳ ಮೂಲಕ ಪರಿಹಾರ ಒದಗಿಸಿ ಜೀವನ ಧರ್ಮಕ್ಕೆ ವಿಶಿಷ್ಟ ಚೌಕಟ್ಟೊಂದನ್ನು ನೀಡುವ ಮೂಲಕ ಆದರಣೀಯರೂ ಪೂಜ್ಯರೂ ಅನುಕರಣೀಯರೂ ಆಗಿರುವುದು ಗಮನಾರ್ಹ. ಇನ್ನು ಅವರು ಬೋಧನೆಯೊಂದಿಗೆ ಗ್ರಂಥಗಳನ್ನೂ ಬರೆಯುವ ಮೂಲಕ ಜೀವನ ಸಂಸ್ಕೃತಿಗೆ ಒಂದು ಅವಿನಾಶಿ ಆಯಾಮವನ್ನು ತಂದುಕೊಟ್ಟರು ಎಂಬುದು ಯಾವತ್ತೂ ಮರೆಯಲಾರದ ಸಂಗತಿ. ಅವರ ಈ ಸಾಹಿತ್ಯವು ತ್ರಿಕಾಲ ದೃಷ್ಟಿ ಧೋರಣೆಗಳ ನೆಲೆಯದ್ದಾದ್ದರಿಂದ ಆ ಸಾಹಿತ್ಯ ಸದಾ ಸ್ಮರಣೀಯ ಭಕ್ತಿಯ ನೆಲೆಯದ್ದಾಗಿದೆ. ಅವರು ಮನಗಾಣಿಸಿರುವ ಜೀವನ ಚಿಂತನೆಗಳು ಮತ್ತೆ ಮತ್ತೆ ನೆನಪಿಸಿಕೊಳ್ಳುವ ಮೂಲಕ ಜೀವನದ ಸಂಕೀರ್ಣತೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ದಿಶೆಯಿಂದ ಅವು ಕಲ್ಪದ್ರುಮಗಳೇ ಆಗಿರುವುದು ಗಮನೀಯ ಸಂಗತಿ. ಯಾವುದೇ ಬಗೆಯ ನೈತಿಕ ಮತ್ತು ಮಾನವೀಯ ಧರ್ಮದ ಚಿಂತನೆಗಳುಳ್ಳ ಸಾಹಿತ್ಯವು ಕಾಲದೇಶಗಳನ್ನು ಮೀರಿ ನಿಂತಿರುವುದಾಗಿರುತ್ತದೆ. ನಮ್ಮ ಜೀವನ ಧರ್ಮವನ್ನು ಮತ್ತೆ ಮತ್ತೆ ತಿದ್ದಿಕೊಳ್ಳುವುದಕ್ಕೆ ಬೇಕಾದ ತ್ರಿಕಾಲ ಜ್ಞಾನದ ಗಣಿಗಳಾಗಿರುತ್ತವೆ. ಅಂತಹ ಸಾಹಿತ್ಯದ ಸಂವೇದನೆ, ಭಾವನೆ, ಧ್ವನಿ ಮತ್ತು ಉದ್ದೇಶಗಳು ಸರ್ವೋಪಯೋಗಿ ಸ್ತರದವುಗಳಾಗಿದ್ದು ಜನರು ಆ ಮೂಲಕ ಸಂತೃಪ್ತ ಬದುಕನ್ನು ರೂಪಿಸಿಕೊಳ್ಳುವುದಕ್ಕೆ ಪ್ರೇರಕ ಪೋಷಕವಾದುವಾಗಿರುತ್ತವೆ. ಹಾಗಾಗಿಯೇ ಸಾಹಿತ್ಯವಿಲ್ಲದ ಸಮಾಜವು ಜೀವಂತಿಕೆಯನ್ನು ಹೊಂದುವುದಕ್ಕೆ ಸಾಧ್ಯವಿಲ್ಲ ಎಂಬುದಾಗಿ ಪಾಶ್ಚಾತ್ಯ ವಿಮರ್ಶಕ ಪಿ.ಬಿ.ಶೆಲ್ಲಿ ತನ್ನ ಲೇಖನವೊಂದರಲ್ಲಿ ಹೇಳಿದ್ದಾನೆ. 'Culture, Language and Literatures are really speeking worldless words' (ಸಂಸ್ಕೃತಿ, ಭಾಷೆ ಮತ್ತು ಸಾಹಿತ್ಯ ಎಂಬ ಶಬ್ದಗಳು ನಿಜವಾದ ಅರ್ಥದಲ್ಲಿ ವಿಶ್ವಾತೀತವಾದ ಶಬ್ದಗಳಾಗಿವೆ.) ಎಂಬ ಆಂಗ್ಲ ಉಕ್ತಿಯು ಬಹಳ ಪ್ರಮುಖವಾದುದು. ಸಮಾಜ, ಸಂಸ್ಕೃತಿ, ಭಾಷೆ ಮತ್ತು ಸಾಹಿತ್ಯ ಇವು ಒಂದಕ್ಕೊಂದು ನಿಕಟ ಸಂಬಂಧವನ್ನು ಹೊಂದಿರುವಂತಹ ಪ್ರಮುಖ ಅಂಶಗಳಾಗಿವೆ. ಮಾನವ ಪ್ರಣೀತ ಸಮಾಜವು ಅಮರವೂ ಜೀವನ ಪ್ರೇರಕವೂ ಆದ ನೆಲೆಯಿಂದ ಸಂಸ್ಕೃತಿ, ಭಾಷೆ ಮತ್ತು ಸಾಹಿತ್ಯಗಳಂತಹ ಗಂಭೀರ ಮೌಲ್ಯಗಳನ್ನು ಹುಟ್ಟುಹಾಕಿತು. ಸಂವಹನ ಪ್ರಣೀತವಾದ ಈ ಮೌಲ್ಯಾತ್ಮಕ ಸಂಗತಿಗಳು ಮನುಷ್ಯ ಜೀವನಕ್ಕೆ ಒಂದು ವಿಶಿಷ್ಟವೂ ಅನನ್ಯವೂ ಆದ

ಪಾರಂಪರಿಕ ಚರಿತ್ರೆಯೊಂದನ್ನು ಕಟ್ಟಿಕೊಟ್ಟಿವೆ. ಇವು ಮನುಷ್ಯ ಜೀವನವನ್ನು ತನ್ಮೂಲಕ ನಿತ್ಯನಿರಂತರ ಕ್ರಿಯಾಶೀಲತೆಗೆ ಅಣಿಗೊಳಿಸಿರುವುವಾಗಿವೆ ಎಂದರೆ ಅತಿಶಯೋಕ್ತಿಯಾಗುವುದಿಲ್ಲ.

ಇನ್ನು ಸಂಸ್ಕೃತಿಯ ಪ್ರಮುಖ ಆಯಾಮವಾದ ಧರ್ಮವು ಸ್ವಾನುಭವ, ಸ್ವದರ್ಶನದ ಪ್ರಮುಖ ಆಯಾಮವಾಗಿದೆ. ಧರ್ಮ ಎಂಬ ಪದಕ್ಕೆ ಅಲೌಕಿಕ ಶಕ್ತಿಗೆ ಶರಣು ಹೋಗಿರುವುದು, ಅಭೌತಿಕ ಅಂಶವನ್ನು ಒಪ್ಪಿಕೊಂಡಿರುವುದು ಮತ್ತು ದೇವರು ಎಂಬ ವಿಚಾರವನ್ನು ನೈತಿಕತೆಯ ನೆಲೆಯಲ್ಲಿ ಒಪ್ಪಿ ಬದುಕುತ್ತಿರುವುದು ಎಂಬಿತ್ಯಾದಿ ಹಲವಾರು ಅರ್ಥಗಳಿವೆ. 'Religion is the surrender of the finite will to the infinite' ಎಂಬ ವ್ಯಾಖ್ಯಾನವೂ ಸಹಾ ಇದನ್ನೇ ಅರ್ಥೈಸುತ್ತಿದೆ. ಮನುಷ್ಯ ಒಪ್ಪಿತ ಮೌಲ್ಯವಾದ ಧರ್ಮವು ಮಾನವ ಜೀವನಕ್ಕೆ ಒಂದು ಗಂಭೀರ ಆಯಾಮವನ್ನು ನೈತಿಕಶುದ್ಧ ಚೌಕಟ್ಟಿನಲ್ಲಿ ಪ್ರರೂಪಿಸಿದೆ ಎಂಬ ಅಂಶವನ್ನು ಮರೆಯುವಂತಿಲ್ಲ. ಜೀವನಕ್ಕೆ ಭೌತಿಕ ಮತ್ತು ಅಭೌತಿಕ ನೆಲೆಗಳಿವೆ. ಇದನ್ನೇ ಸರಳಾರ್ಥದಲ್ಲಿ ಇಹ ಮತ್ತು ಪರ ಎಂಬುದಾಗಿ ಶರಣರು, ದಾಸರು ವ್ಯಾಖ್ಯಾನಿಸಿದ್ದಾರೆ. ಧರ್ಮವು ಈ ಮೇಲೆ ಹೇಳಿರುವಂತೆ 'ಧರ್ಮ ಸ್ವರೂಪೋ ಹೀ ಧರ್ಮಃ; ಧಾರಣಾಯುಕ್ತ ದ್ಧರ್ಮಃ' ಅಂದರೆ ಧರ್ಮದ ಸ್ವರೂಪವೇ ಧರ್ಮ; ಯಾವುದನ್ನು ಧರಿಸುವಂತಹದ್ದೋ ಅದು ಧರ್ಮ' ಎಂಬುದು ಇದರ ಅರ್ಥ. ಮನುಷ್ಯ ಬದುಕು ಇತರೆಲ್ಲ ಪ್ರಾಣಿಗಳಿಗಿಂತಲೂ ಭಿನ್ನವಾದುದು ಮಾತ್ರವಲ್ಲ ವಿಶಿಷ್ಟ ಆಯಾಮವನ್ನು ರೂಪುಗೊಳಿಸಿಕೊಂಡಿರುವುದಾಗಿದೆ. ಅದನ್ನು 'ಮೌಲ್ಯ'ಗಳ ನೆಲೆಯಿಂದ ಕಂಡುಕೊಂಡುದಲ್ಲದೆ, ಆ ಚೌಕಟ್ಟಿನಲ್ಲಿಯೇ ರೂಪಿಸಿ–ಕೊಂಡಿರುವುದರಿಂದಲೇ ಮನುಷ್ಯ ಬದುಕು ಇತರೆಲ್ಲ ಪ್ರಾಣಿಗಳಿಗಿಂತಲೂ ತೀರಾ ಭಿನ್ನವಾಗಿರುವುದು. ಇನ್ನು ಮನುಷ್ಯನ ಆಲೋಚನ ಕ್ರಮವೂ ವಿಭಿನ್ನವಾದುದು. ಪಂಚೇಂದ್ರಿಯ ಪ್ರಣೀತ ದೃಷ್ಟಿಯ ಹಾಗೆಯೇ ಆಧ್ಯಾತ್ಮಿಕ ದೃಷ್ಟಿಕೋನದಿಂದ ವಿಶ್ವಾತ್ಮಕ ದೃಷ್ಟಿಕೋನವನ್ನು ಗಂಭೀರವಾಗಿ ಬೆಳೆಸಿಕೊಂಡಿರುವುದರಿಂದ ಮನುಷ್ಯ ಬದುಕು 'ಸರ್ವೇಜನಾಃ ಸುಖಿನೋಭವಂತು', 'ವಸುದೈವ ಕುಟುಂಬಕಂ' ಎಂಬಂತಹ ಗಂಭೀರ ದಾರ್ಶನಿಕ ನೆಲೆಗಳಿಂದ 'ಮಾನವ ಸಮುದಾಯ ಒಂದೇ' ಎಂಬಂತಹ ಗಂಭೀರ ನೆಲೆಯೊಂದನ್ನು ಜೀವನದಲ್ಲಿ ರೂಪಿಸಿಕೊಂಡಿದೆ. 'ದಯೆ' ಮತ್ತು 'ಭಯ'ಗಳಂತ ವಿಚಾರಗಳ ಮೂಲಕ ದೈವಿಕ ಆಯಾಮ ವೊಂದನ್ನು

ಸೃಷ್ಟಿಸಿಕೊಂಡು ಮನುಷ್ಯ ಬದುಕು ಧಾರ್ಮಿಕ ಪಥವೊಂದನ್ನು ನೆಲೆಗೊಳಿಸಿಕೊಂಡಿದೆ. ಸಾಮಾನ್ಯ ಜನರ ಉದ್ಧಾರಕ್ಕಾಗಿ ಕೆಲವಾರು ವಿಭೂತಿ ಪುರುಷರು ತಮ್ಮೆಲ್ಲಾ ವೈಯಕ್ತಿಕ ಸುಖಗಳನ್ನು ಬದಿಗೊತ್ತಿ ಈ ಧಾರ್ಮಿಕ ಪಥವನ್ನು ನಿರ್ಮಿಸಿದ್ದಾರೆ. ಮನುಷ್ಯ ತಾನು ನೇರವಾಗಿ ಕಾಣಲಾರದಂತಹ ಒಳ್ಳೆಯ ಅಂಶಗಳನ್ನು ವಿವಿಧ ರೂಪಗಳಲ್ಲಿ ಆರಾಧಿಸುತ್ತಲೂ ಪ್ರಾರ್ಥಿಸುತ್ತಲೂ ಅದನ್ನು ದರ್ಶನಾತ್ಮಕಗೊಳಿಸಿಕೊಳ್ಳುವ ಪ್ರಯತ್ನ ಮಾಡಿದ್ದಾನೆ. ಆ ಪರಿಕ್ರಮವೇ ಧರ್ಮ; ಮತ್ತೊಂದರ್ಥದಲ್ಲಿ ಜೀವನಧರ್ಮ. ವಸ್ತುಪೂಜೆ (Fetishism), ಸರ್ವಾತ್ಮದರ್ಶನ (Animism), ಪಿತೃಪೂಜೆ (Ancistor worship) ಮುಂತಾದ ನೆಲೆಗಳಲ್ಲಿ ಮನುಷ್ಯ ಪ್ರೇಮದಿಂದ ಧರ್ಮವನ್ನು ಕಂಡುಕೊಂಡು ಬದುಕುತ್ತಾ ಬಂದಿರುವುದು ಜೀವನದ ಪಾರಂಪರಿಕ ಇತಿಹಾಸವಾಗಿದೆ. ಇದನ್ನು ವಿಶಿಷ್ಟಾರ್ಥದಲ್ಲಿ ಸಮಾಜೋ ಸಾಂಸ್ಕೃತಿಕ ದರ್ಶನ (Socio cultural philosophy) ಎಂಬುದಾಗಿಯೂ ಹೇಳಬಹುದು. ವೈಚಾರಿಕತೆ ಮತ್ತು ಮಾನವೀಯತೆಯಂತಹ ಅಂಶಗಳಿಗೆ ಗಂಭೀರ ಪ್ರೇರಣೆಯನ್ನು ನೀಡಿರುವ ಧರ್ಮ ಅಂದಿನಿಂದ ಇಂದಿನವರೆವಿಗೂ ಮನುಷ್ಯ ಬದುಕಿಗೆ ಬೆಳಕನ್ನು ಕೊಡುವಂತಹ ಒಂದು ಚೈತನ್ಯದಾಯಕ ಶಕ್ತಿಯಾಗಿಯೇ ಕೆಲಸ ಮಾಡುತ್ತಾ ಬಂದಿದೆ ಎಂಬುದನ್ನು ಮರೆಯುವಂತಿಲ್ಲ. ಸಮಾಜೋ ಸಾಂಸ್ಕೃತಿಕ ಪರಂಪರೆಯ ಹರಿವು ಮತ್ತು ವರ್ತಮಾನದ ಆವಶ್ಯಕತೆಗಳ ಚೌಕಟ್ಟಿನಲ್ಲಿ ಧರ್ಮವು ನಿತ್ಯವಿನೂತನ ಅಂಶವಾಗಿದೆ. ಇದು ಮತಧರ್ಮಕ್ಕಿಂತಲೂ ಭಿನ್ನವಾದುದು ಮಾತ್ರವಲ್ಲ; ವಿಶಿಷ್ಟವಾದುದು ಹೌದು. ಇದನ್ನು ಜೀವನ ಸೆಲೆಯಾಗಿ ಬೋಧಿಸುತ್ತಾ ಬಂದಂತಹ ಮಹಾಪುರುಷರನ್ನು ನಾವು ಸಂತರು, ಸಾಧುಗಳು, ಮಹಾ ಸನ್ಯಾಸಿಗಳು, ತ್ಯಾಗಿ ಪುರುಷರು, ಧಾರ್ಮಿಕ ಪುರುಷರು, ಅವಧೂತರು ಮತ್ತು ವಿಭೂತಿ ಪುರುಷರು ಎಂಬಿತ್ಯಾದಿ ಅನೇಕ ಗೌರವಾನ್ವಿತ ವಿಶೇಷಣಗಳಿಂದ ಭಾಜಿಸುತ್ತಾ ಬಂದಿದ್ದೇವೆ. 'ಸಂತ' ಎಂಬ ಪದವು ಇಂಗ್ಲಿಷಿನ 'Saint' ಎಂಬುದಕ್ಕೆ ಸಂವಾದಿಯಾಗಿ ಬಳಕೆಗೊಂಡಿರುವಂತಹುದಾಗಿದೆ. ಆಕ್ಸ್‌ಫರ್ಡ್ ಇಂಗ್ಲಿಷ್ ಶಬ್ದಕೋಶದಲ್ಲಿ Saint ಎಂಬುದಕ್ಕೆ A holy man, respectable ಎಂದೆಲ್ಲ ಅರ್ಥಗಳನ್ನು ನೀಡಲಾಗಿದೆ. ಈ ಸಂತರು ತಮ್ಮ ಎಲ್ಲಾ ಆಸೆ ಆಕಾಂಕ್ಷೆಗಳನ್ನು ವಿಶ್ವಾತ್ಮಕ ನೆಲೆಯಲ್ಲಿ ಕಂಡಂತಹ ದಾರ್ಶನಿಕ ಮಹಾಪುರುಷರು. ಅವರ ನಡೆ-ನುಡಿಗಳು ಅತ್ಯಂತ ಆದರ್ಶಮಯವಾದುವು.

ಕಾಲಕಾಲಕ್ಕೆ ಇಂತಹ ಮಹಾನ್ ವ್ಯಕ್ತಿಗಳು ಮನುಷ್ಯ ಜೀವನಕ್ಕೆ ನೈತಿಕ ವ್ಯಕ್ತಿಮತ್ತೆಯನ್ನು ನೀಡುವ ಮೂಲಕ ಪ್ರಾಣಿ ಸದೃಶ ರಾಗದ್ವೇಷಗಳಿಂದ ಮುಕ್ತರಾಗಿ ಸದ್ವಿವೇಕದಿಂದ ಬಾಳುವ ಸನ್ಮಾರ್ಗವನ್ನು ತೋರಿಸಿದರು.

ಭಾರತದಲ್ಲಿ ಈ ಸಮಾಜೋ–ಸಾಂಸ್ಕೃತಿಕ ಆಧ್ಯಾತ್ಮಿಕ ಪರಂಪರೆಯು ಬಹಳ ವಿಶಿಷ್ಟವೂ ವಿಸ್ತಾರವೂ ಆದ ನೆಲೆಯಲ್ಲಿ ಬೆಳೆದು ಬಂದಿದೆ. ಅದರಲ್ಲಿಯೂ ದಕ್ಷಿಣ ಭಾರತ ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತ ತತ್ತ್ವಗಳನ್ನು ಬೋಧಿಸಿದ ಮೂವರು ಆಚಾರ್ಯರುಗಳ ನೆಲೆವೀಡು. ಕೇರಳದ ಶ್ರೀ ಶಂಕರಾಚಾರ್ಯ, ತಮಿಳುನಾಡಿನ ಶ್ರೀ ರಾಮಾನುಜಾಚಾರ್ಯ ಮತ್ತು ಕರ್ನಾಟಕದ ಶ್ರೀ ಮಧ್ವಾಚಾರ್ಯರುಗಳೇ ಕ್ರಮವಾಗಿ ಈ ಮೇಲಿನ ಮೂರೂ ಪಂಥಗಳನ್ನು ಹುಟ್ಟುಹಾಕಿ ದಕ್ಷಿಣದಿಂದ ಉತ್ತರ ಭಾರತಕ್ಕೂ ಹೋಗಿ ತಂತಮ್ಮ ಮತಪಂಥಗಳ ವೈಶಿಷ್ಟ್ಯಗಳನ್ನು ಜನರಿಗೆ ಬೋಧಿಸುವ ಮೂಲಕ ದಕ್ಷಿಣೋತ್ತರ ಭಾರತದ ಸಂಗಮಕ್ಕೆ ಸೇತುಬಂಧವನ್ನು ರೂಪಿಸಿದರು. ಶ್ರೀ ಶಂಕರಾಚಾರ್ಯರು ಸಂಸ್ಥಾಪಿಸಿದ ಶಾರದಾಂಬೆಯ ಮಠವು ಶೃಂಗೇರಿಯಲ್ಲಿಯೂ, ಶ್ರೀರಾಮಾನುಜಾಚಾರ್ಯರು ಸಂಸ್ಥಾಪಿಸಿದ ಚೆಲುವನಾರಾಯಣ ಅಥವಾ ವೈರಮುಡಿಯ ಮಠವು ಮೇಲುಕೋಟೆಯಲ್ಲಿಯೂ ಮತ್ತು ಶ್ರೀಮಧ್ವಾಚಾರ್ಯರು ಸಂಸ್ಥಾಪಿಸಿದ ಶ್ರೀಕೃಷ್ಣನ ಮಠವು ಉಡುಪಿಯಲ್ಲಿಯೂ ಇದ್ದು ಇಂದಿಗೂ ಜನಾನುರಾಗಿಯಾಗಿ ಪೂಜೆಗೊಳ್ಳುತ್ತಿರುವುದು ವಿಶೇಷ. ಈ ಮೂರೂ ಮತಪಂಥಗಳ ಪ್ರಮುಖ ನೆಲೆವೀಡು ಕರ್ನಾಟಕವೇ ಆಗಿದೆ ಎಂಬುದಾಗಿ ಹೆಮ್ಮೆಯಿಂದಲೇ ಹೇಳಿಕೊಳ್ಳಬಹುದಾಗಿದೆ. ಮುಂದೆ ಇಲ್ಲಿಯೇ ಶರಣರ ಭಕ್ತಿ ಚಳವಳಿಯು ಹುಟ್ಟಿಕೊಂಡು 'ಭಾರತದ ಎಲ್ಲಾ ದಾರಿಗಳೂ ಕಲ್ಯಾಣದ ಕಡೆಗೆ' ಎಂಬಂತೆ ಮಾಡಿದುದು ಮತ್ತೊಂದು ವಿಶೇಷ. ಹಾಗೆಯೇ ಮಧ್ಯಕಾಲೀನ ಯುಗದಲ್ಲಿ ಸೂಫಿ ಸಂತರು ಧರ್ಮ ಸಮನ್ವಯಕ್ಕೆ ಪ್ರೇರಕರಾದರು. ಒಟ್ಟಾರೆ ಕರ್ನಾಟಕದ ಧಾರ್ಮಿಕ ಪರಂಪರೆ ಪರಸ್ಪರ ವಿಭಿನ್ನವಾದರೂ ಹಲವಾರು ಕೊಳು ಕೊಡುಗೆಗಳ ಮೂಲಕ ಅತ್ಯಂತ ವೈಶಿಷ್ಟ್ಯ ಪೂರ್ಣವಾಗಿವೆ ಎಂಬುದು ಗಮನಾರ್ಹ. ಈ ಎಲ್ಲಾ ಪಂಥಗಳು ಭಕ್ತಿ ಮಾರ್ಗದ ಮೂಲಕ ಸಮಕಾಲೀನ ಜನಜೀವನದ ಸಂಕೀರ್ಣತೆಗಳಿಗೆ ತಮ್ಮದೇ ಆದ ಆಚಾರ ವಿಚಾರಗಳ ಮೂಲಕ ಸ್ಪಂದಿಸಿ ಜನರಿಗೆ ನೈತಿಕ ಜೀವನ ಮಾರ್ಗವನ್ನು ರೂಪಿಸಿಕೊಟ್ಟರು. ಈ ಹಿನ್ನೆಲೆಯಲ್ಲಿ ಮಧ್ಯಕಾಲೀನ ಯುಗದಲ್ಲಿ ಆಗಿಹೋಗಿರುವ ಇಬ್ಬರು ಮಹಾನ್ ಸಂತರಾದ ಕನಕದಾಸ ಮತ್ತು

ಶಿಶುನಾಳ ಶರೀಫರ ವಿಚಾರ ತತ್ವಗಳು ಮತ್ತು ಜೀವನಪರ ಚಿಂತನೆಗಳನ್ನು ಗಮನಿಸಬಹುದು.

ಭಕ್ತಶ್ರೇಷ್ಠರೆನಿಸಿದ ಕನಕದಾಸರು ಮಧ್ವಾಚಾರ್ಯರ ದ್ವೈತ ಪಂಥದ ಪ್ರಮುಖ ಅಧ್ವರ್ಯುಗಳಲ್ಲಿ ಒಬ್ಬರು. ದಾಸಕೂಟದ ಮುಖ್ಯ ರೂವಾರಿಗಳಲ್ಲಿ ಇವರೂ ಮುಖ್ಯರು. ಮಧ್ವಾಚಾರ್ಯರು ಬೋಧಿಸಿದ ದ್ವೈತ ಚಿಂತನೆಗಳು ಮುಂದೆ ಶ್ರೀಪಾದರಾಜರೇ ಮೊದಲಾದ ದಾಸಶ್ರೇಷ್ಠರಿಂದಾಗಿ ದಾಸಮಾರ್ಗವೊಂದು ಹುಟ್ಟಿಕೊಳ್ಳುವುದಕ್ಕೆ ಕಾರಣವಾಯಿತು. ಶಿವಶರಣರು ಬಿತ್ತಿಬೆಳೆಸಿದ 'ಭಕ್ತ' ಎಂಬ ಸ್ಥಲದಂತೆಯೇ ದಾಸವರೇಣ್ಯರು ಹುಟ್ಟುಹಾಕಿದ 'ದಾಸ' ಎಂಬ ಸ್ಥಲವೂ ಬಹಳೇ ವಿಶಿಷ್ಟವಾದುದು. ಈ 'ದಾಸ' ಎಂಬ ಪರಿಭಾವನೆಯು ಒಂದು ಪರಂಪರೆಯಾಗಿದ್ದು, ರಾಮಾಯಣದ ಕಾಲದಿಂದಲೇ ಒಪ್ಪಿತವಾದ ಒಂದು ಶ್ರೇಷ್ಠ ಮೌಲ್ಯವಾಗಿದೆ. 'ದಾಸೋಹಂ ಕೋಸಲೇಂದ್ರಸ್ಯ' ಎಂಬ ಉಲ್ಲೇಖವು ರಾಮಾಯಣದಲ್ಲಿ ಕಾಣಸಿಗುತ್ತದೆ. ವಾಯುಪುತ್ರ ಹನುಮಂತನು ಉದ್ಗರಿಸಿರುವ ವಾಕ್ಯವಿದು. ತಾನು ಕೋಸಲೇಂದ್ರಸ್ಯ ಅರ್ಥಾತ್ ಶ್ರೀರಾಮನ ದಾಸನಾಗಿದ್ದೇನೆ ಎಂಬುದು ಹನುಮಂತನ ಭಾವ. ಅಂದರೆ ಇದು ಭಕ್ತಿ ಪ್ರಧಾನ ಮೌಲ್ಯವನ್ನು ಬಿಂಬಿಸುವ ಪದ. ಶ್ರೀಪುರಂದರದಾಸರು ತಮ್ಮ ಒಂದು ಕೀರ್ತನೆಯಲ್ಲಿ ಹೀಗೆ ಹೇಳಿದ್ದಾರೆ, 'ಧ್ಯಾನವು ಕೃತಯುಗದಲ್ಲಿ, ಯಜ್ಞಯಾಗಗಳು ತ್ರೇತಾಯುಗದಲ್ಲಿ, ಭಕ್ತಿಯು ದ್ವಾಪರ ಯುಗದಲ್ಲಿ, ಕೀರ್ತನೆ ಮಾತ್ರದಿ ಮುಕುತಿಯನ್ನೀವ ಪುರಂದರ ವಿಠಲ' ಎಂಬುದಾಗಿ ಅತ್ಯಂತ ಸೂಕ್ಷ್ಮವಾಗಿ ಭಗವಂತ ಮತ್ತು ಭಕ್ತರ ನಡುವಣ ಯುಗ ಮೌಲ್ಯಗಳನ್ನು ಬಿಂಬಿಸಿರುವುದು ಗಮನಾರ್ಹ. ಭಕ್ತಿ ಮತ್ತು ತ್ಯಾಗದ ಮೂಲಕ ತಂತಮ್ಮ ಜೀವನದ ಎಲ್ಲಾ ಸಂಕೀರ್ಣತೆಗಳಿಗೆ ಪರಿಹಾರವನ್ನು ಕಂಡುಕೊಂಡವರು ದಾಸರು. ನವಕೋಟಿ ನಾರಾಯಣರಾಗಿದ್ದ ಶ್ರೀನಿವಾಸ ಶೆಟ್ಟಿಯು ಎಲ್ಲವನ್ನೂ ದಾನಮಾಡಿ ಭಗವತಿ ಬುಟ್ಟಿ ಹಿಡಿದು ತಂಬೂರಿ ಮೀಟುತ್ತಾ ಭಕ್ತಿಯ ಪಾರಮ್ಯವನ್ನು ತಮ್ಮ ಕೀರ್ತನೆ, ಸುಳಾದಿ, ಉಗಾಭೋಗಗಳ ಮೂಲಕ ಸಾರಿದ್ದು ಪುರಂದರದಾಸರ ಶ್ರೇಷ್ಠತೆಯಾಗಿದೆ.

ಪುರಂದರದಾಸರಂತೆಯೇ ಅವರಿಗೆ ಸಮಕಾಲೀನರಾದ ಶ್ರೀಕನಕದಾಸರೂ ಸಹ ಭಕ್ತಿ ಮತ್ತು ತ್ಯಾಗಗಳ ವೈರಾಗ್ಯ ಮೂರ್ತಿಯೇ ಹೌದು. ಪುರಂದರದಾಸರು ದೇವರಿಗೆ ದಾಸರಾದರೆ, ಕನಕದಾಸರಿಗೆ ದೇವರೇ ದಾಸನಾಗಿರುವುದು ಕನಕದಾಸರ ಭಕ್ತಿಶ್ರೇಷ್ಠತೆಯ ಪಾರಮ್ಯವನ್ನು ಮೆರೆಯುವ ಅಂಶವಾಗಿದೆ. ಕನಕದಾಸರ ಕೀರ್ತನೆ,

ಮುಂಡಿಗೆಗಳಲ್ಲಿ ದೇವರೇ ತನ್ನ ಪಥವನ್ನು ಬದಲಾಯಿಸುವುದು, ಅಥವಾ ತಾನೇ ಸ್ವತಃ ಕನಕರನ್ನು ಅರಸಿಕೊಂಡು ಬಂದಂತಹ ಅಂಶಗಳು ಸಂಕಥನ–ಗೊಂಡಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ. ಈ ವಿಚಾರಗಳಿಂದ ದಾಸಕೂಟದ ಒಟ್ಟಾರೆ ವಿವರಣೆಗಳಲ್ಲಿ ಕನಕದಾಸರು ಶ್ರೇಷ್ಠ ಸಾಧಕ ಪುರುಷರಾಗಿಯೇ ವ್ಯಕ್ತವಾಗಿದ್ದು, ಅವರನ್ನು ಭಿನ್ನ ನೆಲೆಯಿಂದ ಅಭ್ಯಸಿಸಬೇಕಾದ ಅನಿವಾರ್ಯತೆಯನ್ನು ಮನಗಾಣಿಸುತ್ತವೆ. ರಾಜ್ಯಾಡಳಿತದ ಸವಾಲುಗಳನ್ನು ಗೆದ್ದು ಸೈ ಎನಿಸಿಕೊಂಡ ತಿಮ್ಮಪ್ಪನಾಯಕರು ದಾಯಾದಿಗಳ ಮತ್ಸರದಿಂದ ರಾಜ್ಯಾಡಳಿತವನ್ನು ಒಪ್ಪಿಸಬೇಕಾಗುತ್ತದೆ. ಆದರೂ ಎದೆಗುಂದದ ತಿಮ್ಮಪ್ಪನಾಯಕ ತನ್ನ ಭಕ್ತಿಯ ಮೂಲಕ ದೈವಸಾಮ್ರಾಜ್ಯದ ಅಧಿಪತಿಯಾಗಿ ಮೆರೆಯುವುದು ಅವರ ಕೀರ್ತನೆ ಮತ್ತು ಕಾವ್ಯಾದಿ ಸಾಹಿತ್ಯದಲ್ಲಿ ಸ್ಪಷ್ಟವಾಗಿ ನೋಡಬಹುದಾಗಿದೆ. ಭಕ್ತಿ, ವೈರಾಗ್ಯ ಮತ್ತು ದರ್ಶನದಂತಹ ಮೌಲ್ಯಗಳಲ್ಲಿ ಕನಕದಾಸರು ವಿಶಿಷ್ಟವಾಗಿ ಕಾಣಿಸುತ್ತಾರೆ. 'ದೊರೆತನವ ಬಿಡಿಸಿ, ಸುಸ್ಥಿರ ಮಾರ್ಗ ತೋರಿ' ಎಂಬ ಕನಕದಾಸರ ಉದ್ಗಾರ ಭೋಗಮಯ ಭೌತಿಕ ಬದುಕಿನ ನಶ್ವರತೆ ಮತ್ತು ಭಕ್ತಿ, ದಾರ್ಶನಿಕತೆಯ ಮೂಲಕ ಭಗವಂತನೊಂದಿಗೆ ಸಾಯುಜ್ಯವಾದ ನೆಲೆಯನ್ನು ಸೂಕ್ಷ್ಮವಾಗಿ ಅಭಿವ್ಯಕ್ತಿಸಿರುವುದನ್ನು ನೋಡಬಹುದಾಗಿದೆ. ಒಂದೆಡೆಯಲ್ಲಿ ದಾಯಾದಿ ಮತ್ಸರವಾದರೆ, ಮತ್ತೊಂದೆಡೆಯಲ್ಲಿ ಅಬ್ರಾಹ್ಮಣ ಶೂದ್ರನೆಂಬ ತಿರಸ್ಕಾರದ ನಡುವೆ ಅಪ್ಪಟ ಭಕ್ತರಾಗಿ ಕನಕದಾಸರು ಸಮಕಾಲೀನ ಸಮಾಜವು ಒಪ್ಪಿಕೊಳ್ಳುವಂತೆ ಮಾಡಿದ ಸಂಗತಿ ಸಾಮಾನ್ಯವಲ್ಲ. ಅವರ ಕೀರ್ತನೆಗಳು, ಕಾವ್ಯಗಳಲ್ಲಿ ಇವು ಅತ್ಯಂತ ತೀಕ್ಷ್ಣವಾಗಿ ಅಭಿವ್ಯಕ್ತವಾಗಿವೆ. ವಿಶಿಷ್ಟಾದ್ವೈತ ಮತ್ತು ದ್ವೈತಪಂಥದ ಸಮನ್ವಯಕಾರರಾಗಿ ಕನಕದಾಸರು ಕಂಡುಬರುತ್ತಾರೆ.

ಇನ್ನು ಕನಕದಾಸರ ಹಾಗೆಯೇ ಶಿಶುನಾಳ ಶರೀಫರದೂ ಕೂಡ ವಿಶಿಷ್ಟ ಸಾಧನೆಯ ಮಾರ್ಗವೇ ಆಗಿದೆ. ಕನಕದಾಸರಂತೆ ಇವರೂ ಕೂಡ ಅತ್ಯಂತ ಕೆಳಸ್ತರದಿಂದ ಬಂದವರು. ಕನಕರನ್ನು ಹೇಗೆ ವ್ಯಾಸರಾಜರು ಶಿಷ್ಯನಾಗಿ ಸ್ವೀಕಾರ ಮಾಡಿದರೋ ಹಾಗೆಯೇ ಶಿಶುನಾಳ ಶರೀಫರನ್ನು ಗುರುಗೋವಿಂದ ಭಟ್ಟರು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿದರು. ತಮ್ಮ ಬೋಧನೆ ಮತ್ತು ಮಾರ್ಗದರ್ಶನದಿಂದ ಶಿಶುನಾಳ ಶರೀಫರನ್ನು ವಿರಾಟ್ ಜೀವನದರ್ಶನ ಪ್ರದರ್ಶಿಸಿದ ಮಹಾನ್ ತತ್ತ್ವಪದಕಾರರನ್ನಾಗಿ ಮಾಡಿಸಿದುದು ಗುರು ಗೋವಿಂದಭಟ್ಟರ ತ್ರಿಕಾಲ ದೃಷ್ಟಿಯ ದ್ಯೋತಕವಾಗಿದೆ. ಬಡ ನೇಕಾರ ಕುಟುಂಬದಲ್ಲಿ ಜನಿಸಿದ ಶಿಶುನಾಳ ಶರೀಫರು

ಮುಂದೆ ಸೂಫಿ ಮತ್ತು ವೇದಾಂತ ಪಂಥಗಳ ಸಮನ್ವಯಮಾರ್ಗದ ಪ್ರವರ್ತಕರಾಗಿದ್ದು ವಿಶೇಷವೇ ಸರಿ. ತಮ್ಮ ಕಾಲದ ಜೀವನ ಸಂಕೀರ್ಣತೆಗಳಿಗೆ 'ಸಮನ್ವಯ ಧರ್ಮದ ಚಿಂತನೆ'ಗಳ ಮೂಲಕ ಪರಿಹಾರ ಕಾಣಿಸುವುದಕ್ಕೆ ಪ್ರಯತ್ನಿಸಿದ ಗಂಭೀರ ಸಮಾಜ ಸುಧಾರಕರಾಗಿದ್ದಾರೆ ಶಿಶುನಾಳ ಶರೀಫರು. ತನ್ನ ಮತ್ತು ಪರಧರ್ಮ ಎಂಬ ಭೇದಭಾವವನ್ನು ಅಳಿದು ಸಮನ್ವಯತೆ, ಸಹನಶೀಲತೆಯ ಮೂಲಕ ಜೀವನದ ಔನ್ನತ್ಯವನ್ನು ಕಾಣಲು ಸಾಧ್ಯ ಎಂಬುದನ್ನು ಸಾಧಾರವಾಗಿ ನಿರೂಪಿಸಿದವರಾಗಿ ಕಾಣಿಸುತ್ತಾರೆ ಶರೀಫರು. ಇಂದಿಗೂ ಶಿಶುನಾಳ ಶರೀಫರ ಜಾತ್ರೆ ಉತ್ಸವಗಳನ್ನು ಹಿಂದೂ ಮುಸ್ಲಿಮರು ಇಬ್ಬರೂ ಒಟ್ಟಾಗಿ ಕೂಡಿಕೊಂಡು ಆಚರಿಸುವ ಮೂಲಕ ಆ ಸ್ಥಳವನ್ನು 'ಭಾವೈಕ್ಯ'ದ ಕೇಂದ್ರವನ್ನಾಗಿ ರೂಪಿಸಿರುವುದು ಗಮನಾರ್ಹ.

**ಅರಿವು ಪ್ರಧಾನ ಜೀವನ:**

ಈ ಇಬ್ಬರೂ ಭಕ್ತರು, ಸಂತರು ಮಧ್ಯಕಾಲೀನ ಯುಗದಲ್ಲಿ ಬಹುಜನ ಸಮಾಜದ ಜನತೆಯಲ್ಲಿ ಆತ್ಮಭರವಸೆ ಮತ್ತು ಜೀವನ ಚೈತನ್ಯವನ್ನು ತುಂಬಿದ ಶ್ರೇಷ್ಠ ವ್ಯಕ್ತಿತ್ವದವರಾಗಿದ್ದಾರೆ. ಹರಿಹರ ಭೇದವನ್ನು ನಿರಾಕರಿಸಿ ನಿಜವಾದ ಜೀವನ ಧರ್ಮ ಹೇಗಿರಬೇಕು ಎಂಬುದನ್ನು ತಮ್ಮ ಬರಹಗಳಲ್ಲಿ ಮತ್ತೆ ಮತ್ತೆ ಒತ್ತಿ ಹೇಳಿದ್ದಾರೆ,

'ಅರಿತು ನಡೆಯಲಿ ಬೇಕು, ನರಕಾಯವೆತ್ತಿದ ಮೇಲೆ
ಅರಿಯದಿದ್ದರೆ ನರಕವೇ ಪ್ರಾಪ್ತಿ'
'ನನ್ನಿಂದ ನಾ ಜನಿಸಿ ಬಂದೆನೆ ದೇವ
ಎನ್ನ ಸ್ವತಂತ್ರವು ಲೇಶವಿದ್ದರು ತೋರು' – ಕನಕದಾಸ
'ನನ್ನೊಳಗೆ ನಾ ತಿಳಕೊಂಡೆ
ನನಗೆ ಬೇಕಾದ ಗಂಡನ್ನ ಮಾಡಿಕೊಂಡೆ...
ಗುರು ಗೋವಿಂದನ ಆದ ಹಿಡಕೊಂಡೆ'
'ಇದೇ ಮನಿ ಇದೇ ಮನಿ
ಹೃದಯದೊಳಗೆ ನಲಿದಾಡುವ ಆತ್ಮಗೆ
ಹಸನಾಗಿ ವಾಸಿಸಿ ಎಸೆಯುವ ಸುಂದರ' – ಶಿಶುನಾಳ ಶರೀಫ

ಈ ಮೇಲಿನ ಧಾರ್ಮಿಕ ಜೀವನೋಕ್ತಿಗಳು ಯಾರಿಗೋ, ಯಾವುದೋ ಕಾಲಕ್ಕೋ ಸೀಮಿತವಾದುವುಗಳಾಗಿಲ್ಲ. ಬದಲಾಗಿ ಸಮಕಾಲೀನವಾಗಿಯೂ ಅವಶ್ಯವಾಗಿ ನಮ್ಮ ಜೀವನ ಮೌಲ್ಯಗಳಲ್ಲಿ ಅವಶ್ಯವಾಗಿ ಸಂಮಿಳನಗೊಳಿಸಿ ಕೊಳ್ಳುವಂತಹ ಸಾರ್ವತ್ರಿಕ ಜೀವನ ಧೋರಣೆಗಳಾಗಿವೆ. ಅತ್ಯಂತ ಸರಳವಾದ ಭಾಷೆಯಲ್ಲಿ ವ್ಯಕ್ತಿ ಮತ್ತು ಪರಮಾತ್ಮನ ಸಂಬಂಧ, ಸಕಲಕೂ ಕಾರಣವಾದ ವ್ಯಕ್ತಿತ್ವದ ಅಂಶಗಳು ಮತ್ತು ದರ್ಶನದ ಮೂಲಕ ಆತ್ಮೋನ್ನತಿಯನ್ನು ಸಾಧಿಸಿ ಪರಮಾತ್ಮನಲ್ಲಿ ಸದ್ಗತಿಯನ್ನು ಪಡೆಯಬಹುದು ಎಂಬ ವಿಚಾರಗಳನ್ನು ಈ ಇಬ್ಬರೂ ಸಂತರ ಅಭಿವ್ಯಕ್ತಿಗಳಲ್ಲಿ ಕಾಣಬಹುದಾಗಿದೆ. ವ್ಯಕ್ತಿ ಈ ಸೃಷ್ಟಿಯಲ್ಲಿ ತನ್ನ ಸ್ಥಾನಮಾನದ ಅರಿವನ್ನು ಪಡೆಯುವ ಮೂಲಕ ತಾನು ಇತರೆ ಪ್ರಾಣಿಗಳಿಗಿಂತ ದೈಹಿಕ ಮತ್ತು ಆತ್ಮಿಕವಾಗಿ ಹೇಗೆ ಭಿನ್ನ ಎಂಬುದನ್ನು ತಿಳಿದುಕೊಳ್ಳಬೇಕು. ಆಗ ಆತ ತನ್ನ ಆತ್ಮಸ್ವರೂಪವನ್ನು ಅದು ತನ್ನ ಹೃದಯದಲ್ಲಿ ಹೇಗೆ ಸುಸುಂದರವಾಗಿ ನಲಿದಾಡುತ್ತದೆ ಎಂಬುದನ್ನು ಮನಗಾಣುವುದಕ್ಕೆ ಸಾಧ್ಯವಾಗುತ್ತದೆ. ವ್ಯಕ್ತಿ ತನ್ನಷ್ಟಕ್ಕೆ ತಾನು ಒಂಟಿಯಾದರೆ ಆತ ಯಾವತ್ತೂ ಸ್ವಯಂಪೂರ್ಣನಾಗಲಾರ. ಸೃಷ್ಟಿಯಲ್ಲಿ ಪ್ರತಿಯೊಂದು ಜೀವಿಗೂ ಅದರದರದೇ ಆದಂತಹ ವಿಶಿಷ್ಟ ಕಾರ್ಯಕಾರಣ ಸಂಬಂಧವು ಇರುತ್ತದೆ. ಪ್ರತಿಯೊಂದು ಜೀವಿಯಲ್ಲಿಯೂ ಜೀವಕಣಗಳು ಸುಸೂಕ್ಷ್ಮವಾಗಿ ಇರುತ್ತವೆ. ಇನ್ನು ಮನುಷ್ಯನಲ್ಲಿ ಈ ಜೀವಕಣದ ಸ್ವರೂಪವು ಅನನ್ಯ ವಿಶಿಷ್ಟವಾದುದು. ವ್ಯಕ್ತಿ ವ್ಯಕ್ತಿತ್ವವಾಗಿ ಪರಿವರ್ತನೆಯಾಗಬೇಕಾದರೆ ಈ ಕಾರ್ಯ ಕಾರಣ ಸಂಬಂಧದ ಅರಿವನ್ನು ಖಚಿತವಾಗಿ ಅರ್ಥಮಾಡಿಕೊಳ್ಳಬೇಕು. ಈ ಮೂಲಕ ಸಾಗಿದಾಗಲೇ ವ್ಯಕ್ತಿಗೆ ಮನುಷ್ಯ ಸ್ಥಾನವು ಲಭ್ಯವಾಗುವುದು. ಎಲ್ಲರೂ ಹೀಗೆ ಅರಿವಿನ ಮೂಲಕ ವಿರಾಟ್ ಸದೃಶರಾಗಿ ವಿಕಾಸವಾಗುವುದಕ್ಕೆ ಸಾಧ್ಯವಿದೆ. ಆದರೆ ಪ್ರಾಣಿಗಳಂತೆ ಸುಮ್ಮನೆ ಜೀವನ ನಡೆಸುವವರಿಗೆ ಇದು ಅಸಾಧ್ಯವಾದ ಕಾರ್ಯ. ಮತಿ ಸೂಕ್ಷ್ಮವಾದಾಗ ವಿಶಿಷ್ಟ ಗತಿಯು ತಂತಾನೆ ಲಭ್ಯವಾಗುತ್ತದೆ. 'ತಾನು ಅರಿವು ಹೊಂದದೆ ಇದ್ದರೆ ಸ್ವತಂತ್ರನಲ್ಲ' ಎಂಬ ಕನಕದಾಸರ ಉಕ್ತಿ ಹಾಗೂ 'ನನ್ನೊಳಗೆ ತಿಳಕೊಂಡು ಬೇಕಾದ್ದ ಗಂಡನ್ನ ಮಾಡಿಕೊಂಡೆ' ಎಂಬ ಶರೀಫರ ಉಕ್ತಿಗಳಲ್ಲಿ ಅರಿವು ಪ್ರಧಾನತೆಯು ಸ್ಪಷ್ಟವಾಗಿ ಗೋಚರವಾಗುತ್ತದೆ. ಅರಿವು ಮನುಷ್ಯನಲ್ಲಿ ಸೃಷ್ಟಿಪರವಾದ ಭಕ್ತಿಯನ್ನು ಮೂಡಿಸುತ್ತದೆ.

## ಪ್ರಜ್ಞೆ ಮತ್ತು ಬ್ರಹ್ಮಜ್ಞಾನ

ಇಬ್ಬರೂ ಸಂತರು ಮಧ್ಯಕಾಲೀನ ಯುಗದಲ್ಲಿ ತಿರಸ್ಕೃತ ಮತ್ತು ಬಹಿಷ್ಕೃತರಾದ ಬಹುಜನ ಸಮಾಜದ ಜನರಲ್ಲಿ ಆತ್ಮಭರವಸೆ ಮತ್ತು ಜೀವನದಲ್ಲಿ ಚೈತನ್ಯವನ್ನು ತುಂಬಿದವರಾಗಿದ್ದಾರೆ. ಹರಿಹರ ಭೇದವನ್ನು ನಿರಾಕರಿಸುವ ಮೂಲಕ ಎಲ್ಲಾ ಭೇದಭಾವಗಳಿಗೆ ಸಮನ್ವಯದ ವೇದಿಕೆಯನ್ನು ರೂಪಿಸಿದುದು ಈ ಇಬ್ಬರೂ ಸಂತರ ಒಂದು ಗಂಭೀರ ಸಾಧನೆ. ಹಾಗೆ ಹೇಳಿದೊಡನೆ ಅವರಿಬ್ಬರೂ ಸಮಕಾಲೀನ ಸಮಾಜದ ಸ್ಥಿತಿಗತಿಯನ್ನು ಮರೆತವರು ಎಂಬುದಾಗಿ ಭಾವಿಸಬಾರದು. ಆ ಹೊತ್ತಿಗೆ ವರ್ಣ, ಜಾತಿ, ಮತಧರ್ಮ ಮೊದಲಾದ ಕಾರಣಗಳಿಂದ ಸಂಕೀರ್ಣಗೊಂಡ ಸಾಮಾಜಿಕ ವ್ಯವಸ್ಥೆಯ ಬಗೆಗೆ ಪ್ರಗತಿಪರವೂ ವೈಚಾರಿಕವೂ ಆದ ನೆಲೆಗಳಿಂದ ಆ ಸಮಸ್ಯೆಗಳಿಗೆ ಪರಿಹಾರದ ಸಾಧ್ಯತೆಗಳನ್ನು ಜನಜೀವನದಲ್ಲಿ ಆಗುಮಾಡಿದವರಾಗಿದ್ದಾರೆ ಎಂಬುದು ಗಮನಾರ್ಹ.

'ಅಜ್ಞಾನಿಗಳ ಕೂಡೆ ಅಧಿಕ ಸ್ನೇಹಕ್ಕಿಂತ
ಸುಜ್ಞಾನಿಗಳ ಕೂಡೆ ಜಗಳವೇ ಲೇಸು....'
'ಅಹುದಾದರಹುದೆನ್ನಿ ಅಲ್ಲವಾದರಲ್ಲವೆನ್ನಿ
ಬಹುಜನ ನೆರೆತಿಳಿದು ಪೇಳಿ ಮತ್ತಿದನು' – ಕನಕದಾಸ
'ಬಹು ಚಂದ ಬಹು ಚಂದ
ಬೋಧವಾಯಿತೋ ಆನಂದ....'
'ಬೋಧ ಒಂದೇ ಬ್ರಹ್ಮನಾದ ಒಂದೇ
ಬರಕೋ ಪದಾ ಬರಕೋ ಇದರನ್ವಯ ತಿಳಕೋ....' – ಶಿಶುನಾಳ ಶರೀಫ

'ಏಕಂ ಸದ್ವಿಪ್ರಾ ಬಹುಧಾ ವದಂತಿ', 'ದೇವನೊಬ್ಬ ನಾಮ ಹಲವು' ಎಂಬಿತ್ಯಾದಿ ಏಕತ್ವದ ವಿಚಾರಧಾರೆಗಳನ್ನು ಒಪ್ಪಿಕೊಂಡು ಅದನ್ನೇ ಜೀವನವೆಂದು ಸಾರಿದ ಭಾರತ ದೇಶದಲ್ಲಿ ಭೇದಭಾವಗಳು, ಉಚ್ಚ ನೀಚತೆಗಳು, ಶ್ರೇಷ್ಠ ಕನಿಷ್ಠತೆಗಳು ಸಾಮಾಜಿಕವಾಗಿ ಜೀವನ ವ್ಯವಸ್ಥೆಯನ್ನು ಒಡೆದು ಹತ್ತು ಹಲವಾರು ಛಿದ್ರತೆಗಳು ರೂಪುಗೊಂಡಿದ್ದವು. ಪರಿಣಾಮವಾಗಿ ಮನುಷ್ಯ ಬದುಕು ಅತ್ಯಂತ ಸಂಕೀರ್ಣವಾಯಿತು. ನಿಜವಾದ ಜೀವನ ಧರ್ಮ ಮತ್ತು ಸಮನ್ವಯ ಪ್ರಣೀತ ಸಾಮಾಜಿಕ ಧರ್ಮದ ತಿಳಿವಳಿಕೆಯು ಇಲ್ಲವಾಗಿ ಜನರು ಅಂಧಕಾರದಲ್ಲಿ ತೊಳಲಾಡುವಂತಾಯಿತು. ಜೀವನದ ಸ್ವರೂಪ ಖಚಿತಗೊಳ್ಳುವುದು

ಜ್ಞಾನಪೂರ್ಣವಾದ ತಿಳಿವಳಿಕೆಯಿಂದ ಮಾತ್ರ. ಇಲ್ಲದೆ ಇದ್ದರೆ ಜೀವನಕ್ಕೆ ಯಾವುದೇ ಅರ್ಥವೂ ಇರುವುದಿಲ್ಲ. ಮನುಷ್ಯ ಸುಜ್ಞಾನಿಗಳ ಜೊತೆಯಲ್ಲಿ ಜಗಳವಾಡಿ ದರೂ ಸರಿ; ಅಜ್ಞಾನಿಗಳ ಜೊತೆಯಲ್ಲಿ ಯಾವತ್ತೂ ಸ್ನೇಹವನ್ನು ಮಾಡಬಾರದು. ನಮ್ಮ ಜನಪದರಲ್ಲಿಯೂ ಇಂಥದೊಂದು ನಾಣ್ಣುಡಿಯಿದೆ, 'ಸೆಗಣಿಯೊಂದಿಗೆ ಸರಸವಾಡುವುದಕ್ಕಿಂತ ಗಂಧದೊಂದಿಗೆ ಜಗಳವಾಡುವುದೇ ಲೇಸು' ಎಂಥ ಅರ್ಥಪೂರ್ಣವಾದ ಮಾತಿದು. ಬದುಕಿದರೆ ಹೀಗೆ ಮಹತ್ವವನ್ನು ತಿಳಿದುಕೊಂಡು ಬದುಕಿದಾಗ ಜ್ಞಾನ-ಅಜ್ಞಾನಗಳ ಸ್ವರೂಪ ಮತ್ತು ಪರಿಣಾಮಗಳು ಎಂಥದ್ದು ಎಂಬುದು ಅರ್ಥವಾಗುತ್ತದೆ. ಈ ಹಿನ್ನೆಲೆಯಲ್ಲಿಯೇ ಕನಕದಾಸರು ಸಮಾಜಕ್ಕೆ ಕೇಳಿರುವುದು, 'ಅಹುದಾದರೆ ಅಹುದೆನ್ನಿ ಅಲ್ಲವಾದರೆ ಅಲ್ಲವೆನ್ನಿ'. ನಿಜ ಹೇಳಬೇಕು; ಹೇಳಿದಾಗ ಬದುಕಿಗೆ ನಿಜದ ನೆಲೆಯು ದಕ್ಕುವುದು.

ಕನಕದಾಸರಂತೆಯೇ ಶಿಶುನಾಳ ಶರೀಫರೂ ಕೂಡಾ ಜೀವನಾನುಭವದ ಸಾಮಾನ್ಯ ಜ್ಞಾನವನ್ನು ವಿಶಿಷ್ಟ ಪರಿಜ್ಞಾನವಾಗಿ ಪರಿಭಾವಿಸಿದವರು. ಗುರುಗಳ ಬೋಧನೆಯನ್ನು ಜೀವನದ ಸೌಂದರ್ಯಾತ್ಮಕತೆಯ ಪರಿಜ್ಞಾನವಾಗಿ ಅಭಿವ್ಯಕ್ತಿಸಿದ್ದಾರೆ. ಎಲ್ಲಿಯೂ ಗುರುಹಿರಿಯರ ಬೋಧನೆಯನ್ನು ವೈಯಕ್ತಿಕ ಸುಖಕ್ಕೆ ಬಳಸಿಕೊಳ್ಳದೆಯೇ ಸಾಮಾಜಿಕವಾಗಿ ಅರಿವನ್ನು ಬಿತ್ತುವ ಜೀವನ ಕೃಷಿಕರಾಗಿ ಜನರ ನಡುವೆ ಅವರ ಸ್ಥಿತಿಗತಿಯನ್ನು ಸುಧಾರಿಸಲು ಮತ್ತು ಉದ್ಧರಿಸಲು ಬದುಕಿದವರು.

**ಗುರುದೀಕ್ಷೆ ಮತ್ತು ಬಹುಜನ ಬೋಧನೆ:**

ಗುರುಪರಂಪರೆಯಿಂದ ದೀಕ್ಷೆ ಪಡೆದ ಈ ಇಬ್ಬರೂ ಸಂತರು ತಮ್ಮ ಬದುಕಿನಲ್ಲಿ ಏನೆಲ್ಲಾ ಮಾಡಿ ಜನಸಾಮಾನ್ಯ ರಿಂದಮೆಚ್ಚುಗೆ ಪಡೆದು ಅವರಿಗೆಲ್ಲ ಅನುಕರಣೀಯವಾಗಿದ್ದರು. ಅದಕ್ಕೆ ಕಾರಣ ಅವರು ತಮ್ಮ ಸಚ್ಚಾರಿತ್ರ್ಯ ಮತ್ತು ಆಧ್ಯಾತ್ಮ ಸಾಧನೆಯ ಮೂಲಕ ವಿಶಿಷ್ಟವಾಗಿ ಬದುಕಿ ಜನರ ಬದುಕಿನಲ್ಲಿಯೂ ವಿಶೇಷ ಜ್ಯೋತಿಯನ್ನು ಹಚ್ಚಿಟ್ಟಿದ್ದುದು. ಆದರೆ ಶ್ರೇಣೀಕೃತವಾದ ಸಮಾಜದಲ್ಲಿ ಅವರಿಗೆ ಆಗ ಕರೆದುದು ಚತುರ್ಥ ಮತ್ತು ಮ್ಲೇಚ್ಛ ಎಂಬುದಾಗಿ. ಈ ಕಾರಣವಾಗಿಯೇ ಇವರಿಬ್ಬರೂ ಅನೇಕ ಕಷ್ಟ-ಸಂಕಷ್ಟಗಳಿಗೆ ಗುರಿಯಾಗ-ಬೇಕಾಯಿತು. ಕನಕದಾಸರ ಸಂತ ಮಾರ್ಗವು ಆರಂಭವಾದುದು ರಾಮಾನುಜಾಚಾರ್ಯರ ಶ್ರೀವೈಷ್ಣವಪಂಥದ ಮೂಲಕ. ಬೇಲೂರಿನ

ಶ್ರೀ ವೈಕುಂಠದಾಸರು ಕನಕದಾಸರಿಗೆ ಶ್ರೀವೈಷ್ಣವ ದೀಕ್ಷೆಯನ್ನು ನೀಡಿದ್ದರು. ಹಾಗಾಗಿಯೇ ಅವರಲ್ಲಿ 'ಶ್ರೀ ರಾಮಾನುಜ ಮುನಿ ಶರಣು', 'ರಾಮಾನುಜರೇ ನಮೋ' ಎಂಬ ಉದ್ಗಾರಗಳು ಬಂದಿವೆ. ಈ ವಿಷ್ಣು ದೀಕ್ಷೆಯು ಮುಂದೆ ದಾಸ್ಯ ನಿಷ್ಠೆಯಾಗಿ ಉಜ್ವಲತೆಯಿಂದ ಬೆಳೆದುದು ಮಾತ್ರ ಮಧ್ವಾಚಾರ್ಯರ ದ್ವೈತ ಪಂಥದ ಅನುಯಾಯಿಗಳಾದ ಶ್ರೀ ವ್ಯಾಸರಾಜ ತೀರ್ಥರ ಶಿಷ್ಯೋತ್ತಮರಾದ ನಂತರ. ಅಲ್ಲಿಯೂ ಅವರು ಹಲವಾರು ಪರೀಕ್ಷೆಗಳಿಗೆ ಒಳಗಾಗಿ ತಮ್ಮ ಭಕ್ತಿಯ ಶ್ರೇಷ್ಠತೆಯನ್ನು ಪವಾಡ ಸದೃಶವಾಗಿ ತೋರಿಸಿ, 'ಅಪ್ಪಟ ಕನಕ'ರಾಗಿ ಎಲ್ಲರೆದುರು ಸುಸ್ಥಿತರಾದರು. ಇನ್ನು ಶಿಶುನಾಳ ಶರೀಫರ ಸಂತ ಮಾರ್ಗವು ಆರಂಭವಾದುದು ವೀರಶೈವ ಗುರು ಶ್ರೀ ಸಿದ್ಧರಾಮಯ್ಯ ಮತ್ತು ವೈದಿಕ ಗುರು ಶ್ರೀ ಗುರುಗೋವಿಂದಭಟ್ಟರ ಮಾರ್ಗದರ್ಶನದಲ್ಲಿ. ಈ ಅಂಶಗಳ ಮೂಲಕ ಸ್ಪಷ್ಟವಾಗುವುದೇನೆಂದರೆ, ಈ ಇಬ್ಬರೂ ಸಂತರ ಅಧ್ಯಾತ್ಮವು ಬಹುಶ್ರುತ ಸಂಸ್ಕೃತಿಯ ಪಾತಳಿಯ ಮೇಲೆ ರೂಪುಗೊಂಡಿದ್ದು, ಸಾಧಿತವಾದದ್ದು ಮತ್ತು ದಾರ್ಶನಿಕವಾಗಿ ಕಂಗೊಳಿಸಿರುವುದು ಎಂಬ ವಿಶೇಷ ಸಂಗತಿ. ಹಾಗಾಗಿಯೇ ಒಂದೆಡೆಯಲ್ಲಿಯೇ ಕೊಳೆತು ಹೋಗುವಂತೆ ಮಾಡುತ್ತಿದ್ದ ಮತಪಂಥದ ನಿಷ್ಠೆಯನ್ನು ಮೀರಿ ನಿರ್ದುಷ್ಟ ಅಭಿವ್ಯಕ್ತಿ ಮತ್ತು ನಿಖರ ಸಮಾಜದರ್ಶನವನ್ನು (Socio-Philosophy) ಮನಗಾಣುವುದಕ್ಕೆ ಅವರಿಗೆ ಸುಲಭ ಸಾಧ್ಯವಾಯಿತು.

'ವಿಶ್ವಲೋಕೇಶ ವಿಮಲೈಕ ತೇಜೋ ಮೂರ್ತಿ
ವಿಶ್ವ ಉದ್ಧಾರ ವಿಶ್ವಜ್ಞಾನರೂಪ
ವಿಶ್ವದೊಳು ಒಳಹೊರಗು ನೀನಲ್ಲದೆ ಬೇರೆ
ವಿಶ್ವ ನಾಟಕ ಸೂತ್ರಧಾರರುಂಟೇ ಹರಿಯೇ....
ಸತ್ಯಧರ್ಮಗಳೆಲ್ಲ ಎತ್ತ ಪೋದವೋ ಕಾಣೆ
ಉತ್ತಮರ ಜೀವನಕೆ ದಾರಿಯಿಲ್ಲ
ನಿತ್ಯದಲಿ ಕಳುವು ವ್ಯಭಿಚಾರವುಳ್ಳವರೆಲ್ಲರು
ಅರ್ಥ ಸಂಪನ್ನರಾಗ್ಯನುಭವಿಸುತಿಹರು' – ಕನಕದಾಸರು

'ದಿನಮಾನ ಬಹುಕೆಟ್ಟವು ಸದ್ಗುರು ಪುತ್ರ
ನಿನಗವು ಬಂದು ತಟ್ಟವು....

ದುಡ್ಡು ಕೆಟ್ಟದ್ದು ಮನುಜ ಈ ಲೋಕದಿ
ದುಡ್ಡು ಕೆಟ್ಟದ್ದು ನೋಡೆಲೋ
ಹೆಡ್ಡ ಮೂಢಾತ್ಮನೆ ದೊಡ್ಡವರನು
ದುಡ್ಡು ಇಳಿಸುತಲಿ ಅಡ್ಡ ಬೀಳಿಸುವುದು.....'
'ಹೊನ್ನೇನ ಮಾಡೀತು ಹರಳಿಗೂ ಹಿಂದೆ
ಬಣ್ಣಬಿಟ್ಟರೆ ಭಾರ ಏನಂತ ತಿಳಿಯೆ.....' – ಶಿಶುನಾಳ ಶರೀಫ

ಹೀಗೆ ಈ ಇಬ್ಬರೂ ಸಂತರು ತಂತಮ್ಮ ಕಾಲದ ಭೋಗಮಯ ಬದುಕನ್ನು, ಪಟ್ಟಭದ್ರ ಹಿತಾಸಕ್ತಿ ಮತ್ತು ತಾರತಮ್ಯಗಳನ್ನು ನಿರ್ದಾಕ್ಷಿಣ್ಯವಾಗಿ, ನಿರ್ದುಷ್ಟವಾಗಿ ವಿರೋಧಿಸುತ್ತಲೇ ಜನಸಾಮಾನ್ಯರ ಬದುಕಿನ ಪರವಾಗಿಯೇ ಪೂರ್ಣವಾದ ಕಾಳಜಿಯಿಂದ ಮಾತನಾಡಿದ್ದಾರೆ. ಯಾವ ರೀತಿಯ ಅತಿರೇಕಗಳಾಗಲಿ, ದುರ್ವರ್ತನೆಗಳಾಗಲಿ ಇವರಿಗೆ ಸಹ್ಯವಲ್ಲ. ಹಾಗಾಗಿಯೇ ಅವರು ತಂತಮ್ಮ ಕೀರ್ತನೆ, ತತ್ತ್ವಪದಗಳಲ್ಲಿ ಸಾಚಾತನ ಮತ್ತು ಸ್ವಾಭಿಮಾನದ ನೆಲೆಯಿಂದಲೇ ಸಮಾಜಕ್ಕೆ ಸತ್ಪಥದ ದಾರಿಯನ್ನು ಮನಗಾಣಿಸಲು ಉದ್ಗರಿಸಿರುವುದು ಅವಶ್ಯ ಗಮನಾರ್ಹ. ಸರ್ವ ಜನೋದ್ಧಾರದ, ಸಾಮಾಜಿಕ ಬದುಕಿನ ಒಳಿತಿನ ಚೌಕಟ್ಟುಗಳಲ್ಲಿ ಇರುವುವಾಗಿವೆ ಇವರ ಅಭಿವ್ಯಕ್ತಿಗಳು.

**ಸಾಮಾಜಿಕ ವ್ಯವಸ್ಥೆ ಮತ್ತು ಪ್ರತಿರೋಧ**

ಸಾಮಾಜಿಕವಾಗಿ ಶ್ರೇಣೀಕೃತವಾದ ಜಾತಿ ವ್ಯವಸ್ಥೆಯು ಜನಸಾಮಾನ್ಯರ ನಿತ್ಯ ಬದುಕನ್ನು ತೀವ್ರವಾಗಿ ಸಂಕೀರ್ಣಗೊಳಿಸಿದ್ದು ಮತ್ತು ಇದರಿಂದಾಗಿ ಉಂಟಾದ ಸಾಮಾಜಿಕ ಬಿರುಕು ಬಹಳ ಗಂಭೀರವಾದುದು. ಅನ್ಯೆಕ್ಯತೆ ಮತ್ತು ಅಸಾಂಗತ್ಯ ಅಂಶಗಳು ಇತರೆಲ್ಲ ಸಾಮಾಜಿಕ ಕೆಡುಕುಗಳೊಂದಿಗೆ ಕೂಡಿಕೊಂಡು ಅನ್ಯಾಕ್ರಮಣವನ್ನು ಸುಲಭ ಸಾಧ್ಯವಾಗಿಸಿದ್ದುದನ್ನು ಈ ಇಬ್ಬರೂ ಸಂತರು ಸೂಕ್ಷ್ಮವಾಗಿ ಗಮನಿಸಿದ್ದರು. ಅದರ ಪರಿಣಾಮವು ನಮ್ಮ ಸಮಾಜದ ಮೇಲೆ ಬಹಳ ಗಂಭೀರವಾಗಿಯೇ ಆಯಿತು. ಹೊರಗಿನಿಂದ ಬಂದಂತಹ ಇಸ್ಲಾಂ ದೊರೆಗಳು ಮತ್ತು ಧರ್ಮಗುರುಗಳು ಹಾಗೂ ಬ್ರಿಟಿಶ್ ವಸಾಹತುಶಾಹಿ ಆಡಳಿತಗಾರರು ಮತ್ತು ಕ್ರೈಸ್ತ ಮಿಶನರಿಗಳು ಸಮೂಹಗತ ಮತ್ತು ಸುಸಂಘಟಿತ ರಕ್ಷಣೆ ಮತ್ತು ಸಾಮಾಜಿಕ ಸಮಾನತೆಯ ನೆಲೆಯಿಂದ ಭಾರತೀಯರನ್ನು ಆಕರ್ಷಿಸಿದವು.

ವರ್ಣಾಶ್ರಮದ ಮೂಲಕ ವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿಹಿಡಿದಿದ್ದ ಭಾರತೀಯ ಸಾಮಾಜಿಕ ವ್ಯವಸ್ಥೆಯ ನಿಜ ಸ್ವರೂಪವು ಗಂಭೀರವಾದುದು. 'ಚಾತುರ್ವರ್ಣ್ಯಂ ಮಯಾಸೃಷ್ಟ್ಯಂ ಗುಣಕರ್ಮ ವಿಭಾಗಶಃ' ಎಂಬುದಾಗಿದೆ ಗೀತೆಯ ಉಕ್ತಿ. ಅಂದರೆ ಚಾತುರ್ವರ್ಣ್ಯವನ್ನು ನಾನು ಸೃಷ್ಟಿಸಿರುವುದು ಅವರವರ ಗುಣ ಮತ್ತು ಕರ್ಮಗಳ ಆಧಾರದ ಮೇಲೆ ಎಂಬುದು ಶ್ರೀಕೃಷ್ಣನ ಅಭಿವ್ಯಕ್ತಿ. ಈ ಪ್ರಕಾರ ಯಾರೇ ವ್ಯಕ್ತಿಗಳು ತಂತಮ್ಮ ಬುದ್ಧಿಶಕ್ತಿ ಮತ್ತು ದೈಹಿಕ ಸಾಮರ್ಥ್ಯದ ಮೂಲಕ ಯಾವುದೇ ವರ್ಣಕ್ಕಾದರೂ ಹೋಗಬಹುದಿತ್ತು. ಮೂಲತಃ ಗೀತೆಯ ಅರ್ಥವೆಂದರೆ, ಒಂದು ಬ್ರಾಹ್ಮಣ ಕುಟುಂಬದಲ್ಲಿ ನಾಲ್ವರು ಮಕ್ಕಳಿದ್ದರೆ, ಅವರೆಲ್ಲರೂ ಬ್ರಾಹ್ಮಣರೇ ಅಗುತ್ತಿರಲಿಲ್ಲ. ಬದಲಾಗಿ ಯಾರು ಯಾವ ಕಾರ್ಯ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರೋ ಅದಕ್ಕನುಗುಣವಾಗಿ ಅವರವರ ವರ್ಣವು ನಿರ್ಧರಿತವಾಗುತ್ತಿತ್ತು. ನಿದರ್ಶನಕ್ಕೆ ವೇದಾದಿಗಳ ಅಧ್ಯಯನ ಕ್ಷೇತ್ರದಲ್ಲಿ ತೊಡಗಿಕೊಂಡವನು ಬ್ರಾಹ್ಮಣ, ರಕ್ಷಣಾ ಕ್ಷೇತ್ರಕ್ಕೆ ಹೋದವನು ಕ್ಷತ್ರಿಯ, ವ್ಯಾಪಾರ ವ್ಯವಹಾರ ಕೌಶಲ್ಯವನ್ನು ರೂಢಿಸಿಕೊಂಡವನು ವೈಶ್ಯ ಮತ್ತು ಇವಾವುದರಲ್ಲಿಯೂ ತೊಡಗಿಕೊಂಡು ಸಾಮರ್ಥ್ಯ ಬೆಳೆಸಿಕೊಳ್ಳದವರು ಸೇವೆ, ಕರ್ಮಗಳ ಕ್ಷೇತ್ರದಲ್ಲಿ ನೆಲೆನಿಂತವರು ಶೂದ್ರ ಹೀಗೆ ಸಾಮಾಜಿಕ ವ್ಯವಸ್ಥೆಯು ರೂಪುಗೊಂಡಿತ್ತು. ಇದು ನಿಜವಾಗಿಯೂ ವಿಶಿಷ್ಟ ಚಲನಶೀಲತೆಯನ್ನು ಹೊಂದಿದ್ದಂತಹ ಸಾಮಾಜಿಕ ವ್ಯವಸ್ಥೆಯಾಗಿತ್ತು. ಆದರೆ ಇದು ಮುಂದೆ ಜಾತಿ ವ್ಯವಸ್ಥೆಯಾಗಿ ಗಟ್ಟಿಯಾದ ಸಾಂಪ್ರದಾಯಿಕ ಸಾಂಸ್ಥಿಕ ಸ್ವರೂಪವನ್ನು ಪಡೆಯಿತು. ಪರಿಣಾಮವಾಗಿ ಅದರ ಚಲನಶೀಲ ಪ್ರಕ್ರಿಯೆಯು ಇಲ್ಲವಾಗಿ ಹೋಯಿತು. ಜಾತಿಯನ್ನು ಒಂದು ಸಂಸ್ಥೆಯನ್ನಾಗಿ ಮಾಡಿದುದರ ಪರಿಣಾಮ ಅದರಲ್ಲಿನ ಉದ್ಯೋಗದ ಸ್ವರೂಪ, ಉತ್ಪಾದನ ಸ್ವರೂಪ, ವ್ಯವಹಾರ ಸ್ವರೂಪ ಮತ್ತು ಸಾಮಾಜಿಕ ಬದುಕಿನ ಐಕ್ಯಮತ್ಯದ ಸ್ತರಗಳೆಲ್ಲವೂ ಸುಸ್ಪಷ್ಟವಾಗಿ ಪ್ರತಿಯೊಬ್ಬರ ಗಮನಕ್ಕೆ ಬರುತ್ತವೆ. ಅದನ್ನು ಸ್ಥಾಪಿತ ವ್ಯವಸ್ಥೆಯಾಗಿ ಒಪ್ಪಿಕೊಂಡು ಸಾಂಪ್ರದಾಯಿಕವಾಗಿ ಬದುಕುತ್ತಿರುವ ವಿಶ್ವದ ಯಾವುದೇ ಸಮಾಜಗಳು ಸಂಕೀರ್ಣತೆ ಮತ್ತು ಅಸಂಗತತೆಯನ್ನು ಅನುಭವಿಸಬೇಕಾಗಿ ಬಂದುದು ಅನಿವಾರ್ಯವಾಗಿ ಹೋಯಿತು. ಈ ಅಂಶವನ್ನು ನಾವು ಈ ಇಬ್ಬರೂ ಸಂತರ ಸಾಮಾಜಿಕ ಜೀವನವನ್ನು ನೋಡಿದಾಗ ಖಚಿತವಾಗುತ್ತದೆ. ಸಾಮಾಜಿಕ ಶ್ರೇಣೀಕರಣದಿಂದಾಗಿ ಕನಕದಾಸರು ಮತ್ತು ಶಿಶುನಾಳ ಶರೀಫರು ತಂತಮ್ಮ ಜೀವನದಲ್ಲಿ ಅನುಭವಿಸಿದ ಉಪಟಳಗಳು ಮತ್ತು

ಸವಾಲುಗಳನ್ನು ಗೆದ್ದು ತಂತಮ್ಮ ಸಂತಪ್ರಜ್ಞೆಯನ್ನು ಸಮರ್ಥವಾಗಿ ತೋರಿಸಿಕೊಟ್ಟಿರುವುದು ಸಾಂಸ್ಕೃತಿಕ ನೆಲೆಯಿಂದ ಅತ್ಯಂತ ಮಹತ್ವವಾದ ಮುಖ್ಯ ದಾಖಲೆಗಳಾಗಿ ಗಮನಿಸುವಂತಹವಾಗಿವೆ. ಸಂಸ್ಥೆಯೊಳಗಿನ 'ಪ್ರತಿಭೆ'ಗೂ, ವ್ಯವಸ್ಥೆಯೊಳಗಿನ 'ಪ್ರತಿಭೆ'ಗೂ ಅಭಿವ್ಯಕ್ತಿ ಮತ್ತು ಅನಾವರಣದ ದೃಷ್ಟಿಯಿಂದ ಬಹಳ ಸೂಕ್ಷ್ಮವೂ ಗಂಭೀರವೂ ಆದ ಅಂತರಗಳಿರುತ್ತವೆ. ಗುರು ವ್ಯಾಸರಾಯರು, ಶ್ರೀ ಪುರಂದರದಾಸರು ಮತ್ತು ಗುರು ಗೋವಿಂದಭಟ್ಟರಂತಹ ಮಹಾನ್ ವ್ಯಕ್ತಿಗಳು ಸಂಸ್ಥೆಯ ಸ್ವರೂಪದಲ್ಲಿದ್ದರೂ ಅವರಿಗೆ ಶ್ರೇಷ್ಠ ಮಾರ್ಗವನ್ನು ರೂಪಿಸಿಕೊಟ್ಟು ಅಮರ ವ್ಯಕ್ತಿತ್ವಗಳನ್ನಾಗಿಸಿದರು ಎಂಬುದು ಗಮನಾರ್ಹ. ಅವರ ಉದಾರವಾದಿ ದೃಷ್ಟಿಧೋರಣೆಗಳು ಭಕ್ತ ಕನಕದಾಸ ಮತ್ತು ಸಂತ ಶಿಶುನಾಳ ಶರೀಫರನ್ನು ಸುಸೂಕ್ಷ್ಮವೂ ಅಮೇಯವೂ ಆದ ಸಂತರನ್ನಾಗಿಸಿ ಸಾಮಾಜಿಕ ಚಕ್ಷುಗಳನ್ನಾಗಿ ಮಾಡಿತು ಎಂದರೆ ಅತಿಶಯೋಕ್ತಿಯಾಗುವುದಿಲ್ಲ. ಈ ಇಬ್ಬರೂ ಸಂತರು ತಂತಮ್ಮ ವಿಚಾರಗಳ ಮೂಲಕ ಬಂಡಾಯ ಮಾಡಿದರೂ ಅದು ಮನವರಿಕೆಯ ನೆಲೆಯದ್ದಾಗಿತ್ತು ಮತ್ತು ಕಾಲಾತೀತ ದಾರ್ಶನಿಕ ದೃಷ್ಟಿಯದ್ದಾಗಿತ್ತು ಎಂಬುದು ಗಮನಾರ್ಹ ಸಂಗತಿ. ಅವರ ಪ್ರಮುಖ ಆಶಯಗಳು ಇಂತಿವೆ:

1. ಪ್ರತಿಯೊಂದು ಆತ್ಮನಲ್ಲಿಯೂ ಪವಿತ್ರತೆಯು ಸಹಜವಾಗಿ ಹುಟ್ಟಿನಿಂದಲೇ ಅಂತಸ್ಥವಾಗಿರುತ್ತದೆ. ಭಗವಂತನ ದೃಷ್ಟಿ ಮತ್ತು ಸೃಷ್ಟಿಯಲ್ಲಿ ಎಲ್ಲರೂ ಸಮಾನರು.

2. ಹೀಗೆ ಅಂತಸ್ಥವಾಗಿರುವ ಪಾವಿತ್ರ್ಯವನ್ನು ಪ್ರತಿಯೊಬ್ಬರೂ ಆಂತರಿಕವಾಗಿ ಮತ್ತು ಬಾಹ್ಯವಾಗಿ ಪ್ರೋಜ್ವಲತೆಯಿಂದಲೇ ಅಭಿವ್ಯಕ್ತ–ಗೊಳಿಸಬೇಕು.

3. ಜ್ಞಾನ, ಕರ್ಮ, ಭಕ್ತಿ ಮತ್ತು ಯೋಗಗಳ ಮೂಲಕ ಇದನ್ನು ಸಾಧ್ಯವಾಗಿಸಬೇಕು.

4. ಜೀವನವನ್ನು ಪ್ರತಿಯೊಬ್ಬರೂ ಭಕ್ತಿ ಮತ್ತು ದಾಸ್ಯತ್ವದ ಭಾವದಿಂದ ರೂಪಿಸಿಕೊಳ್ಳಬೇಕು.

5. ಉಚ್ಚನೀಚ ಭಾವನೆಯು ಸಾಮಾಜಿಕವಾಗಿ ಅನಿಷ್ಟಕಾರಕವಾದುದು.

ಈ ಎಲ್ಲಾ ವಿಚಾರಗಳು ಇಬ್ಬರೂ ಸಂತರ ಅಭಿವ್ಯಕ್ತಿಗಳಲ್ಲಿ ಸುಸ್ಪಷ್ಟವಾಗಿಯೂ ನಿಖರವಾಗಿಯೂ ವ್ಯಕ್ತವಾಗಿವೆ:

ದುಡ್ಡು ಕೆಟ್ಟದ್ದು ಮನುಜ ಈ ಲೋಕದಿ
ದುಡ್ಡು ಕೆಟ್ಟದ್ದು ನೋಡೆಲೋ
ಹೆಡ್ಡ ಮೂಢಾತ್ಮನೆ ದೊಡ್ಡವರನು
ದುಡ್ಡು ಇಳಿಸುತಲಿ ಅಡ್ಡ ಬೀಳಿಸುವುದು.....'
'ಹೊನ್ನೇನ ಮಾಡೀತು ಹರಳಿಗೂ ಹಿಂದೆ
ಬಣ್ಣಬಿಟ್ಟರೆ ಭಾರ ಏನಂತ ತಿಳಿಯೆ.....' – ಶಿಶುನಾಳ ಶರೀಫ
ಜಪವ ಮಾಡಿದರೇನು ತಪವ ಮಾಡಿದರೇನು
ವಿಪರೀತ ಕಪಟಗುಣ ಕಲುಷವಿದ್ದವರು....'
'ಡಿಂಬದಲ್ಲಿ ಇರುವ ಜೀವಕಂಬ ಸೂತ್ರ ಗೊಂಬೆಯಂತೆ

ಎಂದಿಗಾದರೊಂದು ದಿನ ಸಾವು ತಪ್ಪದು....'
'ತೀರ್ಥ ಪಿಡಿದವರೆಲ್ಲ ತಿರುನಾಮಧಾರಿಗಳೇ –
ಜನ್ಮ ಜನ್ಮ ಸಾರ್ಥಕವಿಲ್ಲದವೆಲ್ಲ ಭಾಗವತರೇ' – ಕನಕದಾಸ
'ಸ್ಥಿರವಲ್ಲ ಕಾಯ ಸ್ಥಿರವಲ್ಲ ಈ ಅ
ಸ್ಥಿರ ಶರೀರವ ನಂಬಲಿ ಬ್ಯಾಡ....'
'ಬಲುನಾತ ಬಲುನಾತ ಮನ
ಮಲಿನ ತೊಳೆಯದಿರೆ ಹೊಲಸಾಯ್ತುವ್ವ ನಾತ....'
'ನಡೆ ನುಡಿಯಿಂದ ನಾವು ನಡೆಯಬೇಕಣ್ಣ ದೇಹವಿದುತದುನಡುವೆ ಬಿದ್ದು
ಹೋಗತೈತಣ್ಣ....'
'ಶುದ್ಧ ಜ್ಞಾನವು ಮೇಲೇರುವುದುದಾರಿದ್ರ್ಯ ದೇಹವು ಸುಟ್ಟು ಹೋಗಿಯೂ
ಹಾರುವುದು....' – ಶಿಶುನಾಳ ಶರೀಫ

## ಜೀವನ ಶೋಧ ಮತ್ತು ಆತ್ಮಪರಿಜ್ಞಾನ

ಜೀವನದಲ್ಲಿ ಶ್ರದ್ಧೆ ಮತ್ತು ಭಕ್ತಿ ಭಾವನೆಗಳು ಇಲ್ಲದೆ ಇದ್ದರೆ ಯಾವುದೇ ಕಾರ್ಯವು ಅರ್ಥಪೂರ್ಣ ವಾಗುವುದಿಲ್ಲ. ಸಂಪೂರ್ಣವಾಗಿ ಶರಣಾಗತ–ಮಯತೆಯಿಂದ ನಡೆದುಕೊಂಡಾಗ ಮಾತ್ರವೇ ಪ್ರತಿಯೊಬ್ಬರಿಗೂ ಆತ್ಮೋದ್ಧಾರ

ಸಾಧ್ಯ ಎಂಬುದು ಇಬ್ಬರೂ ಸಂತರಲ್ಲಿ ವ್ಯಕ್ತವಾಗಿರುವಂತಹ ಮುಖ್ಯವಾದ ಕಾಳಜಿಯಾಗಿರುವುದನ್ನು ಗಮನಿಸಬಹುದು.

‘ನಾ ನಿಮ್ಮ ದಾಸರದಾಸ
ಈ ನರರ ಪಾಡೇನೆರಡು ದಿನದ ಸಂಸಾರ....’
‘ದಾಸನಾಗಬೇಕು ಕ್ಲೇಶ ಪಂಚಕವಳಿದು
ಆಸೆಯಲ್ಲಿ ಮನ ಸೂಸದೆ ಸರ್ವದಾ....’
‘ಕ್ಷಮಿಸುವುದೆಮ್ಮ ತಪ್ಪುಗಳ ಸ್ವಾಮಿ
ಕ್ಷಮಶೀಲವೆಂಬ ದಾಸೋಹ ಬಿರುದಿನೊಳು....’
‘ನೇಮವಿಲ್ಲದ ಹೋಮವೇತಕೆ
ರಾಮನಾಮದಿಂದ ಮಂತ್ರವೇತಕೆ....’
‘ತನ್ನ ಪ್ರಾಪ್ತಿಯ ಫಲವ ತಾನರಿಯದೆ
• ಇನ್ನು ನುಡಿವುದು ಮೂರ್ಖತನವಲ್ಲವೆ?....’ – ಕನಕದಾಸ

‘ನಯ ಭಯದಲಿ ಮೈಯಿಕ್ಕುವ ಚರಣಕೆ
ಕೈ ಮುಗಿದೆರಗುವೆ ಪೈ ಸದ್ಗುರುರಾಯ....’
‘ಗುಡಿಯ ನೋಡಿರಣ್ಣಾ ದೇಹದ
ಗುಡಿಯ ನೋಡಿರಣ್ಣ....’
‘ಬಾಯಿಲೆ ಬ್ರಹ್ಮವ ಬೊಗಳಿದರೇನೋ ಛೀ
ನಾಯಿ ಜನ್ಮಕೆ ಬಿದ್ದು ಹೊರಳುವಿ ಮನಸೇ....’
‘ಕಾಯ ಜೀವರೊಳು ನ್ಯಾಯವ ಬೆಳಗೆ
ಮಾಯದೊಳಗೆ ಮುಳುಗೇಳುವೆ ಮನಸೇ....’
‘ಮರಣಕೆ ಒಳಗಾಗುವ ನರಗುರಿಗಳೇ ನಿಮ
ಗರಿಕಿರಲಿ ಸಾರುವೆ ಕೇಳಿರಿ....’
‘ವರದ ಶ್ರೀ ಗುರು ಮಂತ್ರ ಬರೆದೋದಿ ಜಪಿಸದೆ
ಇರಲಾರದು ಮರೆತಿರಬೇಡಿರೋ....’ – ಶಿಶುನಾಳ ಶರೀಫ

ಹೀಗೆ ಅಂತರಂಗ ಮತ್ತು ಬಹಿರಂಗವಾಗಿ ಪೂರ್ಣ ಶುದ್ಧತೆಯ ಒಂದು ದೈವಿಕ ನೆಲೆಯನ್ನು ಆ ಹೊತ್ತಿನ ಪುರೋಹಿತಶಾಹಿ ಪ್ರಣೀತ ಸಾಂಪ್ರದಾಯಿಕ ಸಮಾಜಕ್ಕೆ

ನಿರ್ದುಷ್ಟವಾಗಿ ತಿಳಿಸಿಕೊಟ್ಟಿದ್ದಾರೆ. ಇನ್ನು ಹಣದ ಮದ, ವಿದ್ಯೆಯ ಮದ ಮತ್ತು ಜಾತಿಯ ಮದಗಳ ಬಗೆಗೆ ಈ ಇಬ್ಬರೂ ಸಂತರು ಎಂಥವರಿಗೂ ಮನವರಿಕೆಯಾಗುವ ಹಾಗೆ ಸೂಕ್ಷ್ಮವಾಗಿಯೂ ಗಂಭೀರವಾಗಿಯೂ ಅಭಿವ್ಯಕ್ತಿಸಿದ್ದಾರೆ.

'ಎಲ್ಲಾರು ಮಾಡುವುದು ಹೊಟ್ಟೆಗಾಗಿ
ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ....'

'ಮೆರೆಯದಿರು ಮೆರೆಯದಿರು ಎಲೆ ಮಾನವ ನಿನ್ನ
ಸಿರಿಯ ಹವಣೇನು ಹೇಳಲೋ ಮಂಕು ಜೀವ....'

'ಕುಲ ಕುಲ ಕುಲವೆನ್ನುತಿಹರು
ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ
ಆತ್ಮ ಯಾವಕುಲ ಜೀವ ಯಾವ ಕುಲ
ತತ್ವೇಂದ್ರಿಯಗಳ ಕುಲ ಪೇಳಿರಯ್ಯಾ....'

'ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರೂ ಬಲ್ಲಿರಾ ಬಲ್ಲಿರಾ
ಹುಟ್ಟದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲ
ಗುಟ್ಟ ಕಾಣಿಸಬಂತು ಹಿರಿದೇನು ಕಿರಿದೇನು
ನೆಟ್ಟನೆ ಸರ್ವಜ್ಞನ ನೆನೆ ಕಂಡ್ಯಾ ಮನುಜ....'

'ವರಕವಿಗಳ ಮುಂದೆ ನರಕವಿಗಳ ವಿದ್ಯೆ ತೋರಬಾರದು – ಈ
ಧರಣಿಯ ಕಲ್ಲಿಗೆ ಶರಣೆಂದು ಪೂಜೆಯ ಮಾಡಬಾರದು....' – ಕನಕದಾಸ

'ದುಡ್ಡು ಕೆಟ್ಟದ್ದು ಮನುಜ ಈ ಲೋಕದಿ
ದುಡ್ಡು ಕೆಟ್ಟದ್ದು ನೋಡಲೋ
ಹೆಡ್ಡ ಮೂಢಾತ್ಮನ ದೊಡ್ಡ ದೊಡ್ಡವರನು
ದುಡ್ಡು ಇಳಿಸುತಲಿ ಅಡ್ಡ ಬೀಳಿಸುವುದು....'

'ಶತ್ರುವಲ್ಲವು ಹೊನ್ನು ಹೆಣ್ಣು ಮಣ್ಣು
ತಿಳಿದರೆ ಅವು ಮೂರು ಗುರುಕೊಟ್ಟ ಕಣ್ಣು....'

'ಹಣವೇ ಇದು ಗುಣವೇ
ಗುಣವಲ್ಲ ವಿಭೂತಿ
ಫಣಿಯೊಳಿಲ್ಲದ ಮೇಲೆ ಗುಣವೇ....'

'ಬಿಡು ಬಿಡು ನಿಮ್ಮಯ ಈ ನಡತಿ
ಭೇ ಸಲ್ಲದು ರೀತಿ
ಪೊಡವಿಯೊಳಗೆ ನಮ್ಮ ಗೊಡವಿ ಯಾತಕೆ
ನುಡಿಯದೊಂದನು ನೀನು ನಡೆ ನಡೆ ಮನೆಗೆ....' – ಶಿಶುನಾಳ ಶರೀಫ

ಭಾರತೀಯ ಆಳರಸರು ಮತ್ತು ವಸಾಹತುಶಾಹಿ ಬ್ರಿಟಿಷ್ ಆಡಳಿತ ವ್ಯವಸ್ಥೆಯಲ್ಲಿ ಭಾರತೀಯ ಸಾಮಾಜಿಕ ಜೀವನ ವ್ಯವಸ್ಥೆಯು ಸಾಟಿ ವಿನಿಮಯ ಪದ್ಧತಿಯಂತಹ ವಸ್ತು ಪ್ರಾಧಾನ್ಯತೆಯಿಂದ ಹಣ ಪ್ರಾಧಾನ್ಯತೆಗೆ ಹೊರಳಿದ ಅಥವಾ ವರ್ಗವಾದುದರ ಪರಿಣಾಮವನ್ನು ನಾವು ಇಲ್ಲಿ ನೆನಪಿಸಿಕೊಳ್ಳಬಹುದು. ವಸ್ತು ಪ್ರಾಧಾನ್ಯ ವವಸ್ಥೆಯಲ್ಲಿ ಪರಸ್ಪರರ ನಡುವಣ ಅವಲಂಬನೆ ಮತ್ತು ಸಹಕಾರದ ಅಂಶಗಳೇ ಪ್ರಮುಖವಾಗಿದ್ದವು. ಅದು ಹೋಗಿ ಹಣಮಯವಾದ ಜೀವನದ ತೀವ್ರ ಪರಿಣಾಮವನ್ನು ಈ ಇಬ್ಬರೂ ಸಂತರು ಬಹಳ ಸೂಕ್ಷ್ಮವಾಗಿಯೇ ಮನಗಂಡಿದ್ದರು ಎಂಬುದಕ್ಕೆ ಈ ಮೇಲಿನ ಉಲ್ಲೇಖಗಳು ಗಂಭೀರ ನಿದರ್ಶನಗಳಾಗುತ್ತವೆ. ದಯೆ, ಕ್ಷಮೆ, ಉದಾರತೆ ಮತ್ತು ಮಾನವೀಯತೆಯಂತ ಜೀವನ ಮೌಲ್ಯಗಳು ಹಣ ಪ್ರಧಾನ ವ್ಯವಸ್ಥೆಯಿಂದಾಗಿ ಸಂಪೂರ್ಣವಾಗಿ ನಶಿಸಿ ಹೋದವು. ಅಲ್ಲದೆ, ಹಣಮಯ ಪ್ರಧಾನ ವ್ಯವಸ್ಥೆಯಿಂದಾಗಿ ಮನುಷ್ಯ ಬದುಕಿನಲ್ಲಿ ಗಳಿಕೆ, ಉಳಿಕೆ, ಖರೀದಿಗಳಂತಹ ಶಕ್ತಿಸಾಮರ್ಥ್ಯದಂತಹ ಸ್ಥಿತಿಯ ಮೂಲಕ ವಿಶಿಷ್ಟವಾದ ಗ್ರಾಹಕ ಸ್ತರವೊಂದು ನಿರ್ಮಾಣವಾಯಿತು. ಆ ಪರಿಸ್ಥಿತಿಯನ್ನು ಸರಿಯಾಗಿ ವ್ಯವಸ್ಥೆ ಮಾಡಿಕೊಂಡಂತಹ ಬ್ರಿಟಿಷ್ ಸರ್ಕಾರ ಇಂಥ ವ್ಯವಸ್ಥಾಂತರದ ಮೂಲಕ ಭಾರತೀಯರು ಪ್ರತಿಯೊಂದಕ್ಕೂ ತನ್ನನ್ನೇ ಅವಲಂಬಿಸಿಕೊಂಡು ಇರುವಂತೆ ಭಾರತಾದ್ಯಂತ ಸಾಮಾಜಿಕ ವ್ಯವಸ್ಥೆಯನ್ನು ಸಮಗ್ರವಾದ ನೆಲೆಯಲ್ಲಿ ಬಲವಾಗಿ ರೂಪಿಸಿತು. ಈ ಕಾರಣದಿಂದಾಗಿ ಮಾನವೀಯ ಮೌಲ್ಯಗಳೆಲ್ಲ ಲುಪ್ತವಾಗಿ ಸ್ವಾರ್ಥಮಯವಾದಂತಹ ಭೋಗ ಜೀವನವನ್ನು ಒಪ್ಪಿಕೊಳ್ಳುವಂತಾಯಿತು. ಮಧ್ಯಕಾಲೀನ ಯುಗದ ಈ ಭಾಗ ಸಂಸ್ಕೃತಿಯು ಇಂದಿಗೂ ನಿಚ್ಚಳವಾಗಿಯೇ ಇರುವುದನ್ನು ನೋಡಬಹುದು. ಆದಿಕವಿ ಪಂಪನಿಂದ ಹಿಡಿದು (ಮನುಷ್ಯ ಜಾತಿ ತಾನೊಂದೆ ವಲಂ) ರಾಷ್ಟ್ರಕವಿ ಕುವೆಂಪು ಅವರವರೆಗೂ (ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ, ಮನುಜಮತ ಮತ್ತು ವಿಶ್ವಪಥ, ಹಾಗೂ ವಿಶ್ವಮಾನವ ಸೂತ್ರಗಳು) ಈ ಮದಪ್ರಣೀತ ಮಾನವ

ಸಮಾಜದ ವ್ಯವಸ್ಥೆಯನ್ನು ತೀರಾ ಗಂಭೀರವಾಗಿಯೇ ಟೀಕಿಸುತ್ತಾ ಬಂದಿದ್ದಾರೆ. ಕನಕದಾಸ ಮತ್ತು ಶಿಶುನಾಳ ಶರೀಫರೂ ಕೂಡಾ ತಮ್ಮ ಕಾಲದ ಸಮಾಜೋ ನೈತಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ಗಂಭೀರವಾಗಿ ಟೀಕಿಸಿರುವುದು ಮೇಲಿನ ಉಲ್ಲೇಖಗಳಲ್ಲಿ ಸ್ಪಷ್ಟವಾಗಿಯೇ ಕಂಡುಬರುತ್ತದೆ. ಹೊಟ್ಟೆ, ಬಟ್ಟೆಗಳು ಜೀವನದ ಆವಶ್ಯಕತೆಯ ದ್ಯೋತಕಗಳಾಗಿವೆ. ಆದರೆ ಅದು ವ್ಯಕ್ತಿಸ್ವಾರ್ಥಕ್ಕೆ ಪೋಷಕವಾದರೆ ದುಡ್ಡು ಎಲ್ಲಾ ಕೆಟ್ಟತನಕ್ಕೂ ಕಾರಣವಾಗುತ್ತದೆ. ಇದರೊಂದಿಗೆ ಜಾತಿ, ಕುಲ, ಮತಧರ್ಮ ಮತ್ತು ಪಂಥಗಳ ಶ್ರೇಣೀಕರಣ ವ್ಯವಸ್ಥೆಯು ತಳುಕು ಹಾಕಿಕೊಂಡಿರುವುದರಿಂದ ಅಗತ್ಯತೆ, ಅನಿವಾರ್ಯತೆಗಳಿಗಿಂತ ಶ್ರೇಷ್ಠತೆಯ ವ್ಯಸನದ ಬಹಿರಂಗ ಪ್ರದರ್ಶನಕ್ಕೆ ಕಾರಣವೂ ಆಗಿದೆ.

## ವೈಚಾರಿಕ ಪರಿಜ್ಞಾನ ಪ್ರಸರಣ

ಕನಕದಾಸರಂತಹ ಸಂತರು ತಮ್ಮ ವೈಚಾರಿಕ ಆಧ್ಯಾತ್ಮದ ಮೂಲಕ ಪುರುಷಶಾಹಿ ಅಥವಾ ಪುರುಷ ಪ್ರಾಧಾನ್ಯತೆಯನ್ನು ಗಂಭೀರವಾಗಿಯೇ ಟೀಕಿಸಿದ್ದಾರೆ. ಹಾಗೆಯೇ ಸಾಂಪ್ರದಾಯಿಕ ನಂಬಿಕೆಗಳಂತಹ ಅನೇಕ ಸಂಗತಿಗಳನ್ನೂ ಪ್ರಶ್ನಿಸಿದ್ದಾರೆ. ನಿದರ್ಶನಕ್ಕೆ 'ಅಪುತ್ರಸ್ಯ ಗತಿರ್ನಾಸ್ತಿ' ಎಂಬುದನ್ನು ಗಮನಿಸಬಹುದು. ಅಂದರೆ ಗಂಡು ಸಂತಾನ ಇಲ್ಲದೆ ಹೋದರೆ, ಮಾತಾಪಿತೃಗಳಿಗೆ ಸ್ವರ್ಗ ಪ್ರಾಪ್ತಿಯಿಲ್ಲ ಎಂದರ್ಥ. ಗಂಡು ಸಂತಾನವಾಗದೆ ಎಷ್ಟೋ ಹೆಣ್ಣುಮಕ್ಕಳು ಪಡಬಾರದ ಪಾಡನ್ನೆಲ್ಲ ಅನುಭವಿಸಿರುವುದು ನಮ್ಮ ಸಾಂಸ್ಕೃತಿಕ ಇತಿಹಾಸದಲ್ಲಿ ನಿಖರವಾಗಿ ಕಾಣಸಿಕ್ಕುತ್ತವೆ. ಇದನ್ನು ಕಾಲಕಾಲಕ್ಕೆ ಸಂತರು, ಕವಿಗಳು, ತತ್ವಜ್ಞರು, ಧಾರ್ಮಿಕ ವೇತ್ತರುಗಳೆಲ್ಲರೂ ಅಲ್ಲಗಳೆದು ಗಂಡು–ಹೆಣ್ಣುಗಳಿಬ್ಬರೂ ಮುಖ್ಯವೆಂದು ಸಾರುತ್ತಾ ಬಂದಿದ್ದಾರೆ ಎಂಬುದನ್ನು ಗಮನಿಸಬಹುದು:

'ವಾಗರ್ಥಾವಿವ ಸಂಪೃಕ್ತೌ ವಾಗರ್ಥ ಪ್ರತಿಪತ್ತಯೇ।
ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ॥'

– ಮಹಾಕವಿ ಕಾಳಿದಾಸ

'ಮೊಲೆ ಮುಡಿ ಬಂದರೆ ಹೆಣ್ಣೆಂಬರು
ಮೀಸೆ ಕಾಸೆ ಬಂದರೆ ಗಂಡೆಂಬರು
ನಡುವೆ ಸುಳಿವ ಆತ್ಮನು ಗಂಡೂ ಅಲ್ಲ ಹೆಣ್ಣೂ ಅಲ್ಲ
ಕಾಣಾ ರಾಮನಾಥ' – ಜೇಡರ ದಾಸಿಮಯ್ಯ

'ಹೆಣ್ಣಲ್ಲವೆ ನಿಮ್ಮನೆಲ್ಲ ಹಡೆದ ತಾಯಿ
ಹೆಣ್ಣಲ್ಲವೆ ಪೊರೆದವಳು
ಹೆಣ್ಣು ಹೆಣ್ಣೆಂದೇಕೆ ಬೀಳುಗಳೆವರು ಕಣ್ಣು ಕಾಣದ ಗಾವಿಲರು'
– ಸಂಚಿಯ ಹೊನ್ನಮ್ಮ

ಭಕ್ತ ಕನಕದಾಸರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಗಂಡು ಸಂತಾನದಿಂದಷ್ಟೇ ಮೋಕ್ಷವೆಂಬ ನಂಬಿಕೆಯನ್ನು ಅತ್ಯಂತ ಕಟುವಾಗಿಯೇ ಟೀಕಿಸಿದ್ದಾರೆ. ಅವರು ತಮ್ಮ ಒಂದು ಕೀರ್ತನೆಯಲ್ಲಿ ನಿಗಮಾರ್ಥ ತತ್ವ ವಿಚಾರಗಳಿಂದಷ್ಟೇ ಮೋಕ್ಷವೆಂಬುದಾಗಿ ಒತ್ತಿ ಒತ್ತಿ ಹೇಳಿದ್ದಾರೆ:

'ಮಗನಿಂದೆ ಗತಿಯುಂಟೇ ಜಗದೊಳಗೆ
ನಿಗಮಾರ್ಥ ತತ್ವ ವಿಚಾರದಿಂದಲ್ಲವೆ?
ಸತ್ಯನೊಬ್ಬ ಮಗ ಶಾಂತನೊಬ್ಬ ಮಗ ದು
ವೃತ್ತಿ ನಿಗ್ರಹನೊಬ್ಬ ಮಗ ಸಮಚಿತ್ತನೊಬ್ಬನು
ಉತ್ತಮರೀ ನಾಲ್ಕು ಮಕ್ಕಳಿದ್ದ ಮೇಲೆ
ಹೆತ್ತರೇನು ಇನ್ನು ಹೆರದಿದ್ದರೇನಯ್ಯಾ?' – ಕನಕದಾಸ

ಸತ್ಯ, ಶಾಂತ, ದುರ್ವೃತ್ತಿ ನಿಗ್ರಹ ಮತ್ತು ಸಮಚಿತ್ತತೆ ಎಂಬುವು ಯಾರೇ ವ್ಯಕ್ತಿಯ ವ್ಯಕ್ತಿತ್ವದ ದ್ಯೋತಕಗಳು. ಅಂತಹವು ಇದ್ದರೆ ಯಾರು ಬೇಕಾದರೂ ಸದ್ಗತಿಗೆ ಅರ್ಹರು ಎಂಬುದು ಇದರ ನಿಜಾರ್ಥ. ಕನಕದಾಸರು ಅಷ್ಟನ್ನು ಹೇಳಿ ನಿಲ್ಲುವುದಿಲ್ಲ. ಮುಂದುವರೆದು ಉತ್ತಮವಾದ ಈ ನಾಲ್ಕು ಮಕ್ಕಳಿದ್ದ ಮೇಲೆ ಗಂಡು ಮಗುವನ್ನು ಹೆತ್ತರೇನು ಅಥವಾ ಹೆರದಿದ್ದರೇನು ಯಾವುದೇ ವ್ಯತ್ಯಾಸವಿಲ್ಲ. ತನಗೆ ಗಂಡು ಸಂತಾನವಿದೆ ಎಂದು ಬೀಗುವ ದುರಾಚಾರಿ ವ್ಯಕ್ತಿಗಳ ಭ್ರಮೆಯನ್ನು ಕುರಿತು ಇಷ್ಟು ಕಟುವಾಗಿ ಟೀಕಿಸಿದವರನ್ನು ಮಧ್ಯಕಾಲೀನ ಸಾಹಿತ್ಯದಲ್ಲಿ ಮತ್ತಾರನ್ನೂ ಕಾಣಲಾಗುವುದಿಲ್ಲ.

ಒಟ್ಟಾರೆ ಕನಕದಾಸರು ಮತ್ತು ಶಿಶುನಾಳ ಶರೀಫರು ಕರ್ನಾಟಕದ ಮಧ್ಯಕಾಲೀನ ಭಕ್ತಿಯುಗದ ಶ್ರೇಷ್ಠ ಭಕ್ತರು ಮತ್ತು ಸಂತರಾಗಿದ್ದಾರೆ ಎಂಬುದು ಗಮನಾರ್ಹವಾದ ಸಂಗತಿ. ಮತಧರ್ಮ ಶ್ರೇಷ್ಠತೆ ಮತ್ತು ನಿಷ್ಠೆ ಎಂಬ ಅಹಂಕಾರ

ಮತ್ತು ಕುರುಡುತನಕ್ಕೆ ಬದಲಾಗಿ ತಂತಮ್ಮ ಚಿಂತನೆಗಳನ್ನು ಪರಿಶುದ್ಧವಾದ ಪ್ರೀತಿ, ಭಕ್ತಿ ಮತ್ತು ಆಧ್ಯಾತ್ಮದಂತಹ ಅನುಭಾವದ ನುಡಿಗಳಿಂದ ಗಂಭೀರವಾಗಿ ಮಾನವೀಯತೆಯ ಬೆಳಕಿನಲ್ಲಿ ಬಿಂಬಿಸಿದ್ದಾರೆ. ಅವರು ತಂತಮ್ಮ ನಿಜ ಜೀವನದಲ್ಲಿ ಬೆಂದು ಬದುಕಿದ್ದರು, ಎಲ್ಲಾ ಸತ್ವ ಪರೀಕ್ಷೆಗಳಲ್ಲಿಯೂ ಜಯಿಸಿ ಬಂದು ಗುರುಗಳಿಂದ ಸೈ ಎನಿಸಿಕೊಂಡರು. ಹಾಗೆಯೇ ಅಂತಹ ಸಾಧ್ಯತೆ ಇಲ್ಲದೆ, ತಾವು ಪರಮಾತ್ಮನಿಂದ ಪಡೆದುಕೊಂಡಿರುವುದು ಇಷ್ಟೇ ಎಂದುಕೊಂಡು ನೊಂದು ಬದುಕುತ್ತಿದ್ದ ಜನಸಾಮಾನ್ಯರಲ್ಲಿ ತಂತಮ್ಮ ಕಾವ್ಯ, ಕೀರ್ತನೆ ಮತ್ತು ತತ್ವಪದಗಳನ್ನು ಹಾಡುತ್ತಾ ಅವರಿಗೆ ಸಾಂತ್ವನ ಹೇಳಿದರು ಮತ್ತು ಅವರಲ್ಲಿ ಆತ್ಮ ಭರವಸೆಯನ್ನು ತುಂಬಿದರು. ಅಲ್ಲದೆ ಶ್ರೇಷ್ಠತೆಯ ವ್ಯಸನದ ಆಸನದ ಮೇಲೆ ಕುಳಿತುಕೊಂಡು ನರಳಿಸುತ್ತಿದ್ದ ಪಟ್ಟಭದ್ರ ಹಿತಾಸಕ್ತಿಗಳ ಬುಡವನ್ನೇ ಈ ಮೂಲಕ ಪೂರ್ಣವಾಗಿ ಅಲುಗಾಡುವಂತೆ ಮಾಡಿದುದು ಇಲ್ಲಿ ಗಮನಿಸಬೇಕಾದಂತಹ ಮುಖ್ಯವಾದ ಅಂಶ. ಈ ಇಬ್ಬರೂ ಸಂತರು ತಂತಮ್ಮ ಅಭಿವ್ಯಕ್ತಿಗಳನ್ನು ಮಾತು (ಸಾಹಿತ್ಯ) ಮತ್ತು ಧಾತು (ಸಂಗೀತ)ಗಳ ಮೂಲಕ ಮಾಡಿದುದು ಬಹಳ ಮುಖ್ಯವಾದ ಸಂಗತಿ. ಮಾತು ಮತ್ತು ಧಾತುಗಳ ಸಂಗಮದಲ್ಲಿ ಮಾತು ಬುದ್ಧಿಯ ಭಾಷೆಯಾದರೆ, ಧಾತು ಹೃದಯದ ಭಾಷೆ. ಇವೆರಡರ ಮೂಲಕ ಜನರ ಸಂವೇದನೆಗೆ ಹೊಸ ಆಯಾಮವನ್ನು ನೀಡಿದರು. ಆ ಮೂಲಕ ಸಮಾಜದಲ್ಲಿ ಒಂದು ಹೊಸ ಪರಿಜ್ಞಾನ (Cognition) ಮತ್ತು ಪರಿಷ್ಕಾರವು (Sublimation) ಉಂಟಾಗಲು ಸಾಧ್ಯವಾಯಿತು. ಇದನ್ನು ತಾತ್ವಿಕವಾದ ಅರ್ಥದಲ್ಲಿ ಹೇಳುವುದಾದರೆ ವಾಸ್ತವ ಮತ್ತು ಆದರ್ಶಗಳ ಒಟ್ಟು ಸಂಯೋಗದ ಪರಿಭಾಷೆಗಳಾಗಿವೆ. ಈ ಮೂಲಕ ಈ ಇಬ್ಬರೂ ಸಂತರು ವ್ಯಕ್ತಿ ಮತ್ತು ಸಮಾಜದ ಸ್ತರದಲ್ಲಿನ ಎಲ್ಲಾ ಬಗೆಯ ತೋರಿಕೆ ಮತ್ತು ಅಹಂಕಾರಗಳ ಮರೆಯುವಿಕೆಗೆ ಬಲವಾದ ಕೊಡಲಿಪೆಟ್ಟನ್ನೇ ನೀಡಿರುವುದು ಕಂಡುಬರುತ್ತದೆ. ಮಾತ್ರವಲ್ಲ 'ವ್ಯಕ್ತಿಗಳು' (Person) ಎಲ್ಲಾ ಬಗೆಯ ಲೌಕಿಕ ಹಂಗುಗಳನ್ನು (ಬದ್ಧತೆ) ಕಳೆದುಕೊಂಡು ನಾರಾಯಣತ್ವ ಅಥವಾ ಶಿವತ್ವ ಪಡೆದಂತಹ (ಬ್ರಹ್ಮಜ್ಞಾನ ಮತ್ತು ಬ್ರಹ್ಮಾನಂದ) 'ವ್ಯಕ್ತಿತ್ವ'ಗಳಾಗಿ (Personolity) ಸದ್ಗತಿಯಲ್ಲಿ ಸಂಲಗ್ನಗೊಳ್ಳಬಹುದಾದ ಮಾರ್ಗವೊಂದನ್ನು ತೋರಿಸಿಕೊಟ್ಟಿದ್ದಾರೆ. ಸರ್ವಜನ ಸಮಾಜಕ್ಕೆ ಹೀಗೆ ಶುದ್ಧಭಕ್ತಿ ಮತ್ತು ದಾರ್ಶನಿಕಮಯ ಆಧ್ಯಾತ್ಮವನ್ನು (Philosophical Mysticism) ಕನಕದಾಸರು ಮತ್ತು ಶಿಶುನಾಳ ಶರೀಫರು

ಕಂಡರಿಸಿರುವ ನೆಲೆಯು ಬಹಳ ಗಮನಾರ್ಹವಾದುದು. ಭಾರತದ ಮಧ್ಯಕಾಲೀನ ಅವಧಿಯು ಮುಖ್ಯವಾಗಿ ಭಕ್ತಿಯುಗ. ಶುದ್ಧ ಮತ್ತು ನೈತಿಕ ಭಕ್ತಿಯ ನೆಲೆಯಿಂದ ನುಡಿದಂತೆ ನಡೆದ ಮಹಾ ಅನುಭಾವಿ ಸಂತ ಮಹಾಂತರು ಈ ಅವಧಿಯಲ್ಲಿ ಆಗಿ ಹೋಗಿದ್ದಾರೆ. ಮಹಾತ್ಮಾ ಬಸವೇಶ್ವರ, ದಾರ್ಶನಿಕ ಮೇರು ಅಲ್ಲಮಪ್ರಭು ದೇವರು, ಮಹಾತ್ಮಾ ಚಕ್ರಧರ, ಸಂತ ಜ್ಞಾನೇಶ್ವರ, ಸಂತ ನಾಮದೇವ, ಸಂತ ಏಕನಾಥ, ಸಂತ ತುಕಾರಾಮ, ಸಮರ್ಥ ರಾಮದಾಸ, ಮಹಾತ್ಮಾ ಕಬೀರ, ಶ್ರೀಕೃಷ್ಣ ಚೈತನ್ಯ, ಸಂತ ವಲ್ಲಭಾಚಾರ್ಯ, ಮಹಾತ್ಮಾ ತುಳಸೀದಾಸ ರಂತಹ ಮಹಾನ್ ಪುರುಷವೇತ್ತರೇ ಅಲ್ಲದೆ, ಭಕ್ತೆ ಮೀರಾಬಾಯಿ, ಭಕ್ತೆ ಆಂಡಾಳ್, ಸಂತ ಜನಾಬಾಯಿ, ಸಾಧ್ವಿ ಅಕ್ಕಮಹಾದೇವಿಯೇ ಮೊದಲಾದ ಮಹಾನ್ ಸಾಧಕಿ ಸ್ತ್ರೀಯರೂ ಸಹಾ ಮಧ್ಯಕಾಲೀನ ಯುಗದ ಸಮಾಜೋ–ಧಾರ್ಮಿಕ ಸಂಕೀರ್ಣತೆಗಳಿಗೆ ತಮ್ಮ ಅನುಭಾವಿಕ ವಾಣಿಗಳಿಂದ ಪರಿಹಾರ ಒದಗಿಸಲು ಶ್ರಮಿಸಿದ್ದಾರೆ. ಅವರ ನಡೆನುಡಿಗಳು ವಿಶಿಷ್ಟವೂ ಅನುಕರಣ ಯೋಗ್ಯವೂ ಆದುದಾಗಿದ್ದವು. ಹಾಗಾಗಿಯೇ ಸಮಕಾಲೀಕ ಸಾಂಸ್ಕೃತಿಕ ಪರಂಪರೆಯ ಪರಿಪ್ರೇಕ್ಷಗಳ ಮೂಲಕ ಪರ್ಯಾಯವನ್ನು ರೂಪಿಸಿ, ಸ್ವತಃ ತಾವೇ ಆ ದಾರಿಯಲ್ಲಿ ನಡೆದು ತೋರಿಸಿ ಅನುಕರಣೆ, ಅನುಸರಣೆಗಳಿಗೆ ಆದರಣೀಯವಾದ ಗಂಭೀರ ಮಾದರಿಯಾಗಿದ್ದಾರೆ. ಅಂತಹವರ ಮಹಾನ್ ಮಾರ್ಗದಲ್ಲಿ ಭಕ್ತ ಕನಕದಾಸ ಮತ್ತು ಸಂತ ಶಿಶುನಾಳ ಶರೀಫರನ್ನೂ ಸೇರಿಸಬಹುದು. ಸಾಂಪ್ರದಾಯಿಕ ವ್ಯವಸ್ಥೆಯ ಎಲ್ಲಾ ಲೋಪದೋಷಗಳನ್ನು ತಮ್ಮ ಸಾಹಿತ್ಯದ ಮೂಲಕ ಎತ್ತಿ ತೋರಿಸಿ, ಕಟುವಾಗಿ ಖಂಡಿಸುವ ಮೂಲಕ ಶುದ್ಧ ಪರಂಪರೆಯ ಮಾರ್ಗವನ್ನು ನಮ್ಮ ಮುಂದೆ ಪ್ರಚುರಪಡಿಸಿದ್ದಾರೆ. ಯಾವುದೇ ಬಗೆಯ ಶ್ರೇಷ್ಠತೆಯನ್ನಾಗಲೀ, ಅಸಮಾನತೆಯನ್ನಾಗಲೀ ಒಪ್ಪದ ಅವರು ಅದನ್ನು ಅನುಸರಿಸುವ ವ್ಯವಸ್ಥೆಯ ಬಗೆಗೆ ನಿರ್ದುಷ್ಟ ನೆಲೆಯಿಂದಲೇ ವಿಪರೀತವಾಗಿ ಖಂಡಿಸಿದ್ದಾರೆ. ದ್ವೈತ ಪಂಥದಲ್ಲಿ ಇದ್ದರೂ ದ್ವೈತವನ್ನು ಮೀರಿ ದಾಸಪಂಥವನ್ನು ಎತ್ತಿ ಹಿಡಿದ ಕನಕದಾಸರು ಮತ್ತು ಇಸ್ಲಾಂ–ವೈದಿಕ–ಶೈವ ಚಿಂತನೆಗಳ ಮೇಳೈಕೆಯಾಗಿದ್ದ ಶಿಶುನಾಳ ಶರೀಫರಾಗಲೀ ಭಿನ್ನವಾಗಿ ಕಾಣಿಸುವುದು ಅವರ ವೈಚಾರಿಕ ಮಾನವೀಯತೆಯ ವೈಶಿಷ್ಟ್ಯಗಳಿಂದಾಗಿಯೇ. ಈ ಇಬ್ಬರೂ ಅಧ್ವರ್ಯುಗಳ ಸಾಹಿತ್ಯಕ ಧ್ವನಿಯು ಸಮಗ್ರ ಸಾಮಾಜಿಕ ಎಚ್ಚರದ ಪ್ರತೀಕಗಳಾಗಿವೆ. ಅವರಿಬ್ಬರೂ 'ಹರಿ–ಹರೈಕ್ಯ' ಮಾರ್ಗದ ಮೂಲಕ ಸಾಮಾಜಿಕ ವೈರುಧ್ಯವನ್ನು ಬೆಸೆಯುವ ದಿಶೆಯಲ್ಲಿ ಗಂಭೀರವಾಗಿ ಪ್ರಯತ್ನಿಸಿದ್ದಾರೆ. ಅವರ ಈ ದೃಷ್ಟಿಕೋನವು 'ಸಮನ್ವಯ

ಮಾರ್ಗ'ವಾಗಿದೆ ಎಂಬುದು ಗಮನಾರ್ಹ. ಇವರಿಬ್ಬರೂ ತಮ್ಮ ಚಿಂತನೆಗಳ ಮೂಲಕ ಹೊಸ ಮತಧರ್ಮವೊಂದನ್ನು ಹುಟ್ಟುಹಾಕಲು ಪ್ರಯತ್ನಿಸಲಿಲ್ಲ ಎಂಬುದು ಸಾಂಸ್ಕೃತಿಕವಾಗಿ ಬಹಳ ದೊಡ್ಡ ಕೊಡುಗೆಯಾಗಿದೆ.

**ಸಹಾಯಕ ಗ್ರಂಥಗಳು :**


1. ನಿಂಗಣ್ಣ ಸಣ್ಣಕ್ಕಿ: ವಿಶ್ವಮಾನ್ಯ ಶ್ರೀ ಕನಕದಾಸರು, ವಿದ್ಯಾನಿಧಿ ಪ್ರಕಾಶನ, ಗದಗ, 1994
2. ಮಲ್ಲಿಕಾರ್ಜುನ ಸಿಂದಗಿ (ಸಂಪಾದನೆ): ಶಿಶುನಾಳ ಶರೀಫ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1996
3. ಸತ್ಯನಾರಾಯಣರಾವ್ ಹೊ.ರಾ. (ಸಂಪಾದನೆ): ಕನಕದಾಸರ ಜನಪ್ರಿಯ ಕೀರ್ತನೆಗಳು, ಅಂಕಿತ ಪ್ರಕಾಶನ, ಬೆಂಗಳೂರು, 2003
4. ಸುಂಕದ ಆರ್: ಶಿಶುನಾಳರ ಅನುಭಾವ ಗೀತಮಂಜರಿ, ಸಮಾಜ ಪುಸ್ತಕಾಲಯ, ಧಾರವಾಡ, 1992
5. ಸುಧಾಕರ (ಸಂಪಾದನೆ): ಸಮಗ್ರ ದಾಸಸಾಹಿತ್ಯ ಕನಕದಾಸರ ಕೀರ್ತನೆಗಳು, ಸಂಪುಟ–5, ಭಾಗ 1 ಮತ್ತು 2, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, 2003


(ಕಾಗಿನೆಲೆಯಲ್ಲಿ ಹಮ್ಮಿಕೊಂಡಿದ್ದ 'ಕನಕ ಸಂಸ್ಕೃತಿ ಉತ್ಸವ' ವಿಚಾರ ಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧ)

# ಶ್ರೀರಾಮಾಯಣ ದರ್ಶನದಲ್ಲಿ ಸ್ವಪ್ನಸಾಲು

* ಡಾ. ಕೆ.ವೈ. ನಾರಾಯಣಸ್ವಾಮಿ

ಕಳೆದ ಒಂದು ದಶಕದಲ್ಲಿ ಮತ್ತೆ ಮತ್ತೆ ಚರ್ಚೆಗೊಳಗಾಗುತ್ತಿರುವ ಮಹಾಕೃತಿ ರಾಮಾಯಣದರ್ಶನ. ಈ ಕೃತಿಯನ್ನು ಕುವೆಂಪುರವರು ಪೂರ್ಣಗೊಳಿಸಿದ್ದು 1949ರ ಸುಮಾರಿಗೆ. ಈ ಮಹಾಕಾವ್ಯಕ್ಕಾಗಿ ಕುವೆಂಪುರವರಿಗೆ ಜ್ಞಾನಪೀಠ ಪ್ರಶಸ್ತಿ ದಕ್ಕಿತು. ಕನ್ನಡ ಸಂಸ್ಕೃತಿಯೊಳಗೆ ಇದರ ಓದು ನಿರಂತರವಾಗಿ ನಡೆಯುತ್ತಲೇ ಬಂದಿದೆ. ರಾಮಾಯಣದರ್ಶನವನ್ನು ಪ್ರವೇಶ ಮಾಡಲು ಅನೇಕ ರೀತಿಯ ಸಾಧ್ಯತೆಗಳಿವೆ. 'ಪಾಪಿಗೂ ಉದ್ಧಾರಮಿಹುದು' ಎನ್ನುವ ಕುವೆಂಪುರವರ ಪ್ರೈಮರಿ ಫಿಲಾಸಫಿಯನ್ನು ಇಲ್ಲಿನ ಹಲವಾರು ಘಟನೆಗಳು ಮತ್ತು ಪಾತ್ರಗಳ ಮೂಲಕ ಅರ್ಥೈಸಿಕೊಳ್ಳಬಹುದು, ರಾಮನ ಪಾತ್ರದ ಮೂಲಕ, ರಾವಣನ ಪಾತ್ರವನ್ನೂ, ಮಂಡೋದರಿ ಪಾತ್ರದ ಮೂಲಕ ಸೀತೆಯ ಪಾತ್ರವನ್ನೂ ವಿಶ್ಲೇಷಿಸಬಹುದು. ಹೀಗೆ ಹಲವು ನೆಲೆಗಳಲ್ಲಿ ನಾವು ಈ ಕೃತಿಯನ್ನು ಅನುಸಂಧಾನ ಮಾಡಲು ಸಾಧ್ಯ. ಕೆಲವು ವರ್ಷಗಳಿಂದೀಚೆಗೆ ರಾಮಾಯಣದರ್ಶನದ ವಾಲಿ–ಸುಗ್ರೀವರ ಕಥೆಯನ್ನು ಆಧರಿಸಿದ ನಾಟಕ 'ವಾಲಿವಧೆ' ಕರ್ನಾಟಕದಲ್ಲಿ ಎಷ್ಟು ದೊಡ್ಡ ಸಂಚಲನೆಯನ್ನು ಮೂಡಿಸಿತು ಎನ್ನುವುದನ್ನು ನಾವಿಲ್ಲಿ ನೆನೆಯಬಹುದು. ಈ ಎಲ್ಲಾ ಕಾರಣಗಳಿಗಾಗಿ ರಾಮಾಯಣದರ್ಶನವನ್ನು ಮತ್ತೆಮತ್ತೆ ಅಧ್ಯಯನ ಮಾಡಬೇಕಾದ, ಎದಿರುಗೊಳ್ಳಬೇಕಾದ ಸಾಂಸ್ಕೃತಿಕ ಅವಶ್ಯಕತೆ ಇದೆ. ಏಕೆಂದರೆ ನಮ್ಮ ಸಾಂಸ್ಕೃತಿಕ ಬದುಕು, ನಮ್ಮ ಸುತ್ತಲಿನ ಜಗತ್ತು ಅನೇಕ ರೀತಿಯಾದ ತಲ್ಲಣಗಳಿಂದ ಕೂಡಿದೆ. ಧರ್ಮದ ವಿಚಾರದಲ್ಲಿ, ಸಾಮಾಜಿಕ ಬದುಕಿನ ವಿಚಾರದಲ್ಲಿ ನಾವು ಬಹಳ ಮುಖ್ಯವಾದ ಪ್ರಶ್ನೆಗಳನ್ನು, ಬಿಕ್ಕಟ್ಟುಗಳನ್ನು ಇಂದು ಎದುರಿಸುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ರಾಮಾಯಣದರ್ಶನವನ್ನು ಓದಬೇಕಾದ, ಅರ್ಥ ಮಾಡಿಕೊಳ್ಳಬೇಕಾದ ಅವಶ್ಯಕತೆ ಎಂದಿಗಿಂತಲೂ ಹೆಚ್ಚು ಇದೆ ಎನ್ನುವುದು ನನ್ನ ನಂಬಿಕೆ. ಈ ಕೃತಿಯ ಬಗ್ಗೆ, ತಾನು ಹೇಳುತ್ತಿರುವುದು ಯಾವುದೋ ಕರ್ಮಕಾರಣದ ಪುರಾಣದ ಕಥೆಯನ್ನಲ್ಲ ಎಂದು ಕುವೆಂಪುರವರೂ ನಂಬಿದ್ದರು. ವಾಲ್ಮೀಕಿಯ

ಕೃತಿಯ ಜೊತೆಯಲ್ಲೇ ಪ್ರಪಂಚದ ಶ್ರೇಷ್ಠ ಮಹಾಕಾವ್ಯಗಳನ್ನು ಕುವೆಂಪುರವರು ಅಧ್ಯಯನ ಮಾಡಿದ್ದರಾದ್ದರಿಂದ, ರಾಮಾಯಣದ ಮೂಲಕ ಇಂದಿನ ಜಗತ್ತನ್ನು ಅರ್ಥೈಸುವ ಮತ್ತು ತಾನು ಹೇಳಬೇಕಾದುದನ್ನು ನಿರೂಪಿಸಲು ರಾಮಾಯಣದ ಮಹಾಚೌಕಟ್ಟು ಅವಕಾಶ ನೀಡುತ್ತದೆ ಎನ್ನುವುದನ್ನು ಅವರು ಕಂಡುಕೊಂಡರು. ಹಾಗಾಗಿಯೇ ಅವರು ಈ ಮಹಾಕಾವ್ಯವನ್ನು ರಚಿಸುವ ಕಾರ್ಯಕ್ಕೆ ಕೈಹಾಕಿದರು. ರಾಮಾಯಣದರ್ಶನ ಬರೆಯುವುದಕ್ಕೂ ಪೂರ್ವದಲ್ಲಿ ಅವರು 'ಚಿತ್ರಾಂಗದ' ಮತ್ತು 'ಚಂದ್ರಹಾಸ'ದಂತಹ ಕಥಾಕವನಗಳನ್ನು ಮಹಾಛಂದಸ್ಸಿನ ರೂಪದಲ್ಲಿ ಬರೆದು ಈ ಮಹಾಕಾವ್ಯವನ್ನು ಬರೆಯಲು ಬೇಕಾದ ತರಬೇತಿಯನ್ನು ಮಾಡಿಕೊಂಡಿರಬೇಕು.

ಈ ಮಹಾಕಾವ್ಯದ ಸ್ವರೂಪವನ್ನು ಗಮನಿಸಿದರೆ, ಇದರ ನಿರೂಪಣೆಯ ವಿನ್ಯಾಸದೊಳಗೆ ಒಂದು ಬಗೆಯ ಮಾಯಕದ ವಾಸ್ತವವನ್ನು ನಿರ್ಮಿಸಲಾಗಿದೆ. ಕುವೆಂಪುರವರು ತಮ್ಮ ಬರವಣಿಗೆಗಳಲ್ಲಿ ಮೂರು ಮುಖ್ಯ ಅಂಶಗಳನ್ನು ಮನದಟ್ಟು ಮಾಡಿಕೊಡುತ್ತಾರೆ. ಮೊದಲನೆಯದು ಬರವಣಿಗೆಗೆ ತನ್ನಿಂದ ತಾನೆ ಪ್ರಾಪ್ತವಾಗುವ ಕಾಲ ವಿಸ್ತೀರ್ಣದ ಆಯಾಮ, ಎರಡನೆಯದು ದೇಶ ವಿಸ್ತೀರ್ಣ. ಇವೆರಡನ್ನೂ ಮೀರುವ ಹಾಗೆ, ದಾಟುವ ಹಾಗೆ ಮನೋವಿಸ್ತೀರ್ಣ ಎನ್ನುವ ಕಲ್ಪನೆಯನ್ನು ಮಂಡಿಸಿದ್ದಾರೆ. ದೇಶವಿಸ್ತೀರ್ಣ ಮತ್ತು ಕಾಲವಿಸ್ತೀರ್ಣಗಳು ಭೌತಿಕವಾದವು ಅಂದರೆ ಐಂದ್ರೀಯಕವಾಗಿ ನಮ್ಮ ಅನುಭವಕ್ಕೆ ಬರುವ, ನಾವು ಗುರುತಿಸಲು ಸಾಧ್ಯವಿರುವ ಅನುಭವಗಳು. ಆದರೆ ಈ ಮನೋವಿಸ್ತೀರ್ಣ ಹಾಗಲ್ಲ, ದೇಶ ವಿಸ್ತೀರ್ಣ ಮತ್ತು ಕಾಲವಿಸ್ತೀರ್ಣಗಳನ್ನು ದಾಟುವುದನ್ನು ನಾವು ಅರ್ಥ ಮಾಡಿಕೊಂಡಾಗ ಮಾತ್ರ ನಮಗೆ ಅನುಭವಕ್ಕೆ ಬರುವ ಅನುಭೂತಿ ಇದು. ಕುವೆಂಪುರವರು ಅದೇ ನೆಲಗಟ್ಟಿನ ಮೇಲೆ ಈ ಮಹಾಕಾವ್ಯವನ್ನು ಬರೆಯುವಾಗ ಕನಸನ್ನು ಒಂದು ಪ್ರಧಾನವಾದ ಆಶಯವನ್ನಾಗಿ ರಾಮಾಯಣದರ್ಶನದಲ್ಲಿ ತಂದಿದ್ದಾರೆ. ಪಾತ್ರಗಳು ಪ್ರಕೃತಿಯೊಡನೆ ಅನುಸಂಧಾನಿಸಲು, ತಮ್ಮೊಂದಿಗಿರುವ ಇತರ ಪಾತ್ರಗಳ ಜೊತೆಗೆ ಒಡನಾಟ ಮಾಡಲು ಮತ್ತು ತಮ್ಮನ್ನು ತಾವು ಕನ್ನಡಿಯಾಗಿ ನೋಡಿಕೊಳ್ಳಲು ಸ್ವಪ್ನದ ಆಯಾಮವನ್ನು ತಂದಿದ್ದಾರೆ. ಆದ್ದರಿಂದ ಕುವೆಂಪುರವರ ಮಾತಿನಲ್ಲೇ ಹೇಳುವುದಾದರೆ ಇಡೀ ಮಹಾಕಾವ್ಯವು 'ಒಂದು ಸ್ವಪ್ನದಿಂದ ಮತ್ತೊಂದು ಸ್ವಪ್ನದಲ್ಲಿ ಎಚ್ಚರಗೊಂಡಂತೆ' ಎಂಬ ಪ್ರಕ್ರಿಯಾಗಿದೆ. ಒಂದು ಸ್ವಪ್ನದಿಂದ ಮತ್ತೊಂದು ಸ್ವಪ್ನದಲ್ಲಿ ಎಚ್ಚರಗೊಳ್ಳುವ ಈ ಪ್ರಕ್ರಿಯೆಯ ಸರಣಿ ಇಡೀ ರಾಮಾಯಣದ ಓದಿಗೆ ಅನ್ವಯಿಸಿ ಹೇಳಬಹುದಾದ ಮಾತು ಎನ್ನುವುದು ನನ್ನ ಅನಿಸಿಕೆ. ಈ ಕೃತಿಯನ್ನು ನಾವು ಓದಲು

ಪ್ರಾರಂಭಿಸಿದರೆ ಒಂದು ಸ್ವಪ್ನವನ್ನು ಕಾಣುತ್ತ, ಸ್ವಪ್ನದಿಂದ ಸ್ವಪ್ನಕ್ಕೆ ಸಾಗಿಹೋಗುವ ಸ್ವಪ್ನ ಸಾಲಾವಳಿ ಇಡೀ ರಾಮಾಯಣದ ಘಟನೆಗಳನ್ನು ನಡೆಸಿಕೊಂಡು ಹೋಗುವುದನ್ನು ಕಾಣಬಹುದು.

ಆದಕಾರಣದಿಂದಲೇ ಮಹಾಕಾವ್ಯದ ಇಡೀ ಬರವಣಿಗೆಯು ಸ್ವಪ್ನ ಸಾದೃಶ್ಯವಾಗಿದೆ. ಇಲ್ಲಿನ ಮಾತು, ಕಾವ್ಯದ ಓಘ ಎಷ್ಟು ಆಪ್ತವಾಗಿದೆ, ಮಾಯಕವಾಗಿದೆ ಎಂದರೆ, ಕೃತಿಯೊಳಗೆ ಪ್ರವೇಶ ಮಾಡಿದ ಕೂಡಲೆ ನಾವೊಂದು ಸ್ವಪ್ನಲೋಕವನ್ನು ಪ್ರವೇಶ ಮಾಡಿದಂತೆ, ಸ್ವಪ್ನದಲ್ಲಿ ನಡೆಯುವಂತೆ, ಅಲ್ಲಿನ ಘಟನೆಗಳು ನಮ್ಮ ಪ್ರಜ್ಞೆಯ ಪರಿಧಿಯೊಳಗೆಯೇ ಸಂಭವಿಸುತ್ತಿರುವಂತೆ ಅನ್ನಿಸುತ್ತದೆ. ನಾನು ಗುರುತಿಸಿರುವಂತೆ, ಮುಖ್ಯವಾದ ಹದಿನಾರು ಸ್ವಪ್ನಗಳು ಈ ರಾಮಾಯಣದ ಕಥನವನ್ನು ಆಗುಮಾಡಿವೆ. ಈ ಸ್ವಪ್ನಗಳೇ ರಾಮಾಯಣದ ನಡೆಯನ್ನು, ಘಟನೆಗಳನ್ನು ನಾಟಕೀಯ ತಿರುವಿಗೆ ತೆಗೆದುಕೊಂಡು ಹೋಗಲು ಬೇಕಾದ ನಿರ್ಣಾಯಕವಾದ ನಡೆಯನ್ನು ನಿರ್ಧರಿಸುವ ಹಾಗೆ ರಾಮಾಯಣದ ರಚನೆಯಾಗಿದೆ. ಇದನ್ನು ಕುವೆಂಪುರವರು ಪ್ರಜ್ಞಾಪೂರ್ವಕವಾಗಿ ಮಾಡಿದ್ದಾರೆ ಎಂದು ನಾನು ಹೇಳಲಾರೆ. 'ಸುಪ್ರಭಾ ಸ್ಫೂರ್ತಿಯಿಂ ಕವಿಯ ಮನದಿಂ ಮಹಾಕಾವ್ಯಮುದ್ಭವಿಪಂತೆ' ಯಾವುದಾದರೊಂದು ಕಾಲಬಿಂದುವಿನಲ್ಲಿ ಮಹಾಕಾವ್ಯ ಮತ್ತು ಮಹಾಕವಿ ಸಂಧಿಸಿದಾಗ, ಸೃಷ್ಟಿಯಾಗಬಹುದಾದ ಮಾಯಕದ ಉತ್ಪನ್ನ ಈ ರಾಮಾಯಣದರ್ಶನ ಮಹಾಕಾವ್ಯ. ಅಂತೆಯೇ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪಂಪನ ಮಹಾಕಾವ್ಯಗಳನ್ನು ನಾವು ನೋಡಿದ್ದೇವೆ, ವಾಲ್ಮೀಕಿಯ ಮಹಾಕಾವ್ಯದ ಅನುವಾದವನ್ನೂ ಓದಿದ್ದೇವೆ. ರಾಮಾಯಣವನ್ನು ಪ್ರತಿಯೊಂದು ಭಾಷೆಯಲ್ಲಿಯೂ ಬರೆದ ಕವಿಗಳು ನಮ್ಮ ಸುತ್ತಲೂ ಇದ್ದಾರೆ. ಅವುಗಳ ನಡುವೆ ರಾಮಾಯಣದರ್ಶನಕ್ಕಿರುವ ವಿಶೇಷತೆಗಳಲ್ಲಿ ಈ ಸ್ವಪ್ನ ಮಾರ್ಗದ ನಿರೂಪಣೆಯೂ ಒಂದು ಮುಖ್ಯವಾದ ಲಕ್ಷಣ ಎಂದು ಗುರುತಿಸಬಹುದು.

ಕನಸಿನಿಂದ ಮತ್ತೊಂದು ಕನಸಿಗೆ ಸಾಗುವ ಈ ಕಥನದಲ್ಲಿ ಕನಸುಗಳು ನಮ್ಮನ್ನು ಹಿಡಿದಿಟ್ಟುಕೊಳ್ಳುವ ಚುಂಬಕ ಸಾಮರ್ಥ್ಯವನ್ನು ಪಡೆದುಕೊಂಡಿವೆ. ಕೌಸಲ್ಯೆಯ ಕನಸಿನಿಂದ ಆರಂಭವಾಗುವ ಈ ಕತೆ ಮಂಥರೆ, ಸೀತೆ, ತ್ರಿಜಟೆ, ಅನಲಾ, ಮಂಡೋದರಿ, ತಪೋಲಕ್ಷ್ಮಿ, ಶಬರಿ ಇತ್ಯಾದಿ ಹೆಣ್ಣುಮಕ್ಕಳ ಕನಸಿನೊಂದಿಗೆ ರೂಪದಾಳುತ್ತಾ ಹೋಗುತ್ತದೆ. ಕುವೆಂಪುರವರಿಗೆ ಇಡೀ ರಾಮಾಯಣವೇ ಒಂದು

ಸ್ವಪ್ನ ಎನ್ನುವಂತಹ ನಂಬಿಕೆ ಇತ್ತು. ಅವರೊಂದು ಕಡೆಯಲ್ಲಿ ಮಂಡೋದರಿ ಸೀತೆಯನ್ನು ಭೇಟಿ ಮಾಡಲೆಂದು ಬೆಳದಿಂಗಳ ರಾತ್ರಿಯಲ್ಲಿ ಲಂಕೆಯ ಅಶೋಕವನಕ್ಕೆ ಬರುವಾಗ ಆ ಬೆಳದಿಂಗಳ ರಾತ್ರಿಯನ್ನು ವರ್ಣಿಸುವ ದೃಶ್ಯವನ್ನು ಹೀಗೆ ಕಲ್ಪಿಸುತ್ತಾರೆ, 'ಆ ಇರುಳ್ ಬೆಳ್ದಿಂಗಳೊಳ್ ವಿಶ್ವನಿದ್ರೆಯೊಳೊಂದು ಕನಸಿನಂತಿರೆ ಪೃಥಿವಿ' ಅಂದರೆ ಭೂಮಿಗಷ್ಟೇ ಅಲ್ಲ, ವಿಶ್ವಕ್ಕೂ ಒಂದು ಕನಸಿದೆ. ಈ ಕಲ್ಪನೆಯೊಂದಿಗೆ ಕುವೆಂಪು ಇಡೀ ವಿಶ್ವಕ್ಕೆ ಒಂದು ಕಾಸ್ಮಿಕ್ ಡ್ರೀಮ್ ಆಯಾಮವನ್ನು ಒದಗಿಸಿ ಕೊಟ್ಟುಬಿಡುತ್ತಾರೆ.

ವಿಶ್ವ ಕಂಡ ಕನಸು ಈ ಭೂಮಿ, ಈ ಭೂಮಿ ಕಂಡ ಕನಸು ಲಂಕೆ, ಲಂಕೆ ಕಾಣುತ್ತಿರುವ ಸ್ವಪ್ನ ಈ ಅಶೋಕವನ. ಹೀಗೆ ಸ್ವಪ್ನಸರಣಿಯ ಜಾದು ನಮ್ಮ ಮನೋರಂಗದಲ್ಲಿ ಚಲನಚಿತ್ರದಂತೆ ಚಲಿಸುತ್ತದೆ. ಅತ್ತ ಲಂಕೆಯ ಅಶೋಕವನದಲ್ಲಿ ಸೀತೆಯೂ, ಇತ್ತ ಅರಮನೆಯಲ್ಲಿ ಮಂಡೋದರಿಯೂ ನಿದ್ದೆಯಲ್ಲಿ ಸ್ವಪ್ನಗಳನ್ನು ಕಾಣುತ್ತಿದ್ದಾರೆ. ಅಂದರೆ ಈ ಸ್ವಪ್ನದ ಸರಣಿಗಳು ಎಷ್ಟು ನೆಲೆಗಳಲ್ಲಿ ಜೋಡಿಸಲ್ಪಟ್ಟಿವೆ ಎನ್ನುವುದನ್ನು ಗಮನಿಸಿ. ರಾಮಾಯಣವನ್ನು ನಾವು ಎದುರುಗೊಳ್ಳಬೇಕಿರುವ, ಓದಬೇಕಿರುವ ದಿಕ್ಕನ್ನು ಕುವೆಂಪುರವರು ತಮ್ಮ ಸ್ವಪ್ನದ ಸಾಲುಗಳ ಮೂಲಕ ನಿರ್ದೇಶಿಸುತ್ತಾ ಹೋಗುತ್ತಾರೆ. ರಾವಣನ ಬಾಯಿಯಿಂದ ಅವರು ಒಂದು ಮಾತನ್ನು ಹೇಳಿಸುತ್ತಾರೆ, 'ಕನಸಲ್ತು ನಾ ಕಂಡುದುದು' ಎಂದು. ಅಂದರೆ ಎಚ್ಚರಾದ ಮೇಲೆ ತಾನು ಇದುವರೆವಿಗೂ ಕಂಡಿದ್ದು ಕನಸಲ್ಲ ಅನ್ನುವ ಹಾಗೆ, ಕನಸು ಮತ್ತು ವಾಸ್ತವಗಳ ನಡುವೆ ಇರುವ ಗೆರೆಗಳನ್ನು ಅಳಿಸುವ ಹಾಗೆ ಆ ಮಾತು ಕೇಳಿಸುತ್ತದೆ. ಪಡೆದ ಅನುಭವ ನಿಜ, ಆದರೆ ಕಂಡಿದ್ದು ಕನಸು. ಕಾವ್ಯ ಮತ್ತು ಅದರ ಅನುಭವಕ್ಕೆ ಸಂಬಂಧಿಸಿದ ಕಾವ್ಯ ಮೀಮಾಂಸೆಯ ತತ್ವವನ್ನು ಇದು ಚರ್ಚಿಸುತ್ತದೆ. ಸ್ವಪ್ನವೂ ವಾಸ್ತವದ ಸ್ಥಿತಿಯಲ್ಲಿ ಮನವರಿಕೆಯಾಗಲು ಕಲೆ ಆ ಸವಾಲನ್ನು ಪ್ರತಿಮಾ ಮಾರ್ಗದ ಮೂಲಕ ಕಟ್ಟಿಕೊಡುತ್ತದೆ. ಈ ಹಿನ್ನಲೆಯಲ್ಲಿ ನಾವು ರಾಮಾಯಣದಲ್ಲಿನ ಸ್ವಪ್ನಗಳ ಪರಿಶೀಲನೆಯನ್ನು ಮಾಡಬಹುದು.

ಮೊದಲಿಗೆ ರಾಮನ ಅವತಾರದ ಸಂದರ್ಭದಲ್ಲಿ ರಾಮಾಯಣದಲ್ಲಿ ಮೊದಲ ಸ್ವಪ್ನದ ಪ್ರವೇಶವಾಗುತ್ತದೆ. ಕೌಸಲ್ಯೆಗೆ ಬಿದ್ದ ಒಂದು ಕನಸಿನ ಮೂಲಕ ಈ ಸ್ವಪ್ನಸಾಲಿನ ಉದ್ಘಾಟನೆ ನಡೆಯುತ್ತದೆ. ಇಡೀ ಆಕಾಶ ಭೂಮಂಡಲಗಳೆಲ್ಲವೂ

ಹಾಲಿನ ಸಾಗರವಾಗಿ, ಆ ಅಲೆಗಳಲ್ಲಿ ಬಾಲಚಂದ್ರನೋಪಾದಿಯಲ್ಲಿರುವ ಒಂದು ಶಿಶು ತೇಲುತ್ತಾ ತೇಲುತ್ತಾ ಬಂದು, ಕೌಸಲ್ಯೆಯನ್ನು ನೋಡಿ ಮುಗುಳುನಕ್ಕಂತೆ, ಆಕೆ ಕೈಚಾಚಿದರೆ ಆ ಮಗು ತೆರೆಗಳಿಂದ ತೇಲಿಬಂದು ಆಕೆಯ ತೊಡೆಯ ಮೇಲೆ ಕುಳಿತು ಅವಳ ಎದೆಯ ಅಮೃತವನ್ನು ಈಂಟುವಂತಹ ಒಂದು ಸ್ವಪ್ನದ ಕಲ್ಪನೆಯನ್ನು ಕುವೆಂಪುರವರು ಬಣ್ಣಿಸುತ್ತಾರೆ. ಅಂದರೆ ದೈವೀಕವಾಗಿರಬಹುದಾದ ಒಂದು ಮಹಾಶಕ್ತಿ, ರಾಮನಂತಹ ಒಂದು ಚೈತನ್ಯ ಭೂಮಿಯಲ್ಲಿ ಅವತರಿಸುವಾಗ ಆ ಅವತಾರಕ್ಕೆ, ಅವತರಿಸುವುದಕ್ಕೆ ಬೇಕಾದ ಒಂದು ಪೂರ್ವಸಿದ್ಧತೆಯ ಸೂಚಕವಾಗಿ, ಅಂತಹ ಮಹಂತನನ್ನು ಆಹ್ವಾನಿಸಲು ಆ ಮಹಾತಾಯಿಗೆ ಇರಬೇಕಾದ ಲಕ್ಷಣಗಳನ್ನು ಕೂಡ ರಾಮಾಯಣದ ಈ ಮೊದಲ ಕನಸಿನ ಮೂಲಕ ಕುವೆಂಪುರವರು ನಿರ್ವಹಿಸಿದ್ದಾರೆ. ಕೌಸಲ್ಯೆ ಮುಂದೆ ಜನ್ಮ ನೀಡಲಿರುವ ಶಿಶು ಲೋಕೋತ್ತರವಾದ ಶಿಶುವಾಗಲಿದೆ ಎನ್ನುವ ಸೂಚನೆಯನ್ನು ಕುವೆಂಪುರವರು ಇಲ್ಲೇ ತರುತ್ತಾರೆ. ಹಾಗೆ ನೋಡಲು ಹೋದರೆ ಮಾರ್ಗ ಪರಂಪರೆಯಲ್ಲಿ ಬರುವ ಮಹಾಕಾವ್ಯಗಳಲ್ಲಿ ಇಂತಹ ಲಕ್ಷಣಗಳಿಲ್ಲ. ಜಾನಪದ ಲೋಕಕಥಾನಕಗಳಲ್ಲಿ ಇಂತಹ ಕಲ್ಪನೆಗಳಿವೆ. ಅಲ್ಲಿ ಕಾರಣಪುರುಷರು ಹುಟ್ಟುವ ಮುನ್ನ ಅವರನ್ನು ಗರ್ಭದಲ್ಲಿ ಧರಿಸಬಹುದಾದ ತಾಯಂದಿರಿಗೂ ಸಹ ಈ ತರಹದ ಸ್ವಪ್ನಗಳು ಬೀಳುತ್ತವೆ. ಅಂದರೆ ಮಲಗಿರುವಾಗ ಹಾವೊಂದು ಬಂದು ತಲೆಯ ಮೇಲೆ ಹೆಡೆ ಬಿಚ್ಚಿದ ಹಾಗೆ, ಕನಸಿನಲ್ಲಿ ಜ್ಯೋತಿಯೊಂದು ತನ್ನೊಳಗೆ ಬಂದು ಸೇರಿಕೊಂಡ ಹಾಗೆ, ಹಸುವಿನ ಕೆಚ್ಚಲಿನಲ್ಲಿ ಹಾಲು ಸುರಿಯುವ ಹಾಗೆ ...ಇಂತಹ ಸಂಗತಿಗಳು ಜನಪದ ಕಾವ್ಯಗಳಲ್ಲಿ ಪ್ರಸ್ತಾಪಗೊಂಡಿವೆ. ಕುವೆಂಪುರವರು ಜನಪದದ ಬದುಕನ್ನು ಎಷ್ಟು ಜೀವಿಸುತ್ತಿದ್ದರು ಎಂದರೆ ಅವರು ಸೃಷ್ಟಿಸಿದ ಹಲವಾರು ಕಾವ್ಯಪ್ರತಿಮೆಗಳಲ್ಲಿ ಜನಪದದ ಆಶಯ, ಲೋಕದೃಷ್ಟಿ ಪ್ರವೇಶ ಪಡೆದು ಇಂತಹ ಸ್ವರೂಪವನ್ನು ಧರಿಸಿಬಿಡುತ್ತದೆ. ಕೌಸಲ್ಯೆಗೆ ಬಿದ್ದ ಈ ಕನಸೂ ಸಹ ಜನಪದದ ಸ್ವಪ್ನಗಳ ಮುಂದುವರಿಕೆಯಾಗಿಯೇ ಬಂದಿದೆ.

ವಾಲ್ಮೀಕಿಯ ರಾಮಾಯಣವನ್ನು ಕುವೆಂಪುರವರು ಕನ್ನಡಕ್ಕೆ ಪರಿವರ್ತಿಸುವಾಗ ಮಾಡಿಕೊಂಡ ಸೃಜನಶೀಲ ಪರಿವರ್ತನೆಗಳಲ್ಲಿ ಇದೂ ಒಂದು. ಇಲ್ಲಿ ನಾವು ಗಮನಿಸಬಹುದಾದ ಇನ್ನೊಂದು ಅಂಶ ಎಂದರೆ ರಾಮಾಯಣದರ್ಶನದಲ್ಲಿ ಅನೇಕ ಕನಸುಗಳ ಪ್ರಸ್ತಾಪಗಳು ಇಲ್ಲಿನ ಹೆಣ್ಣು ಪಾತ್ರಗಳ ಮನೋಲೋಕದಲ್ಲಿಯೇ ತುಂಬಿಕೊಂಡಿವೆ. ಅವುಗಳನ್ನು ಬಿಟ್ಟರೆ ಕನಸು ಕಾಣುವ

ಮೂರು ಗಂಡು ಪಾತ್ರಗಳು ಭರತ, ಶ್ರೀರಾಮ ಮತ್ತು ರಾವಣ. ಮೊದಲನೆಯದಾಗಿ ಭರತನಿಗೆ ಕಾಣಿಸುವ ಸ್ವಪ್ನಗಳನ್ನು ನೋಡಿ. ಆತ ಎರಡು ಬಾರಿ ಕನಸು ಕಾಣುತ್ತಾನೆ. ಮೊದಲನೆಯದು ದಶರಥನ ಅವಸಾನವನ್ನು ಎದಿರುಗೊಳ್ಳುವ ಸಂದರ್ಭ ಮತ್ತು ಎರಡನೆಯದು ರಾಮಾಯಣದ ಕೊನೆಯ ಭಾಗದಲ್ಲಿ ಶ್ರೀರಾಮಚಂದ್ರ ಯುದ್ಧವನ್ನು ಮುಗಿಸಿ ಅಯೋಧ್ಯೆಗೆ ಹಿಂದಿರುಗುತ್ತಿರುವಂತೆ ಕಂಡ ಕನಸು. ಮೊದಲನೆಯದು ದುರಂತದ ಕನಸು, ಎರಡನೆಯದು ಸುಖಾಂತದ ಸ್ವಪ್ನ. ಈ ಎರಡು ಕನಸುಗಳ ನಡುವಿನ ಪಯಣವೇ ರಾಮಾಯಣ. ರಾಮನಿಗೂ ಅರಣ್ಯವಾಸದಲ್ಲಿ ಕನಸು ಬೀಳುತ್ತದೆ. ಆ ಕನಸಿನಲ್ಲಿ ಸಮುದ್ರ, ಕಾಡು, ಪರ್ವತ ಶ್ರೇಣಿಗಳು ಕಂಡುಬರುತ್ತವೆ. ಭವ್ಯಾಕೃತಿಯ ವಾನರ ರೂಪವೊಂದು ಪರ್ವತಾಕಾರವಾಗಿ ಆಕಾಶದೆತ್ತರಕ್ಕೆ ಬೆಳೆದು 'ದಕ್ಷಿಣಕ್ಕೆ ಬಾ', 'ದಕ್ಷಿಣಕ್ಕೆ ಬಾ' ಎಂದು ಕರೆಯುತ್ತಿರುವಂತೆ ಕನಸಾಗುತ್ತದೆ. ಹನುಮನು ಆಗ ರಾಮನಿಗೆ ಅಪರಿಚಿತನಾಗಿದ್ದರೂ ಅವನ ಕನಸಿನಲ್ಲಿ ಮತ್ತೆಮತ್ತೆ ಕಾಣಿಸಿಕೊಳ್ಳುತ್ತಿರುತ್ತಾನೆ. ಈ ಕನಸನ್ನು ರಾಮ ಲಕ್ಷ್ಮಣನಲ್ಲಿ ಹೇಳಿಕೊಳ್ಳುತ್ತಾನೆ. ಈ ಕನಸುಗಳಲ್ಲಿ ಆಸಕ್ತಿದಾಯಕವಾದ ಇನ್ನೊಂದು ವಿಷಯ ಇದೆ. ಇಲ್ಲಿ ಕನಸು ಕಂಡವರೆಲ್ಲಾ ಇತರರ ಜೊತೆಯಲ್ಲಿ ಇದನ್ನು ಹಂಚಿಕೊಳ್ಳುತ್ತಾರೆ.

ಇನ್ನು ಸೀತೆ ಕಾಣುವ ಕನಸಿನಲ್ಲಿ ರಾಮನ ಪ್ರವೇಶ ಹೀಗಾಗುತ್ತದೆ, ಚಿಕ್ಕಂದಿನಿಂದಲೂ ಸೀತೆ ಕಾಣುವ ಕನಸ್ಸಿನಲ್ಲಿ ನೀಲಮೇಘದಂತಹ ನೀಲದೇಹಿಯೊಬ್ಬ ಆಗಾಗ ಬರುತ್ತಿರುತ್ತಾನೆ. ಇದ್ದಕ್ಕಿದ್ದ ಹಾಗೆ ಆಕಾಶವೇ ತಾನಾಗಿ ಬಂದು ಅವಳನ್ನು ಅಪ್ಪಿಕೊಂಡ ಹಾಗೆ, ಆ ಆಕಾಶ ಇವಳ ಎದೆಯಲ್ಲಿ ಲೀನವಾದಂತೆ, ಸಮುದ್ರ ತನ್ನ ಎಲ್ಲೆಯನ್ನು ಮೀರಿ ಸೀತೆಯನ್ನು ತನ್ನೊಳಗೆ ಮುಳುಗಿಸಿಕೊಂಡಂತೆ, ಕಡೆಗೆ ಈಕೆಯೇ ಅ ಸಮುದ್ರದ ಒಡತಿಯಾದಂತೆ, ಭೂಮಂಡಲವೇ ಹೆಣ್ಣು ಶಿಶುವಾಗಿ ತನ್ನ ತೊಡೆಯೇರಿ ಕುಳಿತಂತೆ ಅವಳಿಗೆ ಕನಸಾಗುತ್ತದೆ. ಅತ್ತ ಹೆತ್ತ ತಾಯಿಯಾದ ಕೌಸಲ್ಯೆಯೂ ರಾಮನನ್ನು ಮೊದಲು ಕಾಣುವುದು ಕನಸಿನಲ್ಲಿ, ರಾಮನಂತಹ ಪುರುಷೋತ್ತಮನನ್ನು, ದೈವೀ ಆಕೃತಿಯ ಸಂಗಾತಿಯನ್ನು ಸೀತೆ ಮೊದಲು ಭೇಟಿ ಮಾಡುವುದು ಸಹ ಕನಸಿನಲ್ಲೇ. ರಾಮನ ಪ್ರಸ್ತಾಪ ಬಂದಾಗಲೆಲ್ಲಾ, ರಾಮನ ಜೊತೆಯಲ್ಲಿ ಸಂಬಂಧ ಹೊಂದುವ ಈ ಹೆಣ್ಣುಮಕ್ಕಳಿಗೆ ಒಂದು ಬಗೆಯ ಕಾಸ್ಮಿಕ್ ಸ್ವಪ್ನಗಳ ಅನುಭವದ ಪ್ರಕ್ರಿಯೆ ಸಂಭವಿಸುತ್ತದೆ. ಪ್ರಜ್ಞಾಸ್ಥರದೊಳಗೆ

ಗುರುತಿಸಲು ಸಾಧ್ಯವಿಲ್ಲದಂತಹ ಅಮೂರ್ತವಾದ ಅನುಭವವನ್ನು ಈ ಕನಸುಗಳು ಸುಪ್ತಪ್ರಜ್ಞೆಯ ನೆಲೆಯೊಳಗೆ ತಂದುಕೊಡುತ್ತವೆ. ಹಾಗಾಗಿ ಇಡೀ ರಾಮಾಯಣದ ಬರವಣಿಗೆಯ ಸಂದರ್ಭದಲ್ಲಿ ಒಂದು ಕನಸಿನಿಂದ ಮತ್ತೊಂದು ಕನಸಿಗೆ ಹೊರಳುವ ಕಾವ್ಯದ ನಡಿಗೆಯನ್ನು ಗುರುತಿಸಲು ಸಾಧ್ಯವಿದೆ.

ಈ ಮಹಾಕಾವ್ಯದಲ್ಲಿ ಕನಸನ್ನೇ ಒಂದು ಪ್ರಮುಖ ಕಥಾಭಾಗವಾಗಿಸಿ ಕುವೆಂಪುರವರು ಬರೆದಿದ್ದಾರೆ. ಅದು ಇನ್ನು ಯಾವುದೇ ರಾಮಾಯಣಗಳಲ್ಲಿ ಕಾಣದಿರುವಂತಹ ಅಪೂರ್ವವಾದ ಕನ್ನಡದ ಸೃಷ್ಟಿ, ಈ ಎಲ್ಲಾ ರಾಮಾಯಣಗಳಿಗೂ ಕನ್ನಡ ಭಾಷೆ ನೀಡಿದ ಕೊಡುಗೆ ಇದು. ಅದುವೇ 'ದಶಾನನನ ಸ್ವಪ್ನಸಿದ್ಧಿ'ಯ ಪ್ರಕರಣ. ಕುವೆಂಪುರವರು ರಾಮಾಯಣದ ಕಥನವನ್ನು ಮುನ್ನಡೆಸುವಾಗ ಸ್ವಪ್ನಗಳು ಮೂರು ರೀತಿಯಾದಂತಹ ಚಲನೆಯಲ್ಲಿ ಕಾಣಿಸುತ್ತವೆ. ಒಂದು, ನೆನಪಿನ ಆಯಾಮ, ಇನ್ನೊಂದು ಕಲ್ಪನೆಯ ಆಯಾಮ. ನೆನಪಿನ ಆಯಾಮದ ಕನಸು ಹಿಮ್ಮುಖ ಚಲನೆಯನ್ನು ಹೊಂದಿರುತ್ತದೆ. ಅಲ್ಲಿ ಕಾಲ ಹಿಂಗತಿಯಲ್ಲಿ ನಡೆಯುತ್ತದೆ. ಉದಾಹರಣೆಗೆ ಭರತನಿಗೆ ಬಿದ್ದ ಕನಸಿನಲ್ಲಿ ಈಗಾಗಲೇ ದಶರಥ ತೀರಿಹೋಗಿದ್ದಾನೆ, ರಾಮ, ಲಕ್ಷ್ಮಣ, ಸೀತೆಯರು ವನವಾಸಕ್ಕೆ ಹೊರಟು ಹೋಗಿದ್ದಾರೆ. ಹೆಂಡತಿಯ ತವರಿನಲ್ಲಿದ್ದ ಭರತನಿಗೆ ಈ ಘಟನೆ ನಡೆದ ತರುವಾಯದಲ್ಲಿ ಈ ಮುಂದಿನಂತೆ ಸ್ವಪ್ನವಾಗುತ್ತದೆ. 'ಕೋಡುಗಲ್ಲಿನ ಮೇಲೆ, ಒಬ್ಬಂಟಿಗನಾಗಿ, ಮಾಸಿದ ಬಟ್ಟೆಯಲ್ಲಿ, ಅನಾಥನಂತೆ ನಿಂತಿರುವ ದಶರಥನ ಪ್ರತಿಮೆ, ನೋಡನೋಡುತ್ತಿದ್ದಂತೆ 'ಬೆಟ್ಟದುದಿಗೋಡಿಂದೆ ಹಾರಿ ದುಮಿಕಿದನು ತಳ್ಪಲೊಳಿರ್ದ ಹೇಸಿಗೆಯ ಮಡುವಿನೊಳ್.' 'ತೇಲಿದನ್‌ದುರ್ಮಲದ ಜಲದಿಯಲಿ ತಿಂದನ್ ತೈಲಾನ್ನಮಂ' ಚಂದ್ರ ಆಕಾಶದಿಂದ ಜಾರಿ ಬಿದ್ದು, ಸಮುದ್ರ ಒಣಗಿ, ರಕ್ತವರ್ಣದ ಮಾಲೆ ಧರಿಸಿರುವ ದಶರಥ ಕತ್ತೆಯ ಮೇಲೆ ಕಬ್ಬಿಣದ ಆಸನದಲ್ಲಿ ಕುಳಿತು ದಕ್ಷಿಣ ದಿಕ್ಕಿಗೆ ಪಯಣಿಸುತ್ತಿರುತ್ತಾನೆ. ರಕ್ಕಸಿಯೊಬ್ಬಳು ಅವನನ್ನು ಎಳೆದೊಯ್ಯುತ್ತಿರುತ್ತಾಳೆ. ಕೂಗಿಕರೆಯುತ್ತಿದ್ದರೂ ನಿಲ್ಲದೆ ಆತ ಕತ್ತಲಿನಲ್ಲಿ ಮರೆಯಾಗಿಬಿಡುತ್ತಾನೆ.'

ಅಯೋಧ್ಯೆಯಲ್ಲಿ ಸಂಭವಿಸಿರುವ ಕೌಟುಂಬಿಕ ದುರಂತದ ವಿಷಾದ ಗಾಥೆಯನ್ನು ಕಟ್ಟಿಕೊಡುವ ಈ ಕನಸನ್ನು ಕಂಡು ಬೆಚ್ಚಿ ಎದ್ದ ಭರತ ತನ್ನ ಕನಸನ್ನು ಶತೃಘ್ನನಲ್ಲಿ ಹೇಳಿಕೊಳ್ಳುತ್ತಾನೆ. ನಡೆದು ಹೋಗಿರುವ ಘಟನೆಯೊಂದು ಕಾಲದ

ಹಿಂಚಲನೆಯಲ್ಲಿ ನಿರೂಪಣೆಗೊಂಡ ಪ್ರಕರಣ ಇದು. ಕನಸಿನ ಇನ್ನೊಂದು ಆಯಾಮ ಭವಿಷ್ಯಕ್ಕೆ ಸಂಬಂಧಿಸಿದ್ದು. ದಶಾನನ ಸ್ವಪ್ನಸಿದ್ಧಿಯಲ್ಲಿ ಸೀತೆಗೆ ಸಮೀಪನಾಗುವ, ರಾಮನನ್ನು ಸೋಲಿಸುವ ರಾವಣನ ಪ್ರಾಥಮಿಕ ಆಪೇಕ್ಷೆ ಅವನ ಮುಂದಿನ ಜನ್ಮದಲ್ಲಿ ಈಡೇರುತ್ತದೆ ಎಂದು ಲಂಕಾಲಕ್ಷ್ಮಿ ಆತನಿಗೆ ಆಶ್ವಾಸನೆಯನ್ನು ಕೊಡುತ್ತಾಳೆ. ರಾವಣ ಮತ್ತು ಕುಂಭಕರ್ಣರು ಮುಂದಿನ ಜನ್ಮದಲ್ಲಿ ಲವಕುಶರಾಗಿ ಹುಟ್ಟಿ ಸೀತೆಯ ಒಲುಮೆಯನ್ನು ಪಡೆಯುವ ಕಥೆ ಇದು. ಇದೆಲ್ಲವೂ ಸಾಧ್ಯವಿದೆ, ಆದರೆ ಈ ಜನ್ಮದಲ್ಲಲ್ಲ, ಭವಿಷ್ಯದಲ್ಲಿ ಸಂಭವಿಸುತ್ತದೆ ಎನ್ನುವುದನ್ನು ಮನವರಿಕೆ ಮಾಡುವ ಹಾಗೆ ರಾಮಾಯಣ ಯುದ್ಧದ ನಿರ್ಣಾಯಕ ಘಟ್ಟಕ್ಕೂ ಮೊದಲೇ ರಾವಣನಿಗೆ ಈ ಸ್ವಪ್ನ ಕಾಣಿಸುತ್ತದೆ.

ಹೀಗೆ ನಡೆದುದನ್ನೂ, ನಡೆಯಬಹುದಾದುದನ್ನೂ ಸ್ವಪ್ನಗಳು ತೋರಿಸುತ್ತವೆ. ಇದಿಷ್ಟೇ ಅಲ್ಲ, ಇಲ್ಲಿ ಸ್ವಪ್ನಗಳಿಗೆ ಇನ್ನೊಂದು ಮೂರನೆಯ ಆಯಾಮ ಸಹ ಇದೆ. ಲೋಲಾಕಿನ ಹಾಗೆ ಸ್ವಪ್ನ ನೆನಪಿಗೂ ಅಲ್ಲಿಂದ ಕಲ್ಪನೆಗೂ ಓಡಾಡುವ ಗತಿಯ ಚಲನೆಯನ್ನು ಈ ಸ್ವಪ್ನಗಳು ಕಟ್ಟಿಕೊಡುತ್ತವೆ. ಅದರ ಜೊತೆಯಲ್ಲಿ ಇಲ್ಲಿ ಸ್ವಪ್ನಗಳ ಚಕ್ರಗತಿಯ ನಿರೂಪಣೆಯೂ ಕಂಡು ಬರುತ್ತದೆ. ಸ್ವಪ್ನಗಳ ಈ ಚಕ್ರಗತಿ ನಾನು ಗಮನಿಸಿದ ಹಾಗೆ, ನನ್ನ ಸೀಮಿತ ಓದಿನ ಪರಿಮಿತಿಯಲ್ಲಿ ಭಾರತದ ಸಾಹಿತ್ಯ ಚರಿತ್ರೆಯ ಮತ್ಯಾವ ಗ್ರಂಥದಲ್ಲೂ ಕಾಣಸಿಗುವುದಿಲ್ಲ. ಇಂತಹ ಪ್ರಕರಣವನ್ನು ಎಲ್ಲೂ ಯಾರೂ ದಾಖಲಿಸಿದ ಪ್ರಸ್ತಾಪವಿಲ್ಲ. ಅದು ತಪೋಲಕ್ಷ್ಮಿ ಮತ್ತು ಸ್ವಪ್ನದೇವಿ ಬರುವ ಅಧ್ಯಾಯ.

ಆ ಅಧ್ಯಾಯದಲ್ಲಿ ಏಕಕಾಲಕ್ಕೆ ರಾವಣ ಸ್ವಪ್ನವನ್ನು ಕಾಣುತ್ತಿರುತ್ತಾನೆ, ಅನಲಾ ಸ್ವಪ್ನವನ್ನು ಕಾಣುತ್ತಿರುತ್ತಾಳೆ, ಅತ್ತ ತ್ರಿಜಟೆಯೂ ಸ್ವಪ್ನವೊಂದನ್ನು ಕಾಣುತ್ತಿರುತ್ತಾಳೆ. ಅಂದರೆ ಒಂದೇ ಕ್ಷಣದ ಸ್ವಪ್ನ ಹೀಗೆ ಚಕ್ರಗತಿಯಲ್ಲಿ, ಏಕಕಾಲಕ್ಕೆ ಮೂವರಿಗೆ ಮೂರು ಬೇರೆಬೇರೆ ದೃಶ್ಯಗಳನ್ನು ತೋರಿಸುತ್ತಿರುತ್ತದೆ. ರಾವಣ ತನ್ನ ಕನಸನ್ನು ಮಂಡೋದರಿಗೆ ಹೇಳುತ್ತಾನೆ, ಅವನ ಕನಸಿನಲ್ಲಿ ನಿರ್ಭಾಗ್ಯಳಾಗಿರುವ ವೇದವತಿ ಚಿತೆಯನ್ನು ಏರಿ, ಬೂದಿಯಾಗಿ, ಆ ಬೂದಿರಾಶಿಯ ಮೇಲೆ ತಿಳಿಗಾಳಿ ಬೀಸಿ, ಅದರೊಳಗಿನಿಂದ ಮಹಾತಪಸ್ವಿನಿಯಾದ ಮೂರ್ತಿಯೊಂದು ಮೂಡಿಬಂದಂತೆ, ನೋಡ ನೋಡುತ್ತಿದ್ದಂತೆಯೇ ಅದು ಸೀತೆಯಾಗಿ ಕಾಣಿಸುತ್ತದೆ. ಇದೇ ಸಮಯಕ್ಕೆ ತ್ರಿಜಟೆಯೂ ಒಂದು ಕನಸು ಕಂಡಿರುತ್ತಾಳೆ. ಒಂದು ಸರೋವರದಲ್ಲಿ ಒಂದು ನೀಲಿ

ಮತ್ತೊಂದು ಸುವರ್ಣ ಕಮಲ ಅರಳಿ ಶೋಭಿಸುತ್ತಿರುವ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ಭಯಂಕರವಾದ ಒಂದು ಮೊಸಳೆ ಬಂದು ಈ ಸುವರ್ಣ ಕಮಲದ ಸುಖಸ್ಪರ್ಶಕ್ಕೆ ಹಾತೊರೆಯುತ್ತದೆ. ಆ ಸಂದರ್ಭದಲ್ಲಿ ಎಲ್ಲಿಂದಲೋ ಸಾವಿರಾರು ಜೇನು ನೊಣಗಳು ದಾಳಿಮಾಡಿ ಆ ಮೊಸಳೆಯನ್ನು ಕೊಂದು ಹಾಕುತ್ತವೆ. ಹಾಗೆ ಕೊಂದುಹಾಕಿದ ಬಳಿಕ ತೇಲಿ ಬರುವ ಆ ಮೊಸಳೆಯ ಶರೀರ ಧುತ್ತನೆ ರಾಕ್ಷಸೇಂದ್ರ ರಾವಣನ ಶರೀರವಾಗಿ ಮಾರ್ಪಟ್ಟಿದ್ದನ್ನು ಆಕೆ ಸೀತೆಗೆ ನಿರೂಪಿಸುತ್ತಾಳೆ. ಅದೇ ಕಾಲಕ್ಕೆ ಅನಲಾ ಕಂಡ ಸ್ವಪ್ನವೂ ಪ್ರಸ್ತಾಪವಾಗುತ್ತದೆ. ಅದನ್ನು ಆಕೆ ಮಂಡೋದರಿಗೆ ಹೇಳುತ್ತಾಳೆ. ಅನಲ ಕನಸಿನಲ್ಲಿ ಅಪೂರ್ವ ಜ್ಯೋತಿಯನ್ನು ಕಂಡಂತೆ, ಆ ಜ್ಯೋತಿ ಕಡೆಗೆ ಸೀತೆಯಾಗಿ ಪರಿವರ್ತನೆಗೊಂಡಿರುತ್ತದೆ. ಒಂದೇ ರಾತ್ರಿಯಲ್ಲಿ ಸಂಭವಿಸುವ ಈ ಸ್ವಪ್ನಗಳಲ್ಲಿ ಈ ರೀತಿಯಾದ ಚಕ್ರಾಕೃತಿ ಚಲನೆ ಕಂಡುಬರುತ್ತದೆ. ಈ ಮೂರೂ ಕನಸುಗಳ ನಡುವಿನಲ್ಲೂ ಇರುವ ಸಂಬಂಧ ಕಥೆಯಲ್ಲಿ ವ್ಯಕ್ತವಾಗದಿದ್ದರೂ ಓದುಗರಿಗೆ ತಿಳಿಯುತ್ತದೆ. ಇಂತಹ ಮಹತ್ ಸ್ವಪ್ನವನ್ನು ಸೃಷ್ಟಿಸಿದ ಪ್ರತಿಭೆ ಕುವೆಂಪುರವರದ್ದು.

ಈ ಮಹಾಕಾವ್ಯವನ್ನು ರಚಿಸುವಾಗ ಕುವೆಂಪುರವರು ಈ ಸ್ವಪ್ನದ ಸ್ವರೂಪವನ್ನು ಬರವಣಿಗೆಗೆ ತರುವ ಮೂಲಕವೇ ಭೌತಿಕವಾದ, ಪ್ರಾಕೃತಿಕವಾದ ಮಿತಿಗಳನ್ನು ಮೀರಿ ಅದನ್ನು ಅಪೂರ್ವವಾದ ದರ್ಶನವಾಗಿಸುವುದಕ್ಕೆ ಬೇಕಾದ ವೇದಿಕೆಯೊಂದನ್ನು ಕಂಡುಕೊಡಂತೆ ಕಾಣಿಸುತ್ತದೆ. ಕುವೆಂಪುರವರ ಕವಿತೆಗಳಲ್ಲಿ ಕೂಡ ವಸ್ತು ಪ್ರಪಂಚದಲ್ಲಿ ತನ್ಮಯವಾಗುವ, ಹಾಗೆ ತನ್ಮಯವಾಗುತ್ತಿದ್ದಂತೆಯೇ ತನಗೆ ಕಾಣುತ್ತಿದ್ದ ಭೌತಿಕ ಜಗತ್ತು ದೈವೀಕ ಲಕ್ಷಣಗಳನ್ನು ಪಡೆದುಕೊಳ್ಳುವ ಮಾಯಕವನ್ನು ನಾವೆಲ್ಲರೂ ಓದಿಬಲ್ಲೆವು. ಆಕಾಶದಲ್ಲಿ ಹಾರಿಹೋಗುತ್ತಿರುವ ಪಕ್ಷಿಗಳ ಸಾಲೊಂದು ದೇವರ ರುಜುವಾಗುವ ವಿಸ್ಮಯವಾಗಿ ದಾಖಲಾಗುವ ಘಟನೆಗಳನ್ನು ಕುವೆಂಪುರವರ ಕವಿತೆಗಳಲ್ಲಿ ಕಾಣಬಹುದು. ರಾಮಾಯಣ ದರ್ಶನದಲ್ಲಿ ಸಹ ಅದೇ ರೀತಿಯಲ್ಲಿ ಈ ಸ್ವಪ್ನಗಳು ನಿರೂಪಣೆಗೊಂಡಿರುವ ಬಗೆ ಮತ್ತು ಆ ಸ್ವಪ್ನಗಳ ಮೂಲಕವಾಗಿ ಕುವೆಂಪುರವರು ಮನುಷ್ಯಲೋಕದಲ್ಲಿ ಅಂತಸ್ತವಾಗಿರುವ ಜಗತ್ತುಗಳನ್ನು ನಮಗೆ ಮನವರಿಕೆ ಮಾಡಿಕೊಡುವ ಬಗೆಯನ್ನು ಗಮನಿಸಬೇಕು. ಇದನ್ನು ಅವರು ಸೃಜನಶೀಲ ದಾರಿಯನ್ನಾಗಿ ಬಳಸಿದ್ದಾರೆ. ನಾವು ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಇಡೀ ಕಾವ್ಯದಲ್ಲಿ ಕುವೆಂಪುರವರು ಸರಸ್ವತಿಯ ವೀಣೆ ಮತ್ತು ಗಾನವನ್ನು ಪದೇಪದೇ ತರುತ್ತಾರೆ. ಈ ವೀಣೆ ಮತ್ತು ಗಾನದ ಶೃತಿಯಲ್ಲಿ

ಸೃಷ್ಟಿಯಾಗುತ್ತಿರುವಂತಹ ಮಾಧುರ್ಯ ನಾದಮಯವಾದಂತಹ ಲೋಕ ಒಂದು ಪ್ರತಿಮಾಲೋಕ. ಕುವೆಂಪುರವರು ಈ ಬಗ್ಗೆ ಓದುಗರಲ್ಲಿ ಮತ್ತೆಮತ್ತೆ ವಿನಂತಿಸುತ್ತಾರೆ, 'ದಯಮಾಡಿ ನೀವಿದನ್ನು ಚರಿತ್ರೆಯ ಜ್ಞಾನದಿಂದ, ವಿಜ್ಞಾನದ ಅರಿವಿನಿಂದ ಸಂದರ್ಶಿಸದಿರಿ, ಹಾಗೆ ಮಾಡುವುದರಿಂದ ಮಹಾಕಾವ್ಯವೊಂದರ ಆಸ್ವಾದನೆಗೆ ಧಕ್ಕೆಯಾಗಿ ನಿರಾಸೆಯಾಗುತ್ತದೆ' ಎಂದು ಅವರು ಎಚ್ಚರಿಸುತ್ತಾರೆ. ಜನಪ್ರಿಯ ವಾಲ್ಮೀಕಿ ರಾಮಾಯಣವನ್ನು ಅನುವಾದಿಸುತ್ತಾ ಅವರೊಂದು ಮಾತು ಬರೆಯುತ್ತಾರೆ, 'ಒಮ್ಮೆ ಆಗಿಹೋದ ಚರಿತ್ರೆ ಮತ್ತೆ ನಡೆಯಲಾರದು. ಆದರೆ ವಾಲ್ಮೀಕಿಯ ಮಹಾಕೃತಿ ಚರಿತ್ರೆಯಲ್ಲ. ಇದು ಕಾವ್ಯ. ಆ ಚರಿತ್ರೆ ವಾಲ್ಮೀಕಿಯ ಚಿತ್‌ರಂಗದಲ್ಲಿ ನಡೆದದ್ದು. ಕಾಲದೇಶಾತೀತವಾಗಿರುವುದರಿಂದಲೇ ಅದು ನಿರಂತರವಾಗಿ ನಡೆಯುತ್ತಿರುವ ಶಾಶ್ವತ ಘಟನಾ ಪರಂಪರೆ. ಹಾಗಾಗಿಯೇ ಅದು ಮತ್ತೆ ಇನ್ಯಾವುದೋ ಸಹೃದಯನ ಚಿತ್‌ರಂಗದಲ್ಲಿಯೂ ಮತ್ತೆಮತ್ತೆ ನಡೆಯಬಹುದು.'

ವಾಲ್ಮೀಕಿ ಸೃಷ್ಟಿಸಿದ ಈ ಮಹಾಕಾವ್ಯ ಎಲ್ಲ ಕಾಲದಲ್ಲಿಯೂ ಆ ಕಾಲದ ಗುಣವಿಶೇಷಗಳನ್ನು ಮೈಗೂಡಿಸಿಕೊಂಡು ಮತ್ತೆ ಮತ್ತೆ ರೂಪತಾಳುತ್ತದೆ ಎನ್ನುವುದು ಕುವೆಂಪುರವರ ನಂಬಿಕೆಯಾಗಿತ್ತು. ಸಂಭವಾಮಿ ಯುಗೇಯುಗೇ ಎನ್ನುವಂತೆ ಅದು ಕಾಲ ಪ್ರಯಾಣದೊಳಗೆ ಮರುಸೃಷ್ಟಿಯಾಗುತ್ತಲೇ ಇದೆ. ಇನ್ಯಾರದೋ ಮತ್ಯಾರದೋ ಮನೋರಂಗದಲ್ಲಿ ಅದು ಹೊಸರೂಪ ತಳೆಯುತ್ತದೆ ಎನ್ನುವ ವಿಷಯದಲ್ಲಿ ಅವರಿಗೆ ಗಾಢವಾದ ವಿಶ್ವಾಸವಿದ್ದುದನ್ನು ಅವರು ರಾಮಾಯಣದರ್ಶನಂ ಕೃತಿಯೊಳಗೆ ದಾಖಲಿಸಿದ್ದಾರೆ. ರಾವಣನ ಅವಸಾನದ ಸಂದರ್ಭದಲ್ಲಿ ಅವರು ಇದು ಸತ್ಯಸ್ಯ ಸತ್ಯ ಕಥೆ, ಲೌಕಿಕದ ಕತೆಯಲ್ತು, ನಿರಂತರವಾಗಿ ಕಾಲದ ಜೊತೆಯಲ್ಲಿ ಸಂಭವಿಸುತ್ತಲೇ ಇರುವ, ಮರುರೂಪ ಪಡೆಯುತ್ತಲೇ ಇರುವ ನಿರಂತರ ಪ್ರಕ್ರಿಯೆ ಎನ್ನುವಂತಹ ದರ್ಶನವನ್ನು ಮನಗಾಣಿಸಿದ್ದಾರೆ.

ನಾನು ಗಮನಿಸಿದ ಹಾಗೆ ರಾಮಾಯಣದಲ್ಲಿ ಹದಿನಾರು ಸ್ವಪ್ನದ ದೃಶ್ಯಗಳಿವೆ. ಮೊದಲೆರಡು ಕೌಸಲ್ಯೆ ಮತ್ತು ಸೀತೆಗೆ ಸಂಬಂಧಿಸಿದ್ದಾದರೆ, ಮೂರನೆಯದು ಮಂಥರೆಯ ಕನಸು. ರಾಮನಿಗೆ ಪಟ್ಟಾಭಿಷೇಕವಾಗುತ್ತದೆ ಎಂದು ತಿಳಿದ ಕೂಡಲೆ ಅವಳಿಗೆ ಬೀಳುವ ಕನಸು ಅದು. ಅದನ್ನು ಆಕೆ ಕೈಕೇಯಿಗೆ ಹೇಳುತ್ತಾಳೆ. ಆಕೆಯ ಕನಸಿನಲ್ಲಿ ಮರುಭೂಮಿಯೊಂದರಲ್ಲಿ ವಿಧವೆ ಕೈಕೇಯಿ ಭರತನ ಕೈಹಿಡಿದುಕೊಂಡು ಅಲೆಯುತ್ತಿರುತ್ತಾಳೆ, ಮಂಥರೆ ಕೂಗಿದರೂ ಕೇಳಿಸಿಕೊಳ್ಳದೆ ಕತ್ತಲಲ್ಲಿ

ಮರೆಯಾಗುತ್ತಾಳೆ. ಈ ಸ್ವಪ್ನವೇ ರಾಮಾಯಣದ ಮುಂದಿನ ವನವಾಸಕ್ಕೆ ನಿಮಿತ್ತವಾಗುವ ಮೂಲಕ ದುರಂತಗಳ ಸರಮಾಲೆಗಳಿಗೆ ಮುನ್ನುಡಿಯಾಗಿದೆ. ಮುಂದಿನದು ರಾಮನಿಗೆ ಬೀಳುವ ದಕ್ಷಿಣಕ್ಕೆ ಕರೆಯುವ ವಾನರಾಕೃತಿಯ ಕನಸು. ಇನ್ನೊಂದು ದಶರಥನ ಬಗ್ಗೆ ಭರತ ಕಾಣುವ ಕನಸು. ಆರನೆಯ ಮತ್ತು ಬಹಳ ಮುಖ್ಯವಾದ ಕನಸು ರಾಮ ಕಂಡದ್ದು. ಚಿತ್ರಕೂಟದಲ್ಲಿ ರಾಮ ಸೀತೆಯೊಂದಿಗಿರುವಾಗ ಆತನ ಕನಸಿನಲ್ಲಿ ಊರ್ಮಿಳೆ ಲಕ್ಷ್ಮಣನನ್ನು ನೆನೆದು ಬೋರಾಡಿ ಅಳುತ್ತಿರುತ್ತಾಳೆ. ಧಿಡೀರನೆ ಕನಸಿನಿಂದ ಎಚ್ಚೆತ್ತ ರಾಮ, ಲಕ್ಷ್ಮಣನಿಗೆ ಕೂಡಲೆ ಅಯೋಧ್ಯೆಗೆ ಹಿಂದಿರುಗು, ಊರ್ಮಿಳೆ ನಿನಗಾಗಿ ಹಾತೊರೆದು ಅಳುತ್ತಿದ್ದಾಳೆ ಎಂದು ಹೇಳುತ್ತಾನೆ. ತಾನು ತನ್ನ ಸತಿಯೊಂದಿಗಿರುವಾಗ ಜೊತೆಯಲ್ಲಿರುವ ತಮ್ಮ ಮತ್ತು ಅವನನ್ನು ಬಿಟ್ಟಿರುವ ಆತನ ಮಡದಿಯ ವಿರಹದ ನೋವನ್ನು ರಾಮ ಪರಿಭಾವಿಸುವಂತೆ ಕುವೆಂಪು ಚಿತ್ರಿಸಿರುವ ಬಗೆ ಗಮನಿಸಬೇಕು.

ಸಾಧಾರಣವಾಗಿ ಕತೆಗಾರ ತನ್ನ ಪ್ರೊಟೋಗನಿಸ್ಟ್ ಪಾತ್ರಗಳನ್ನು ಕಟ್ಟಿಕೊಡುವ ಬಗ್ಗೆ ಮಾತ್ರ ಯೋಚಿಸಿದರೆ, ಕುವೆಂಪು ಅವರ ಕವಿಹೃದಯದಲ್ಲಿ ಒಬ್ಬ ಊರ್ಮಿಳೆಯ ನೋವಿಗೂ ತಾವಿರುತ್ತದೆ. ಮುಂದಿನ ಕನಸು, ಮುದಿ ಜೀವನದಲ್ಲಿಯೂ ರಾಮನ ದರ್ಶನಕ್ಕಾಗಿ ಕಾದಿರುವ ಶಬರಿಯದು. ನೀಲವರ್ಣದ ಅಪೂರ್ವ ಮೂರ್ತಿಯೊಂದು ಪ್ರತಿ ರಾತ್ರಿ ಅವಳ ಕನಸಿನಲ್ಲಿ ಕಾಣಿಸಿಕೊಳ್ಳುತ್ತಲಿರುತ್ತದೆ. ಮುಂದಿನ ಕನಸು ಬೆಳದಿಂಗಳಿನಲ್ಲಿ ವಿಶ್ವ ಕಂಡ ಭೂಮಿಯ ಕನಸು. ಒಂಬತ್ತನೆಯದು ತ್ರಿಜಟೆ ಕಂಡ ಕಮಲದ ಹೂವುಗಳ ಕನಸು. ಅಶೋಕವನದಲ್ಲಿದ್ದ ಸೀತೆಗೆ ತ್ರಿಜಟೆ ತೋರುವುದು ಮಾತೃವಾತ್ಸಲ್ಯ. ಹತ್ತನೆಯ ಬಹು ಮುಖ್ಯ ಕನಸೊಂದಿದೆ. ಕುವೆಂಪುರವರು ಸ್ವಪ್ನದೇವಿ ಮತ್ತು ತಪೋಲಕ್ಷ್ಮಿ ಎನ್ನುವ ಎರಡು ಪಾತ್ರಗಳನ್ನು ತರುತ್ತಾರೆ. ಅವೆರಡೂ ಪಾತ್ರಗಳೂ ರಣಭೂಮಿಯಲ್ಲಿ ಸಂವಾದಿಸುತ್ತವೆ. ತಾಯ್ತನದ ಸಂಗೋಪನಾ ಶಕ್ತಿಯಂತಿರುವ ತಪೋಲಕ್ಷ್ಮಿಯ ಸೂಚನೆಯಂತೆ ಸ್ವಪ್ನದೇವಿ ತಾನು ಕಂಡ ಸ್ವಪ್ನ ಸಾದೃಶ್ಯ ದೃಶ್ಯವನ್ನು ಸೀತೆಗೆ ಕನಸಿನಲ್ಲಿ ನಿವೇದಿಸುತ್ತಾಳೆ, 'ಮೇಘನಾದನ ವಿಷಬಾಣದಿಂದ ಪರಿಸರವು ವಿಷಮಯವಾಯಿತು, ಸಾವಿನಿಂದ ಆವರಿಸಲ್ಪಟ್ಟಿತು. ಆಗ ಆಕಾಶದಲ್ಲಿ ವಿರಳವಾದ ನಕ್ಷತ್ರಗಳ ಮಧ್ಯದಲ್ಲಿ ಉರಿಯುತ್ತಿದ್ದ ಮಹಾಜ್ಯೋತಿಯು ಬರುಬರುತ್ತಾ ಮಾನವ ಇಂದ್ರಿಯಗಳಿಗೆ ಅರಿವಾಗುವಪಕ್ಷಿ ಆಕಾರವನ್ನು ಪಡೆಯಿತು. ಅದು ಅಮೃತ ರೆಕ್ಕೆಗಳಿಂದ ಬೀಸಿದ ಗಾಳಿಗೆ ವಿಷವು ಚದುರಿಹೋಯಿತು. ನಂತರ ಆ

ಪಕ್ಷಿಯಾಕಾರದ ಚೈತನ್ಯವು ರಾಮನಲ್ಲಿ ಐಕ್ಯವಾಯಿತು. ಆ ಕನಸಿನಿಂದ ಈ ಕನಸಿಗೆ ಎಚ್ಚರಗೊಂಡಂತೆ ರಾಮಚಂದ್ರ ಕಣ್ತೆರೆದ' ಎಂದು ಹೇಳುತ್ತಾಳೆ. ಮುಂದಿನದು ರಾವಣ ಕಂಡ ವೇದವತಿ ಸೀತೆಯಾಗುವ ಕನಸು. ಇದರಲ್ಲಿ ಸೀತೆ ಅವನ ಮನಸ್ಸಿನಲ್ಲಿ ಮಾನವ ರೂಪದಿಂದ ದೈವೀಕ ರೂಪಕ್ಕೆ ಪರಿವರ್ತನೆಯಾಗುತ್ತಾಳೆ.

ಸೀತೆಯ ಮೇಲಿನ ಅನುರಕ್ತಿಯಿಂದ, ಮೋಹದಿಂದ, ಚಂದ್ರನಖಿಯ ಕಾರಣದಿಂದ ಸೀತೆಯನ್ನು ಸೆರೆಹಿಡಿದು ತಂದು, ಆಕೆಯನ್ನು ಒಲಿಸಿಕೊಳ್ಳಲು ಮಾಡಿದ ಎಲ್ಲ ಪ್ರಯತ್ನಗಳಲ್ಲೂ ಆತನಿಗೆ ನಿರಂತರವಾಗಿ ಸೋಲುಂಟಾಗಿ, ಹಾಗೆ ಸೋಲುಂಟಾಗಲು ಕಾರಣವೇನು ಎಂದು ಚಿಂತಿಸುವಾಗ ಅವನಿಗೆ ಬೀಳುವ ಕನಸು ಇದು. ತಾನು ಸೆರೆಯಾಗಿಸಿ ತಂದ ಹೆಣ್ಣು ಮಾನವೀ ನೆಲೆಯಿಂದ ದೈವೀಕ ನೆಲೆಗೇರುವ ಚಿತ್ರಣ ಅದು. ಇದರ ಮುಂದುವರಿಕೆಯಾಗಿ ಬರುವುದೇ ದಶಾನನನ ಸ್ವಪ್ನ ಸಿದ್ಧಿಯ ಪ್ರಕರಣ.

ದಶಾನನನ ಸ್ವಪ್ನ ಸಿದ್ಧಿಯ ಪ್ರಕರಣ ಇಡೀ ರಾಮಯಣದ ಹೃದಯ ಭಾಗವಾಗಿದೆ ಎಂದೇ ಹೇಳಬಹುದು. ತಾನು ಮಾಡಿದ ಒಂದು ಕೃತ್ಯದಿಂದ ಉಂಟಾದ ಯುದ್ಧದ ದುಷ್ಪರಿಣಾಮಗಳು ಮತ್ತು ಅದರಿಂದ ಉಂಟಾದ ನೋವು, ವ್ಯಥೆ, ಲಂಕೆಯ ಅವಸಾನ ಇವೆಲ್ಲಕ್ಕೂ ರಾಮ ಮತ್ತು ಆತನ ವಾನರಸೈನ್ಯವೇ ಕಾರಣ ಎಂದು ನಂಬಿದ್ದವನಿಗೆ ಹೆಣ್ಣು ರೂಪದಲ್ಲಿ ಕಾಣಿಸುವ ಲಂಕಾದೇವಿ, ಮಕ್ಕಳೊಂದಿಗೆ ಸುಖ ಸಮೃದ್ಧಿಯಲ್ಲಿ ಬದುಕುತ್ತಿದ್ದವಳನ್ನು ಈ ದುಸ್ಥಿತಿಗೆ ತಂದವನು ನೀನೇ ಎಂದು ರಾವಣನನ್ನು ಗುರಿಯಾಗಿಸಿ ಹೇಳುತ್ತಾಳೆ. ಪಶ್ಚಾತ್ತಾಪದಿಂದ ನೊಂದ ರಾವಣ, ರಾಮನನ್ನು ಗೆದ್ದು ಅವನನ್ನು ಸೀತೆಗೆ ಉಡುಗೊರೆಯಾಗಿ ಕೊಡುತ್ತೇನೆ ಎಂದು ಹೇಳುತ್ತಾನೆ.

ಕೆಥಾರ್ಸಿಸ್ ರೀತಿಯಲ್ಲಿ ರಾವಣ ತನ್ನ ಎಲ್ಲಾ ಪಾಪದ ಚಿಂತನೆಗಳಿಂದ ಮುಕ್ತಗೊಳ್ಳುವ ಮಾರ್ಗವನ್ನು ದಶಾನನ ಸ್ವಪ್ನಸಿದ್ಧಿ ನಮ್ಮ ಮುಂದೆ ಇಡುತ್ತದೆ. ರಾಮಾಯಣ ದರ್ಶನದಲ್ಲಿ ಬರುವ ಇನ್ನೊಂದು ಸ್ವಪ್ನ ವಿಚಿತ್ರವಾಗಿ ಕಾಣಿಸುತ್ತದೆ. ಬಹುಶಃ ಇದನ್ನು ಬಹಳ ಜನ ಗುರುತಿಸಿದಂತಿಲ್ಲ. ದಶಾನನ ಸ್ವಪ್ನಸಿದ್ಧಿ ಮತ್ತಿತರ ಸ್ವಪ್ನಗಳನ್ನು, ಆ ಘನಸಂಗತಿಗಳನ್ನು ಗುರುತಿಸಿದವರೂ ಸಹ ಇದರ ಬಗ್ಗೆ ಮಾತನಾಡಿದಂತಿಲ್ಲ. ಅದೊಂದು ವಿಚಿತ್ರ ಘಟನೆ, ರಾಮ ಮತ್ತು ರಾವಣರ ಯುದ್ಧದ

ಸಂದರ್ಭದಲ್ಲಿ ಅವರಿಬ್ಬರ ನಡುವೆ ಉತ್ಪನ್ನವಾಗುತ್ತಿದ್ದ ಕೋಪಾಗ್ನಿ, ಪರಸ್ಪರರನ್ನು ನಾಶಪಡಿಸಬೇಕೆಂದು ಇಬ್ಬರಲ್ಲಿಯೂ ಇದ್ದ ಸಿಟ್ಟಿನ ದಾವಾನಲದ ಸಂದರ್ಭದಲ್ಲಿ ಅಯೋಧ್ಯೆಯಿಂದ ಲಂಕೆಯವರೆಗಿನ ಪ್ರಾಕೃತಿಕ ಜಗತ್ತಿನಲ್ಲಿ ಏನಾಗುತ್ತಿತ್ತು ಎನ್ನುವ ಸ್ವಪ್ನದ ಕತೆಯೊಂದನ್ನು ಕುವೆಂಪು ಬರೆದಿದ್ದಾರೆ.

ಮನುಷ್ಯ ಮತ್ತು ನಿಸರ್ಗ ಬೇರೆ ಬೇರೆಯಲ್ಲ ಎನ್ನುವ ಮುಖ್ಯವಾದ ಅಂಶವೊಂದನ್ನು ಹೇಳಲು ಅವರು ಈ ಪ್ರಸಂಗವನ್ನು ಒಂದು ಸೂಚಕವಾಗಿ ಬಳಸಿದ್ದಾರೆ. ಅಯೋಧ್ಯೆಯ ಸರಯೂ ನದಿಯಲ್ಲಿ ಮೊಸಳೆಯೊಂದು ಕೋಪಗೊಂಡು ಇನ್ನೊಂದು ಮೊಸಳೆಯ ಮೇಲೆ ಧಾಳಿ ಮಾಡಲು ಹೋಗುತ್ತದೆ. ಶೃಂಗಬೇರಿಪುರದ ಒಂದು ಕಾಡುಬೆಕ್ಕು ಕೋಪಗೊಂಡು ಧಾಳಿಗೆ ಸಿದ್ಧವಾಗುತ್ತದೆ, ಭರದ್ವಾಜ ಆಶ್ರಮದ ಕಾಡುಹಂದಿ ಹೋರಾಟಕ್ಕೆ ಸಿದ್ಧವಾಗಿ ಧಾಳಿ ಮಾಡಲು ಹೆಜ್ಜೆಯಿಡುತ್ತದೆ, ಚಿತ್ರಕೂಟದ ಹೆಬ್ಬುಲಿಗೆ ಒಂದು ಕನಸು ಬೀಳುತ್ತದೆ. ಹುಲಿಗೆ ಬಿದ್ದ ಕನಸೊಂದನ್ನು ಕವಿ ದಾಖಲು ಮಾಡಿದ ಘಟನೆಯನ್ನು ನಾನು ಇನ್ನೆಲ್ಲೂ ಗಮನಿಸಿಲ್ಲ. ಅಣುವಿನಿಂದ ಬ್ರಂಹಾಂಡದವರೆಗಿನ ಎಲ್ಲವನ್ನೂ ಗ್ರಹಿಸಬಲ್ಲ ಕುವೆಂಪುರವರ ಕವಿಶಕ್ತಿಗೆ ಇದು ಸಾಕ್ಷಿ. 'ಚಿತ್ರಕೂಟದಲಿ ಹೊಡೆತುಂಬೆ ತಿಂದು ಮಲಗಿರ್ದೊಂದು ಹೆಬ್ಬುಲಿಗೆ ಕನಸಾಯ್ತು. ಕಾಳ್ಕೋಣವೊಂದು ತನ್ನಂತಿವಿಯೆತಲೆಮಲೆತುಕೋಡೆಣೆದು–ಗುಟುರಿಕ್ಕಿಧಾವಿಸುವವೋಲ್' ಹಾಗೆಯೇ ಗೋದಾವರಿ ದಡದ ಪಂಚವಟಿಯಲ್ಲಿ ಕೃಷ್ಣಸರ್ಪವೊಂದನ್ನು ಕಂಡ ಮುಂಗುಸಿ ಸಿಟ್ಟಿನಿಂದ ನುಗ್ಗಿಬಂದಾಗ ಹಾವು ಹುತ್ತದಲ್ಲಿ ಬಚ್ಚಿಟ್ಟುಕೊಳ್ಳುತ್ತದೆ.

ಅಯೋಧ್ಯೆಯಿಂದ ಲಂಕೆಯವರೆಗಿನ ಭೌಗೋಳಿಕ ದಾರಿಯುದ್ದಕ್ಕೂ ಈ ರಾಕ್ಷಸ ರೂಪದ, ಕೋಪದ, ಆಕ್ರೋಶದ ಭಾವನೆಗಳು ಪ್ರತಿಫಲನಗೊಳ್ಳುತ್ತಿದ್ದುದನ್ನು ಕುವೆಂಪುರವರು ಪೋಣಿಸಿದ್ದಾರೆ. ಈ ಸ್ವಪ್ನಯಾದಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ ರಾಮಾಯಣವೆನ್ನುವುದು ಕೇವಲ ರಾಮನ ಕಥೆಯಾಗಿ ಉಳಿಯದೆ, ಅದೊಂದು ಮನುಷ್ಯ ಮತ್ತು ಜೀವಲೋಕದ ವರ್ತನೆಗಳ ಕಥೆಯಾಗಿ ಪಡೆದುಕೊಳ್ಳುವ ಆಯಾಮಗಳನ್ನು ನಾವು ಕಾಣಬಹುದು. ಮುಂದಿನದು ನಂದೀಗ್ರಾಮದ ಗುಡಿಸಿಲಿನಲ್ಲಿ ಭರತನಿಗೆ ರಾಮ ಹಿಂದಿರುಗಿದಂತೆ ಕನಸಾಗಿ ರಾಮಾಯಣದ ಸ್ವಪ್ನ ಸಾಲು ಸಮಾಪ್ತಿಯಾಗುತ್ತದೆ. ಆದರೆ ಈ ಸ್ವಪ್ನಸಾಲು ರಾಮಾಯಣದಾಚೆಗೂ ಒಂದು ಹೆಜ್ಜೆ ಮುಂದುವರೆಯುತ್ತದೆ. ಕಡೆಯಲ್ಲಿ ಕುವೆಂಪುರವರು ಒಂದು ಮಾತು

ಬರೆಯುತ್ತಾರೆ. 'ಗುರುವೆ, ಸ್ವಪ್ನದಿಂದ ಎಚ್ಚೆತ್ತವನಂತೆ, ಮನಸ್ಸು ಕಲಕುವ ಭ್ರಮೆಯಿಂದ ಈ ಪರಿಚಿತವಾದ ನಿಶ್ಚಿತ ಜ್ಞಾನವನ್ನು ಪಡೆದಂತೆ ಆಯಿತು. ವಿಕೃತಲೋಕದ ಮಿಥ್ಯೆಯಿಂದ ಪ್ರಕೃತಿ ಲೋಕದ ಸತ್ಯಕ್ಕೆ ಬಂದು ನನ್ನ ಜೀವಕ್ಕೆ ನೆಮ್ಮದಿಯಾಯಿತು' ಎಂದು ಅವರು ಈ ಸ್ವಪ್ನಯಾತ್ರೆಗೆ ಕೊನೆಯೊಂದನ್ನು ಬರೆದು ಮುಗಿಸುತ್ತಾರೆ. ಇವೆಲ್ಲವನ್ನೂ ಗಮನಿಸಿದರೆ ರಾಮಾಯಣದ ಕಥೆಯನ್ನು ಕುವೆಂಪು ಸೃಜಿಸಲಿಲ್ಲ, ರಾಮಾಯಣದ ಕತೆಯನ್ನು ಬರೆಯುತ್ತಾ ಬರೆಯುತ್ತಾ ರಾಮಾಯಣವೇ ಕುವೆಂಪು ಎನ್ನುವಂತಹ ಮಹಾಕವಿಯನ್ನು ಸೃಷ್ಟಿಸಿತು. ಕುವೆಂಪುರವರು ರಾಮಾಯಣ ಎನ್ನುವ ಸ್ವಪ್ನದಿಂದ ಎಚ್ಚೆತ್ತುಕೊಳ್ಳುವಷ್ಟರಲ್ಲಿ ನಿಶ್ಚಿತ ಜ್ಞಾನವನ್ನು ಪಡೆದಂತೆ ಆಯಿತು ಎನ್ನುತ್ತಾರೆ. ಸುಮಾರು ಒಂಬತ್ತು ವರ್ಷಗಳ ಕಾಲ, ಹಗಲು ರಾತ್ರಿ ಪ್ರತಿ ಕ್ಷಣವೂ ಸಹ ಧ್ಯಾನಿಸಿ, ಪ್ರಜ್ಞೆಯ ಎಲ್ಲಾ ಸ್ತರಗಳ ಸಂಭವ್ಯ ಸಾಧ್ಯತೆಯರೂಪದಲ್ಲಿ, ಲೋಕದ ಎಲ್ಲಾ ಜೀವ ವ್ಯಾಪಾರಗಳನ್ನು ರಾಮಾಯಣದ ಪಾತ್ರಗಳಲ್ಲಿ ಅಡಕಗೊಳಿಸಿ, ಮಾನವಲೋಕ ಮತ್ತು ಪ್ರಕೃತಿ ಲೋಕದೊಂದಿಗಿನ ಒಡನಾಟ, ಹೋರಾಟ ಮತ್ತು ಸಂಬಂಧಗಳ ಜಾಲವನ್ನು ರಾಮಾಯಣದ ಮೂಲಕ ಕುವೆಂಪು ತೋರಿಸಿಕೊಟ್ಟಿದ್ದಾರೆ. ರಾಮಾಯಣವನ್ನು ಅರ್ಥ ಮಾಡಿಕೊಳ್ಳಲು ಇರುವ ಅನೇಕ ಹಾದಿಗಳಲ್ಲಿ ಈ ಸ್ವಪ್ನದ ಹಾದಿಯೂ ಒಂದು ಎನ್ನುವುದು ನನ್ನ ಭಾವನೆ.

ಇಡೀ ಮಹಾಕಾವ್ಯದಲ್ಲಿ, ದಶಾನನ ಸ್ವಪ್ನಸಿದ್ಧಿಯ ಘಟನೆಯಲ್ಲಿ ಮುಂದೆ ಕಥೆ ಪಡೆದುಕೊಳ್ಳಬಹುದಾದ ತಾರ್ಕಿಕ ಅಂತ್ಯವನ್ನು ಅವರು ಕಾಣಿಸುತ್ತಾರೆ. ಯುರೋಪಿನ ಮಹಾಕಾವ್ಯಗಳು ತೋರಿಸುವ ಕೇಡಿನ ನಿರಂತರತೆ ಕಲ್ಪನೆಗಳನ್ನು ಕಾಪಾಡಿಕೊಳ್ಳುವುದರಲ್ಲಿ ಕುವೆಂಪು ಅವರಿಗೆ ಆಸಕ್ತಿ ಇಲ್ಲ. ಎಂತಹ ಕೇಡಾದರೂ ಒಳಿತಿನಲ್ಲಿ ಪರಿವರ್ತನೆಯಾಗಬೇಕು ಮತ್ತು ಒಳಿತಾಗಿಯೇ ಸಮಾಪ್ತಿಯಾಗಬೇಕು ಎನ್ನುವ ಗಾಢ ವಿಶ್ವಾಸವನ್ನು ಕುವೆಂಪುರವರು ತಮ್ಮ ಬದುಕಿನ ದರ್ಶನದಲ್ಲಿ ಕಂಡುಕೊಂಡಿದ್ದಾರೆ. ಮಂಥರೆಯನ್ನು ಅವರು ಸೃಷ್ಟಿಸಿದ ವಿಧಾನದಲ್ಲಿಯೇ ಮಂಥರೆಯ ಬಗ್ಗೆ ನಮ್ಮ ಹಿಂದಿನ ಮಹಾಕಾವ್ಯಗಳು ತೋರಿಸಿದ ಕೆಡುಕಿನ ಲಕ್ಷಣಗಳನ್ನು ಅವರು ಸಂಪೂರ್ಣವಾಗಿ ಬದಲಿಸಿ, ಆಕೆಗೆ ತಾಯ್ತನದ ಆಯಾಮವನ್ನು ಕೊಟ್ಟಿದ್ದಾರೆ. ಅವಳ ಮನಸ್ಸಿನ ಕ್ರೌರ್ಯವನ್ನು ಸೃಷ್ಟಿಸಿದ್ದು ಸಮಾಜ, ಅದರಲ್ಲೂ ಮುಖ್ಯವಾಗಿ ಗಂಡುಲೋಕ. ಅವಳ ವರ್ತನೆಗಳು ಸ್ವತಃ ಕ್ರಿಯಾತ್ಮಕವಲ್ಲ, ಪ್ರತಿ ಕ್ರಿಯಾತ್ಮಕವಾದದ್ದು. ಆ ತಿಳುವಳಿಕೆ ಮತ್ತು ದೃಷ್ಟಿಕೋನವನ್ನು ಬಳಸಿ ನಾವು

ಲೋಕವನ್ನು ನೋಡಲು ಪ್ರಾರಂಭಿಸಿದರೆ, ನಮ್ಮ ಆಲೋಚನೆಗಳಲ್ಲಿ ತರಲು ಸಾಧ್ಯವಾದರೆ, ನಮ್ಮ ಸುತ್ತಲಿನ ಪ್ರಪಂಚದಲ್ಲಿ ನಾವು ಕೇಡೆಂದು ಭಾವಿಸುತ್ತಿರುವ ಎಷ್ಟೋ ಸಂಗತಿಗಳು ಇನ್ಯಾವುದೋ ಸಂಗತಿಯ, ಘಟನೆಯ ಪ್ರತಿ ಉತ್ಪನ್ನವಾಗಿರುವುದು ಕಾಣಿಸುತ್ತದೆ. ನೋಡುವ ನೋಟಕ್ಕೆ ಇನ್ನೊಂದು ಆಯಾಮ ಇರುವ ಸಾಧ್ಯತೆಯನ್ನು ಕುವೆಂಪುರವರು ಪ್ರತಿಮಾ ವಿಧಾನದ ಮೂಲಕ ತೋರಿಸಿಕೊಡುತ್ತಿದ್ದಾರೆ. ಹಾಗಾಗಿ ಮಂಥರೆ ಇರಬಹುದು, ಮಂಡೋದರಿ, ಶಬರಿ, ಸೀತೆ, ತಾರೆ ಅಥವಾ ಅಹಲ್ಯೆ ಇರಬಹುದು, ಈ ರಾಮಾಯಣ ದರ್ಶನದಲ್ಲಿ ಅವರು ಒಟ್ಟು ಹೆಣ್ತನದ, ತಾಯ್ತನದ ಸ್ತ್ರೀಲೋಕವನ್ನು ಸಂಗೋಪನೆಯ ನೆಲೆಯಲ್ಲಿ ಕಟ್ಟಿಕೊಡುತ್ತಲೇ ಅದನ್ನು ಪುರುಷಲೋಕ, ಧರ್ಮ ಮತ್ತು ರಾಜಕಾರಣ ದಮನಗೊಳಿಸುತ್ತಿರುವ ರೀತಿಗಳನ್ನು ಈ ಪಾತ್ರಗಳ ಚಿತ್ರಣದ ಮೂಲಕ ಸೂಕ್ಷ್ಮವಾಗಿ ನಮಗೆ ಕಾಣಿಸುತ್ತಾರೆ.

ಅಹಲ್ಯೆಯ ಶಾಪದ ವಿಚಾರಕ್ಕೆ ಬಂದರೆ, ವಾಲ್ಮೀಕಿ ರಾಮಾಯಣದಲ್ಲಿ ಆಕೆ ಗಾಳಿಯ ಹಾಗೆ, ಆತ್ಮದ ರೂಪದಲ್ಲಿ ತಿರುಗಾಡಿಕೊಂಡಿದ್ದಳು ಎನ್ನುವ ಮಾತು ಬರುತ್ತದೆ. ಆದರೆ ಜನಪದೀಯ ಕಲ್ಪನೆಗಳು ಆಕೆ ಶಿಲೆಯಾಗಿದ್ದಳು ಎಂದು ಹೇಳುತ್ತವೆ. ಕುವೆಂಪುರವರು ಇದನ್ನೇ ಬಳಸಿಕೊಂಡು, ಅಲ್ಲೊಂದು ಕರಿಕಲ್ಲಿನ ಬಂಡೆಯಿತ್ತು, ಅದರ ಮೇಲೆ ಶಾಪದ ರೂಪ ಎನ್ನುವಂತೆ ಪೆರ್ಬುಲಿಯೊಂದು ಕೂತಿತ್ತು, ಆಕೆಯನ್ನು ಅದು ಅಧೀನಗೊಳಿಸಿಕೊಂಡಂತೆ ಇತ್ತು ಎಂದು ವರ್ಣಿಸುತ್ತಾರೆ. ರಾಮನ ಪ್ರವೇಶವಾದ ಕೂಡಲೆ ಆ ಹುಲಿ ಬಂಡೆಯನ್ನು ಬಿಟ್ಟು ಹೋಗುತ್ತದೆ, ರಾಮನ ಪಾದಸ್ಪರ್ಶವಾದ ಕೂಡಲೆ ಆ ಬಂಡೆ ಬೆಣ್ಣೆಯಂತೆ ಕರಗಿ ಹೆಣ್ಣಾಗಿ ಪರಿವರ್ತನೆಗೊಳ್ಳುತ್ತದೆ ಎನ್ನುವ ಚಿತ್ರ ಅತ್ಯಂತ ಹೃದ್ಯವಾಗಿದೆ. ಕನ್ನಡ ಭಾಷೆಯ ಬನಿ, ಪದಗಳು ಪಡೆದುಕೊಳ್ಳುವ ರಸಾತ್ಮಕವಾದ ಆಯಾಮಗಳನ್ನು ಅರಿಯಬೇಕಾದರೆ ಗಟ್ಟಿಯಾಗಿ ಓದಿಕೊಳ್ಳುತ್ತಾ ಈ ಮಹಾಕಾವ್ಯ ಮಹಾಗಾನವಾಗುವ ಸುಖವನ್ನು ಕಿವಿಯಲ್ಲಿ ಕೇಳಿ ಆನಂದಿಸಬೇಕು. ರಾಮಯಣದರ್ಶನವಷ್ಟೇ ಅಲ್ಲ, ಕುವೆಂಪುರವರ ಒಟ್ಟು ಸಾಹಿತ್ಯದಲ್ಲಿ ಕನಸುಗಳ ಸೃಜನಶೀಲ ಪ್ರವೇಶವನ್ನು ಅಧ್ಯಯನ ಮಾಡುವುದು ಒಂದು ಮಹಾಪ್ರಬಂಧದ ವಸ್ತುವಾಗುತ್ತದೆ. ಮನಶ್ಶಾಸ್ತ್ರದ ಶ್ರೇಷ್ಠ ಚಿಂತಕರಾದ ಕಾರ್ಲ್ ಯೂಂಗ್‌ನ ಸಮಷ್ಟಿ ಸುಪ್ತಪ್ರಜ್ಞೆಯ ಚಿಂತನೆಗಳಿಂದ ಕುವೆಂಪುರವರು ಪ್ರಭಾವಿತರಾಗಿದ್ದುದನ್ನು ಅವರ ಆತ್ಮಕತೆ ನೆನಪಿನ ದೋಣಿಯ ಮೂಲಕವೂ ನಾವು ಅರಿಯಬಹುದಾಗಿದೆ. ಕುವೆಂಪುರವರ ಸಾಹಿತ್ಯದಲ್ಲಿ ಸತ್ಯವನ್ನು ಕಾಣಿಸುವ ಮನೋಪರಿಕರವಾಗಿ ಸ್ವಪ್ನಗಳು ಬಳಕೆಯಾಗಿವೆ.

# ಕುವೆಂಪು–ಬೇಂದ್ರೆ ಕಾವ್ಯ ಪ್ರಣೀತ ರಾಷ್ಟ್ರೀಯತೆಯ ಪರಿಕಲ್ಪನೆ

* ಡಾ. ಅಪ್ಪಗೆರೆ ಸೋಮಶೇಖರ್

ಪ್ರಸ್ತುತ ಸಂದರ್ಭದಲ್ಲಿ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಕುರಿತ ಮರುವ್ಯಾಖ್ಯಾನ, ಮರುಚಿಂತನೆ ಅತ್ಯಗತ್ಯ. ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಭಾರತೀಯ ಮನಸ್ಥಿತಿ ಕಾಲಕಾಲಕ್ಕೆ ಹೇಗೆ ವ್ಯಾಖ್ಯಾನಿಸಿಕೊಂಡು, ಅರ್ಥಗಳನ್ನು ಆರೋಪಿಸಿಕೊಂಡು ಬಂದಿದೆ ಎಂಬುದೇ ಒಂದು ಕುತೂಹಲಕಾರಿ ಸಂಗತಿಯಾಗಿದೆ. ಭಾರತವು ಬಹುತ್ವದ ಗುಣವೊಂದಿರುವ ಕಾರಣದಿಂದಾಗಿ ರಾಷ್ಟ್ರೀಯತೆಯ ಪರಿಕಲ್ಪನೆಯು 'ಬಹುತ್ವದ ಅರ್ಥ'ವನ್ನು ಒಳಗೊಂಡಿದೆ. ಹಾಗಾಗಿ ರಾಷ್ಟ್ರೀಯತೆ ಎಂಬುದಕ್ಕೆ ಒಂದು ಸೀಮಿತವಾದ, ಅಂತಿಮವಾದ, ಶಾಶ್ವತವಾದ ಅರ್ಥವಿಲ್ಲ. ಪ್ರತಿ ಜಾತಿ, ಧರ್ಮ, ಸಂಸ್ಕೃತಿ, ಸಮುದಾಯ, ಭಾಷೆ, ಪ್ರದೇಶಗಳ ನೆಲೆಗಟ್ಟಿನಲ್ಲಿ ನಿಂತು ರಾಷ್ಟ್ರೀಯತೆಯನ್ನು ನಿರ್ವಚಿಸಲು ಹೊರಟರೆ ಅದು ಭಿನ್ನ ಭಿನ್ನ ಅರ್ಥಗಳನ್ನೇ ಬಿಚ್ಚಿಡುತ್ತಾ ಹೋಗುತ್ತದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯತೆಯ ಕುರಿತ ವ್ಯಾಖ್ಯಾನ, ಅರ್ಥ ಸ್ವರೂಪವು ಸದಾ ಚಲನಶೀಲವಾದದ್ದು, ಬದಲಾವಣೆಗೆ ಒಳಗಾಗುವಂತದ್ದು, ಪುನರ್ ಮೌಲ್ಯೀಕರಣಕ್ಕೆ ಒಳಪಡಿಸುವಂತದ್ದು ಹಾಗೂ ಕಾಲಕಾಲಕ್ಕೆ ಮುರಿದು ಕಟ್ಟಿಕೊಳ್ಳುವಂತದ್ದಾಗಿರುತ್ತದೆ. 'ಬಹುಜನ ಹಿತಾಯ, ಬಹುಜನ ಸುಖಾಯ ಲೋಕಾನುಕಂಪಾಯ' ಎಂದು ಹೇಳಿದ ಬುದ್ಧ ಗುರುವಿನ ಅರಿವು; 'ಇವನಾರವ ಎನ್ನದಿರಯ್ಯ, ಇವನಮ್ಮವ ಎಂದೆನಿಸಯ್ಯ' ಎಂದು ಹೇಳಿದ ಬಸವಣ್ಣಾದಿ ಶರಣರ ವಿವೇಕದ ಬೆಳಕಲ್ಲಿ ಪ್ರಸ್ತುತ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ನಿರ್ವಚಿಸಿಕೊಳ್ಳಬೇಕಿದೆ. ಎಲ್ಲರನ್ನೂ ಒಳಗೊಳ್ಳುವ ಸಹಿಷ್ಣುತೆಯ, ವಿಶ್ವಾಸನೀಯ ಚಾರಿತ್ರಿಕ ಪ್ರಜ್ಞೆಯ, ಧರ್ಮ ನಿರಪೇಕ್ಷತೆಯ, ಸಮಾನತೆಯ, ಮಾನವ ಹಕ್ಕುಗಳನ್ನು ಸಂರಕ್ಷಿಸುವ ಹಾಗೂ ನಾಗರಿಕತ್ವವನ್ನು ಎತ್ತಿಹಿಡಿಯುವ ಪರಿಕಲ್ಪನೆಯೇ ರಾಷ್ಟ್ರೀಯವಾದ.

**ಕುವೆಂಪು ಪ್ರತಿಪಾದಿಸಿದ ರಾಷ್ಟ್ರೀಯತೆಯ ಪರಿಕಲ್ಪನೆ :**

ರಾಷ್ಟ್ರಕವಿ ಕುವೆಂಪು ಅವರು ಕನ್ನಡದ ತಿಳುವಳಿಕೆಯ ಮೂಲಕ ರಾಷ್ಟ್ರೀಯತೆ, ವಿಶ್ವಮಾನವತೆಯನ್ನು ಮೌಲ್ಯೀಕರಿಸಿದ ಮಹತ್ವದ ಕವಿ. ವೈಚಾರಿಕತೆ, ವೈಜ್ಞಾನಿಕತೆ, ವ್ಯಕ್ತಿ ಗೌರವ ಹಾಗೂ ಅನಿಕೇತನ ತತ್ವವನ್ನು ಪ್ರತಿಪಾದಿಸಿದ ಕುವೆಂಪು ಅವರು ಒಳಗೊಳ್ಳುವ, ಭ್ರಾತೃತ್ವದ ಹಾಗೂ ಬಹುತ್ವದ ಮಾದರಿಯ ರಾಷ್ಟ್ರೀಯತೆಯನ್ನು ತಮ್ಮ ಸಾಹಿತ್ಯದಲ್ಲಿ ಕಟ್ಟಿಕೊಟ್ಟಿದ್ದಾರೆ. ವ್ಯಕ್ತಿಗತ ನೆಲೆಯಲ್ಲಿ ವಿಶ್ವಾತ್ಮಕತೆಯನ್ನು ಕಟ್ಟಿಕೊಳ್ಳಬೇಕಾಗಿರುವ ಬಗೆಯನ್ನು ಕುರಿತು ಮಾತನಾಡುತ್ತಲೇ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ವಿಶ್ವಮಾನವತ್ವದ ನೆಲೆಯಲ್ಲಿ ಹೇಗೆ ವಿಸ್ತರಿಸಿಕೊಳ್ಳಬೇಕು, ಆ ನಿಟ್ಟಿನಲ್ಲಿ ವಿದ್ಯೆಯ ಪಾತ್ರವೇನು? ಎಂಬುದನ್ನು ಕುವೆಂಪು ಹೀಗೆ ವಿವರಿಸುತ್ತಾರೆ : 'ಪ್ರತಿಯೊಂದು ಮಗುವೂ ಹುಟ್ಟುತ್ತಲೆ ವಿಶ್ವಮಾನವ. ಬೆಳೆಯುತ್ತಾ ನಾವು ಅದನ್ನು 'ಅಲ್ಪಮಾನವ'ನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು 'ವಿಶ್ವಮಾನವ'ನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯವಾಗಬೇಕು. ಹುಟ್ಟುವಾಗ 'ವಿಶ್ವಮಾನವ'ನಾಗಿಯೆ ಹುಟ್ಟಿದ ಮಗುವನ್ನು ನಾವು ದೇಶ, ಭಾಷೆ, ಮತ, ಜಾತಿ, ಜನಾಂಗ, ವರ್ಣ ಇತ್ಯಾದಿ ಉಪಾಧಿಗಳಿಂದ ಬದ್ಧನನ್ನಾಗಿ ಮಾಡುತ್ತೇವೆ. ಅವೆಲ್ಲವುಗಳಿಂದ ಪಾರಾಗಿಸಿ ಅವನನ್ನು 'ಬುದ್ಧ'ನನ್ನಾಗಿ ಅಂದರೆ ವಿಶ್ವಮಾನವನನ್ನಾಗಿ ಪರಿವರ್ತಿಸುವುದೆ ನಮ್ಮ ವಿದ್ಯೆ, ಸಂಸ್ಕೃತಿ, ನಾಗರಿಕತೆ ಎಲ್ಲದರ ಆದ್ಯ ಕರ್ತವ್ಯವಾಗಬೇಕು. ಪ್ರಪಂಚದ ಮಕ್ಕಳೆಲ್ಲ 'ಅನಿಕೇತನ'ರಾಗಬೇಕು. ಲೋಕ ಉಳಿದು, ಬಾಳಿ ಬದುಕ ಬೇಕಾದರೆ!' (ವಿಚಾರ ಕ್ರಾಂತಿಗೆ ಆಹ್ವಾನ, ಪು-1) ಕುವೆಂಪು ಅವರು ರಾಷ್ಟ್ರೀಯತೆಯನ್ನು ವಿಶ್ವಮಾನವತ್ವದಲ್ಲಿ ಸಂಕರಗೊಳಿಸುತ್ತ, ಬುದ್ಧತ್ವದಲ್ಲಿ ವಿಶ್ವಮಾನವತ್ವವನ್ನು ಸಾಕಾರಗೊಳಿಸುತ್ತಾರೆ. ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ವಿಶ್ವಾತ್ಮಕತೆಯ ನೆಲೆಯಲ್ಲಿ ವಿಶ್ವಾಸಾತ್ಮಕತೆಯನ್ನಾಗಿ ಪರಿಭಾವಿಸುವ ಕುವೆಂಪು ಅವರು : 'ಅನೇಕ ಧರ್ಮಗಳು ಮತಗಳಾಗಿ ಜನತೆಯನ್ನು ಗುಂಪು ಗುಂಪಾಗಿ ಒಡೆದಿವೆ; ಯುದ್ಧಗಳನ್ನು ಹೊತ್ತಿಸಿವೆ. ಜಗತ್ತಿನ ಕ್ಷೋಭೆಗಳಿಗೆಲ್ಲ ಮೂಲಕಾರಣವೆಂಬಂತೆ! ...ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ – ಈ ಪಂಚಮಂತ್ರ ಇನ್ನು ಮುಂದಿನ ದೃಷ್ಟಿಯಾಗಬೇಕಾಗಿದೆ.. ಅಂದರೆ ನಮಗೆ ಇನ್ನು ಬೇಕಾದುದು ಆ ಮತ ಈ ಮತ ಅಲ್ಲ; ಮನುಜಮತ. ಆ ಪಥ ಈ ಪಥ ಅಲ್ಲ; ವಿಶ್ವಪಥ. ಆ ಒಬ್ಬರ ಈ ಒಬ್ಬರ ಉದಯ ಮಾತ್ರವಲ್ಲ; ಸರ್ವರ ಸರ್ವಸ್ತರದ ಉದಯ. ಪರಸ್ಪರ ವಿಮುಖವಾಗಿ ಸಿಡಿದು ಹೋಗುವುದಲ್ಲ; ಸಮನ್ವಯಗೊಳ್ಳುವುದು. ಮಿತ ಮತದ ಆಂಶಿಕ

ದೃಷ್ಟಿಯಲ್ಲ! ಭೌತಿಕ ಪಾರಮಾರ್ಥಿಕ ಎಂಬ ಭಿನ್ನ ದೃಷ್ಟಿಯಲ್ಲ; ಎಲ್ಲವನ್ನು ಭಗವದ್ ದೃಷ್ಟಿಯಿಂದ ಕಾಣುವ ಪೂರ್ಣದೃಷ್ಟಿ'(ವಿಚಾರ ಕ್ರಾಂತಿಗೆ ಆಹ್ವಾನ, ಪು-2)ಎಂದಿದ್ದಾರೆ. ಮತ, ಧರ್ಮಗಳ ಮಿತಿಗಳನ್ನು ಮೀರದ ಹೊರತು ವಿಶ್ವಾತ್ಮಕತೆಯನ್ನು ಸಾಧಿಸಲಿಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಜಾತಿ, ಮತ, ಧರ್ಮ, ವರ್ಣ ತಾರತಮ್ಯಗಳನ್ನು ಕಿತ್ತೊಗೆಯುವ; ವ್ಯಕ್ತಿ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವ; ಯಾವುದೇ ಒಂದು ಧರ್ಮ ಗ್ರಂಥವನ್ನು ಪ್ರಮಾಣೀಕರಿಸುವ ವಾದವನ್ನು ತಿರಸ್ಕರಿಸುವ ಮೂಲಕ ರಾಷ್ಟ್ರೀಯತೆಯನ್ನಾಗಲಿ, ವಿಶ್ವಮಾನವತೆಯನ್ನಾಗಲಿ ಸಾಧಿಸಲಿಕ್ಕೆ ಸಾಧ್ಯ ಎಂಬುದನ್ನು ಕುವೆಂಪು ಅವರ ಈ ಮಾತುಗಳು ದೃಢೀಕರಿಸುತ್ತವೆ. ದೇವರು, ಧರ್ಮ ಕೇಂದ್ರಗಳ ಮೌಢ್ಯ-ಕಂದಾಚಾರಗಳ ಕಬಂಧಬಾಹುಗಳಿಂದ ಮಾನವ ಲೋಕವನ್ನು ಬಿಡುಗಡೆಗಳೊಸಿದ ಹೊರತು ಪರಸ್ಪರರಲ್ಲಿ ಭ್ರಾತೃತ್ವವನ್ನು, ಮಾನವೀಯ ಸಮಾಜವನ್ನು ಕಟ್ಟಲಿಕ್ಕೆ ಸಾಧ್ಯವಿಲ್ಲ ಎಂದು ಹೇಳುವ ಕುವೆಂಪು ಅವರು : 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ; ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು? ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು? ನೂರು ದೇವರನೆಲ್ಲ ನೂಕಾಚೆ ದೂರ, ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರ! ಭಾರತಿಯೆ ನಮಗಿಂದು ಜೀವನದ ದೇವತೆಯು, ವಿಶ್ವರೂಪಿಣಿಯವಳು ವಿಶ್ವಮುಖಿಯೈ; ಏಕಲಿಪಿ, ಏಕಭಾಷೆ ಮತ್ತು ಏಕಮತ ಇವು ಯಾವುವೂ ಭಾವೈಕ್ಯವನ್ನು ಸಾಧಿಸಲಾರದೆ ಸೋತಿರುವುದಕ್ಕೆ ಇತಿಹಾಸದ ಉದ್ದಕ್ಕೂ ಸಾಕ್ಷ್ಯಗಳು ಚೆಲ್ಲಿಬಿದ್ದಿವೆಯಲ್ಲಾ!? ಸರ್ವರಿಗೆ ಸಮಪಾಲು ಸರ್ವರಿಗೆ ಸಮಬಾಳು'(ವಿಚಾರ ಕ್ರಾಂತಿಗೆ ಆಹ್ವಾನ, ಪು-65, 72, 78, 79, 125, 133, 134)ಎಂಬ ಮಾತುಗಳ ಮೂಲಕ ರಾಷ್ಟ್ರೀಯತೆಯ ಪರಿಕಲ್ಪನೆಯು ವಿಶ್ವಾಸಾತ್ಮಕತೆಯ ಮೂಲಕ ವಿಶ್ವಾತ್ಮಕ ತತ್ವವಾಗುವ ಬಗೆಯನ್ನು ವಿವರಿಸಿದ್ದಾರೆ. 'ಜಯ್ ಭಾರತ ಜನನಿಯ ತನುಜಾತೆ/ ಜಯ ಹೇ ಕರ್ಣಾಕಟ ಮಾತೆ/ ...ನಾನಕ ರಾಮಾನಂದ ಕಬೀರರ/ ...ಚೈತನ್ಯ ಪರಮಹಂಸರ ವಿವೇಕರ/ ...ಸರ್ವ ಜನಾಂಗದ ಶಾಂತಿಯ ತೋಟ/ ರಸಿಕರ ಕಂಗಳ ಸೆಳೆಯುವ ನೋಟ/ ಹಿಂದು ಕ್ರೈಸ್ತ ಮುಸಲ್ಮಾನ/ ಪಾರಸಿಕ ಜೈನರುದ್ಯಾನ/ ಜನಕನ ಹೋಲುವ ದೊರೆಗಳ ಧಾಮ...' ಎಂದು ಹೇಳುತ್ತ ಕನ್ನಡದ ಪ್ರಜ್ಞೆಯ ಮೂಲಕ, ಭಾರತೀಯತೆಯ ರಾಷ್ಟ್ರೀಯವಾದವನ್ನು, ವಿಶ್ವಾತ್ಮಕ ನೆಲೆಯಲ್ಲಿ ವಿಸ್ತರಿಸುವ ಕುವೆಂಪು ಅವರ 'ವಿಶ್ವಮಾನವ ಗೀತೆ, ಶ್ರೀ ಗುರು, ವಿಚಾರ ಕ್ರಾಂತಿಗೆ' ಕವಿತೆಗಳು ರಾಷ್ಟ್ರೀಯತೆಯ

ಪರಿಕಲ್ಪನೆಗೆ ಬರೆದ ಭಾಷ್ಯದಂತಿವೆ. ಕುವೆಂಪು ಅವರ ಈ ಎಲ್ಲಾ ಕಾವ್ಯ ತಿಳಿವಳಿಕೆಯ ಮೂಲಕ ರಾಷ್ಟ್ರೀಯತೆಯನ್ನು ವಿಶ್ವಾತ್ಮಕತೆಯ ಮೌಲ್ಯವನ್ನಾಗಿ ಮರುಶೋಧಿಸಿಕೊಳ್ಳಬೇಕಿದೆ. ಅನಿಕೇತನ ಕವಿತೆಯ ಕೊನೆಯಲ್ಲಿ ಕುವೆಂಪು ಅವರು 'ಅನಂತ ನೀ ಅನಂತವಾಗು; ಆಗು, ಆಗು, ಆಗು, ಆಗು; ಓ ನನ್ನ ಚೇತನ; ಆಗು ನೀ ಅನಿಕೇತನ' (ವಿಚಾರ ಕ್ರಾಂತಿಗೆ ಆಹ್ವಾನ, ಪು–4) ಎಂಬುದಾಗಿ 'ಆಗುವಿಕೆ'ಯನ್ನು ಕುರಿತು ಮಾತನಾಡುತ್ತ; ಆಗುವಿಕೆ ಎನ್ನುವುದು ಒಂದೇ ಸಲಕ್ಕೆ ಸಾಧ್ಯವಾಗುವಂತಹುದಲ್ಲ ಹಾಗೂ ತುಂಬಾ ಶ್ರಮದಾಯಕವಾದದ್ದು, ಮಾನಸಿಕವಾಗಿ ಮಾಗದ ಹೊರತು ಆಗಲು ಸಾಧ್ಯವಿಲ್ಲ ಎಂಬುದನ್ನು ಹೇಳಿದ್ದಾರೆ. ಅಂದರೆ ಕನ್ನಡ ಪ್ರಜ್ಞೆ ರಾಷ್ಟ್ರೀಯತೆಯಾಗುವಿಕೆ; ರಾಷ್ಟ್ರೀಯ ಪ್ರಜ್ಞೆ ವಿಶ್ವಾತ್ಮಕವಾಗುವಿಕೆಯ ಶ್ರಮದಾಯಕವಾದ ವೈಚಾರಿಕ ಮಾರ್ಗವನ್ನು ಕುರಿತು ಮಾತನಾಡಿದ್ದಾರೆ.

**ಬೇಂದ್ರೆ ಕಾವ್ಯ ಪ್ರಣೀತ ರಾಷ್ಟ್ರೀಯತೆಯ ಪರಿಕಲ್ಪನೆ :**

ಬೇಂದ್ರೆಯವರ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಗಾಂಧೀಜಿ, ರವೀಂದ್ರನಾಥ ಠಾಗೋರ್ ಮುಂತಾದವರ ಚಿಂತನೆಗಳು ಹಾಗೂ ದೇಶದಲ್ಲಿ ನಡೆಯುತ್ತಿದ್ದ ವಸಾಹತುಶಾಹಿ ವ್ಯವಸ್ಥೆಯ ವಿರುದ್ಧದ ಸ್ವಾತಂತ್ರ್ಯ ಚಳವಳಿ ಪರಿಣಾಮಕಾರಿಯಾಗಿ ರೂಪಿಸಿವೆ, ಪ್ರಭಾವಿಸಿವೆ. ಸ್ವತಃ ಬೇಂದ್ರೆಯವರೇ ಹೇಳಿಕೊಂಡಿರುವ ಹಾಗೆ : 'ವ್ಯಷ್ಟಿ–ಸಮಷ್ಟಿ ಪರಸ್ಪರ ಪೋಷಕ, ಪೂರಕ. ಪೂರ್ಣದಿಂದ ಪೂರ್ಣದತ್ತ ಪರಿವರ್ಧಿಸುವ ಸಂಬಂಧ ಎಂದು ಆಗದಿದ್ದರೆ ಜೀವನವೇ ವಿಕೃತಿಯಾಗುತ್ತದೆ. ಈ ಎಚ್ಚರವನ್ನು ನನಗೆ ಮೊದಲು ಸ್ಪಷ್ಟವಾಗಿ ತಂದು ಕೊಟ್ಟ ಸಾಹಿತಿ ರವೀಂದ್ರನಾಥ ಟಾಗೋರರವರು.' (ಔದುಂಬರ ಗಾಥೆ, ಸಂ–1, ಪು–202) ರಾಷ್ಟ್ರೀಯತೆಯ ಪ್ರಜ್ಞೆಯು 'ಸಮಷ್ಟಿಯ ಅರಿವನ್ನು' ಒಳಗೊಳ್ಳಬೇಕಾದ ಅಗತ್ಯತೆಯನ್ನು ಬೇಂದ್ರೆಯವರ ಈ ಮಾತುಗಳು ಸ್ಪಷ್ಟಪಡಿಸುತ್ತವೆ. ಸಾಹಿತ್ಯದ ತಾತ್ವಿಕತೆಯನ್ನು ಕುರಿತು ಮಾತನಾಡುವ ಬೇಂದ್ರೆಯವರು, ಜಾತಿ ಮತ ಮೌಢ್ಯಗಳನ್ನು ಮೀರಿದ ಸಾಮಾಜಿಕ ಮೌಲ್ಯಗಳು ಸಾಕಾರಗೊಂಡಾಗ ಹಾಗೂ ಧಾರ್ಮಿಕ ಸತ್ವವು ವೈಜ್ಞಾನಿಕ ಸ್ವರೂಪವನ್ನು ಪಡೆದುಕೊಂಡಾಗ ಮಾತ್ರ 'ಅಖಂಡ'ವಾದ ರಾಷ್ಟ್ರೀಯತೆಯ ಪರಿಕಲ್ಪನೆಯು ವೈಚಾರಿಕ ಸ್ವರೂಪವನ್ನು ಪಡೆದುಕೊಳ್ಳಲಿಕ್ಕೆ ಸಾಧ್ಯ ಎಂಬುದನ್ನು ಸೂಚ್ಯವಾಗಿ 'ಸಾಹಿತ್ಯವು

ಯಾವುದಾದರೊಂದು ನಂಬುಗೆಗೆ ಎಡೆಗೊಡಬೇಕಾದರೆ ಅದು ಮತಮೂಢ, ಮತಭ್ರಾಂತ, ಮತವಿಕ್ಷಿಪ್ತ, ಮತವಿಕಾರಕ ಜಾತಿಯದಾಗಬಾರದು. ...ಧಾರ್ಮಿಕ ಸತ್ವವು–ವೈಜ್ಞಾನಿಕ ಸತ್ಯತೆಯೊಡನೆ ಅಖಂಡತೆಯನ್ನು ಕಂಡಿದ್ದಾದರೆ ಮಾನವತೆಗೆ ಮಾರ್ಗವಾದೀತು.' (ಔದುಂಬರಗಾಥೆ, ಸಂ–2, ಪು–5–7) ಎಂದು ಹೇಳುತ್ತಾರೆ. ಜಾತಿ, ಮತ, ಧರ್ಮಗಳ ಮೌಢ್ಯದಿಂದ ಸಮಾಜ ಛಿದ್ರಗೊಳ್ಳದಂತೆ ಎಲ್ಲರನ್ನೂ– ಎಲ್ಲವನ್ನೂ ಒಳಗೊಳ್ಳುವ ಅಖಂಡತೆಯ ಸ್ವರೂಪವೇ ನಿಜವಾದ ರಾಷ್ಟ್ರೀಯತೆ ಎಂಬುದು ಇದರಿಂದ ಮನವರಿಕೆಯಾಗುತ್ತದೆ.

ರಾಷ್ಟ್ರೀಯತೆಯನ್ನು ವಿಶ್ವಾಸಾತ್ಮಕತೆಯನ್ನಾಗಿ ರೂಪಾಂತರಿಸುವ ಸಾಧ್ಯತೆಗಳು ಬೇಂದ್ರೆಯವರ ಚಿಂತನೆಯ ತಾತ್ವಿಕ ನೆಲೆಗಟ್ಟಾಗಿದೆ. ಸಹಿಷ್ಣುತೆ, ಸಾಮರಸ್ಯ, ಭಾವೈಕ್ಯತೆ, ಪ್ರಜಾಸತ್ತಾತ್ಮಕತೆ, ಭ್ರಾತೃತ್ವಗಳು ರಾಷ್ಟ್ರೀಯತೆಯ ಮೌಲ್ಯಗಳಾಗಬೇಕಿದೆ. 'ಕವಿರಾಜಮಾರ್ಗ'ಕಾರ ಶ್ರೀವಿಜಯ ಹೇಳುವ 'ಕಸವರಮೆಂಬುದು ನೆರೆಸೈರಿಸಲಾರ್ಪೊಡೆ ಪರಧರ್ಮಮುಮಂ, ಪರವಿಚಾರಮುಮಂ' ಎಂಬುದು ರಾಷ್ಟ್ರೀಯತೆಯ ಪರಿಕಲ್ಪನೆಗೆ ಇರಬೇಕಾಗಿರುವ ನೈತಿಕತೆಯನ್ನು ಪ್ರತಿಪಾದಿಸುತ್ತದೆ. ರಾಷ್ಟ್ರೀಯತೆಯನ್ನು ವಿಶ್ವಾತ್ಮಕತೆಯನ್ನಾಗಿ ರೂಪಾಂತರಿಸಬಹುದಾದ ಸಾಧ್ಯತೆಗಳನ್ನು ಈ ಮಾತುಗಳಲ್ಲಿ ಗುರುತಿಸಬಹುದು. ರಾಷ್ಟ್ರೀಯತೆಯ ಪರಿಕಲ್ಪನೆಗಳು ಆಯಾ ದೇಶಗಳಿಗೆ ಮಾತ್ರ ಅನ್ವಯಿಸಬಹುದಾದ ಸೀಮಿತ, ಸಂಕುಚಿತ ಅರ್ಥಕ್ಕೆ ಒಳಗಾಗಬಾರದು. ಅಂದರೆ, ಒಂದು ದೇಶದ ರಾಷ್ಟ್ರೀಯತೆಯ ಪರಿಕಲ್ಪನೆಯು ಮತ್ತೊಂದು ರಾಷ್ಟ್ರವನ್ನು ಹೊರಗಿಡುವ, ಶತ್ರುವಂತೆ ಪರಿಭಾವಿಸುವ, ದ್ವೇಷಿಸುವ, ಶ್ರೇಷ್ಠ–ಕನಿಷ್ಠ ಎಂಬ ಮಿತಿಗೆ ಒಳಗಾಗಬಾರದು. ಈ ಕಾರಣಕ್ಕಾಗಿಯೇ ರವೀಂದ್ರನಾಥ ಠಾಗೋರ್, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಸಮಸ್ಯಾತ್ಮಕವೂ, ಸಂಕುಚಿತವೂ ಆಗಬಹುದಾದ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ವಿರೋಧಿಸಿದ್ದು. ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಈ ಸಮಸ್ಯಾತ್ಮಕತೆಯಿಂದ ಬಿಡುಗಡೆಗೊಳಿಸಬೇಕಾದರೆ, ಅದನ್ನು 'ವಿಶ್ವಾತ್ಮಕತೆ'ಯ ನೆಲೆಯಲ್ಲಿ ನಿರ್ವಚಿಸಿಕೊಳ್ಳಬೇಕಿದೆ. ಆಗ ಮಾತ್ರ ಅದಕ್ಕೆ ವಿಶಾಲ ದೃಷ್ಟಿಕೋನ ಲಭಿಸಲಿಕ್ಕೆ ಸಾಧ್ಯ. ಅಂದರೆ, 'ಭಾರತೀಯ ರಾಷ್ಟ್ರೀಯತೆ'ಯ ಪರಿಕಲ್ಪನೆಯು ತನ್ನೊಳಗಿನ ಬಹುತ್ವದ ಪ್ರಜಾಸತ್ತಾತ್ಮಕತೆಯನ್ನು ಕಾಪಾಡಿಕೊಳ್ಳುತ್ತಲೇ; ವಿಶ್ವಾತ್ಮಕತೆಗೆ ತೆರೆದುಕೊಳ್ಳುವಂತಾದಾಗ, ವಿಶ್ವಾತ್ಮಕತೆಯು ವಿಶ್ವಾಸಾತ್ಮಕತೆಯಾದಾಗ ಮಾತ್ರ ಅದಕ್ಕೆ

ಜಾಗತಿಕ ಮೌಲ್ಯ ದಕ್ಕಲಿಕ್ಕೆ ಸಾಧ್ಯ. ನಾವು ಪರಿಭಾವಿಸಿಕೊಳ್ಳುವ ರಾಷ್ಟ್ರೀಯತೆಯು ಏನೆಲ್ಲಾ ಆದರ್ಶಗಳನ್ನು ಒಳಗೊಳ್ಳಬೇಕು ಎಂಬುದನ್ನು ಬೇಂದ್ರೆಯವರ ಈ ಮಾತುಗಳಲ್ಲಿ ಕಂಡುಕೊಳ್ಳಬಹುದಾಗಿದೆ. 'ಎಲ್ಲಿಯವರೆಗೆ ಮಾನವರಲ್ಲಿ ಶತ್ರು ಶಿಬಿರಗಳಿರುತ್ತವೆಯೊ ಅಲ್ಲಿಯವರೆಗೆ ಯಾವ ಬಗೆಯ ವೈಜ್ಞಾನಿಕ ಪ್ರಗತಿಯಿಂದಲೂ ಏನೂ ಸಾಧಿಸಲು ಸಾಧ್ಯವಿಲ್ಲ. ದ್ವೇಷ, ಅಸೂಯೆ, ವೈರತ್ವಗಳಿಂದ ನಾವು ಪತನಗೊಳ್ಳುವುದರಲ್ಲಿ ಸಂದೇಹವಿಲ್ಲ. ಇಂದು ಬೇಕಾಗಿರುವುದು ಹೊಸ ಪ್ರವೃತ್ತಿಯ, ಹೊಸ ಪ್ರಜ್ಞೆಯ ಉದಯ. ವಿಜ್ಞಾನದ ಬಗ್ಗೆ ವಿರೋಧದ ಭಾವನೆಯನ್ನು ಇಟ್ಟುಕೊಳ್ಳಬೇಕಾಗಿಲ್ಲ. ಮಾನವರಲ್ಲಿ ಸಾಮರಸ್ಯವಿರಬೇಕು. ಕೂಡಿ ಬಾಳಬೇಕು ಎಂಬ ಭಾವನೆ ಹುಟ್ಟಬೇಕಾಗಿದೆ. ಈ ಪ್ರವೃತ್ತಿಯ ಜನರು ಹೆಚ್ಚಾದಂತೆ ಪರಿವರ್ತನೆಯು ಸಾಧ್ಯ.' (ಔದುಂಬರಗಾಥೆ, ಸಂ–2, ಪು–228) ಬೇಂದ್ರೆಯವರ ಈ ವ್ಯಾಖ್ಯಾನವು ಕೇವಲ ಭಾರತದ ರಾಷ್ಟ್ರೀಯತೆಯನ್ನು ಕುರಿತ ಮಾತಾಗಿರದೆ, ಪ್ರಸ್ತುತ ಇಡೀ ವಿಶ್ವದ ಮಾನವ ಲೋಕಕ್ಕೆ ಅನ್ವಯಿಸಬಹುದಾದ ತಾತ್ವಿಕ ಮೌಲ್ಯವಾಗಿದೆ. ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ವಿಶ್ವಾತ್ಮಕತೆಯನ್ನಾಗಿ ರೂಪಾಂತರಿಸುವ ಬಗೆಯನ್ನು ಬೇಂದ್ರೆಯವರ ಈ ಮಾತುಗಳಿಂದ ಕಂಡುಕೊಳ್ಳಬಹುದು.

ಬೇಂದ್ರೆಯವರ ರಾಷ್ಟ್ರೀಯತೆಯ ಪರಿಕಲ್ಪನೆಯು ಕನ್ನಡದ ರಾಷ್ಟ್ರೀಯತೆಯ ನಿರ್ವಚನೆಯ ಮೂಲಕ–ಭಾರತೀಯ ರಾಷ್ಟ್ರೀಯತೆಯನ್ನು; ಭಾರತೀಯ ರಾಷ್ಟ್ರೀಯತೆಯ ವ್ಯಾಖ್ಯಾನದ ಮೂಲಕ–ವಿಶ್ವಾತ್ಮಕತೆಯ ಕಡೆಗೆ ಚಲಿಸುತ್ತದೆ. ಅಂದರೆ, ಕನ್ನಡದ ರಾಷ್ಟ್ರೀಯತೆಯು–ಭಾರತೀಯ ರಾಷ್ಟ್ರೀಯತೆಯಾಗಿ ರೂಪಾಂತರಗೊಳ್ಳುವ; ಭಾರತೀಯ ರಾಷ್ಟ್ರೀಯತೆಯು–ವಿಶ್ವಾತ್ಮಕವಾಗಿ ರೂಪಾಂತರಗೊಳ್ಳುವ; ವಿಶ್ವಾತ್ಮಕತೆಯು ವಿಶ್ವಾಸಾತ್ಮಕತೆಯಾಗಿ ರೂಪಾಂತರಗೊಳ್ಳವು ಬಗೆಯನ್ನು ಬೇಂದ್ರೆಯವರ ಚಿಂತನೆ ಹಾಗೂ ಕಾವ್ಯ ಸಾಕ್ಷಾತ್ಕರಿಸುತ್ತದೆ. ಪೋಲ್ಯಾಂಡ್, ನಾರ್ವೆ, ಗ್ರೀಸ್, ಜಪಾನ್, ಫಿನ್‌ಲ್ಯಾಂಡ್, ಫಿಲಿಪಾಯಿನ್ ರಾಷ್ಟ್ರಗೀತೆಗಳನ್ನು ಅನುವಾದಿಸಿರುವ ಬೇಂದ್ರೆಯವರು ಭಾರತದ ರಾಷ್ಟ್ರೀಯತೆಯ ಪ್ರಜ್ಞೆ ರೂಪುಗೊಂಡ ಬಗೆಯನ್ನು ಹಾಗೂ ಅನುಸರಿಸಬೇಕಾಗಿರುವ ಕ್ರಮವನ್ನು ಸೂತ್ರಬದ್ಧಗೊಳಿಸಿ ಹೀಗೆ ನಿರೂಪಿಸಿದ್ದಾರೆ : 'ಲೋಕಮಾನ್ಯ ಟಿಳಕ ಮತ್ತು ಮಹಾತ್ಮಾ ಗಾಂಧಿಯವರು 'ಸ್ವರಾಜ್ಯಗಳಿಸಿ ಸುರಾಜ್ಯ ನೆಲೆಗೊಳಿಸಿರಿ' ಎಂದರು. ಭಾರತದ

ರಾಷ್ಟ್ರೀಯ ಜೀವನದಲ್ಲಿ ಇದು ಮೊದಲ ಹಜ್ಜೆ. ದಯಾನಂದ ಸರಸ್ವತಿ ವೇದದ ಎಚ್ಚರ ತಪ್ಪಿ ಈ ಆರ್ಯಖಂಡ ಭೇದ ಬುದ್ಧಿಗೆ ಬಲಿ ಬೀಳದಿರಲಿ ಎಂದದ್ದು ಎರಡನೆಯ ಹೆಜ್ಜೆ. ರಮಣರು 'ಅಹಂ' ನೆಲೆಯ ಸೂತ್ರ ಹೇಳಿದರು. ಈ ಸೂತ್ರವಿಲ್ಲದ ವ್ಯಕ್ತಿಗೆ ಇಹ, ಪರ ಎರಡೂ ಇಲ್ಲ ಎಂದರು. ಇದು ಮೂರನೆಯ ಹೆಜ್ಜೆ. ರವೀಂದ್ರರು ಸಕಲ ಕಲಾ ಕೌಶಲ್ಯದಿಂದ ಶಿಕ್ಷಣವನ್ನು ಸುಸಂಪನ್ನವಾಗಿ ಮಾಡಲು ಶ್ರೀನಿಕೇತನ, ಶಾಂತಿನಿಕೇತನ, ವಿಶ್ವಭಾರತಿ ಸ್ಥಾಪಿಸಿದರು. ಇದು ನಾಕನೆಯ ಹೆಜ್ಜೆ. ಶ್ರೀ ರಾಮಕೃಷ್ಣ, ಶಾರದಾಮಣಿದೇವಿ, ವಿವೇಕಾನಂದರು ವಿವಿಧ ಉಪಾಸನೆಗಳಿಂದಲೂ ಸಜ್ಜಾಗಿ ದರಿದ್ರನಾರಾಯಣನನ್ನು ನರ–ನಾರಾಯಣ ದರ್ಶನಕ್ಕಾಗಿ ಸಜ್ಜುಗೊಳಿಸಿದರು. ಇದು ಐದನೆಯ ಹೆಜ್ಜೆ. ಜೆ. ಕೃಷ್ಣಮೂರ್ತಿಯವರು ಯಂತ್ರ, ತಂತ್ರ, ಮಂತ್ರಗಳ ಬಾಯಿಗೆ ಬೀಳದ ಗುರುಭೋದದ ಧ್ವನಿಯಾಗಿ ಸಂಚಾರ ಸಮವಸರಣ ಯಾತ್ರೆಯಲ್ಲಿ ಜೀವನ ಸಾಫಲ್ಯದ ಹಾಗೂ ಬೀಜ ಸ್ವಯಂಭುತ್ವದ ಸ್ಪರ್ಶ ದೀಕ್ಷೆ ಕೊಟ್ಟರು. ಇದು ಆರನೆಯ ಹೆಜ್ಜೆ. ಶ್ರೀ ಅರವಿಂದ ಮತ್ತು ಮೀರಾಮಾತೆ – ಭೂಮಂಡಲದ ಅಖಂಡ ಮಾನವೀಯತೆಗೆ ದೈವಿಕ ಗರ್ಭವಿಲ್ಲದೆ ಬೇರೆ ಉಪಾಯವಿಲ್ಲ ಎಂಬ ತಿಳುವಳಿಕೆಯ ಹಾದಿ ತೆರೆದು, ಅದರ ಯೋಗವನ್ನು ಆಚಾರ್ಯರ ಸಂಪತ್ತಿಯಿಂದ ಸಮೃದ್ಧಗೊಳಿಸಿದರು. ಇದು ಏಳನೆಯ ಹೆಜ್ಜೆ. ...ಈ ಸಪ್ತಪದಿಯ ಹಾದಿ ನನ್ನದು. (ಔದುಂಬರಗಾಥೆ, ಸಂ–2, ಪು–259) ಬೇಂದ್ರೆಯವರು ತಮ್ಮ ಈ ನಿರೂಪಣೆಯಲ್ಲಿ ಬಳಸಿರುವ 'ಸಮವಸರಣ' ಪದವು 'ರಾಷ್ಟ್ರೀಯತೆ'ಯ ಪರಿಕಲ್ಪನೆಯನ್ನು ನಿರ್ವಚಿಸಿಕೊಳ್ಳಲು ಪೂರಕವಾಗಿದೆ. ಕಿ. ರಂ ನಾಗರಾಜ ಅವರು ಬೇಂದ್ರೆಯವರ ಕಾವ್ಯದ ಬಗೆಗೆ ಮಾತನಾಡುವ ಸಂದರ್ಭದಲ್ಲಿ 'ಸಮವಸರಣ' ಪದದ ಬಗೆಗೆ ಚರ್ಚಿಸಿದ್ದಾರೆ. ಕಿ. ರಂ ಅವರು ಹೇಳುವ ಹಾಗೆ : 'ಜೈನ ಪರಂಪರೆಯಲ್ಲಿ ತೀರ್ಥಂಕರರು ತಮ್ಮ ಮೋಕ್ಷದ ಆದಿಯಾಗಿ ಎಲ್ಲ ಭವಗಳನ್ನು ದಾಟಿ ಅತ್ಯಂತ ಉನ್ನತವಾದ ಸ್ಥಿತಿಗೇರುತ್ತಾರೆ ಅಂದರೆ ತೀರ್ಥಂಕರರಾಗುತ್ತಾರೆ. ತೀರ್ಥಂಕರರು ಸಿದ್ಧಶಿಲೆಗೆ ಹೋಗುತ್ತಾರೆ. ಈ ಸಿದ್ಧಶಿಲೆಯನ್ನು ಸಮವಸರಣ ಮಂಟಪ ಎನ್ನುತ್ತಾರೆ. ಆ ಮಂಟಪದಿಂದ ತೀರ್ಥಂಕರರು ಇಡೀ ಜೀವರಾಶಿಗೆ ಒಂದು ಸಂದೇಶವನ್ನು ಕೊಡುತ್ತಾರೆ. ಆ ಸಂದೇಶ 'ಸರ್ವಭಾಷಾಮಯಿ'. ಎಂದರೆ ತೀರ್ಥಂಕರರಾಡುವ ಭಾಷೆ ನೀವು ತಮಿಳಿನವನಾಗಿದ್ದರೆ ತಮಿಳಿನಲ್ಲಿ ಕೇಳಿಸುತ್ತೆ. ಕನ್ನಡದವನಾಗಿದ್ರೆ ಕನ್ನಡದಲ್ಲಿ, ಇಂಗ್ಲೀಷಿನವನಾಗಿದ್ರೆ ಇಂಗ್ಲೀಷಿನಲ್ಲಿ, ಲ್ಯಾಟಿನ್, ಸಂಸ್ಕೃತ ಹೀಗೆ

ಯಾವ್ಯಾವ ಭಾಷೆಯ ಜನರು ಅಲ್ಲಿರುತ್ತಾರೋ ಅವರವರ ಭಾಷೆಯಲ್ಲಿ ತೀರ್ಥಂಕರರ ವಾಣಿ ಗ್ರಹಿಕೆಗೆ ಬರುತ್ತದಂತೆ.' (ಮತ್ತೆ ಮತ್ತೆ ಬೇಂದ್ರೆ, ಪು–55–56) 'ಸಮವಸರಣ' ಕುರಿತ ಈ ನಿರೂಪಣೆಯು 'ಭಾಷಿಕ ಬಹುತ್ವ ಹಾಗೂ ಒಳಗೊಳ್ಳುವಿಕೆ'ಯ ಮೌಲ್ಯವನ್ನು ರೂಪಕ ಪರಿಭಾಷೆಯಲ್ಲಿ ಮಂಡಿಸುತ್ತದೆ. ಈ ಬಗೆಯ ವಿವರಣೆಯ ಮೂಲಕ ಇಂದಿನ ರಾಷ್ಟ್ರೀಯತೆಯ ಪರಿಕಲ್ಪನೆಯು 'ಬಹುತ್ವ ಹಾಗೂ ಒಳಗೊಳ್ಳುವಿಕೆ'ಯ ಅರಿವನ್ನು ಪಡೆದುಕೊಳ್ಳಬೇಕಿದೆ.

ಬೇಂದ್ರೆಯವರು ತಮ್ಮ ದೀರ್ಘ ನಿರೂಪಣೆಯಲ್ಲಿ 'ಬಾಲಗಂಗಾಧರ ತಿಲಕ್, ಮಹಾತ್ಮ ಗಾಂಧೀಜಿ, ದಯಾನಂದ ಸರಸ್ವತಿ, ರವೀಂದ್ರನಾಥ ಠಾಗೋರ್, ರಾಮಕೃಷ್ಣ ಪರಮಹಂಸ, ಶಾರದಾಮಣಿದೇವಿ, ಸ್ವಾಮಿವಿವೇಕಾನಂದ, ಜೆ. ಕೃಷ್ಣಮೂರ್ತಿ, ಶ್ರೀ ಅರವಿಂದ, ಮೀರಾಮಾತೆ' ಅವರುಗಳ ಚಿಂತನೆಗಳು ಹೇಗೆ ಭಾರತೀಯತೆಯನ್ನು ಅರ್ಥಾತ್ ರಾಷ್ಟ್ರೀಯತೆಯ ಸ್ವರೂಪವನ್ನು ಕಟ್ಟಿವೆ ಎಂಬುದನ್ನು ವಿಶ್ಲೇಷಿಸಿದ್ದಾರೆ. ಈ ಎಲ್ಲರೂ ಪ್ರತಿಪಾದಿಸುವ 'ಸ್ವರಾಜ್ಯ, ಸುರಾಜ್ಯ, ರಾಷ್ಟ್ರೀಯ ಜೀವನ, ಭೇದ ಬುದ್ಧಿಗೆ ಬಲಿಬೀಳದಿರುವುದು, ಅಹಂ(ನಾನತ್ವ) ನೆಲೆಯನ್ನು ಮೀರುವ, ಸಕಲ ಕಲಾ ಕೌಶಲ್ಯದಿಂದ ಕೂಡಿದ ಶಿಕ್ಷಣ, ದರಿದ್ರನಾರಾಯಣನನ್ನು ಸಜ್ಜುಗೊಳಿಸುವಿಕೆ, ಯಂತ್ರ–ತಂತ್ರ–ಮಂತ್ರಗಳ ಬಾಯಿಗೆ ಬೀಳದ ಗುರುಬೋಧಕ್ಕೆ ಧ್ವನಿಯಾಗುವುದು, ಜೀವನ ಸಾಫಲ್ಯ, ಸ್ವಯಂಭುತನ (ಸ್ವತಂತ್ರವ್ಯಕ್ತಿ), ಅಖಂಡ ಮಾನವೀಯತೆ, ತಿಳುವಳಿಕೆಯ ಹಾದಿ' ಈ ಎಲ್ಲಾ ಮೌಲ್ಯಗಳು ರಾಷ್ಟ್ರೀಯತೆಯ ತಾತ್ವಿಕತೆಯನ್ನು ಮಂಡಿಸುತ್ತವೆ.

ರಾಷ್ಟ್ರೀಯತೆಯ ಪರಿಕಲ್ಪನೆಯು ವಿಶ್ವಾತ್ಮಕತೆಯನ್ನು ಒಳಗೊಂಡಾಗ ಮಾತ್ರ ವ್ಯಾಪಕತೆಯ ಮೌಲ್ಯ, ಸೌಹಾರ್ದತೆ, ಭಾವೈಕ್ಯತೆ, ಸಾಮರಸ್ಯ, ಪ್ರಜಾಸತ್ತಾತ್ಮಕತೆ ದಕ್ಕಲಿಕ್ಕೆ ಸಾಧ್ಯ ಎಂಬುದನ್ನು ಬೇಂದ್ರೆಯವರ ಈ ಮಾತುಗಳು ಸ್ಪಷ್ಟಪಡಿಸುತ್ತವೆ. ವರ್ತಮಾನ ಭಾರತದ ಸಂದಿಗ್ಧತೆಗೆ ಬರೆದ ಭಾಷ್ಯದಂತಿರುವ ಬೇಂದ್ರೆಯವರ ಮಾತುಗಳು ಹೀಗಿವೆ : 'ಭಾರತವು ಪಾಕಿಸ್ತಾನ, ಸಿಂಹಳ, ನೇಪಾಳ, ಟಿಬೇಟ್, ಬರ್ಮಾ, ನಾಗಾ ಭೂಮಿಗಳ ಕೂಡ ಸಂಘಟಿತವಾಗಬೇಕಾಗಿದೆ. ಆಫ್ರಿಕಾಖಂಡ, ಪಶ್ಚಿಮ ಏಶಿಯಾ, ಚೈನಾ, ಜಪಾನ್, ರಷಿಯಾಗಳೊಡನೆ ಪಾಶ್ಚಿಮಾತ್ಯ ನಾಗರಿಕತೆಯ ಆಹ್ವಾನ ಸ್ವೀಕರಿಸಬೇಕಾಗಿದೆ. ಬುದ್ಧ, ಕ್ರಿಸ್ತ, ಪೈಗಂಬರ, ಮಾರ್ಕ್ಸ್– ಇವರು ಪೌರ್ವಾತ್ಯರು–ಪಾಶ್ಚಿಮಾತ್ಯರು ಇಂದಿನ ದಿವ್ಯ ಚೇತನಗಳು. ಭೂಮಂಡಲದ

ಬಹುಭಾಗ ಅವರದು. ಪೌರ್ವಾತ್ಯರಲ್ಲಿ ಬೆಳೆಯುವ ಪ್ರಜೆ, ಬೆಳೆಯುವ ಹಸಿವೆ ಇದೆ. ಬೆಳೆಯುವ ಭ್ರಾತೃಭಾವ ಸಿಡುಕು ಮಿಡುಕಿನಲ್ಲಿ ತೊಳಲಾಡುತ್ತಿದೆ. ಭಾವೈಕ್ಯ ಎಂಬುದು ಭಾರತೀಯರಲ್ಲಿ–ಪೌರ್ವಾತ್ಯರಲ್ಲಿ, ಪಾಶ್ಚಿಮಾತ್ಯರಲ್ಲಿ ಬೇಕಾಗಿದೆ. ಭಾರತೀಯ ಸಂಸ್ಕೃತಿಯ ವೈವಿಧ್ಯವನ್ನೇ ಒಡಕಿನ ಮೂಲ ಮಾಡಬೇಕೆಂಬ ತಂತ್ರ ನಡೆದಿದೆ. ಭಾಷಾ ಸಂಸ್ಕೃತಿಯು ರಾಷ್ಟ್ರಸಂಸ್ಕೃತಿಯ ಅಂಗ. ರಾಷ್ಟ್ರವು ವಿಶ್ವ ಮಾನವತೆಯ ಅಂಗ. ಮಾನವತೆಯು ದೈವಿಕತೆಯ ಕ್ಷೇತ್ರ. ...ಸದ್ಯದ ಕಾಲ ಬೇಡುತ್ತದೆ ಸಹಜೀವನದ ಸಖ್ಯ.' (ಔದುಂಬರಗಾಥೆ, ಸಂ–2, ಪು–309) ಬೇಂದ್ರೆಯವರ ಈ ನಿರೂಪಣೆಯು ಅವರ ರಾಷ್ಟ್ರೀಯತೆಯ ತಾತ್ವಿಕತೆಯನ್ನು ಖಚಿತಪಡಿಸುತ್ತದೆ. ರಾಷ್ಟ್ರೀಯತೆಯ ಪರಿಕಲ್ಪನೆಯು ಕೇವಲ ಬೌದ್ಧಿಕತೆಯ ತಾತ್ವಿಕ ಜಿಜ್ಞಾಸೆಗೆ ಮಾತ್ರ ಸೀಮಿತಗೊಳ್ಳದೆ; ಕ್ರಿಯಾತ್ಮಕವಾಗಿ, ರಚನಾತ್ಮಕವಾಗಿ ಸಾಧ್ಯವಾಗಿಸುವುದು ಬಹಳ ಮುಖ್ಯ. ಜಾಗತಿಕ ನೆಲೆಯಲ್ಲಿ ಪ್ರಾದೇಶಿಕತೆಯ ಬಹುತ್ವ, ವ್ಯಕ್ತಿತ್ವಾದಿ ತತ್ವ ಚಿಂತನೆ, ವಿಶ್ವಮಾನವತ್ವದ ಆದರ್ಶ, ಸಹಜೀವನದ ಸಖ್ಯಗಳು ರಾಷ್ಟ್ರೀಯತೆಯ ಮೌಲ್ಯಗಳಾಗಬೇಕೆಂಬುದನ್ನು ಬೇಂದ್ರೆಯವರು ಸೂಚ್ಯವಾಗಿ ಮಂಡಿಸುತ್ತಾರೆ. 'ಧಾರ್ಮಿಕ ಸಹಿಷ್ಣುತೆ' ಎಂಬುದು ಸಮುದಾಯಗಳ ನಡುವಿನ ಮಾನವೀಯ ಬೆಸುಗೆ ಎಂಬುದನ್ನು ಮತ್ತೆ ಮತ್ತೆ ಪ್ರಸ್ತಾಪಿಸುವ ಬೇಂದ್ರೆಯವರು 'ನನ್ನ ದೃಷ್ಟಿಯಲ್ಲಿ–ಹೊಂದಿಕೊಂಡಿರುವುದೇ–ಧರ್ಮ. ...ಅಜ್ಜಿ, ತಾಯಿ, ಶಿಕ್ಷಕರು, ಗೆಳೆಯರು, ನೆರೆಹೊರೆಯವರೊಂದಿಗೆ ಹೊಂದಿಕೊಂಡು ಜೀವನ ಸಾಗಿಸುವುದೆ ನನ್ನ ಧಾರ್ಮಿಕ ಜೀವನ' (ಔದುಂಬರಗಾಥೆ, ಸಂ–4, ಪು–85) ಎಂದು ಹೇಳುತ್ತಾರೆ. ಸಮುದಾಯಗಳನ್ನು ಒಳಗೊಳ್ಳುವ ವಿವೇಕ ರಾಷ್ಟ್ರೀಯತೆಯ ನೈತಿಕ ಮೌಲ್ಯವಾಗಬೇಕಿದೆ ಎಂಬುದನ್ನು ಇದು ಖಚಿತ ಪಡಿಸುತ್ತದೆ. 'ಮನುಷ್ಯ ಮನುಷ್ಯ ಪರಸ್ಪರ ಕೂಡಿ ಬದುಕಿ ಬಾಳುವುದು ಶ್ರೇಷ್ಠ ಸಂಸ್ಕೃತಿ' (ಔದುಂಬರಗಾಥೆ, ಸಂ–5, ಪು–277) ಎಂದು ಹೇಳುವ ಬೇಂದ್ರೆಯವರು, ವೈಜ್ಞಾನಿಕ ತತ್ತ್ವ ವಿಮರ್ಶಕನಾದ ಎಫ್. ಶೇರವುಡ್ ಟೇಲರ್ ಹೇಳುವ 'ಏಕಾಂತಿಕವಲ್ಲದ ಸ್ವಚ್ಛಂದ ಅನೇಕಾಂತಿಕ ದೃಷ್ಟಿ ಹಾಗೂ ಪ್ರಯತ್ನಪೂರ್ವಕ ಸಾಧಿಸುವಲ್ಲಿ ಬಾಳಿನ ಮಹತಿ ಇದೆ' (ಔದುಂಬರಗಾಥೆ, ಸಂ–5, ಪು–277) ಎಂಬ ಮಾತನ್ನು ಉಲ್ಲೇಖಿಸುತ್ತ, ಪರಸ್ಪರರು ಒಡನಾಡಿ ಬದುಕುವ ಹಾಗೂ ಸ್ವಚ್ಛಂದ ಅನೇಕಾಂತಿಕ ದೃಷ್ಟಿ(ಬಹುತ್ವ)ಯನ್ನು ಕಾಪಾಡಿಕೊಳ್ಳುವ ಅಗತ್ಯತೆಯನ್ನು ಮಂಡಿಸಿದ್ದಾರೆ. ಬೇಂದ್ರೆಯವರು ಚರ್ಚಿಸುವ ಈ

ಎಲ್ಲಾ ತಾತ್ವಿಕತೆಯ ಮೂಲಕ ರಾಷ್ಟ್ರೀಯತೆಯ ಅರ್ಥ ಸಾಧ್ಯತೆಯ ಸ್ವರೂಪವನ್ನು ನಿರ್ವಚಿಸಿಕೊಳ್ಳಬೇಕಿದೆ.

1916ರಿಂದಲೇ ಕಾವ್ಯ ಕೃಷಿಗೆ ತೊಡಗಿದ ಬೇಂದ್ರೆಯವರ ಒಟ್ಟು 59 (ಆಯ್ದ ಕವನ ಸಂಕಲನ ಹಾಗೂ ಬೇರೆ ಭಾಷೆಗಳಿಗೆ ಅನುವಾದಗೊಂಡ ಕವನ ಸಂಕಲನಗಳನ್ನೂ ಒಳಗೊಂಡಂತೆ) ಕವನ ಸಂಕಲನಗಳಲ್ಲಿನ 1427 ಕವಿತೆಗಳು (ಔದುಂಬರ ಗಾಥೆ–6 ಸಂಪುಟಗಳು) ಕಟ್ಟಿಕೊಡುವ ಅಗಣಿತ ವಸ್ತು–ವಿಷಯಗಳಲ್ಲಿ 'ರಾಷ್ಟ್ರೀಯತೆ'ಯ ಪರಿಕಲ್ಪನೆಯೂ ಸಹಾ ಒಂದಾಗಿದೆ. ಬೇಂದ್ರೆಯವರ ಕಾವ್ಯದಲ್ಲಿ ರಾಷ್ಟ್ರೀಯತೆಯ ಪರಿಕಲ್ಪನೆಯು ಎರಡು ಸ್ವರೂಪದಲ್ಲಿ ಅಭಿವ್ಯಕ್ತಗೊಂಡಿದೆ. ಒಂದು–ನೇರವಾಗಿ ರಾಷ್ಟ್ರೀಯತೆಯನ್ನು ಕುರಿತ ಕವಿತೆಗಳು; ಎರಡು–ರಾಷ್ಟ್ರೀಯತೆಯ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಸೂಚ್ಯವಾಗಿ ಓದುಗರು ಅರ್ಥೈಸಿಕೊಳ್ಳಬಹುದಾದ ಕವಿತೆಗಳು. ಭಾರತೀಯತೆಯ ಮೂಲಕ ರಾಷ್ಟ್ರೀಯತೆಯನ್ನು ವಿಶ್ವಾತ್ಮಕತೆಯ ಕಡೆಗೆ ಕೊಂಡೊಯ್ಯುವ, ರೂಪಾಂತರಿಸುವ ಬಗೆ ಬೇಂದ್ರೆಯವರ ಕಾವ್ಯದ ವಿಶೇಷತೆ. 'ಮನೆ' ಎಂಬ ಪರಿಕಲ್ಪನೆಯನ್ನು 'ರಾಷ್ಟ್ರ'ದ ಸ್ವರೂಪದಲ್ಲಿ ಪರಿಭಾವಿಸಿಕೊಳ್ಳುತ್ತ; ಅಲ್ಲಿಗೆ 'ಬಂದವರು', 'ಬರುವವರು', 'ನಿಮ್ಮವರು' ನಮ್ಮವರಾಗುವ, 'ನಮ್ಮವರು' ನಿಮ್ಮವರಾಗುವ ಸಂಕರಸ್ವರೂಪಿ ಧೋರಣೆಯ ಮೌಲ್ಯವನ್ನು 'ನಿತ್ಯ ಶುಭಾ ನಿತ್ಯ ಮಂಗಳಾ' ಕವಿತೆ ಮಂಡಿಸುತ್ತದೆ. ಇದು ಒಳಗೊಳ್ಳುವ ರಾಷ್ಟ್ರೀಯತೆಯ ಪರಿಕಲ್ಪನೆಯ ಮಾತಾಗಿದೆ. 'ಗಣರಾಜ್ಯ ಸಂರಕ್ಷಣೆ' (ಔದುಂಬರಗಾಥೆ, ಸಂ–1, ಪು–45)ಯ ಮಾತುಗಳನ್ನಾಡುವ ಬೇಂದ್ರೆಯವರು, ಇಡೀ ಭೂಮಂಡಲವನ್ನು ವಿಶ್ವಾತ್ಮಕ ನೆಲೆಯ ಕೌಟುಂಬಿಕ ಸ್ಥರದಲ್ಲಿ ಬೇಂದ್ರೆ ವಿಶ್ಲೇಷಿಸುತ್ತಾರೆ.

'ಭಾರತದ ವಿವಿಧ ಭಾಷೆಗಳಲ್ಲಿ ಬಹುರೂಪತಾಳಿಹುದು' (ಧನ್ಯ ವೃಂದಾವನಾ, ಔದುಂಬರಗಾಥೆ, ಸಂ–1, ಪು–130) ಎಂಬುದಾಗಿ ಭಾಷಿಕ ಬಹುತ್ವದ ಮೌಲ್ಯವನ್ನು ಪ್ರತಿಪಾದಿಸುತ್ತಲೇ ಬಹುತ್ವಭಾರತದ ರಾಷ್ಟ್ರೀಯವಾದಿ ಪರಿಕಲ್ಪನೆಯನ್ನು ವ್ಯಾಖ್ಯಾನಿಸಿದ್ದಾರೆ. ಹಲವು ಭಾಷೆ, ಸಂಸ್ಕೃತಿ, ಸಮುದಾಯ, ಪ್ರದೇಶಗಳು ತಮ್ಮ ಅಸ್ಮಿತೆ ಹಾಗೂ ವೈವಿಧ್ಯತೆಯನ್ನು ಕಾಪಾಡಿಕೊಳ್ಳುತ್ತಲೇ ಪರಸ್ಪರ ಸಂಕರಗೊಳ್ಳುವ ಮೂಲಕ 'ಭಾರತೀಯತೆ ಹಾಗೂ ರಾಷ್ಟ್ರೀಯತೆ'ಯ ಪ್ರಜ್ಞೆ ರೂಪುಗೊಂಡಿದೆ. ಇಂತಹ ಬಹುತ್ವಭಾರತವನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ನಮ್ಮ ನಡುವಿನ ಭಿನ್ನಭೇದಗಳನ್ನು ಮೀರಬೇಕಾದ ವಿವೇಕವನ್ನು ಕುರಿತು ಬೇಂದ್ರೆ ಚರ್ಚಿಸುತ್ತಾರೆ.

ಸಮಷ್ಟಿ ಪ್ರಜ್ಞೆಯ ಮೂಲಕ ಮಾತ್ರ ಭಿನ್ನಭೇದ, ದ್ವೇಷ ಧೋರಣೆಯನ್ನು ಮೀರಲಿಕ್ಕೆ ಸಾಧ್ಯ ಎಂಬುದು 'ಹೇ ರಖುಮಾಕಾಂತಾ' ಕವಿತೆಯ ಆಶಯವಾಗಿದೆ. ಇದನ್ನೇ ಕವಿ 'ಬೇರಾಗಿ ನೂರಾಗಿ ದೆಸೆದೆಸೆಗೆ ತಾಗಿ/ ತೊಂಗೆ ತೊಂಗೆಗೆ ಹೂವ ಸಲಿಸವ್ವಾ! ...ವಿದ್ಯಾಸಂಸ್ಕೃತಿಯಿಂದ ವಿಷಮಾಹಂಕೃತಿ ನೀಗಿ/ ಮಾಗುವ ಹೃದಯವ ಬಲಿಸವ್ವಾ' (ಪ್ರಜ್ವಲಿಸವ್ವಾ, ಔದುಂಬರಗಾಥೆ, ಸಂ-1, ಪು-190) ಎಂಬುದಾಗಿ ಭಾರತಾಂಬೆಯನ್ನು ಕೇಳಿಕೊಳ್ಳುತ್ತಾರೆ. ಈ ಕವಿತೆಯಲ್ಲಿ ಬರುವ 'ಬೇರು, ತೊಂಗೆ, ಹೂವು' ಬಹುತ್ವದ ಬಹುದೊಡ್ಡ ರೂಪಕವಾಗಿವೆ. 'ಶ್ರೀ ರಾಮಕೃಷ್ಣೋದಯ' ಕವಿತೆಯಲ್ಲಿ ಬೇಂದ್ರೆಯವರು ವೈರುಧ್ಯಗಳನ್ನು ಇಲ್ಲವಾಗಿಸಿ ಸಂಬಂಧಗಳನ್ನು ಬೆಸೆಯುವಂತೆ ಭಾರತಾಂಬೆಯನ್ನು ನಿವೇದಿಸಿಕೊಳ್ಳುತ್ತಾರೆ.

ಜಾತಿ-ಜಾತಿಗಳ ನಡುವಿನ ತಾರತಮ್ಯ, ದ್ವೇಷ ಇಂದಿಗೂ ಸಹಾ ಹೇಗೆ ರಾಷ್ಟ್ರೀಯವಾದಕ್ಕೆ ಕಂಟಕ ಪ್ರಾಯವಾಗಿದೆ; 'ಆರ್ಯ-ಅನಾರ್ಯ'ರ ನಡುವಿನ ಸಂಘರ್ಷದ ವಿಶ್ಲೇಷಣೆಯನ್ನು ವಿವರಿಸುತ್ತಾರೆ. ಶಾಸ್ತ್ರ ಹಾಗೂ ಶಸ್ತ್ರಗಳು ಹೇಗೆ ಭಾರತದ ಮಾನವ ಸಮುದಾಯದ ಒಗ್ಗಟ್ಟನ್ನು ನುಚ್ಚುನೂರು ಮಾಡಿ, ಬೆಳಕಿನ ನೆಲೆಗಳನ್ನು ನಾಶ ಮಾಡಿವೆ ಎಂಬುದನ್ನು 'ಅಗಸ್ತ್ಯ' ಕವಿತೆ ಮಂಡಿಸುತ್ತದೆ. 'ಅಖಂಡ ಭಾರತ'ವನ್ನು ಕಟ್ಟುವಲ್ಲಿ ಕವಿಯ ಸಾಮಾಜಿಕ ಹೊಣೆಗಾರಿಕೆಯನ್ನು ಕುರಿತು 'ಅಭಂಗ ಕವಿ' ಕವಿತೆಯಲ್ಲಿ ಮಾತನಾಡುವ ಕವಿ ಬೇಂದ್ರೆಯವರು, ಸಮುದಾಯಗಳನ್ನು ಮಾನವೀಯ ನೆಲೆಯಲ್ಲಿ ಬೆಸೆಯುವ ಹಾಗೂ ಪರಸ್ಪರ ದ್ವೇಷ-ಕಲಹಗಳನ್ನು ನಿವಾರಿಸುವ ಆಂತರಂಗಿಕವಾದ ಜಾಗೃತಿಯಿಂದ ಮಾತ್ರ ಅಖಂಡ ಭಾರತದ ನಿರ್ಮಾಣ ಸಾಧ್ಯ ಎಂಬುದನ್ನು ಕವಿತೆ ಸೂಚ್ಯವಾಗಿ ಹೇಳುತ್ತದೆ. 'ಊರು' ಎಂಬ ರೂಪಕದ ಮೂಲಕ ಬೇಂದ್ರೆಯವರು ಮನುಷ್ಯರ ಮನಸ್ಸುಗಳು ಗಡಿರೇಖೆಗಳನ್ನು ದಾಟಿ ಸಂಕರಗೊಳ್ಳಬೇಕಾದ, ಆ ಮೂಲಕ 'ರಾಷ್ಟ್ರೀಯವಾದಿ-ವಿಶ್ವಾತ್ಮಕತೆ'ಯನ್ನು ಕಟ್ಟಿಕೊಳ್ಳುವ ಬಗೆಯನ್ನು 'ಹೃದಯ ಸಮುದ್ರ' ಕವಿತೆಯಲ್ಲಿ ವಿವರಿಸಿದ್ದಾರೆ. ಮನಸ್ಸುಗಳು ಮಾನವೀಯ ಸಂವೇದನೆಯಲ್ಲಿ ಬೆಸೆದುಕೊಂಡದ್ದೇ ಆದರೆ ಮಾನವ ನಿರ್ಮಿತ ಎಲ್ಲಾ ಸ್ವರೂಪದ ಗಡಿ ರೇಖೆಗಳು ಇಲ್ಲವಾಗುತ್ತವೆ. ನಮ್ಮ ತನವನ್ನು ಉಳಿಸಿಕೊಂಡು ಮತ್ತೊಬ್ಬರೊಟ್ಟಿಗೆ ಸೌಹಾರ್ದತೆಯಿಂದ ಕೂಡಿಕೊಳ್ಳುವ ಉದಾತ್ತ ಭಾವವನ್ನು ಸಾಮಾಜಿಕವಾಗಿ ಆಗುಮಾಡಿದಾಗ ಮಾತ್ರ ರಾಷ್ಟ್ರೀಯತೆಯೆಂಬ ಅಖಂಡತೆಯಲ್ಲಿ ಬಹುತ್ವದ ಚಹರೆಗಳು ಉಳಿದುಕೊಳ್ಳಲಿಕ್ಕೆ

ಸಾಧ್ಯ. ಒಳಗೊಳ್ಳುವ ವಿವೇಕವಿಲ್ಲದ ಯಾವುದೇ ಸಮಾಜ ಸಾವಿನ ಸಂಕೇತವು ಹಾಗೂ ನಿರ್ಜೀವ ಜಡ ಸ್ವರೂಪಿಯಾಗಿರುತ್ತದೆ ಎಂಬುದನ್ನು 'ಸುಂಠಿ ಮತ್ತು ಅಲ್ಲ' ಕವಿತೆಯಲ್ಲಿ ಚರ್ಚಿಸಿದ್ದಾರೆ. ಕೊಡುಕೊಳೆಯ ಮೂಲಕ ಭೌತಿಕ–ಬೌದ್ಧಿಕ ಮೌಲ್ಯಗಳನ್ನು ಹಂಚಿಕೊಂಡಾಗ ಮಾತ್ರ ವಿಶ್ವಾಸಾತ್ಮಕತೆ ಬೆಳೆಯಲು ಸಾಧ್ಯ. ಇದು ರಾಷ್ಟ್ರೀಯತೆಯ ಚಿಂತನೆಯಾಗಬೇಕಿದೆ. ಇದಕ್ಕೆ ಪೂರಕವೆಂಬಂತೆ, ಕನ್ನಡದ ಪ್ರಜ್ಞೆಯ ಮೂಲಕ ವಿಶ್ವಾತ್ಮಕತೆಯ ಕಡೆಗೆ ಚಲಿಸಬಹುದಾದ ಸಾಧ್ಯತೆಯನ್ನು ಕುರಿತು ಬೇಂದ್ರೆ : 'ಕನ್ನಡದ ಸೀಮೆಯಲಿ ಮುನ್ನಡೆಯ ಹೆಜ್ಜೆಯಲಿ/ ವಿಶ್ವ ಮೈತ್ರಿಯ ಮೋಡಿ ಮೂಡಲುಂಟು' (ಸಿದ್ಧರಾಮರ ವಚನವನ್ನು ನೆನೆದು, ಔದುಂಬರಗಾಥೆ, ಸಂ–1, ಪು–649) ಎಂದು ಹೇಳುತ್ತಾರೆ.

ನಾವು ಇಡುವ ಒಂದೊಂದು ಹೆಜ್ಜೆಯೂ ಹಿನ್ನೆಡೆಯಾಗದೆ, ಮುನ್ನಡೆಯಾದಾಗ ಮಾತ್ರ ಇದು ಸಾಧ್ಯ. ಧಾರ್ಮಿಕ ಸಹಿಷ್ಣುತೆ, ಜಾತಿ–ಸಮುದಾಯಗಳ ನಡುವಿನ ಸಾಮರಸ್ಯ ಏರ್ಪಟ್ಟಾಗ ಮಾತ್ರ ಪ್ರಜಾಪ್ರಭುತ್ವವಾದಿ 'ರಾಷ್ಟ್ರೀಯವಾದಿ–ವಿಶ್ವಾತ್ಮಕತೆ'ಯನ್ನು ಕ್ರಿಯೆಯಾಗಿಸಲು ಸಾಧ್ಯ ಎಂಬುದನ್ನು 'ಕನಕ' ಕವಿತೆಯಲ್ಲಿ ವಿವರಿಸಿದ್ದಾರೆ. ದೇವರ ಪರಿಕಲ್ಪನೆಯನ್ನು ಸಾರ್ವತ್ರೀಕರಿಸುತ್ತ ಮಾನವೀಕರಣಗೊಳಿಸುವ ಬೇಂದ್ರೆಯವರು; ಮನುಷ್ಯ ಸಮಾಜದ ನಡುವೆ ಕಂದಕವನ್ನು ನಿರ್ಮಿಸುವ ಎಲ್ಲಾ ಬಗೆಯ ಅಡ್ಡ ಗೋಡೆಗಳನ್ನು ಛಿದ್ರಗೊಳಿಸದ ಹೊರತು, ವೈವಿಧ್ಯತೆಯನ್ನು ಒಳಗೊಂಡ ವೈಶಾಲ್ಯತೆಯನ್ನು ಕಟ್ಟಿಕೊಳ್ಳಲಿಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಪ್ರಶ್ನಿಸುವ–ವಿಮರ್ಶಿಸುವ–ಅಭಿವ್ಯಕ್ತಿಸುವ ಮುಕ್ತ ಸ್ವಾತಂತ್ರ್ಯವಿದ್ದಾಗ ಮಾತ್ರ ರಾಷ್ಟ್ರೀಯತೆಯ ಪರಿಕಲ್ಪನೆಗೆ ಅರ್ಥಪೂರ್ಣತೆ ಲಭಿಸಲಿಕ್ಕೆ ಸಾಧ್ಯ; ಇಲ್ಲವಾದರೆ ಅದೊಂದು ರೀತಿಯಲ್ಲಿ ಮೂಲಭೂತವಾದಿ ಫ್ಯಾಸಿಸಂ ರಾಷ್ಟ್ರೀಯವಾದವಾಗುತ್ತದೆ. ದಾಸ್ಯ ಭಾವವನ್ನು ಅಲ್ಲಗಳೆಯುವ ಬೇಂದ್ರೆಯವರು ಭಾಷಿಕ, ಸಾಮುದಾಯಿಕ, ಪ್ರಾದೇಶಿಕ, ಧಾರ್ಮಿಕ ಹಾಗೂ ದೃಷ್ಟಿಕೋನದ ಬಹುತ್ವವನ್ನು ಎಲ್ಲಾ ಕಾಲಕ್ಕೂ ಕಾಪಾಡಿಕೊಳ್ಳುವುದೇ ರಾಷ್ಟ್ರೀಯವಾದದ ವಿವೇಕ ಎಂಬುದನ್ನು 'ಕವಿಗಳ ಕಾಣಿಕೆ' ಕವಿತೆಯಲ್ಲಿ ವಿಶ್ಲೇಷಿಸಿದ್ದಾರೆ. ಜಾತಿ, ಮತ, ಧರ್ಮದ ಹೆಸರಲ್ಲಿ ಮನುಷ್ಯ ಸಂಬಂಧಗಳನ್ನು, ಮನಸ್ಸುಗಳನ್ನು ಭ್ರಷ್ಟಗೊಳಿಸುವ, ಒಡೆದು ಆಳುವ ಕೋಮುವಾದಿ ಹಾಗೂ ಜಾತಿವಾದಿ ಕ್ರೌರ್ಯವನ್ನು ಖಂಡಿಸುವ ಬೇಂದ್ರೆಯವರು; ಈ ಧೋರಣೆಗಳು ಅಖಂಡ ಭಾರತದ, ಭಾರತೀಯತೆಯ

ಹಾಗೂ ರಾಷ್ಟ್ರೀಯತೆಯ ಪರಿಕಲ್ಪನೆಗೆ ಹೇಗೆ ತೊಡಕಾಗುತ್ತದೆ ಎಂಬುದನ್ನು ವಿವರಿಸಿದ್ದಾರೆ.

ಪರಂಪರೆಯ ಅರಿವಿಲ್ಲದೆ ವರ್ತಮಾನವನ್ನು ಗ್ರಹಿಸುವುದಕ್ಕಾಗಲಿ; ಅರ್ಥಪೂರ್ಣ ಭವಿಷ್ಯತ್ತನ್ನು ಕಟ್ಟಿಕೊಳ್ಳಲಿಕ್ಕಾಗಲಿ ಸಾಧ್ಯವಿಲ್ಲ. ಪ್ರಸ್ತುತ ಸಂದರ್ಭದಲ್ಲಿ ರಾಷ್ಟ್ರೀಯತೆಯನ್ನು ನಿರ್ವಚಿಸಿಕೊಳ್ಳುವಾಗ ನಮಗೆ ಪರಂಪರೆಯ ತಿಳುವಳಿಕೆ ಬಹಳ ಮುಖ್ಯ. ಹಾಗಂತ ಪರಂಪರೆಯೆಲ್ಲವೂ ಮೌಲಿಕವೂ ಜೀವಪರವೂ ಎಂದೂ ಭಾವಿಸಬೇಕಿಲ್ಲ. ಸೂಕ್ಷ್ಮಪ್ರಜ್ಞೆಯ ಮೂಲಕ ಪರಂಪರೆಯಲ್ಲಿ ಯಾವುದು ಒಳಿತು–ಕೆಡುಕು, ಯಾವುದು ಮಾನವೀಯ–ಅಮಾನವೀಯ ಎಂಬುದನ್ನು ಗ್ರಹಿಸಬೇಕು. ಆನಂತರದಲ್ಲಿ ಒಳಿತು–ಮಾನವೀಯ ಮೌಲ್ಯಗಳ ತಳಹದಿಯ ಮೇಲೆ ವರ್ತಮಾನ ಹಾಗೂ ಭವಿಷ್ಯತ್ತಿನ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಕಟ್ಟಿಕೊಳ್ಳಬೇಕಾಗಿದೆ ಎಂಬುದನ್ನು ಬೇಂದ್ರೆಯವರು ಸೂಚ್ಯವಾಗಿ 'ಮಾರ್ಮಿಕ ವಚನಗಳು' ಎಂಬ ತಮ್ಮ ಕವಿತೆಯಲ್ಲಿ ವ್ಯಂಗ್ಯ ಪರಿಭಾಷೆಯ ಮೂಲಕ ಮಂಡಿಸಿದ್ದಾರೆ.

'ಛಿದ್ರಗಳಲ್ಲಿ ಅರ್ಥ ಹುಡುಕುವ' ಬದಲು ಇನ್ನಾದರೂ ಪರಂಪರೆ–ಚರಿತ್ರೆಯಿಂದ ಒಗ್ಗಟ್ಟಿನ–ಒಳಗೊಳ್ಳುವ ಪಾಠ ಕಲಿಯಬೇಕಿದೆ ಎಂದು ಕವಿತೆ ಒತ್ತಾಯಿಸುತ್ತದೆ. ಬೇಂದ್ರೆಯವರು ಸ್ವಾತಂತ್ರ್ಯ ಚಳವಳಿಯನ್ನು ನೇರವಾಗಿ ಕಂಡವರು ಹಾಗೂ ನೇರವಾಗಿ ಭಾಗವಹಿಸಿದವರು. ಬ್ರಿಟೀಷ್ ಸಾಮ್ರಾಜ್ಯಶಾಹಿಯನ್ನು ವಿರೋಧಿಸಿ 'ನರಬಲಿ' ಪದ್ಯ ಬರೆದು 1932–33ರಲ್ಲಿ ಹಿಂಡಲಗಿ ಜೈಲು ಶಿಕ್ಷೆಯನ್ನು ಮತ್ತು ಮುಗದದ ನಜರಬಂಧಿ ಶಿಕ್ಷೆಯನ್ನು ಅನುಭವಿಸಿದವರು. ಕೋಮುದ್ವೇಷದ ಕ್ರೌರ್ಯದ ಕರಾಳತೆಯನ್ನು ಮನಗಂಡಿದ್ದವರು.ಜಾಗತಿಕ ಚಾರಿತ್ರಿಕ ಪ್ರಜ್ಞೆಯ ಹಿನ್ನೆಲೆಯಲ್ಲಿ 'ರಾಷ್ಟ್ರೀಯವಾದಿ–ವಿಶ್ವಾತ್ಮಕತೆ'ಯನ್ನು; ಸ್ವಾತಂತ್ರ್ಯ ಪೂರ್ವ–ಸ್ವಾತಂತ್ರ್ಯೋತ್ತರ ಭಾರತದಲ್ಲಿ ರಾಷ್ಟ್ರೀಯತೆಯು ಎದುರಿಸುತ್ತಿರುವ ತೊಡಕು–ಅಪಾಯಗಳನ್ನು; ಪ್ರಜಾಪ್ರಭುತ್ವ ಅಪಮೌಲ್ಯೀಕರಣಗೊಳ್ಳುತ್ತಿರುವುದನ್ನು; ಮಾನವೀಯ ಸಮಾಜದ ಅಸ್ತಿತ್ವವನ್ನು ಬಯಸಿದ್ದ ಜಾನ್ ಎಫ್ ಕೆನಡಿ, ಮಾರ್ಟಿನ್ ಲೂಥರ್ ಕಿಂಗ್, ಗಾಂಧಿಯಂತವರ ಕಗ್ಗೊಲೆಗಳನ್ನು ವ್ಯಂಗ್ಯವಾಗಿ–ಪ್ರತಿರೋಧಾತ್ಮಕ ಧ್ವನಿಯಲ್ಲಿ 'ನಾ ಕವಿತಾ ಬರೀಬಾರ್ದಿತ್ತು' ಕವಿತೆ ಮಂಡಿಸುತ್ತದೆ. ಹಿಂದೂ–ಮುಸಲ್ಮಾನರ ನಡುವಿನ ಸಾಮರಸ್ಯದ ಅಗತ್ಯವನ್ನು ಹಾಗೂ ಅವರವರೊಳಗೇ ಇರಬಹುದಾದ ಧರ್ಮಾಂಧತೆಯ ಕ್ರೌರ್ಯದ ಎಳೆಗಳನ್ನು ಕವಿತೆ ವಿಶ್ಲೇಷಿಸುತ್ತದೆ.

ಧರ್ಮ–ಧರ್ಮಗಳ ನಡುವಿನ ದ್ವೇಷ–ಕ್ರೌರ್ಯಗಳಳಿದು; ಸಹೋದರ–ಸೌಹಾರ್ದತೆಯ ಭಾವ ಬೆಳೆದಾಗ ಮಾತ್ರ, ರಾಷ್ಟ್ರದ ಹಾಗೂ ಜಾಗತಿಕ ಐಕ್ಯತೆ ಒಡಮೂಡಿ 'ರಾಷ್ಟ್ರೀಯವಾದಿ ವಿಶ್ವಾತ್ಮಕತೆ' ಬೆಳೆಯಲು ಸಾಧ್ಯ ಎಂಬುದನ್ನು ಕವಿತೆ ಚರ್ಚಿಸುತ್ತದೆ.

ರಾಷ್ಟ್ರೀಯವಾದಿ–ವಿಶ್ವಾತ್ಮಕತೆಯು ರೂಪುಗೊಳ್ಳುವ ಹಂತಗಳನ್ನು ಹೀಗೆ ವಿವರಿಸಿದ್ದಾರೆ :

'ವಿಶ್ವಮಾತೆಯ ಗರ್ಭಕಮಲಜಾತ–ಪರಾಗ–
ಪರಮಾಣು ಕೀರ್ತಿ ನಾನು।
ಭೂಮಿತಾಯಿಯ ಮೈಯ ಹಿಡಿಮಣ್ಣ ಗುಡಿಗಟ್ಟಿ
ನಿಂತಂಥ ಮೂರ್ತಿ ನಾನು।

ಭರತಮಾತೆಯ ಕೋಟಿ ಕಾರ್ತಿಕೋತ್ಸವದಲ್ಲಿ
ಮಿನುಗುತಿಹ ಜ್ಯೋತಿ ನಾನು।
ಕನ್ನಡದ ತಾಯಿ ತಾವರೆಯ ಪರಿಮಳವುಂಡು
ಬೀರುತಿಹ ಗಾಳಿ ನಾನು।

ನನ್ನ ತಾಯಿಯ ಹಾಲು ನೆತ್ತರವ ಕುಡಿದಂಥ
ಜೀವಂತ ಮಮತೆ ನಾನು।
ಈ ಐದು ಐದೆಯರೆ ಪಂಚಪ್ರಾಣಗಳಾಗಿ
ಈ ಜೀವ ದೇಹನಿಹನು।

...ವಿಶ್ವದೊಳನುಡಿಯಾಗಿ ಕನ್ನಡಿಸುತಿಹನಿಲ್ಲಿ
ಅಂಬಿಕಾತನಯನಿವನು।'(ನಾನು, ಔದುಂಬರಗಾಥೆ,ಸಂ–3,ಪು–42)

ಕಿ.ರಂ.ನಾಗರಾಜ ಅವರು ಗುರುತಿಸಿರುವಂತೆ, ಬೇಂದ್ರೆಯವರು 'ಪಂಚಮಾತೆ'ಯರನ್ನು 'ಪಂಚಭೂತ'ದ ಪರಿಕಲ್ಪನೆಯಲ್ಲಿ ಪರಿಭಾವಿಸುತ್ತಲೇ; 'ರಾಷ್ಟ್ರೀಯವಾದಿ–ವಿಶ್ವಾತ್ಮಕತೆ'ಯ 'ಆಗುವಿಕೆ'ಯನ್ನು ಈ ಕವಿತೆಯಲ್ಲಿ

ನಿರೂಪಿಸಿದ್ದಾರೆ. 'ಕನ್ನಡವು ವಿಶ್ವದೊಳನುಡಿ'ಯಾಗುವ ಸಂಕರರೂಪವೇ 'ಸ್ಥಳೀಯತೆಯು-ರಾಷ್ಟ್ರೀಯತೆಯಾಗಿ-ವಿಶ್ವಾತ್ಮಕತೆ'ಯ ಸ್ವರೂಪವಾಗುವ ಬಗೆಯಾಗಿದೆ.

'ಬಹುತ್ವ ಭಾರತ'ವನ್ನು ಕಾಪಾಡಿಕೊಳ್ಳುವ ರಾಷ್ಟ್ರೀಯತೆಯ ಪರಿಕಲ್ಪನೆ ಇಂದಿನ ಅಗತ್ಯ. ಸೌಹಾರ್ದತೆ-ಸಹೋದರತೆಗಳು ನೆಲೆಗೊಂಡಲ್ಲಿ ಮಾತ್ರ ಇದು ಸಾಧ್ಯ. 'ಬಹುತ್ವ'ದ ಪರಿಕಲ್ಪನೆಯನ್ನು 'ರಾಷ್ಟ್ರೀಯತೆ'ಯ ಪರಿಕಲ್ಪನೆಯನ್ನಾಗಿ ಪರಿಭಾವಿಸುವ ಬೇಂದ್ರೆಯವರು; 'ಕನ್ನಡ ಭಾರತಿ, ಸಿರಿಗನ್ನಡ ಭಾರತಿ' (ಎಲ್ಲೆ ಎಲ್ಲ ಆದಾತನಿಗೆ, ಔದುಂಬರಗಾಥೆ, ಸಂ-2, ಪು-410-411) ಎಂದು ಹೇಳುತ್ತ; ಕನ್ನಡದ ಸ್ಥಳೀಯ ಪ್ರಜ್ಞೆಯ ಮೂಲಕ 'ರಾಷ್ಟ್ರೀಯವಾದಿ-ವಿಶ್ವಾತ್ಮಕ' ಕಣ್ಣೋಟವನ್ನು ಮೂಡಿಸಿಕೊಳ್ಳಬೇಕು ಎನ್ನುತ್ತಾರೆ. ಬೇಂದ್ರೆಯವರ ಕಾವ್ಯದಲ್ಲಿನ ವಿಶ್ವಾತ್ಮಕತೆಯನ್ನು ಕುರಿತು ಮಾತನಾಡುವ ಕಿ. ರಂ. ನಾಗರಾಜ ಅವರು '...ವಿಶ್ವಾತ್ಮಕತೆಯ ಕಲ್ಪನೆ ಎಂದರೆ ವಿಶ್ವಾತ್ಮಕತೆಯ ಕಡೆಗೆ ಚಲಿಸುವುದು ಎಂದಲ್ಲ. ವಿಶ್ವಾತ್ಮಕ ಎನ್ನುವುದು ಸ್ಥಳೀಯ ನೆಲೆಯಿಂದ ಪ್ರಸ್ತಾಂತರಗೊಳ್ಳುವುದು... ಸ್ಥಳೀಯತೆಯ ಗಾಢವಾದ ನೆಲೆಗಟ್ಟು ಇಲ್ಲದೆ ಇದ್ದರೆ ವಿಶ್ವಾತ್ಮಕ ಎನ್ನುವುದು ಕೇವಲ ಒಂದು ಭೋಳೆ ಮಾತಾಗುತ್ತದೆ. ವಿಶ್ವಾತ್ಮಕ ಎನ್ನುವುದು ನನ್ನ ನೆಲವನ್ನು ಮೀರಿದ ಒಂದು ನೆಲೆ. ...ಬೇಂದ್ರೆಯವರ ದೊಡ್ಡ Sensibility ಏನು ಎಂದರೆ ಜಗತ್ತು ಎಂದು ಯಾವುದನ್ನು ಬೇಂದ್ರೆ ಹೇಳುತ್ತಿದ್ದಾರೆ. ಅದೆಲ್ಲವು ಕೂಡಾ ಕನ್ನಡಾಂತರ್ಗತವಾದ ಜಗತ್ತು. ಬೇಂದ್ರೆಗೆ ಜಗತ್ತು ಎನ್ನುವುದು ಒಂದು ಪ್ರತ್ಯೇಕ ಇಲ್ಲ. ಬೇಂದ್ರೆ ಜಗತ್ತನ್ನು ಕಾಣುತ್ತಿರುವುದೇ ಈ ನೆಲದ(ಕನ್ನಡ) ಮೂಲಕ ಹಾಗೂ ಭಾಷೆಯ(ಕನ್ನಡ) ಮೂಲಕ. ಭಾಷೆ ಎನ್ನುವುದನ್ನು ತುಂಬಾ ವಿಸ್ತರಿಸಿ ಹೇಳುವುದಾದರೆ ಕನ್ನಡ ಎನ್ನುವ ಚೈತನ್ಯದ ಮೂಲಕ. ಭಾಷೆ ಮತ್ತು ಜಗತ್ತು ಬೇಂದ್ರೆಗೆ ಬೇರೆಯಲ್ಲ. 'ನನ್ನ ಭಾಷೆಯೇ ನನ್ನ ಜಗತ್ತು' ಎನ್ನುವ ಕಲ್ಪನೆ ಬೇಂದ್ರೆಯವರಲ್ಲಿ ಎಲ್ಲ ಕಾಲಕ್ಕೂ ವ್ಯಾಪಕವಾಗಿ ಹರಡಿಕೊಂಡಿರುವ ಮುಖ್ಯವಾದ ಸಂವೇದನೆ' (ಮತ್ತೆ ಮತ್ತೆ ಬೇಂದ್ರೆ, ಪು-41-42) ಎಂದು ಹೇಳುತ್ತಾರೆ. ಕಿ.ರಂ. ಅವರ ಈ ವಿಶ್ಲೇಷಣೆಗೆ ಬೇಂದ್ರೆಯವರ 'ನೀವಾರಲಾ!' ಕವಿತೆ ಸಾಕ್ಷಿಪ್ರಜ್ಞೆಯಾಗಿದೆ. ಜಾತಿ, ಮತ, ಧರ್ಮ, ಭಾಷೆ, ಪ್ರದೇಶಗಳ ವೈವಿಧ್ಯತೆಯನ್ನು ಕಾಪಾಡಿಕೊಳ್ಳುತ್ತಲೇ ಬಹುತ್ವ ಭಾರತವನ್ನು ಕಟ್ಟುವ-ಬೆಳೆಸುವ

ಬಗೆಯನ್ನು 'ನೀವಾರಲಾ' ಕವಿತೆ ವಿವರಿಸುತ್ತದೆ. 'ಭಾರತದ ಜನತೆಯಾದ ನಾವು' (We the People of India) ಎಂಬ ಭಾರತದ ಸಂವಿಧಾನದ ಪ್ರಸ್ತಾವನೆಯ ಆಶಯವನ್ನು ಬೇಂದ್ರೆ ಈ ಕವಿತೆಯಲ್ಲಿ ಎತ್ತಿಹಿಡಿದಿದ್ದಾರೆ.

ಕನ್ನಡದ ನೆಲದಲ್ಲಿ ಜಾತ್ಯತೀತ ಬಹುತ್ವದ ಪರಿಕಲ್ಪನೆಯನ್ನು ಆಗು ಮಾಡಿದವರು 12ನೇ ಶತಮಾನದ ಶರಣರು. ಜಾತಿ, ಮತ, ಕಾಯಕ, ಲಿಂಗ ಸಮಾನತೆಯ ಅಡಿಯಲ್ಲಿ ಬಹುತ್ವದ ನಾಡು ಏನೆಲ್ಲವನ್ನೂ ಒಳಗೊಂಡಿರಬೇಕೆಂಬ ಆಶಯದ ಹಿನ್ನೆಲೆಯಲ್ಲಿ ಅನುಭವಮಂಟಪವನ್ನು ಕಟ್ಟಿ, ಆದರ್ಶದ 'ಕಲ್ಯಾಣ ಪಟ್ಟಣ'ವನ್ನು ಸಾಕಾರಗೊಳಿಸಿದ ವಚನಕಾರರ ಪರಿಕಲ್ಪನೆಯು ಇಂದಿನ ರಾಷ್ಟ್ರೀಯತೆಗೆ ಮಾರ್ಗಸೂಚಿಯಾಗಬೇಕಿದೆ. ಕಾಯಕತತ್ವ, ಧರ್ಮ-ಪಂಥ-ಲಿಂಗಸಮಾನತೆ ಹಾಗೂ ಊರುಕೇರಿಗಳ ಸಮೃದ್ಧಿಯ ಧೋರಣೆಯನ್ನು ಮಂಡಿಸುವ 'ಸೌಭಾಗ್ಯ ದರ್ಶನ' ಕವಿತೆಯು, 'ಹಳ್ಳದ ದಂಡೆಯಲಿ ಹಳ್ಳಿ ಹಲವಾರಿರಲಿ' ಎಂಬ ಮಾತಿನ ಮೂಲಕ ಬಹುತ್ವವನ್ನು ಪ್ರತಿಪಾದಿಸುತ್ತದೆ. ಈ ಸ್ವರೂಪದ ಆಶಯಗಳು ರಾಷ್ಟ್ರೀಯತೆಯ ಮೌಲ್ಯವಾದರೆ; "ಕೋಮುಸಾಮರಸ್ಯದ, ಅಹಿಂಸಾತ್ಮಕವಾದ, ಸಾಮಾಜಿಕನ್ಯಾಯದ ರಾಷ್ಟ್ರೀಯತೆ"ಯನ್ನು ಸಮಾಜದಲ್ಲಿ ಬಿತ್ತಲಿಕ್ಕೆ ಸಾಧ್ಯ ಎಂಬುದು ಬೇಂದ್ರೆಯವರ ನಂಬಿಕೆ. ಅವರ ಈ ನಂಬಿಕೆ 'ಇದು ಬರಿ ಬೆಳಗಲ್ಲೋ ಅಣ್ಣಾ' ಕವಿತೆಯಲ್ಲಿ ಹೀಗೆ ಅಭಿವ್ಯಕ್ತಗೊಂಡಿದೆ :

'ದಕ್ಷಿಣಭಾರತ, ಉತ್ತರಭಾರತ
ಎರಡೇ ಕೇಂದ್ರಗಳಾಗಿ
ಅವು ಸಂಘಟಿತವಾದರೆ;
Common wealth ದ
ಪ್ರಾಣರೂಪರಾದೇವು ನಾವು

ಮಾನವಜಾತಿಯ ಆತ್ಮಹತ್ಯೆ ತಪ್ಪಲಿ
'ಕನ್ನಡವು ಭಾರತವು ಜಗವೆಲ್ಲವು ಒಂದೇ' ಆಗಲಿ
ಅಂಬಿಕಾತನಯದತ್ತರ ಭವಿಷ್ಯವಾಣಿ-ಸತ್ಯ.' (ಇದು ಬರಿ ಬೆಳಗಲ್ಲೋ ಅಣ್ಣಾ, ಔದುಂಬರಗಾಥೆ, ಸಂ-2, ಪು-296)

ಮಾನವತೆ ನಾಶವಾಗದಿರಲಿ ಎಂದು ಹೇಳುವ ಬೇಂದ್ರೆ 'ಕನ್ನಡ–ಭಾರತ–ಜಗತ್ತು'ಗಳನ್ನು ಸಂಕರಗೊಳಿಸುವ ಮೂಲಕ 'ಕನ್ನಡಪ್ರಜ್ಞೆಯ–ರಾಷ್ಟ್ರೀಯವಾದಿ–ವಿಶ್ವಾತ್ಮಕತೆ'ಯನ್ನು ನಿರೂಪಿಸುತ್ತ :

'ಒಂದೇ ಒಂದೇ ಒಂದೇ ಕರ್ನಾಟಕ ಒಂದೇ!
ಇಂದೇ ಮುಂದೇ ಎಂದೇ ಕರ್ನಾಟಕ ಒಂದೇ
ಜಗದೇಳಿಗೆಯಾಗುವದಿದೆ ಕರ್ನಾಟಕದಿಂದೆ
ಇಲ್ಲಿಯ ಜನ–ಮನ–ಭಾಷೆಯು ಕನ್ನಡವದು ಒಂದೇ
ಒಂದೇ ಜನವೂ ಒಂದೇ ಮನವೂ ಕನ್ನಡಿಗರು ಎಂದೇ
ಕುಲವೊಂದೇ ಸ್ಥಲವೊಂದೇ ನೀತಿಯ ನೆಲೆಯೊಂದೇ
ಹೀಗೆನ್ನದ ಹೆರವರು ಅವರಿದ್ದರು ಒಂದೇ
ಇರದಿದ್ದರು ಒಂದೇ!
ಕನ್ನಡವೆಂದೂ ಒಪ್ಪದು ಕರ್ನಾಟಕ ನಿಂದೇ
ಒಂದೇ ಒಂದೇ ಒಂದೇ ಕರ್ನಾಟಕ ಒಂದೇ

...ಕನ್ನಡವೂ ಭಾರತವೂ ಜಗವೆಲ್ಲವೂ ಒಂದೇ (ಒಂದೇ ಕರ್ನಾಟಕ, ಔದುಂಬರಗಾಥೆ, ಸಂ–2, ಪು–413–414)

–ಎಂದು, ಕನ್ನಡ ಪ್ರಜ್ಞೆಯ ಮೂಲಕ ರಾಷ್ಟ್ರೀಯವಾದಿ ವಿಶ್ವಾತ್ಮಕತೆಯನ್ನು ಬಿಂಬಿಸಿದ್ದಾರೆ. ಭಾರತ ಸಂವಿಧಾನಬದ್ಧ ಮೌಲ್ಯಗಳಾದ 'ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ'ದ ತಳಪಾಯದ ಮೇಲೆ ಸೌಹಾರ್ದ ಸಮಾಜವನ್ನು ಕಟ್ಟಬೇಕೆನ್ನುವ ಬೇಂದ್ರೆ, 'ಹಲವು ಮಾತೆ ಜಗನ್ಮಾತೆ' ಕವಿತೆಯಲ್ಲಿ ಹೇಳುತ್ತಾರೆ. ಕವಿತೆಯಲ್ಲಿ ವ್ಯಕ್ತವಾಗಿರುವ 'ಜಗನ್ಮಾತೆ, ಪ್ರಜಾರಾಜ್ಯ, ಜಗಂಗಳು, ಸಮಸಮಾನ, ಮಾನವ್ಯದ ನವಧರ್ಮ, ಬುದ್ಧರ ಪಂಚಶೀಲ, ಸಮಕ್ರಮ ಸಮಾಜ' ಈ ಎಲ್ಲಾ ಪರಿಕಲ್ಪನೆಗಳೂ ಸಹಾ 'ಬಹುತ್ವದ ರಾಷ್ಟ್ರೀಯವಾದಿ ವಿಶ್ವಾತ್ಮಕ' ಮೌಲ್ಯಗಳೇ ಆಗಿವೆ.

'ಭಾರತಂ ವಂದೇ
ಒಂದೇ ಭಾರತಂ' (ಭಾರತಂ ವಂದೇ,ಔದುಂಬರಗಾಥೆ, ಸಂ–2, ಪು–311)
'ಹಳ್ಳಿ ಹಳ್ಳಿ ಸಕಲ ಭೋಜ್ಯ
ಭಾರತವಿದು ಅವಿಭಾಜ್ಯ

ಜಗತ್ತೆಲ್ಲ ಏಕರಾಜ್ಯ
ಸಾರಲಿ ಶ್ರುತಿಗೆ

...ಹೃದಯಸಮತೆ ಮೊದಲ ಪಾಠ
ಬಾಂಧವ್ಯವೆ ಜೀವದಾಟ" (ನವಯುಗಾರಂಭ, ಔದುಂಬರಗಾಥೆ, ಸಂ–2, ಪು–349)

'ಅನೇಕಾಂಗವಿದೆ ಐಕ್ಯದ ಕೀಲ
ಅನೈಕ್ಯವಾದರೆ ಒಂದಲ್ಲ
'ನಾ' 'ನಾ' ಎನ್ನುತ ನಾನಾ ತೆರದಲಿ
ವಿಭಕ್ತವಾದರೆ ಚೆಂದಲ್ಲ' (ಪಾರ್ವತಿ ನೀನೇ ಸಲಹು, ಔದುಂಬರಗಾಥೆ, ಸಂ–2, ಪು–404)

– ಎಂದು ಹೇಳುವ ಬೇಂದ್ರೆಯವರು ಭಾರತಮಾತೆಯನ್ನು ಭೂಮಾತೆಯಾಗಿ, ಜಗದಂಬೆಯಾಗಿ ಪರಿಭಾವಿಸುತ್ತ; ಅಹಂಕಾರದ ನಾನತ್ವ ಅಳಿದು, ಸರ್ವ ವರ್ಣಗಳು ಸಮಾನ ಎನ್ನುತ; ಭಾರತದ ಸ್ವಾಭಾವಿಕ ಗುಣವಾದ 'ಅನೇಕಾಂಗ–ಐಕ್ಯ, ಅವಿಭಾಜ್ಯತೆ ಹಾಗೂ ಹೃದಯಸಮತೆ'ಯನ್ನು ಸ್ಪಷ್ಟಪಡಿಸಿದ್ದಾರೆ. ಈ ಎಲ್ಲವೂ ಸಹ ಬೇಂದ್ರೆಯವರು ಪ್ರತಿಪಾದಿಸುವ ರಾಷ್ಟ್ರೀಯತೆಯ ಮೌಲ್ಯಗಳಾಗಿವೆ. ಜನತೆಯನ್ನೇ ರಾಷ್ಟ್ರವೆಂದು ತೀರ್ಮಾನಿಸುವ ಬೇಂದ್ರೆಯವರು, ಬಹುತ್ವದ ಅಸ್ತಿತ್ವದಲ್ಲಿ ಭಾರತದ ಉಳಿವಿದೆ ಎಂಬುದನ್ನು ಹೀಗೆ ವಿವರಿಸುತ್ತಾರೆ :

'...ಭಾರತಮಾತೆಯ ಹೊಸ ಶ್ರುತೀ
ಜನವೇ ರಾಷ್ಟ್ರವು; ರಾಷ್ಟ್ರವೇ ಜನವು
ಸಾರ್ವಭೌಮ ಮಾನವನ ಸ್ತುತೀ'(ಜನವೇ ರಾಷ್ಟ್ರ, ಔದುಂಬರಗಾಥೆ, ಸಂ–2, ಪು–376–377)

'ಒಂದೆ ಬುಡಕಟ್ಟಿನಲ್ಲಿ ಹಲವು ತೊಂಗೆಗಳಾಗಿ
ಹೂಗಳಲಿ ಹಣ್ಗಳಲಿ ಮತ್ತೆ ಹಲಕೆಲವಾಗಿ
ನಾಳಿನಾ ಬಾಳಿನಾಚೆಗೆ ಒಂದು
ನಾಡಿದಿನ ನಾಡುಂಟು' (ಹರಕೆ, ಔದುಂಬರಗಾಥೆ, ಸಂ–3, ಪು–293)

'ಜನರೇ ನಾಡ ಸಾರ್ವಭೌಮರಾಗಬೇಕು; ಅಹಿಂಸೆಯು ನಾಡ ನೈತಿಕತೆಯಾಗಬೇಕು; ವಿವಿಧತೆ ದೇಶದ ಸಂಸ್ಕೃತಿಯಾಗಬೇಕು; ಆದಿವಾಸಿ-ಬುಡಕಟ್ಟುಗಳ ಅಸ್ತಿತ್ವ ಕಾಪಾಡಬೇಕು' ಎಂಬ ಧೋರಣೆಯನ್ನು ವ್ಯಕ್ತಪಡಿಸುವ ಬೇಂದ್ರೆ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ವಿಸ್ತರಿಸಿದ್ದಾರೆ. 'ಒಂದೆ ಬುಡವಿರುವ ಮರಕ್ಕೆ ಹಲವು ಕೊಂಬೆಗಳು, ಹೂ, ಹಣ್ಣುಗಳು' ಎಂಬ ರೂಪಕವನ್ನು ಬಹುತ್ವ ಭಾರತದ ಸಂಕೇತವಾಗಿ ಅರ್ಥಪೂರ್ಣವಾಗಿ ವ್ಯಾಖ್ಯಾನಿಸಿದ್ದಾರೆ. ಮತ್ತೆ ಮತ್ತೆ ತಮ್ಮ ಕಾವ್ಯದಲ್ಲಿ ಬಹುತ್ವದ ಮೌಲ್ಯವನ್ನು ಎತ್ತಿಹಿಡಿಯುವ ಬೇಂದ್ರೆಯವರು 'ಬಹುತ್ವವೇ ಭಾರತೀಯತ್ವ' ಎಂಬುದನ್ನು 'ನಾನು ಕಂಡಂತೆ' ಕವಿತೆಯಲ್ಲಿ ವಾದ್ಯ ಮೇಳವನ್ನು ಪ್ರತಿಮೆಯಾಗಿ ಬಳಸಿಕೊಂಡು ವಿವರಿಸಿದ್ದಾರೆ. ಭ್ರಾತೃತ್ವವಿದ್ದಲ್ಲಿ ಸಹಜೀವನ ಸಾಧ್ಯ; ನಮ್ಮೊಳಗಿನ ಅಜ್ಞಾನವನ್ನು ಮೀರಲಿಕ್ಕೆ ವೈಜ್ಞಾನಿಕ ತಿಳುವಳಿಕೆ ಮುಖ್ಯ; ಭಾಷೆ ಹಲವಾದರೂ ಐಕ್ಯ ಭಾವ ಮುಖ್ಯ ಎಂಬುದನ್ನು 'ನಾನು ಕಂಡಂತೆ' ಕವಿತೆ ವಿಶ್ಲೇಷಿಸುತ್ತದೆ. ತಮ್ಮ ಆದರ್ಶವಾದಿ ರಾಷ್ಟ್ರೀಯತೆಯ ಚಿಂತನೆಯನ್ನು ಕಾವ್ಯವಾಗಿಸಿರುವ ಬೇಂದ್ರೆಯವರು; ಕಾಯಕತತ್ವ-ದಾಸೋಹತತ್ವವನ್ನು ಪ್ರತಿಪಾದಿಸುತ್ತು; ನಮ್ಮ ಪಂಚವಾರ್ಷಿಕ ಯೋಜನೆಗಳು, ಗ್ರಾಮ ಸ್ವರಾಜ್ಯವನ್ನು ಸ್ಥಾಪಿಸುವ ಗ್ರಾಮ ಪಂಚಾಯತಿಗಳು ದೇಶದ ಪ್ರಗತಿಯ ಹಿನ್ನೆಲೆಯಲ್ಲಿ ಕ್ರಿಯಾಶೀಲವಾಗಬೇಕು; ಬುದ್ಧಿ-ಭಾವ ಆರೋಗ್ಯಕರವಾಗಿ ಸಮಾಜಮುಖಿಯಾಗಿ ಸಂಗಮಿಸಬೇಕು; ದುಷ್ಟತನದ ನಿವಾರಣೆಯಾಗಬೇಕು; ಆಂತರಿಕ ಸಂಘರ್ಷಗಳನ್ನು ಮೀರಬೇಕು; ವ್ಯಕ್ತಿ ಘನತೆಗೆ ಧಕ್ಕೆ ಬಾರದಂತೆ ಸತ್ಯದ ಮಾರ್ಗ ನಿರ್ಮಿಸಬೇಕು; ಸಾಲಾ-ಶೂಲಾ ತೊಲಗಿ ಆರ್ಥಿಕ ಸ್ವಾವಲಂಬನೆಯಿಂದ ಆದರ್ಶದ ನಾಡನ್ನು ಕಟ್ಟಲಿಕ್ಕೆ ಸಾಧ್ಯ ಎಂಬುದನ್ನು 'ನಾಡ ಜಾಣರಿಗೆ ನಾಕು ಮಾತು' ಕವಿತೆಯಲ್ಲಿ ವಿವರಿಸಿದ್ದಾರೆ. ಈ ಆದರ್ಶದ ನಾಡು ಸಾಕಾರಗೊಳ್ಳಬೇಕಾದರೆ, ನಮ್ಮ ರಾಷ್ಟ್ರೀಯವಾದಿ ನಿಲುವು ಯಾವ ಸ್ವರೂಪದ್ದಿರಬೇಕು ಎಂಬುದನ್ನು ಕವಿತೆಯಲ್ಲಿ ಎಚ್ಚರಿಸುತ್ತಾರೆ. 'ಅಂಬಿಕಾತನಯನ ಕೀರ್ತಿ' ಕವಿತೆಯು ರಾಷ್ಟ್ರೀಯವಾದಿ ಪರಿಕಲ್ಪನೆಗೆ ಬರೆದ ಮ್ಯಾನಿಫ್ಯಾಸ್ಟೊ ಸ್ವರೂಪದ್ದಾಗಿದೆ. ಜಾತಿ-ಮತ-ಧರ್ಮಗಳ ಸಂಕುಚಿತತೆಯನ್ನು ಮೀರಿ ಮನುಷ್ಯ ಸಂಬಂಧಗಳು ಗಟ್ಟಿಗೊಳ್ಳದ ಹೊರತು ಭಾವೈಕ್ಯತೆಯ-ಸಾಮರಸ್ಯದ-ಭ್ರಾತೃತ್ವದ ರಾಷ್ಟ್ರೀಯವಾದ ಅರ್ಥಪೂರ್ಣವಾಗದು ಎಂಬುದನ್ನು ಹೀಗೆ ವಿವರಿಸಿದ್ದಾರೆ :

'ಇಳೆಯೆಂದರೆ ಬರಿ ಮಣ್ಣಲ್ಲ
ನಮಗೋ ನೋಡುವ ಕಣ್ಣಿಲ್ಲ

ಅಣ್ಣ ತಮ್ಮಂದಿರು ತಮ್ಮ ತಮ್ಮೊಳಗೆ ಕಾದಾಡಲು ಬೇಕೆ?
ನಲುಮೆಯ ನೀರನು ಕೆನ್ನೀರೆನ್ನುತ ಚೆಲ್ಲಾಡುವಿರೇಕೆ?" ('ಇಳೆ' ಎಂದರೆ ಬರಿ ಮಣ್ಣಲ್ಲ, ಔದುಂಬರಗಾಥೆ, ಸಂ–4, ಪು–21)

"ಒಂದೆ ತಾಯಿಯ ಮಕ್ಕಳು
ಒಂದೆ ತವರ್ಮನೆ ಒಕ್ಕಲು

ಬಣ್ಣ ಬಣ್ಣದ ಜನರು ನಾವಿಂದೊಂದುಗೂಡಲು ಬಂದೆವು
ಮಣ್ಣ ಭೇದವನೆಣಿಸದೇ ಒಂದೆದೆಯ ಬಲವನು ತಂದೆವು'(ಒಂದೆ ತಾಯಿಯ ಮಕ್ಕಳು, ಔದುಂಬರಗಾಥೆ, ಸಂ–4, ಪು–23)

ಒಂದೇ ತಾಯಿಯ ಮಕ್ಕಳೆಂಬ ಭ್ರಾತೃತ್ವದ ಭಾವನೆಯ ಜೀವಂತಿಕೆಯಿಂದ ಮಾತ್ರ ಸಹಬಾಳ್ವೆ ಸಾಧ್ಯ ಎಂಬುದನ್ನು ಕವಿತೆ ವಿವರಿಸುತ್ತದೆ. ಬಹುತ್ವದಲ್ಲಿಯೂ ಏಕಭಾವದ ಸೆಲೆಯಿದೆ ಅದನ್ನು ಅರ್ಥೈಸಿಕೊಂಡು ಬದುಕುವಲ್ಲಿ ನಾವು ಸೋತಿದ್ದೇವೆ ಎಂದು ಹೇಳುವ ಬೇಂದ್ರೆ :

'ಒಂದೆ ಸತ್ವಕ್ಕೆ ಹಲವು ಹೆಸರು ಬಲ್ಲವರ ಬಾಯಿಯಿಂದ
ಒಬ್ಬ ದೇವ ಹಲವಾರು ನಾಮ ಎಂದೊಬ್ಬ ಶರಣನೆಂದ,
ಒಂದೆ ನೂಲಿನಲಿ ಹಲವು ಹೂವು ಕೋದಂತೆ ಸೃಷ್ಟಿಮಾಲೆ
ಕಲ್ಲು ಬಲ್ಲದೀ ಮಾತು! ನಾವು ಮರೆತಿಹುದು ಯಾವ ಲೀಲೆ?'(ಚೆನ್ನಕೇಶವನ ಸಾಕ್ಷಿಯಲ್ಲಿ, ಔದುಂಬರಗಾಥೆ, ಸಂ–4, ಪು–395)

ಎಂದು ಪ್ರಶ್ನಿಸುತ್ತಾರೆ. ಭಿನ್ನ ಪ್ರದೇಶ, ಭಾಷೆ, ಜಾತಿ, ಮತ, ಧರ್ಮ, ವಿಚಾರಗಳ ಹೊಂದಿರುವ ನಾವೆಲ್ಲರೂ ಒಂದೆಂಬ ಭಾವ ಮೂಡಿಸುವ ರಾಷ್ಟ್ರೀಯವಾದದ ಪರಿಕಲ್ಪನೆ ಈ ಹೊತ್ತಿನ ತುರ್ತು. ಅವರವರ ಅಸ್ತಿತ್ವಕ್ಕೆ–ಅಸ್ಮಿತೆಗೆ ಧಕ್ಕೆ ಬರದಂತೆ ಬದುಕಬೇಕೆಂಬ ಬಹುತ್ವದ ಭಾರತಕ್ಕೆ ಅವಿಭಕ್ತತೆಯ ಗುಣವಿದೆ.

ಅದರ ಸಹಜತೆಗೆ ಕುಂದುತರಬೇಡಿ ಎಂದು 'ಸ್ವಸ್ತಿ–ಸ್ವಸ್ತಿ' ಕವಿತೆಯಲ್ಲಿ ಇಡೀ ರಾಷ್ಟ್ರವನ್ನು 'ನೌಕೆ'ಗೆ ಹೋಲಿಸಿರುವ ಕವಿ, ರಾಷ್ಟ್ರಧ್ವಜವನ್ನು ನೌಕೆಯ ಚಲನೆಗೆ ಕಾರಣವಾಗುವ 'ಹಾಯಿ'ಗೆ ಹೋಲಿಸಿದ್ದಾರೆ. ಇಡೀ ದೇಶದ ಪ್ರಜೆಗಳು ರಾಷ್ಟ್ರನೌಕೆಯೊಳಗಿನ ಸಹಪಯಣಿಗರು. ನೌಕೆ ಒಡೆಯದ ಹಾಗೆ, ಒಂದೇ ಕುಟುಂಬದಂತಿರುವ ಸಹಪಯಣಿಗರ ಬದುಕು ನೀರು ಪಾಲಾಗದ ಹಾಗೆ ಮುಂಬರಿಯಬೇಕಿದೆ, ರಾಷ್ಟ್ರಧ್ವಜವೆಂಬ ಹಾಯಿಯ ಮುಂಗಾಣ್ಕೆಯಲ್ಲಿ ಎಂಬುದನ್ನು ಕವಿತೆ ಪ್ರತಿಮಾತ್ಮಕವಾಗಿ ನಿರೂಪಿಸುತ್ತದೆ. ಬೇಂದ್ರೆಯವರು ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಈ ಕವಿತೆಯಲ್ಲಿ ನೀರ ಮೇಲೆ ತೇಲುತ್ತಿರುವ ನೌಕೆಗೆ ಹೋಲಿಸಿದ್ದಾರೆ. ಸಹಪಯಣಿಗರಲ್ಲಿ ಪರಸ್ಪರ ದ್ವೇಷ–ಅಸೂಯೆ–ಕಲಹಗಳು ಏರ್ಪಟ್ಟು; ಪ್ರತಿಕಾರದಿಂದಯಾರೇ ನೌಕೆಯಲ್ಲಿ ತೂತು ಕೊರೆದರೂ ಮುಳುಗುವುದು ಮಾತ್ರ ಎಲ್ಲರೂ ಎಂಬುದನ್ನು ವಿಶ್ಲೇಷಿಸಿದ್ದಾರೆ. ರಾಷ್ಟ್ರೀಯತೆ ಎಂಬುದು ಸಂಕೀರ್ಣವಾದ ಸಂಗತಿಯಾಗಿದ್ದ ಅದನ್ನು ಸಮಾಜದಲ್ಲಿ 'ಹಿಂಸಾತ್ಮಕದ್ವೇಷ' ಬಿತ್ತಲಿಕ್ಕೂ; 'ಅಹಿಂಸಾತ್ಮಕ ಸಾಮರಸ್ಯ' ಹುಟ್ಟುಹಾಕಲಿಕ್ಕೂ ಬಳಸಬಹುದಾಗಿದೆ. ಯಾರು ಹೇಗೆ ಅದನ್ನು ಬಳಸುತ್ತಾರೆ ಎಂಬುದು ಅವರವರ ಮನಸ್ಥಿತಿಯನ್ನು ಅವಲಂಬಿಸಿರುತ್ತದೆ.

'ರಾಷ್ಟ್ರೀಯತೆ' ಎಂಬುದು ಬಂಧನವಾಗದೆ ಸೀಮಿತ–ಸೀಮೆಗಳನ್ನು ದಾಟುವ ನಿರ್ಬಂಧವಾಗಬೇಕು. 'ರಾಷ್ಟ್ರೀಯತೆ' ಎಂಬ ಸಂಕುಚಿತ–ಸೀಮೆಯನ್ನು ಉಲ್ಲಂಘಿಸಿದಾಗ ಮಾತ್ರ 'ವಿಶ್ವಾತ್ಮಕತೆ'ಯ ಬಯಲಲ್ಲಿ ಬಯಲಾಗಲಿಕ್ಕೆ ಸಾಧ್ಯ ಎಂಬುದನ್ನು ಬೇಂದ್ರೆ ಹೀಗೆ ವಿವರಿಸುತ್ತಾರೆ :

'ಹೋಗೋಣ ಬಾ! ಇನ್ನು ಸೀಮೆಯನು ದಾಟಿ
ಪಂಗಡವ ಪಂಗಡವ ವಿಂಗಡಿಸಿ ಕೆಟ್ಟು
ಸಂಗಡಿಸಿ ಕೂಡಿರುವ ಬಾಳುವೆಯ ಗುಟ್ಟು...

ಒಂದೆ ತಾಯಿಯ ಮಕ್ಕಳಂತೆ ಒಂದಾಗಿ...
ಹೋಗಲಾಡಿಸಿಕೊಂಡು ತಿರುಕತನವನ್ನು
ನೀಗಲಾಡಿಸುತ ಮನೆಮುರುಕುತನವನ್ನು
ಬೇಗದಿಂ ಕರುನಾಡ ಹರಕುತನವನ್ನು

ಕಳೆದು ಹಿರಿದಾಗೋಣ ಸೀಮೆಯನು ದಾಟ...'(ಸೀಮೋಲ್ಲಂಘನ, ಔದುಂಬರಗಾಥೆ, ಸಂ–5, ಪು–88–89)

'ಪಂಗಡಗಳ ಸಂಗಡಿಸಿ, ಬಲ್ಲವರ ಮಾರ್ಗದಲಿ, ಎಲ್ಲರೂ ಒಂದಾಗಿ, ಸ್ತ್ರೀ ಶಿಕ್ಷಣಕೆ ಮುಂದಾಗಿ, ಕೊಳು–ಕೊಡೆಯ ವಿವೇಕದಿಂದ, ಹಿಂದಿನ ಹಗೆತನವ ಮರೆತು–ಮುಂದಿನ ಗೆಳೆತನದಲಿ ಕಲೆತು, ಒಂದೆ ತಾಯ ಮಕ್ಕಳಂತೆ, ತಿರುಕುತನವನ್ನು ತೊಳೆದು, ಮನೆಮುರುಕುತನವ ಕಳೆದು' ಸಾಗಿದಾಗ ಮಾತ್ರ ರಾಷ್ಟ್ರೀಯತೆಯು ವಿಶ್ವಾತ್ಮಕತೆಯಾಗಿ ವಿಸ್ತರಿಸುವುದು ಎಂಬುದನ್ನು ಕವಿತೆ ಪ್ರಮಾಣೀಕರಿಸುತ್ತದೆ. ಬಹುತ್ವದ ಗುಣವಿರುವ, ಒಳಗೊಳ್ಳುವ ರಾಷ್ಟ್ರೀಯತೆಯ ಭಾವೈಕ್ಯತೆಯನ್ನು ಹಾಳುಗೆಡಬೇಡಿ ಎಂದು 'ಭರತಖಂಡ–ಬದನಿಕಾಯಿ' ಕವಿತೆಯಲ್ಲಿ ಎಚ್ಚರಿಸಿದ್ದಾರೆ. 'ಕನ್ನಡದ ತನ'ದಂತೆ ಹಲವು ತನಗಳು ಕೂಡಿ 'ಬಹುತ್ವ ಭಾರತ'ವಾಗಿದೆ, ಪರಸ್ಪರ ವಿಶ್ವಾಸಾತ್ಮಕತೆಯಿಂದ ವಿಶ್ವಾತ್ಮಕತೆಯ ಕಡೆಗೆ ಸಾಗಿದೆ. ಇದನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂಬುದನ್ನು ಬೇಂದ್ರೆ ಹೀಗೆ ವಿವೇಚನೆಗೆ ಒಳಪಡಿಸಿದ್ದಾರೆ; 'ಭರತವಾಕ್ಯ'ದ ಮೂಲಕ ಕೂಡಿ ಬಾಳುವಿಕೆಯನ್ನು ಸಾಕ್ಷಾತ್ಕರಿಸಿದ್ದಾರೆ.

'ಕರ್ನಾಟಕಂ ಒಂದೆ
ಭೂಮಾತರಂ ವಂದೇ
ಭಾರತಂ ವಂದೇ.

...ಲಾವಣ್ಯಮಯ ಬುದ್ಧ ಭಾರತಕೆ ಬಂದ
ಯೇಸು–ಪೈಗಂಬರರು ಭಗವಂತರೆನಿಸಿ
ಸುಪವಿತ್ರಗೊಳಿಸಿದರು ಭಾರತವ ನೆನಿಸಿ...'(ಜಯುವಾಗತ್ಯೈತಿ, ಔದುಂಬರಗಾಥೆ, ಸಂ–6, ಪು–233)

**ಬೇಂದ್ರೆ ಕಾವ್ಯದಲ್ಲಿ ಗಾಂಧಿ ಪ್ರಣೀತ ರಾಷ್ಟ್ರೀಯವಾದ :** ಬೇಂದ್ರೆಯವರ ವ್ಯಕ್ತಿತ್ವ ಹಾಗೂ ಚಿಂತನೆಯನ್ನು ಪ್ರಭಾವಿಸಿದ ವ್ಯಕ್ತಿತ್ವಗಳಲ್ಲಿ 'ಮಹಾತ್ಮ ಗಾಂಧೀಜಿ'ಯವರೂ ಸಹ ಪ್ರಮುಖರು. "ಅವನೆಂಥ ವೃದ್ಧ? ಅವನೆ ಬುದ್ಧಾ. ಮಾತೃವಾತ್ಸಲ್ಯಾವತಾರ ಸಿದ್ಧಾ"(ವೃದ್ಧ ಗಾಂಧಿ, ಔದುಂಬರಗಾಥೆ, ಸಂ–1, ಪು–449) ಬೇಂದ್ರೆಯವರು ತಮ್ಮ ಗಾಂಧಿ ಪ್ರಣೀತ ಕವಿತೆಗಳ ಮೂಲಕ ರಾಷ್ಟ್ರೀಯವಾದ ಪರಿಕಲ್ಪನೆ, ಸ್ವಾತಂತ್ರ್ಯ

ಭಾರತದಲ್ಲಿ ಗಾಂಧಿವಾದದ ವಿನಾಶ, ಗಾಂಧಿವಾದಿಗಳ ಮುಖವಾಡತನಗಳನ್ನು ಚರ್ಚೆಗೆ ಒಳಪಡಿಸಿದ್ದಾರೆ. ಗಾಂಧಿ ತತ್ವ, ಸಿದ್ಧಾಂತ, ಹೋರಾಟ, ವ್ಯಕ್ತಿತ್ವದ ಮೌಲ್ಯಗಳ ಮೂಲಕ ರಾಷ್ಟ್ರೀಯವಾದವನ್ನು ಕಟ್ಟಿಕೊಳ್ಳಬೇಕಾಗಿದ್ದ ಭಾರತೀಯರು ಹೇಗೆ ಗಾಂಧೀಜಿಯವರನ್ನು ಹೇಗೆ ಅಪಮೌಲ್ಯೀಕರಿಸಿದ್ದಾರೆ ಎಂಬುದನ್ನು ಬೇಂದ್ರೆ ತಮ್ಮ ಕಾವ್ಯದ ಮೂಲಕ ವ್ಯಂಗ್ಯ ಪರಿಭಾಷೆಯಲ್ಲಿ ಮಂಡಿಸಿದ್ದಾರೆ.

‘ಬಾಪೂಜಿ ಬಾಪೂಜಿ
ಮಾಡ್ತೇವಿ ಅವನ ಪೂಜಿ
ನಡತೆಯಲ್ಲಿ ಮಾತ್ರ
ಬರೀ ಪೂಜಿ, ಬರೀ ಶೂನ್ಯ
330000000!

ಕ್ರೈಸ್ತ ಮತ್ತೆ ಹುಟ್ಟಿ ಬರಲಿಲ್ಲ
ಪೈಗಂಬರ ಮತ್ತೆ ಜನ್ಮ ತಾಳಲಿಲ್ಲ
ಸಾಕ್ರೇಟೀಸನಿಗೆ ಸಾಕಾಗಿ ಹೋಯ್ತು
ಮೋಹನದಾಸ ಸತ್ತರೂ ನಾವು ಬಾಳೇವಿ
ಸತ್ಯಕ್ಕೆ ಸಾವಿಲ್ಲ!?
ಗಾಂಧಿನ್ನ ಕೊಂದರು, ಸತ್ತರು...’(ಬಾಪೂಜಿ–ಪೂಜಿ, ಔದುಂಬರಗಾಥೆ, ಸಂ–1, ಪು–411)

ನಮ್ಮ ರಾಷ್ಟ್ರೀಯತೆಯನ್ನು ಗಾಂಧೀಜಿ ಪ್ರತಿಪಾದಿಸಿದ ‘ಸರ್ವೋದಯ’ದ ನೆಲೆಯಲ್ಲಿ ಪುನರುತ್ಥಾನಗೊಳಿಸುವುದು ಎಷ್ಟು ಮುಖ್ಯವೋ; ಅದರೊಟ್ಟಿಗೆ ಕ್ರೈಸ್ತ, ಪೈಗಂಬರ್, ಸಾಕ್ರೇಟೀಸರ ಚಿಂತನೆಗಳನ್ನು ಮೈಗೂಡಿಸಿಕೊಳ್ಳುವ ಮೂಲಕ ನಮ್ಮ ರಾಷ್ಟ್ರೀಯತೆಯನ್ನು ವಿಶ್ವಾತ್ಮಕನೆಲೆಗೆ ಕೊಂಡೊಯ್ಯುವ ಅಗತ್ಯವಿದೆ ಎಂಬುದನ್ನು ಕವಿತೆ ನಿರೂಪಿಸುತ್ತದೆ. ‘ಮಾನವೀಯ ಧರ್ಮ, ಅಹಿಂಸೆ, ಸತ್ಯ’ಗಳು ರಾಷ್ಟ್ರೀಯತೆಯ ನೈತಿಕತೆಯ ಮೌಲ್ಯವಾಗಬೇಕು ಎಂಬುದನ್ನು ಕವಿತೆ ಒತ್ತಾಯಿಸುತ್ತದೆ. ರಾಷ್ಟ್ರೀಯತೆ ಹಾಗೂ ವಿಶ್ವಾತ್ಮಕತೆಯನ್ನು ಬೆಸೆಯುವ ಮೂಲಕ ಅವುಗಳ ಮೌಲ್ಯಗಳನ್ನು ಏಕತ್ವಗೊಳಿಸುವ ಬೇಂದ್ರೆಯವರು, ರಾಷ್ಟ್ರೀಯತೆ ಹಾಗೂ ವಿಶ್ವಾತ್ಮಕತೆಯನ್ನು ಹೇಗೆ ಹತ್ತಿಕ್ಕಲಾಗಿದೆ ಎಂಬುದನ್ನು ‘ಕೇಳಿರೊಂದು ಸೋಜಿಗ’

ಕವಿತೆಯಲ್ಲಿ ವಿವರಿಸಿದ್ದಾರೆ. ರಾಮ, ಕೃಷ್ಣ, ಅಲ್ಲಾ, ಕ್ರೈಸ್ತರನ್ನು ಬೆಸೆಯುವ; ಬುದ್ಧ, ಸಾಕ್ರೇಟೀಸ್, ಗಾಂಧಿ ಅವರುಗಳ ಚಿಂತನೆಗಳನ್ನು ಸಾಕಾರಗೊಳಿಸಿಕೊಳ್ಳುವ ಮೂಲಕ ಅಹಂಕಾರವಿಲ್ಲ, ಅಹಿಂಸಾತ್ಮಕವಾದ ವಿಶ್ವಾತ್ಮಕವಾದ ಪ್ರೇಮ ಬದುಕನ್ನು ಕಟ್ಟಿಕೊಳ್ಳಲಿಕ್ಕೆ ಸಾಧ್ಯ ಎಂಬುದನ್ನು ಬೇಂದ್ರೆ ಈ ಕವಿತೆಯಲ್ಲಿ ಜಿಜ್ಞಾಸೆಗೆ ಒಳಪಡಿಸಿದ್ದಾರೆ. ಮನುಷ್ಯ ವಿರೋಧಿಯಾದ, ಸಮಾಜ ಕಂಟಕವಾದ 'ಹಳೆಯ ವಾದ'ಗಳನ್ನು ಮೀರಬೇಕಾದ ಅಗತ್ಯತೆಯನ್ನು ಸಹಾ ಈ ಕವಿತೆ ವಿವರಿಸುತ್ತದೆ. ಹಿಂಸಾತ್ಮಕವಾಗಿ ರಾಷ್ಟ್ರೀಯವಾದವನ್ನಾಗಲಿ, ದೇಶಪ್ರೇಮವನ್ನಾಗಲಿ ಕಟ್ಟಲಿಕ್ಕೆ ಸಾಧ್ಯವಿಲ್ಲ ಎಂಬುದನ್ನು ಸ್ಪಷ್ಟವಾಗಿ ಮಾತನಾಡುವ ಬೇಂದ್ರೆಯವರು; ಗಾಂಧೀಜಿಯವರನ್ನು ಕೊಂದ ಸಂಗತಿಯನ್ನು ಪ್ರಬಲವಾಗಿ ಖಂಡಿಸುತ್ತ : 'ಹಿಂಸೆ ಕೊನೆಗಹಿಂಸೆಯನ್ನು ಗುಂಡುಹಾಕಿ ಕೊಂದಿತೋ? ...ಬತ್ತಿ ಸುಟ್ಟು ಹೋದರೇನು ಬೆಳಕು ನಂದಿತೆಂಬರೆ?'(ಶ್ರದ್ಧಾಂಜಲಿ, ಔದುಂಬರಗಾಥೆ, ಸಂ–1, ಪು–419)ಎಂದು ಹೇಳುತ್ತಾರೆ. ಗಾಂಧೀಜಿ ಕಟ್ಟಬಯಸಿದ, ಜಾತಿ–ಮತ–ಧರ್ಮಗಳ ತಾರತಮ್ಯವಿಲ್ಲದ, ಹಿಂಸೆಯಿಲ್ಲದ, ರಾಷ್ಟ್ರೀಯವಾದವನ್ನು ಕುರಿತು ಚಿಂತಿಸುವ ಬೇಂದ್ರೆಯವರು:

'...ಹರಿಜನರ ಬಳಗ ಉಳಿದವರ ಒಳಗೆ ಬಳಸಿದೆಯೊ ನಾಡತಂದೆ
ಮಾನವತೆ ಒಂದು, ಭಾರತಿಯರೆಲ್ಲ ಒಂದಲ್ಲವೇಕೆ ಎಂದೆ.

ಇವ ಬಿಳಿಯ ಕರಿಯ, ಇಸ್ಲಾಮಿ ಹಿಂದು, ಆರ್ಯನು ಅನಾರ್ಯನೆಂದು
ಜೀವ ಬಾಂಧವ್ಯ ಒರೆಗೆ ಹತ್ತಿರಲು ಪರಸ್ಪರರ ಕೊಂದು
ಮೃತ್ಯುಧ್ಯಾನವೇ ಮಾಡುತಿರುವ ರೌದ್ರಿಕರ ನಡುವೆ ನಡೆದೆ;
ದಾಯಾದಿತನದ ಸಾಗರದ ಮಥನದಿಂದೆದ್ದ ವಿಷವ ಕುಡಿದೆ.
ನಿನ್ನಹಿಂಸೆಗಾ ಹಿಂಸೆ ಕಾಣಿಕೆಯೆ? ಯಾವ ನ್ಯಾಯನೀತಿ?
ಎಂಥ ಪೌರುಷದ ಏನು ನೀತಿಯಿದು? ಯಾರ ವೀರಜಾತಿ?'(ಅಮರ ಮರಣ, ಔದುಂಬರಗಾಥೆ, ಸಂ–1, ಪು–420–421)

ಈ ಕವಿತೆಯ ಸಾಲುಗಳು 'ದೇಶ ವಿಭಜನೆಯಾಗಬಾರದೆಂದು ಹೇಳಿದ್ದ; ಅನಿವಾರ್ಯವಾಗಿ ದೇಶ ವಿಭಜನೆಯಾದಾಗ ಪಾಕಿಸ್ತಾನಕ್ಕೆ ಭಾರತವು ಕೊಡಬೇಕಾದ ಹಣವನ್ನು ಹಠದಿಂದ ಕೊಡಿಸಿದ; ಭಾರತಕ್ಕೆ ಸ್ವಾತಂತ್ರ್ಯ ಬಂದು ರಾಜಕೀಯ ನಾಯಕರು ದೆಹಲಿಯಲ್ಲಿ ಸೇರಿ ಅಧಿಕಾರ ಹಂಚಿಕೆ ವಿಚಾರವನ್ನು ಚರ್ಚಿಸುತ್ತಿದ್ದಾಗ,

ಪಶ್ಚಿಮಬಂಗಾಳದ ನೌಕಾಲಿಯಲ್ಲಿ ಉಲ್ಬಣಿಸಿದ್ದ ಕೋಮುಗಲಭೆಯನ್ನು ನಿವಾರಿಸುವ ನಿಟ್ಟಿನಲ್ಲಿ ಮುಸ್ಲಿಂ–ಹಿಂದೂಗಳ ನಡುವೆ ಸಾಮರಸ್ಯ ತರಲು ಹೆಣಗಾಡುತ್ತಿದ್ದ; ಸರ್ವೋದಯ ಹಾಗೂ ಗ್ರಾಮಸ್ವರಾಜ್ಯವನ್ನು ಪ್ರತಿಪಾದಿಸಿದ; ಸಜಾತಿ ವಿವಾಹಗಳಲ್ಲಿ ನಾನು ಭಾಗವಹಿಸುವುದಿಲ್ಲ ಎಂದು ಹೇಳಿದ ಗಾಂಧೀಜಿ ಅವರನ್ನು ನೆನಪಿಸುತ್ತವೆ.

> 'ಅಸ್ಪೃಶ್ಯರ ಉದ್ಧಾರಕ್ಕಿಂತ, ಅಸ್ಪೃಶ್ಯತೆಯ ಉಪಸಂಹಾರ ಬೇಕು
> ಹೊಸಾ ಸೃಷ್ಟಿಗೆ!
> ...ಭಾವೈಕ್ಯ ನಮ್ಮ ಘೋಷ
> ರಾಷ್ಟ್ರೈಕ್ಯ ನಮ್ಮ ವತನು
> ಮಾನವೈಕ್ಯ ನಮ್ಮ ಮತ...'(ಶಕಪುರುಷನ ಶತಮಾನ, ಔದುಂಬರಗಾಥೆ, ಸಂ–1, ಪು–432–435)

– ಅಸ್ಪೃಶ್ಯತೆ ಅಳಿದು, ಭಾವೈಕ್ಯತೆ–ರಾಷ್ಟ್ರೈಕ್ಯತೆ–ಮಾನವೈಕ್ಯತೆ ಮೂಡಲಿ ಎಂದು ಹೇಳುವ ಬೇಂದ್ರೆಯವರು; ಅಸ್ಪೃಶ್ಯತೆಯ ಕಳಂಕವನ್ನು ತೊಡೆದುಕೊಳ್ಳದ ಹೊರತು ಭಾವೈಕ್ಯತೆ–ರಾಷ್ಟ್ರೈಕ್ಯತೆ–ಮಾನವೈಕ್ಯತೆಯನ್ನಾಗಿಲಿ ಅರ್ಥಾತ್ ರಾಷ್ಟ್ರೀಯತೆ–ಯನ್ನಾಗಲಿ ಮೂರ್ತಗೊಳಿಸಲಿಕ್ಕೆ ಸಾಧ್ಯವಿಲ್ಲ ಎಂಬುದನ್ನು ಹೇಳುತ್ತಾರೆ. ಹೀಗೆ ಗಾಂಧೀಜಿಯವರ ಬದುಕು, ವ್ಯಕ್ತಿತ್ವ, ಚಿಂತನೆಗಳಲ್ಲಿರುವ **'ರಾಷ್ಟ್ರೀಯವಾದಿ–ವಿಶ್ವಾತ್ಮಕತೆ'**ಯನ್ನು ಬೇಂದ್ರೆಯವರು ತಮ್ಮ ಅನೇಕ ಕವಿತೆಗಳಲ್ಲಿ ದಾಖಲಿಸಿದ್ದಾರೆ. ಒಟ್ಟಾರೆ ಬೇಂದ್ರೆಯವರು ತಮ್ಮ ಕಾವ್ಯದ ಮೂಲಕ; ಕನ್ನಡದ ಪ್ರಜ್ಞೆಯ ವಿವೇಕದ ಬೆಳಕಲ್ಲಿ; ಎಲ್ಲಾ ಜಾತಿ–ಮತ–ಧರ್ಮ–ಪಂಥ–ಭಾಷೆ–ಸಮುದಾಯಗಳನ್ನು ಒಳಗೊಳ್ಳುವ; ಅಹಿಂಸಾತ್ಮಕ–ಬಹುತ್ವವಾದಿ; ಸ್ವಾತಂತ್ರ್ಯ–ಸಮಾನತೆ–ಭ್ರಾತೃತ್ವದ; ದ್ವೇಷ ರಹಿತ ಮಾತೃತ್ವದ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು, ವಿಶ್ವಾಸಾತ್ಮಕ ನೆಲೆಯಲ್ಲಿ, ವಿಶ್ವಾತ್ಮಕಗೊಳಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು :**


1. ಔದುಂಬರ ಗಾಥೆ–ದ.ರಾ.ಬೇಂದ್ರೆ ಜೀವನ ಮಹಾಕಾವ್ಯ–ಅಂಬಿಕಾತನಯದತ್ತರ ಸಮಗ್ರ ಕಾವ್ಯ–ನಮನ : ಸಂಪುಟ–1 : ಸಂ–ವಾಮನ ಬೇಂದ್ರೆ : ವರಕವಿ ಡಾ. ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ : 17–02–2003

2. ಔದುಂಬರ ಗಾಥೆ–ದ.ರಾ.ಬೇಂದ್ರೆ ಜೀವನ ಮಹಾಕಾವ್ಯ–ಅಂಬಿಕಾತನಯದತ್ತರ ಸಮಗ್ರ ಕಾವ್ಯ–ದರ್ಶನ : ಸಂಪುಟ–2 : ಸಂ–ವಾಮನ ಬೇಂದ್ರೆ : ವರಕವಿ ಡಾ. ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ : 17–02–2003

3. ಔದುಂಬರ ಗಾಥೆ–ದ.ರಾ.ಬೇಂದ್ರೆ ಜೀವನ ಮಹಾಕಾವ್ಯ–ಅಂಬಿಕಾತನಯದತ್ತರ ಸಮಗ್ರ ಕಾವ್ಯ–ವಿಕಾಸ : ಸಂಪುಟ–3 : ಸಂ–ವಾಮನ ಬೇಂದ್ರೆ : ವರಕವಿ ಡಾ. ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ : 17–02–2003

4. ಔದುಂಬರ ಗಾಥೆ–ದ.ರಾ.ಬೇಂದ್ರೆ ಜೀವನ ಮಹಾಕಾವ್ಯ–ಅಂಬಿಕಾತನಯದತ್ತರ ಸಮಗ್ರ ಕಾವ್ಯ–ವಿನ್ಯಾಸ : ಸಂಪುಟ–4 : ಸಂ–ವಾಮನ ಬೇಂದ್ರೆ : ವರಕವಿ ಡಾ. ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ : 17–02–2003

5. ಔದುಂಬರ ಗಾಥೆ–ದ.ರಾ.ಬೇಂದ್ರೆ ಜೀವನ ಮಹಾಕಾವ್ಯ–ಅಂಬಿಕಾತನಯದತ್ತರ ಸಮಗ್ರ ಕಾವ್ಯ–ತತ್ತ್ವ : ಸಂಪುಟ–5 : ಸಂ–ವಾಮನ ಬೇಂದ್ರೆ : ವರಕವಿ ಡಾ. ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ : 17–02–2003

6. ಔದುಂಬರ ಗಾಥೆ–ದ.ರಾ.ಬೇಂದ್ರೆ ಜೀವನ ಮಹಾಕಾವ್ಯ–ಅಂಬಿಕಾತನಯದತ್ತರ ಸಮಗ್ರ ಕಾವ್ಯ–ಸಿದ್ಧಾಂತ : ಸಂಪುಟ–6 : ಸಂ–ವಾಮನ ಬೇಂದ್ರೆ : ವರಕವಿ ಡಾ. ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ : 17–02–2003

7. ಕಿ. ರಂ. ನಾಗರಾಜ ಮತ್ತೆ ಮತ್ತೆ ಬೇಂದ್ರೆ : ಸಂ–ಅಕ್ಷತಾ ಕೆ. : ಅಹರ್ನಿಶಿ, ಶಿವಮೊಗ್ಗ : 2010

8. ವಿಚಾರ ಕ್ರಾಂತಿಗೆ ಆಹ್ವಾನ : ಕುವೆಂಪು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು : 1999

# ಜಗವೆಲ್ಲ ನಗುತಿರಲಿ ಎಂದು ಆಶಿಸಿದ ಸಂಭಾವಿತ ಕವಿ ಈಶ್ವರ ಸಣಕಲ್ಲ

* ಅನಿತ ಕೆ.ವಿ

'ಕಾವ್ಯಂ ಯಶಸೇರ್ಥಕೃತೇ, ವ್ಯವಹಾರವಿದೇ, ಶಿವೇತರಕ್ಷಯತೇ, ಸದ್ಯಃ ಪರ–ನಿರ್ವೃತಯೇ ಕಾಂತಾ–ಸಂಮಿತತಯೋಪದೇಶಯುಜೇ' ಎಂದು ಮಮ್ಮಟನು ತನ್ನ 'ಕಾವ್ಯ ಪ್ರಕಾಶ'ದಲ್ಲಿ ಹೇಳಿದ್ದಾನೆ. ಮಮ್ಮಟನು 11ನೆಯ ಶತಮಾನದ ಕಾಶ್ಮೀರಿ ಅಲಂಕಾರಿಕ. ಬೇಂದ್ರೆ ಅವರು ಇದೇ ನುಡಿಗಳನ್ನು ಬಳಸಿಕೊಂಡು ಕಾವ್ಯ ಪ್ರಯೋಜನ ಕುರಿತು ತಿಳಿಸುತ್ತಾ 'ಕೋರಿಕೆ' ಸಂಕಲನದ ಮುನ್ನುಡಿಯಲ್ಲಿ 'ಕಾವ್ಯ ರಚಿಸಿದ ಕವಿಗೆ ಉಂಟಾಗಬೇಕಾದ ಪ್ರಯೋಜನ' ಕುರಿತು ವಿಶೇಷವಾಗಿ ಚರ್ಚಿಸಿದ್ದಾರೆ. 'ಕವಿತೆಯಿಂದ ಆನಂದ, ದುಡ್ಡು, ಕೀರ್ತಿ, ಉಪದೇಶ, ಸಂಕಟ ವಿನಾಶ, ವ್ಯವಹಾರ ಜ್ಞಾನ' ಈ ಎಲ್ಲಾ ಅಂಶಗಳು ದೊರಕುವುದಾದರೆ ಕವಿಯ ಬಡತನಕ್ಕೆ ಪ್ರಸ್ತುತ ಸಮಾಜದಿಂದಲೇ ನೆರವಿನ ಅಗತ್ಯವಿದೆ ಎಂಬ ಅನಿವಾರ್ಯತೆಯನ್ನು ಅಭಿವ್ಯಕ್ತಮಾಡುತ್ತಾರೆ.

ಭಾರತ ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತಿದ್ದ ಕಾಲವದು, ಮೊದಲ ಮಹಾಯುದ್ಧವನ್ನು ಕಂಡ ಭಾರತವು ಮಾನಸಿಕವಾಗಿ ಈಗಾಗಲೇ ಯುದ್ಧವನ್ನು ಪ್ರಾರಂಭಿಸಿತ್ತು. ಪ್ರತಿಯೊಬ್ಬರೂ ತಮ್ಮ ತಮ್ಮ ಕ್ಷೇತ್ರದಲ್ಲಿ ಸ್ವಾತಂತ್ರ್ಯದ ಹಂಬಲವನ್ನು ಹೊತ್ತಿದ್ದರು. ಅದೇ ರೀತಿಯಲ್ಲಿ ಕವಿಗಳು ಕವಿತೆಯನ್ನೇ ಅಸ್ತ್ರವಾಗಿಸಿದರು. ಗೊಂದಲಗೊಂಡ ಮನಸ್ಸುಗಳಿಗೆ ಭರವಸೆಯ ಬೆಳಕು ಚೆಲ್ಲುತ್ತಾ ಅನಂತ ಸಾಂತ್ವನವನ್ನು ನೀಡುತ್ತಿದ್ದರು. ಈ ದಿಸೆಯಲ್ಲಿ ಇಪ್ಪತ್ತನೇ ಶತಮಾನದ ಮೊದಲ ಮುಂಚೂಣಿಯ ಎಲ್ಲಾ ಬರಹಗಾರರೂ ಒಂದಲ್ಲ ಒಂದು ರೀತಿಯಲ್ಲಿ ತಮ್ಮದೇ ಜವಾಬ್ದಾರಿ ಹೊತ್ತು ಸಾಹಿತ್ಯರಚನೆ, ಸಭೆ ಮೊದಲಾದ ಕಾರ್ಯದಲ್ಲಿ ತೊಡಗಿದ್ದರು. 1930ರ ಕಾಲದಲ್ಲಿ ಬೇಂದ್ರೆ ಹಲವರಂತೆ ಬಡತನವನ್ನು ಸ್ವಯಂ ಅನುಭವಿಸುತ್ತಿರುವಾಗ ಕವಿಯ ಕುರಿತು ಕರುಣೆಯ ನಿವೇದನೆಯಂತೆ 'ಕೋರಿಕೆ' ಸಂಕಲನಕ್ಕೆ ಮುನ್ನುಡಿ ಬರೆದ್ದಾರೆ. ಈ ಕೋರಿಕೆ ಸಂಕಲನದ ಕವಿಯು 'ಜಗವೆಲ್ಲ

ನಗುತಿರಲಿ, ಜಗದಳುವು ನನಗಿರಲಿ! ನಾನಳಲು ಜಗವೆನ್ನನೆತ್ತಿಕೊಳದೇ? ನಾ ನಕ್ಕು, ಜಗವಳಲು, ನೋಡಬಹುದೇ? ಎಂಬ ವಿಶ್ವಮಾನವ ವಿಚಾರವನ್ನು ನುಡಿದವರು ಈಶ್ವರ ಸಣಕಲ್ಲ.

ಈಶ್ವರ ಸಣಕಲ್ಲ ಅವರು ಮಾಸ್ತಿ, ಬೇಂದ್ರೆ, ಕುವೆಂಪು, ಕಾರಂತರ ಸಮಕಾಲೀನರು. 1906 ಡಿಸೆಂಬರ್ 20ರಂದು ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಯಾದವಾಡದಲ್ಲಿ ಜನಿಸಿದರು. ಆದರೆ ಸಾಹಿತ್ಯದಲ್ಲಿ ಅವರ ಸ್ವಂತ ಊರು 'ರಬಕವಿ' ಇವರ ತಾಯಿ ನೀಲಾಂಬಿಕೆ, ತಂದೆ ಮಹಾರುದ್ರಪ್ಪ. ಇವರು ತಮ್ಮ ಉನ್ನತ ಶಿಕ್ಷಣಕ್ಕಾಗಿ ಸಾಕಷ್ಟು ಹಂಬಲಿಸುತ್ತಾರೆ. ರವೀಂದ್ರರ ಶಾಂತಿನಿಕೇತನಕ್ಕೆ ಹೋಗಿ ಕಲಿಯಬೇಕೆಂಬ ಮಹದಾಸೆ ತಮ್ಮ ಬಡತನದಿಂದ ಸಾಧ್ಯವಾಗುವುದಿಲ್ಲ. ಸ್ವತಃ ಶ್ರಮಪಟ್ಟು ಕನ್ನಡ, ಇಂಗ್ಲೀಷ್ ಹಾಗೂ ಮರಾಠಿ ಭಾಷೆಗಳಲ್ಲಿ ಆಳವಾದ ಅಧ್ಯಯನ ನಡೆಸುತ್ತಾರೆ. ಬಡತನವು ಅದೆಷ್ಟೋ ಕಲಿಕೆಗಳಿಗೆ ಮಾರಕವಾಗಿ ಬಂದರೂ ಅದನ್ನೇ ಪೂರಕವಾಗಿ ಗ್ರಹಿಸಿದ ಕೆಲವರು ಅಮರರಾದ ಹಲವು ಉದಾಹರಣೆಗಳಿವೆ.

ಇವರ ಸಾಹಿತ್ಯ ಕೃಷಿಯು ವಿಶಿಷ್ಟವಾದುದು. ಇಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ ಇವರು 'ಕೋರಿಕೆ'(1934), 'ಹುಲ್ ಕಲ್ಗೆಗೆ ಬಟ್ಟೆ' (1962) ಹಾಗೂ 'ಕಿಡಿ'(1980) ಕವನ ಸಂಕಲನಗಳು, 'ಬಟ್ಟೆ' ಎಂಬ ಕಥಾ ಸಂಕಲನಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಕೂಡ ಲಭಿಸಿದೆ. ಗರಗದ ಶ್ರೀ ಮಡಿವಾಳ ಶಿವಯೋಗಿ ಎಂಬ ಜೀವನಚರಿತ್ರೆ ರಚಿಸಿದ್ದಾರೆ. ವಿವಿಧ ಭಾಷೆಗಳಿಂದ 'ಬ್ರಹ್ಮಚರ್ಯವೇ ಜೀವನ', 'ವೀರ್ಯನಾಶವೇ ಮೃತ್ಯು'(1930), 'ಗ್ರಾಮೋದ್ಧಾರ'(1935), 'ಸಂಸಾರ ಸಮರ'(1939), 'ಬ್ಯಾಂಕುಗಳ ವ್ಯವಹಾರ'(1940), 'ನೆದರ್ ಲ್ಯಾಂಡಿನಲ್ಲಿ ಸಹಕಾರದ ನಸುನೋಟ' (1953) ಇನ್ನೂ ಹಲವು ಕೃತಿಗಳನ್ನು ರಚಿಸಿದ್ದಾರೆ.

ಈಶ್ವರ ಸಣಕಲ್ಲ ಅವರು ಬದುಕಿದ ಬೀದಿಯಲ್ಲೇ ಬದುಕಿದ 'ರೇಣುಕಾ ನಿಡಗುಂದಿ'ಯವರು 'ಯುಗವು ಮರೆತ ಕವಿ' ಎಂದಿದ್ದಾರೆ. ಅವರ ಒಂದೆರಡು ನೆನಪುಗಳನ್ನು ಇಲ್ಲಿ ನಮೂದಿಸಬಹುದು ಎನಿಸುತ್ತದೆ. "ಬಾಲ್ಯದಲ್ಲೇ ಸಣಕಲ್ಲ ಅವರಿಗೆ ಓದುವ ಹಂಬಲ ಅಪಾರವಾಗಿತ್ತು. ರಬಕವಿಯ ವಿರಕ್ತಮಠದ ವಾಚನಾಲಯ, ಶಂಕರ ಲಿಂಗ ವಾಚನಾಲಯ ಹಾಗೂ ಹಿರಿಯರಾದ ಚಿಕ್ಕೋಡಿ ತಮ್ಮಣ್ಣಪ್ಪ, ಮುರಿಗಯ್ಯ ಬಾಗೋಜಿಮಠ ಮಾಸ್ತರರ ಪ್ರೋತ್ಸಾಹದಿಂದ

ಅಕ್ಷರವಂತರಾದರು. ಬಾಲಕ ಈಶ್ವರನಲ್ಲಿ ಸಾಹಿತ್ಯದ ಬಗ್ಗೆ ಆಸಕ್ತಿ ಮೂಡಿಸಿದವರು ಶಾಲಾ ಶಿಕ್ಷಕರಾಗಿದ್ದ ಭೈರಪ್ಪ ಹದ್ದಾರ ಮಾಸ್ತರರು. ಈಶ್ವರ ಸಣಕಲ್ ಸರಳ ಜೀವಿ. ಮಾಸಿದ ಕೋಟು, ಮಾಸಿದ ರಟ್ಟಿನ ಟೊಪ್ಪಿಗೆ. ಕಗ್ಗು ದೋತರ, ಕೈಯಲ್ಲೊಂದು ಛತ್ರಿ. ಹೆಗಲಲ್ಲಿ ಕೈಚೀಲ. ಕಾಲಲ್ಲಿ ಹರಕುಚಪ್ಪಲಿ. ಮನೆಯಲ್ಲಿ ಏನುಂಟೋ ಅದನ್ನೇ ಸಮನಾಗಿ ಹಂಚಿಕೊಂಡು ತಿನ್ನುತ್ತಿದ್ದುದನ್ನು ಅರೆಹೊಟ್ಟೆ ಉಂಡರೂ ಯಾರ ಬಳಿಯೂ ಸಾಲ ಕೇಳದೆ, ಕಡ ಪಡೆಯದೇ ಅವರ ತಾಯಿ ಸಂಸಾರ ನಡೆಸುತ್ತಿದ್ದುದನ್ನು ಮಧುಮತಿ ನೆನೆಯುತ್ತಾರೆ." (ಮಧುಮತಿ ಎಂದರೆ ಈಶ್ವರ ಸಣಕಲ್ ಅವರ ಮಗಳು)ಇವರ ಸರಳತೆ ಕುರಿತು, ಬಡತನ ಕುರಿತು ಇಂತಹ ವಿಚಾರಗಳು ಧಾರವಾಡದಂತಹ ಪ್ರದೇಶಗಳು ಅನುಭವಿಸಿ ಚರಿತ್ರೆಯ ಬಡತನ, ಶಿಸ್ತು, ಶ್ರದ್ಧೆ, ಭಕ್ತಿಗಳನ್ನು ವಿವರವಾಗಿ ತೆರೆದಿಡುತ್ತದೆ. ಬೇಂದ್ರೆ ಅವರ ಬದುಕು ಕೂಡ ಇದೇ ಹಿನ್ನೆಲೆಯನ್ನು ಪರಿಚಯಿಸುತ್ತದೆ. ಮುಖ್ಯವಾಗಿ ವಾಚನಾಲಯಗಳು ಬದುಕನ್ನೇ ರೂಪಿಸಿದ ಅಕ್ಷರಜೀವ ಕೇಂದ್ರಗಳು ಎನಿಸುತ್ತವೆ. ಪ್ರಸ್ತುತ ಕೂಡ ವಾಚನಾಲಯಗಳು ಇಂತಹ ಸೇವೆಯನ್ನು ಮುಂದುವರೆಸಿರುವುದು ಹೆಮ್ಮೆ ಎನಿಸುತ್ತದೆ.

ಕುವೆಂಪು ಅವರು ತಮ್ಮ ನೆನಪಿನ ದೋಣಿಯಲ್ಲಿ ಪುಟಸಂಖ್ಯೆ 1046ರಲ್ಲಿ ಒಂದು ಪತ್ರ ಹಾಗೂ ಆ ಪತ್ರ ಕುರಿತ ನೆನಪಿದೆ. ಈಶ್ವರ ಸಣಕಲ್ಲ ಅವರು 1934ರಲ್ಲಿ ಕುವೆಂಪು ಅವರಿಗೆ ಒಂದು ಪತ್ರ ಬರೆಯುತ್ತಾರೆ. 'ಅಣ್ಣಯ್ಯ' ಎಂದು ಸಂಬೋಧಿಸುತ್ತಾ ಕುವೆಂಪು ಅವರನ್ನು ನೋಡಬೇಕೆಂಬ ಹಂಬಲವೂ ಅವರ ಕವಿತೆಗಳ ಓದು, ಚಿತ್ರ ಎಲ್ಲವೂ ಆಸೆಯಾಗಿ ಹುಬ್ಬಳಿಯ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮ ಮುಗಿದ ಮೇಲೆ ಸಾಕಾರಗೊಂಡ ನೆನಪನ್ನು ಹಂಚಿಕೊಳ್ಳುತ್ತಾರೆ. ಕುವೆಂಪು ಅವರಿಗೆ ನಮಸ್ಕರಿಸಲು ಬಂದಾಗ 'ಏನಿದು?' ಎಂಬ ಒಂದು ಶಬ್ದ ಇವರಿಗೆ ಉಂಟು ಮಾಡಿದ ಆನಂದ, ತಲ್ಲಣವನ್ನು ವಿಶೇಷವಾಗಿ ಹಂಚಿಕೊಂಡಿದ್ದಾರೆ. ಜೊತೆಗೆ ಬಡತಮ್ಮನ ಮೇಲೆ ಚಿರಪ್ರೇಮವಿರಲಿ! ಎಂದು ನಿವೇದಿಸಿದ್ದಾರೆ. ಕುವೆಂಪು ಈ ನೆನಪನ್ನು ಕುರಿತು 'ಅವರು ಬಹಳ ಸರಲ ಹೃದಯದವರು ಎಂದು ತೋರಿತು' ಎಂದು ಪತ್ರದ ನೆನಪುಗಳನ್ನು ಹಂಚಿಕೊಳ್ಳುತ್ತಾರೆ. ಇದೇ ಕಾಲದಲ್ಲಿ ಈಶ್ವರ ಸಣಕಲ್ಲ ಅವರ ಮೊದಲ ಸಂಕಲನ 'ಕೋರಿಕೆ' 1934ರ ಸೆಪ್ಟೆಂಬರ್‌ನಲ್ಲಿ ಪ್ರಕಟಗೊಳ್ಳುತ್ತದೆ. ಈ ಕೃತಿಗೆ ಬೇಂದ್ರೆ ಅವರು

ಮುನ್ನುಡಿ ಬರೆಯುತ್ತಾರೆ. ಈ ಕೃತಿಯನ್ನು ಫ.ಗು ಹಳಕಟ್ಟಿ ಅವರು ಪ್ರಕಟಿಸುತ್ತಾರೆ. ಗೋಕಾಕರು, ಕಲ್ಲೂರಕೃಷ್ಣಕುಮಾರರೂ ಈ ಸಂಕಲನದ ಕವಿತೆಗಳನ್ನು ಪರಿಶೀಲಿಸುತ್ತಾರೆ. ಈ ಎಲ್ಲಾ ವಿಚಾರಗಳನ್ನು ಗಮನಿಸಿದರೆ 'ಕವಿಗೆ ಕವಿ ಮಣಿವನ್' ಎಂಬಂತೆ ಧಾರವಾಡ ಹಾಗೂ ಮೈಸೂರು ಹಾಗೂ ಇತರ ಎಲ್ಲಾ ಕವಿಗಳ ನಡುವೆ ಪರಸ್ಪರ ಬೆಳೆಸುವ ಮನೋಭಾವ ಅರ್ಥಪೂರ್ಣವಾಗಿತ್ತು. ಗೆಳೆಯರ ಗುಂಪು, ಮಾಸ್ತಿ ಅವರ ಸಹಾಯಗಳು ಎಲ್ಲವೂ ಅನಂತ ಚಿತ್ರಣಗಳು ಎನಿಸುತ್ತದೆ.

ಈಶ್ವರ ಸಣಕಲ್ಲ ಅವರು ಜಗತ್ತಿಗೆ ಒಂದು ಕವಿತೆಯ ಮೂಲಕ ಪರಿಚಯವಾದ ವಿಶೇಷ ಕವಿ ಎನಿಸುತ್ತದೆ. ಆ ಕವಿತೆಯ ಹೆಸರು ಕೂಡ 'ಕೋರಿಕೆ'. ಈ ಕವಿತೆಯು ಮೊದಲಿಗೆ ಬೆಂಗಳೂರಿನ ಸೆಂಟ್ರಲ್‌ಕಾಲೇಜು, ಕರ್ಣಾಟಕ ಸಂಘವು ಪ್ರಕಟಿಸುತ್ತಿದ್ದ 'ಪ್ರಬುದ್ಧ ಕರ್ಣಾಟಕ'ದಲ್ಲಿ 1931ರಲ್ಲಿ ಪ್ರಕಟಗೊಳ್ಳುತ್ತದೆ. ಸಂಪುಟ 12 ಸಂಕ್ರಾಂತಿಯ ಸಂಚಿಕೆಯಲ್ಲಿ ಗಮನಿಸಬಹುದು. ಕೃತಿಯ ಮೊದಲ ಕವಿತೆಯೂ ಕೂಡ ಇದೇ ಆಗಿದೆ. ಈ ಸಂಕಲನದ ಕೆಲವು ಕವಿತೆಗಳನ್ನು ಗ್ರಹಿಸುವ ಮೂಲಕ ಸಮಾಜದ ವರ್ತಮಾನಕ್ಕೂ ಒಬ್ಬ ಕವಿಯು ಹೇಗೆ ಅನಂತ ಮೆಟ್ಟಿಲುಗಳನ್ನು ಸ್ಥಾಪಿಸಿರುತ್ತಾನೆ ಎಂಬುದನ್ನು ಗಮನಿಸಬಹುದು.

'ಜಗವೆಲ್ಲ ನಗುತಿರಲಿ, ಜಗದಳವು ನನಗಿರಲಿ! ನಾನಳಲು ಜಗವೆನ್ನನೆತ್ತಿಕೊಳದೇ? ನಾ ನಕ್ಕು, ಜಗವಳಲು, ನೋಡಬಹುದೇ?' ಎಂಬ ನಿವೇದನೆಯಲ್ಲಿ ವಿಶ್ವ ಶಾಂತಿಯನ್ನು ಸರಳವಾಗಿ ನಿರೂಪಿಸಿದ್ದಾರೆ. ನವೋದಯ ಸಾಹಿತ್ಯದ ಮುಖ್ಯ ಧೋರಣೆಗಳಲ್ಲಿ ಒಂದಾದ ರಾಷ್ಟ್ರಪ್ರೇಮ, ವಿಶ್ವದ ಐಕ್ಯತೆಯು ಇಲ್ಲಿ ಸ್ಪಷ್ಟವಾಗಿ ಮೂಡಿದೆ. ನಿಸ್ವಾರ್ಥದಲಿ ತನ್ನ ಇರುವಿಕೆಯನ್ನು ಸ್ಪಷ್ಟಪಡಿಸುವ ಸಣಕಲ್ಲ ಅವರು ತಾವೂ ಅದೇ ಸ್ವಾಭಿಮಾನದ ಬದುಕನ್ನು ಬದುಕುತ್ತಾರೆ. ಭೂಮಿಯು ಸಿರಿ ತುಂಬಲಿ, ಬಡತನವು ನನಗಿರಲಿ ಎಂಬ ಸರಳ ತತ್ವವನ್ನು ಯಾವುದೇ ಸಿದ್ಧಾಂತವಿಲ್ಲದೆ ತನ್ನ ತತ್ತ್ವವನ್ನು ನಿರೂಪಿಸುತ್ತಾರೆ. ಈಶ್ವರನು ಜಗವನ್ನು ಕಾಪಾಡುವವನು, ಅವನಿಗೆ ದುಃಖ ಬಂದರೆ ಕಾಪಾಡುವವರಾರು? ನನಗೆ ದುಃಖವಾದರೆ 'ಹೇ ತಂದೆ' ಎಂದರೆ ಸಾಕು ಈಶ್ವರ ಕಾಪಾಡುತ್ತಾನೆ ಎಂಬ ಭರವಸೆ ತುಂಬುತ್ತಾರೆ. ಈ ಸಂಕಲನಕ್ಕೆ ಮುನ್ನುಡಿ ಬರೆದಿರುವ ಬೇಂದ್ರೆಯವರು ಈ ಕವಿತೆಯನ್ನು ಕವಿಯ ನಿತ್ಯ ಬದುಕಿಗೆ ಅನ್ವಯಿಸಿ 'ಕವಿಯ ಕರ್ತವ್ಯಕ್ಕೆ ಸಹೃದಯನ ಸಹಾಯ ಬೇಕು' ಎಂದು ವಿವರವಾಗಿ ಬರೆಯುತ್ತಾರೆ. ಕೃತಿಯ ಕುರಿತು

ಚರ್ಚೆಗಿಂತಲೂ ಸಹೃದಯನ ಕರ್ತವ್ಯವನ್ನೇ ನಮೂದಿಸುವ ಬೇಂದ್ರೆ ಅವರ ವಾಸ್ತವ ಬದುಕು ಕೂಡ ಬಡತನ, ನಿರುದ್ಯೋಗದ ನಿತ್ಯ ಸಂಕಷ್ಟದಲ್ಲಿ ಮುಳುಗಿ ಹೋಗಿದ್ದ ದಿನಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಮಾಸ್ತಿ, ಫ.ಗು ಹಳಕಟ್ಟಿಯಂತಹ ಧೀಮಂತರು ಸಾಹಿತ್ಯವೆಂಬ ನೆಪದೊಂದಿಗೆ ಈ ಕವಿಗಳ ಬದುಕನ್ನೇ ಕಾಪಾಡುತ್ತಾರೆ.

'ಬಡತನ ನನಗಿರಲಿ ಭಾಳ ಮಕ್ಕಳಿರಲಿ, ಮ್ಯಾಗೆ ಗುರುವಿನ ದಯವಿರಲಿ, ನನ ಗುರುವೆ, ಬಡತನದ ಚಿಂತೆ ನಿನಗಿರಲಿ' ಎಂದು ಜನಪದರು ಹೇಳುವಂತೆ ಈಶ್ವರ ಸಣಕಲ್ಲ ಅವರ ಒಂದು ಕವಿತೆ 'ಬಡತನವೆ ಬೇಕು' ಎನ್ನುತ್ತದೆ. ಅನುಭವಗಳು ಬರಲು, ಬದುಕೆಂಬ ಸಾಹಸದ ಸಾಗರವನ್ನು ಈಜಲು, ವಿವಿಧ ಕಷ್ಟಗಳನ್ನು, ಹಸಿವಿನ ತೀವ್ರತೆಯನ್ನು ತಾಳಲು ಬಡತನವೇ ಬೇಕು ಎನ್ನುತ್ತಾರೆ. ವಾಸ್ತವದಲ್ಲಿ ಗಮನಿಸಿದರೆ ಬಡತನವೆಂಬುದು ಯಾವುದೇ ಕಷ್ಟಗಳನ್ನು ಅರ್ಥಪೂರ್ಣವಾಗಿ ನಿರ್ವಹಿಸಲು ಬಡತನದಂತಹ 'ತಾಳುವಿಕೆ' ಅಗತ್ಯವಿದೆ ಎಂಬುದನ್ನು ತಾವು ಅನುಭವಿಸಿ ಹೇಳಿದ ಮಾತು ಗಮನಾರ್ಹವಾದುದು.

ದೇವರೆಂದರೆ ಅದೊಂದು ಅಚಲ ನಂಬಿಕೆ. ಚರಾಚರಗಳಲ್ಲೂ ತಾನು ವ್ಯಾಪಿಸಿರುವ ಸರ್ವೋತ್ತಮ ಗುಣ ಎಲ್ಲಾ ಧರ್ಮಗಳನ್ನು ಕಾಯುತ್ತಿದೆ. ನಾವು ಅದನ್ನು ಅಣುವಾಗಿ, ಮಾಯೆಯಾಗಿ ಅರಿತಿದ್ದೇವೆ. ಈಶ್ವರ ಸಣಕಲ್ಲ ಅವರು 'ದೇವ ಮಹಿಮೆಯು' ಎಂಬ ಕವಿತೆಯಲ್ಲಿ ಚಿಕ್ಕಚಿಕ್ಕ ವಸ್ತುಗಳಲ್ಲಿಯೂ ಲೆಕ್ಕದಾಚೆ ಶಕ್ತಿಯಿಟ್ಟು ನೀನು ಈ ಜೀವಿಗಳಿಗೆ ಪ್ರೀತಿ ತೋರಿಸುತ್ತಿರುವೆ, ಈ ಜೀವಿಗಳಿಂದ ಪೂಜ್ಯನಾಗಿರುವೆ ಎನ್ನುತ್ತಾರೆ. ಅದು ಹೇಗೆಂದರೆ ಕಣ್ಣು ಸಣ್ಣದಾದರೂ ಕಾಣುವ ನೋಟವು, ಕಿವಿಯು ಚಿಕ್ಕದಾದರೂ ಕೇಳುವ ಧ್ವನಿ, ರಸನೆ ದೊಡ್ಡದಲ್ಲದಿದ್ದರೂ ಸವಿಯುವ ರಸವು ಜಗತ್ತಿನ ವ್ಯಾಪಕ ಶಕ್ತಿಗಳೇ ಆಗಿವೆ ಎನ್ನುತ್ತಾರೆ. ಈ ವಿಚಾರವು ಅದೆಷ್ಟು ವಾಸ್ತವ, ವೈಜ್ಞಾನಿಕ ಎಂಬುದನ್ನು ನಾವು ತಿಳಿಯಬಹುದು.

'ಸಿಗಬಾರದೇ' ಕವಿತೆಯಲ್ಲಿ ಕನ್ನಡ ಭಾಷೆಯ ಅಂದಿನ ಸ್ಥಿತಿಯನ್ನು ಸರಳವಾಗಿ ಚಿತ್ರಿಸಿದ್ದಾರೆ. ಕನ್ನಡ ಸೇವೆಗೆ ಎಚ್ಚರಗೊಳಿಸಲು ವಾಸ್ತವ ಸ್ಥಿತಿಯನ್ನು ಕವಿತೆಯಲ್ಲಿ ಚರ್ಚಿಸಿದ್ದಾರೆ. ಪ್ರಕೃತಿಯ ವಿವಿಧ ಕಥೆಯ ಚಿತ್ರಣಗಳ ಮೂಲಕ ಮನಸ್ಸಿನ ಭಾವದ ಸಂದಿಗ್ಧತೆಯನ್ನು ಅನಾವರಣಗೊಳಿಸಿದ್ದಾರೆ.

‘ಅಮ್ಮಕನ್ನಡ ತಾಯಿ, ಸಡಗರದೊಳೋಲಾಡಿ
ಯೊಮ್ಮೆ ನೀ ನಲಿಯುತ್ತ ಬೆಡಗುಗೊಳಿಸಿರ್ದ ಮನೆ
ಎಮ್ಮ ಕರ್ನಾಟಕವು ಅಡವಿ ಪಾಲಾಗಿಹುದು
ತಾನೊಡೆದು ಕಳಚಿ ಬಿದ್ದು
ಸುಮ್ಮನಿರದಿರಲೆ ನಿನ್ನ ಮಕ್ಕಳೆಲ್ಲೊಡಗೂಡಿ
ಹೆಮ್ಮೆಯಿಂದೇಳುತ್ತೆ ಬಿದ್ದಿರುವ ಮನೆಗಟ್ಟು
ತುಮ್ಮಳದಿ ನಿನ್ನನುಳಿಸುವದನ್ನು ಕಾಣ್ವದಿನ
ಎನಗಿಂದು ಸಿಗಬಾರದೇ?

ಕರ್ನಾಟಕದ ವಾಸ್ತವ ಸ್ಥಿತಿಯನ್ನು ಚಿತ್ರಿಸುತ್ತಲೇ ತಮ್ಮ ಜವಾಬ್ದಾರಿಯನ್ನು ತೆರೆದಿಟ್ಟಿದ್ದಾರೆ. ತಾವು ಬದುಕಿರುವ ವೇಳೆಗೆ ಕರ್ನಾಟಕವು ಹಾಗೂ ಕನ್ನಡವು ಅತ್ಯಂತ ಶಕ್ತಿಶಾಲಿಯಾಗಿ ಬೆಳೆದ ಪರಿಪೂರ್ಣ ಚಿತ್ರಣವನ್ನು ಕಂಡರು. ಕವಿಯು ಸಮಾಜದ ಎಲ್ಲರ ಪ್ರತಿನಿಧಿ. ಎಲ್ಲರೂ ಮಲಗಿದ್ದರೂ ಕವಿ ಎಚ್ಚರವಿದ್ದು ಸಮಾಜದ ಅನ್ಯಾಯಗಳ ಕಡೆ ಕಿವಿ ನೀಡಬೇಕೆಂದು ತಮ್ಮ ಜವಾಬ್ದಾರಿಯನ್ನು 'ನನ್ನ ಬರೆ' ಕವಿತೆಯಲ್ಲಿ ಸರಳವಾಗಿ ಚರ್ಚಿಸಿದ್ದಾರೆ.

ಈಶ್ವರ ಸಣಕಲ್ಲ ಅವರು ಬರೆದುದೆಲ್ಲಾ ಕವಿತೆಯ ಸ್ವರೂಪ ಪಡೆದಿದೆ ಎಂದು ಹೇಳಲಾಗದು. ಕೆಲವು ಕವಿತೆಗಳು ಪ್ರಾಯೋಗಿಕ ಹಂತದ ಬರಹಗಳಂತಿದ್ದರೆ, ಕೆಲವು ಕವಿತೆಯ ಸ್ವರೂಪದಿಂದಲೇ ಆಚೆ ಇವೆ. ಈ ಕೆಲವು ಮಿತಿಗಳ ನಡುವೆಯೂ ಅತ್ಯುತ್ತಮ ಕವಿತೆಗಳನ್ನು ನೀಡಿರುವುದು ಕವಿ ಜಗತ್ತಿಗೆ ಅರ್ಥಪೂರ್ಣ. ಬೇಂದ್ರೆಯವರು ಹೇಳುವಂತೆ ಕವಿಯಾಗಲು ಎಷ್ಟು ಬರೆದರೂ ಎನ್ನುವುದಕ್ಕಿಂತ ಅತ್ಯುತ್ತಮವಾದ ಒಂದು ಕವಿತೆಯೂ ಶ್ರೇಷ್ಠತೆಯನ್ನು ತಂದು ಕೊಡುತ್ತದೆ.

‘ಅನುಭವವೇ ಪ್ರಮಾಣ’ ಎಂಬ ಮಧ್ವಾಚಾರ್ಯರ ನುಡಿಯಂತೆ ಜೀವನವನ್ನು ಅನುಭವಿಸಿಯೇ ಗ್ರಹಿಸಬೇಕು. ಸಾಹಿತ್ಯ ಮತ್ತು ಸಾಹಿತಿಗಳ ಬದುಕು ಅನುಭವ ಪ್ರಮಾಣವಾದದ್ದು. ಈ ರೀತಿಯಲ್ಲಿ ಈಶ್ವರ ಸಣಕಲ್ಲ ಅವರ ಬದುಕು ಕೂಡ ಅನುಭವಪ್ರಧಾನವಾದದ್ದು. ಅವರು ರಚಿಸಿರುವ ಸಾಹಿತ್ಯ ಕೃತಿಗಳು ಸಮಕಾಲೀನ ಸಾಹಿತಿಗಳ ನುಡಿಗಳು, ಕುಟುಂಬದವರ ಅಭಿಪ್ರಾಯಗಳನ್ನು ಗ್ರಹಿಸಿದಾಗ ಈಶ್ವರ ಸಣಕಲ್ಲ ಅವರ ಬದುಕು ಈಗಲೂ ಕಣ್ಣ ಮುಂದೆ ಬರುತ್ತದೆ. ಈ ದೃಷ್ಟಿಯಿಂದ ಅವರ ಸಾಹಿತ್ಯದ ಮರು ಓದಿನ ಅಗತ್ಯವಿದೆ. ಇದುವರೆಗೂ ಎಲ್ಲರಿಗೂ

ಲಭ್ಯವಿರುವ 'ಕೋರಿಕೆ' ಕವನ ಸಂಕಲನವನ್ನು ಅದರ ಕೆಲವು ಕವಿತೆಗಳ ಮೂಲಕ ಅವರ ಬದುಕನ್ನು ಸರಳವಾಗಿ ತೆರೆದಿಟ್ಟಿದ್ದೇನೆ. ಉಳಿದ ಕೃತಿಗಳೂ ಕೂಡ ಮರುಮುದ್ರಣಗೊಂಡು ಸಮಗ್ರರೂಪದಲ್ಲಿ ಜನರಿಗೆ ಲಭ್ಯವಾದರೆ ಈಶ್ವರ ಸಣಕಲ್ಲ ಎಂಬ ಮಹತ್ವದ ಸ್ವಾಭಿಮಾನಿ ಬರಹಗಾರನ ಮೂಲಕವೂ ವಾಸ್ತವ ಜಗತ್ತನ್ನು ಗ್ರಹಿಸಬಹುದು.

**ಪರಾಮರ್ಶನ ಗ್ರಂಥಗಳು**


1. ಕೋರಿಕೆ : ಈಶ್ವರ ಸಣಕಲ್ಲ : 1934 : ಪ್ರಕಾಶಕರು, ರಾ॥ ಸಾ॥ ಫ.ಗು. ಹಳಕಟ್ಟಿ, ವಿಜಾಪುರ.
2. ಕನ್ನಡದ ಪೋಷಕರು : ಜಿ.ಡಿ. ಜೋಶಿ : 2005 : ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

# ಹೆಗ್ಗೋಡಿಗೆ ಕೋಡು ಮೂಡಿಸಿದ ಕೆ.ವಿ. ಸುಬ್ಬಣ್ಣ

* ಡಾ. ಚನ್ನೇಶ್ ಹೊನ್ನಾಳಿ

1991ರಲ್ಲಿ 'ಪತ್ರಿಕೋದ್ಯಮ, ಸಾಹಿತ್ಯ ಮತ್ತು ಸೃಜನಾತ್ಮಕ ಸಂವಹನ' ಕ್ಷೇತ್ರದಲ್ಲಿ ಮಾಡಿದ ಸಾಧನೆಗಾಗಿ ಏಷ್ಯಾದ ನೊಬೆಲ್ ಎಂದೇ ಪರಿಗಣಿತವಾದ ರೇಮನ್ ಮ್ಯಾಗ್ಸೇಸೆ ಪ್ರಶಸ್ತಿ ಪಡೆದ ಅಸಾಮಾನ್ಯ ಸಾಧಕರು ಕುಂಟಗೋಡು ವಿಭೂತಿ ಸುಬ್ಬಣ್ಣನವರು. ಸಾಗರ ತಾಲ್ಲೂಕಿನ ಮುಂಡಿಗೆಸರ ಒಂದು ಹಳ್ಳಿ. ಅಲ್ಲಿನ ಸಾಮಾನ್ಯ ರೈತಾಪಿ ಕುಟುಂಬದಿಂದ ಬಂದವರು. ಕೆ.ವಿ. ರಾಮಪ್ಪ ಹಾಗೂ ಸಾವಿತ್ರಮ್ಮ ದಂಪತಿಗಳಿಗೆ ಫೆಬ್ರವರಿ 20, 1932ರಲ್ಲಿ ಹುಟ್ಟಿದ ಅವರು ಹೆಗ್ಗೋಡು, ಭೀಮನ ಕೋಣೆ ಮತ್ತು ಸಾಗರಗಳಲ್ಲಿ ಕ್ರಮವಾಗಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲಾ ವಿದ್ಯಾಭ್ಯಾಸ ಪಡೆಯುತ್ತಾರೆ. ಮುಂದೆ ಶಿವಮೊಗ್ಗದಲ್ಲಿ ಇಂಟರ್ ಮೀಡಿಯೆಟ್ ಹಾಗೂ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಥಮ ರ್‍ಯಾಂಕ್‌ನೊಂದಿಗೆ ಬಿ.ಎ. ಪದವಿ ಪಡೆಯುತ್ತಾರೆ. ಮೈಸೂರಿನಲ್ಲಿ ಅವರ ಸಾಹಿತ್ಯಕ ಗೆಳೆಯರೆಂದರೆ ಯು.ಆರ್. ಅನಂತಮೂರ್ತಿಯವರು. ವಿದ್ಯಾಭ್ಯಾಸ ಮುಗಿಸಿ ಬಂದ ಅವರಿಗೆ ಸುಲಭವಾಗಿ ಸಿಗುತ್ತಿದ್ದ ಸರ್ಕಾರಿ ನೌಕರಿಯನ್ನು ಬಿಟ್ಟು ವಂಶಪಾರಂಪರ್ಯವಾಗಿ ಬಂದ ಕೃಷಿಯನ್ನು ಆಯ್ಕೆ ಮಾಡಿಕೊಂಡದ್ದು ಮುಂದಿನ ಅವರ ರಂಗಸಂಸ್ಕೃತಿಯ ಚಟುವಟಿಕೆಗಳಿಗೆ ನಾಂದಿಯಾಯಿತು. ಇದರೊಂದಿಗೆ ವಿದ್ಯಾವಂತ ಯುವಕರೆಲ್ಲ ಹಳ್ಳಿಗಳಿಗೆ ಹಿಂದಿರುಗಿ ಎಂಬ ಗಾಂಧಿಜೀಯವರ ಕರೆಯನ್ನೂ ಪಾಲಿಸಿದಂತಾಯಿತು. ಮುಂದಿನ ಅವರ ಎಲ್ಲಾ ಚಟುವಟಿಕೆಗಳಿಗೆ ಹೆಗ್ಗೋಡನ್ನು ಕೇಂದ್ರವನ್ನಾಗಿ ಮಾಡಿಕೊಂಡರು. ನಂತರದ ಅವರ ಚಟುವಟಿಕೆಗಳಲ್ಲವೂ ಗ್ರಾಮ ಕೇಂದ್ರಿತವಾದಲ್ಲದೆ ಅವರನ್ನು ಗ್ರಾಮ ಗಾಂಧಿಯನ್ನಾಗಿಸಿದವು. ಮೂಲತಃ ಕೃಷಿಕರಾದ ಸುಬ್ಬಣ್ಣನವರು ತಮ್ಮನ್ನು ಜಪಾನಿನ ರೈತ ತತ್ವಜ್ಞಾನಿ ಫುಕುವೋಕಾನಿಗೆ ಹೋಲಿಸಿಕೊಳ್ಳುತ್ತಾರೆ. ರೈತರೆಂದು ಹೇಳಿಕೊಳ್ಳುವುದೇ ಅವರಿಗೆ ಅಪ್ಯಾಯಮಾನವಾಗಿದೆ. ಫುಕುವೋಕನಿಗೆ ಬೇಸಾಯ ವೃತ್ತಿಯಲ್ಲ; ಅದೇ ರೀತಿ ಸುಬ್ಬಣ್ಣನವರಿಗೆ ರಂಗ ಚಟುವಟಿಕೆಗಳು ವೃತ್ತಿಯಲ್ಲ.

ಸುಬ್ಬಣ್ಣನವರಷ್ಟೇ ಅಲ್ಲ ಹೆಗ್ಗೋಡು ಭಾಗದ ಜನರೆಲ್ಲರದೂ ಇದೇ ಅಭಿಪ್ರಾಯ. ರೈತಾಪಿ ಕೆಲಸ ಮಾಡುತ್ತಲೇ ಯಕ್ಷಗಾನ, ರಂಗಭೂಮಿ ಮೊದಲಾದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಇದಕ್ಕೆ ಸರಿಯಾಗಿ ಮಲೆನಾಡಿನ ಈ ಭಾಗದಲ್ಲಿ ಪ್ರಧಾನ ಬೆಳೆ ಅಡಕೆ. ಅಡಕೆಯ ಕೃಷಿಗೆ ವರ್ಷದಲ್ಲಿ ಹೆಚ್ಚು ಬಿಡುವು ಸಿಗುವುದು ಕೂಡಾ ಅವರ ಕಲಾಚಟುವಟಿಕೆಗಳಿಗೆ ಇಂಬುಕೊಟ್ಟದೆ.

ಸುಬ್ಬಣ್ಣನವರು ತಮ್ಮ ಸುತ್ತಲಿನ ಸಮುದಾಯಕ್ಕೆ ವಿಶೇಷ ಮನ್ನಣೆ ನೀಡುತ್ತಾರೆ. 'ಸಮುದಾಯದೊಳಗೊಬ್ಬ ನಾನು' ಎಂದು ತಿಳಿಯುವ ಅವರಿಗೆ ಸಮುದಾಯವೇ ಪರಮ ಗುರುವಾಗಿದೆ. ಕಲಿಯುತ್ತಾ, ಕಲಿಸುತ್ತಾ ಹೋಗುವ ಗರಡಿಯಾಗಿದೆ ಸಮುದಾಯ. ಸಮುದಾಯದ ಬಗ್ಗೆ ಇಂಥ ಆರೋಗ್ಯಕರ ಭಾವನೆಯೇ ಅವರ ಎಲ್ಲಾ ರೀತಿಯ ರಂಗ ಚಟುವಟಿಕೆಗಳಿಗೆ ಪೂರಕವಾಗಿದೆ, ಹಾಗಾಗಿಯೇ ನೀನಾಸಂ ಎಂದರೆ ಕೇವಲ ಸುಬ್ಬಣ್ಣ ಒಬ್ಬರಲ್ಲ, ನೀನಾಸಂನ ಚಾಲಕ ಶಕ್ತಿ ಮಾತ್ರ ಸುಬ್ಬಣ್ಣನವರು. ಅದರ ಪ್ರೇರಕರೂ, ಪೋಷಕರು, ಹೆಗ್ಗೋಡಿನ ಸಮುದಾಯವೇ. ಹಾಗಾಗಿಯೇ 'ರಂಗಭೂಮಿ ಮತ್ತು ಸಮುದಾಯ' ಕೃತಿಯಲ್ಲಿ ಸುಬ್ಬಣ್ಣನವರು ಸಮುದಾಯದಿಂದ ಹೊರತಾದ ರಂಗಭೂಮಿಯನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ ಎನ್ನುತ್ತಾರೆ. ಅತ್ಯುತ್ತಮ ರಂಗಸಂಘಟಕರು, ನಿರ್ದೇಶಕರೂ ಆದ ಸುಬ್ಬಣ್ಣನವರ ವ್ಯಕ್ತಿತ್ವ ರೂಪಿಸಿದವರಲ್ಲಿ ಗಾಂಧೀಜಿ, ಲೋಹಿಯಾ, ಶಾಂತವೇರಿ ಗೋಪಾಲಗೌಡ, ಯು.ಆರ್. ಅನಂತಮೂರ್ತಿ ಹಾಗೂ ಕುಟುಂಬದ ಹಿರಿಯರು ಮುಖ್ಯರು. ವಿದ್ಯಾರ್ಥಿ ದೆಸೆಯ ಗುರುಗಳಾದ ಕುವೆಂಪು, ನೀನಾಸಂನ ಪೋಷಕ ಶಕ್ತಿಯಾದ ಶಿವರಾಮ ಕಾರಂತರೂ ಸಾಕಷ್ಟು ಪ್ರಭಾವ ಬೀರಿದ್ದಾರೆ.

ಗಾಂಧೀಜಿಯವರ ಸರಳತೆ, ವಿಕೇಂದ್ರೀಕರಣ, ಖಾದಿ ಗ್ರಾಮೋದ್ಯೋಗ, ಯುವಕರು ಹಳ್ಳಿಗಳಿಗೆ ಮರಳುವುದು; ಲೋಹಿಯಾ ಅವರ ಸಮಾಜವಾದಿ, ಪ್ರಜಾಪ್ರಭುತ್ವವಾದಿ ಆಧುನಿಕ ಚಿಂತನೆಗಳು; ಗೋಪಾಲಗೌಡರ ರಾಜಕೀಯ ಪ್ರಜ್ಞೆ, ಸಮಾನತೆ, ಸ್ಪಷ್ಟತೆ; ಅನಂತಮೂರ್ತಿಯವರ ಸಾಹಿತ್ಯವನ್ನು ಗ್ರಹಿಸುವ, ಅರ್ಥೈಸುವ ಚಿಂತನೆಗಳು; ಸಹಜವಾಗಿಯೇ ಬಂದ ತಂದೆ ಕೆ.ವಿ. ರಾಮಪ್ಪನವರ ನಾಟಕಾಸಕ್ತಿ, ತಾಯಿಯ ಸಾಹಿತ್ಯಾಸಕ್ತಿ, ದೊಡ್ಡಮ್ಮನವರ ಮರುವಿವಾಹದಂಥ ಪ್ರಗತಿಪರ ಆದರ್ಶಗಳು ಸುಬ್ಬಣ್ಣನವರನ್ನು ರೂಪಿಸಿವೆ. ಈ ಎಲ್ಲಾ ಪ್ರಭಾವ, ಪ್ರೇರಣೆಗಳು ಅವರನ್ನೊಬ್ಬ ಪ್ರಗತಿಪರರನ್ನಾಗಿ ಮಾಡಿವೆ. ಜೊತೆಗೆ ಎಲ್ಲಾ ಸಂಸ್ಕೃತಿಗಳ

ವಿಚಾರಗಳನ್ನು ತೆರೆದ ಮನಸ್ಸಿನಿಂದ ಒಪ್ಪಿಕೊಳ್ಳುವ, ತನಗನ್ನಿಸಿದ್ದನ್ನು ನೇರವಾಗಿ ಹೇಳುವ, ಭಿನ್ನವಾಗಿ ಅಲೋಚಿಸುವುದಕ್ಕೆ ಅವರನ್ನು ಸಿದ್ಧಗೊಳಿಸಿದವು. ಹೋರಾಟಗಾರರು, ಸಂಸ್ಕೃತಿ ಚಿಂತಕರು ಮತ್ತು ಪ್ರಗತಿಪರರಾದ ಸುಬ್ಬಣ್ಣನವರು ನಮ್ಮ ವೈಚಾರಿಕ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ತುಂಬಾ ಮುಖ್ಯರಾಗಲು ಕಾರಣ ಬಿಕ್ಕಟ್ಟುಗಳ ಸಂದರ್ಭಗಳಲ್ಲೆಲ್ಲಾ ಅವರು ತಳೆದ ನಿಲುವುಗಳು. ಸಾಗರದಲ್ಲಿ ಅಖಿಲ ಭಾರತ ಹವ್ಯಕ ಸಮ್ಮೇಳನ ನಡೆದಾಗ ಇಂಥ ಜಾತಿ ಸಮ್ಮೇಳನಗಳ ಅಗತ್ಯವಿಲ್ಲವೆಂದು ಕರಪತ್ರ ಹಂಚಿದ್ದು (1990), 1975ರ ತುರ್ತು ಪರಿಸ್ಥಿತಿಯನ್ನು ಪ್ರಬಲವಾಗಿ ವಿರೋಧಿಸಿದ್ದು, ಪೀಟರ್ ಬ್ರೂಕ್‌ನ ಮಹಾಭಾರತ ನಾಟಕವನ್ನು 'ಆಧುನಿಕ ಅಶ್ವಮೇಧ' ಎಂದು ಟೀಕಿಸಿದ್ದು (1990), 1984ರ ಸಿಖ್ ಹತ್ಯಾಕಾಂಡ, ಕಾಶ್ಮೀರದಲ್ಲಿನ ಹಿಂಸೆಯನ್ನು ಖಂಡಿಸಿದ್ದು, ಜಾಗೃತ ಸಾಹಿತ್ಯ ಸಮ್ಮೇಳನದಲ್ಲಿ ಶ್ರೇಷ್ಠತೆಯ ವ್ಯಸನದ ಬಗ್ಗೆ ಎಚ್ಚರಿಸಿದ್ದು (1990), ಸೌಂದರ್ಯ ಸ್ಪರ್ಧೆಯನ್ನು ಸಾಂಸ್ಕೃತಿಕ ಮತ್ತು ಆರ್ಥಿಕ ನೆಲೆಗಳಲ್ಲಿ ಸಕಾರಣವಾಗಿ ಪ್ರತಿಭಟಿಸಿದ್ದು (1996), ಅಡಕೆಬೆಳೆಗಾರರ ವಿರೋಧ ಕಟ್ಟಿಕೊಂಡೇ ಯುವ ಜನಾಂಗದ ಅಧಃಪತನಕ್ಕೆ ಕಾರಣವಾದ ಗುಟ್ಕಾ ಬಗ್ಗೆ ಬರೆದದ್ದು (1997), ಇವೆಲ್ಲವುಗಳನ್ನು ಗಮನಿಸಿದರೆ ಸುಬ್ಬಣ್ಣನವರ ಪ್ರಗತಿಪರವಾದ, ಸ್ಪಷ್ಟವಾದ ನಿಲುವುಗಳು ತಿಳಿಯುತ್ತವೆ. ಹವ್ಯಕ ಬ್ರಾಹ್ಮಣರಾಗಿದ್ದಾಗ್ಯೂ ಹವ್ಯಕ ಸಮ್ಮೇಳನವನ್ನು, ಅಡಕೆ ಬೆಳೆಗಾರರಾಗಿಯೂ ಗುಟ್ಕಾ ಸಂಸ್ಕೃತಿ ವಿರೋಧಿಸಿದ್ದನ್ನು ಗಮನಿಸಿದರೆ ಸುಬ್ಬಣ್ಣನವರಿಗೆ 'ವೈಯಕ್ತಿಕವಾದ ಹಿತಕ್ಕಿಂತಲೂ ಸಮುದಾಯದ, ಆ ಮೂಲಕ ರಾಷ್ಟ್ರದ ಹಿತ ಮುಖ್ಯ'ವೆಂಬುದು ತಿಳಿಯುತ್ತದೆ.

"ಜಾಗತೀಕರಣದ ವಿರುದ್ಧವಾಗಿಯೂ ವ್ಯಕ್ತಿ, ಸಂಸ್ಥೆ, ಸಮುದಾಯಗಳು ಕೆಲಸ ಮಾಡಬೇಕಾದ ಇವತ್ತಿನ ಸಂದರ್ಭಗಳಲ್ಲಿ 'ಹೆಗ್ಗೋಡು' ಅದಕ್ಕೊಂದು ಉದಾಹರಣೆಯಾಗಿದೆ" ಎನ್ನುತ್ತಾರಲ್ಲದೆ "ಈ ರೀತಿ ಮಾಡುವುದರಿಂದ ಜಾಗತೀಕರಣದ ಅಪಾಯದಿಂದ ತಪ್ಪಿಸಿಕೊಳ್ಳಲಿಕ್ಕೆ ಸಾಧ್ಯವಿದೆ" ಎಂಬ ಅಭಿಪ್ರಾಯ ಸುಬ್ಬಣ್ಣನವರದು.

ಓದುವ ಸಾಹಿತ್ಯ ಕೃತಿಯಾಗಿಯೂ, ನೋಡುವ ರಂಗಕೃತಿಯಾಗಿಯೂ ಏಕ ಕಾಲದಲ್ಲಿ ತೋರುವ ನಾಟಕ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ. ಮನರಂಜನೆಯೊದಗಿಸುವುದರ ಜೊತೆಗೆ ಸಾಮಾಜಿಕ ಮತ್ತು ಸಾಂಸ್ಕೃತಿಕ

ಎಚ್ಚರವನ್ನು ಮೂಡಿಸುವ ಕಾರ್ಯವನ್ನು ರಂಗಭೂಮಿ ಸಾಮಾಜಿಕವಾಗಿ ಮಾಡುತ್ತದೆ. ಸಾಮಾಜಿಕ ಜವಾಬ್ದಾರಿಯನ್ನು ಪೂರೈಸುವುದರೊಂದಿಗೆ ರಾಜಕೀಯ ಪ್ರಜ್ಞೆಯನ್ನು ಮೂಡಿಸುವ ಕೆಲಸವನ್ನೂ ರಂಗಭೂಮಿ ಮಾಡುತ್ತದೆ. ಸಮೂಹ ಮಾಧ್ಯಮಗಳಲ್ಲಿಯೇ ಪ್ರಬಲ ಮಾಧ್ಯಮವಾದ ರಂಗಭೂಮಿ ಸಮುದಾಯಕ್ಕೆ ಹತ್ತಿರವಾದ ಮತ್ತು ಸಮುದಾಯದ ಪರಿವರ್ತನೆಗೆ, ಚಲನಶೀಲತೆಗೆ ಸಮರ್ಥವಾದ ಮಾಧ್ಯಮವಾಗಿದೆ. ಇಂಥ ಮಾಧ್ಯಮವಾದ ರಂಗಭೂಮಿಯನ್ನು ಪ್ರಧಾನ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಸಣ್ಣಹಳ್ಳಿಯಾದ ಹೆಗ್ಗೋಡಿಗೆ ಅಂತರಾಷ್ಟ್ರೀಯ ಮನ್ನಣೆ ದೊರಕಿಸಿಕೊಟ್ಟವರು ಸುಬ್ಬಣ್ಣನವರು. ಹೆಗ್ಗೋಡಿಗೆ ಕೋಡು ಮೂಡಿಸಿದ ಹಿರಿಮೆ ಅವರದು.

ರಂಗಭೂಮಿಯ ಚಟುವಟಿಕೆಗಳಿಗೆ ಭಾರತದಲ್ಲಿ ಮೊದಲ ಸ್ಥಾನದಲ್ಲಿರುವುದು ಪಶ್ಚಿಮ ಬಂಗಾಳ, ಎರಡನೆಯದು ಮಹಾರಾಷ್ಟ್ರ, ನಂತರದ್ದೇ ನಮ್ಮ ಕರ್ನಾಟಕ. ಹೆಗ್ಗೋಡಿನ 'ನೀನಾಸಂ' ರಂಗಭೂಮಿಯ ಚಟುವಟಿಕೆಗಳಿಂದ ಪಟ್ಟಣ, ನಗರದವರು ಹಳ್ಳಿಯ ಕಡೆ ನೋಡುವಂತಾಯಿತು. ಕರ್ನಾಟಕದ ಒಟ್ಟು ರಂಗಚಟುವಟಿಕೆಗಳಲ್ಲಿ ನೀನಾಸಂನದ್ದು ಸಿಂಹಪಾಲು. ಈ ಕಾರಣದಿಂದಲೇ ರುಸ್ತಂ ಭರೂಚ ಹೇಳುವಂತೆ "ಹೆಗ್ಗೋಡು ಸಾಂಸ್ಕೃತಿಕ ಪರ್ಯಾಯ ಕೇಂದ್ರ, ಸುಬ್ಬಣ್ಣನವರು ಸಾಂಸ್ಕೃತಿಕ ಅನಿವಾರ್ಯ" ಆಗಿರುವುದು.

1949ರಲ್ಲಿ ಕೆ.ವಿ. ರಾಮಪ್ಪ ಮತ್ತು ಅನೇಕ ಗೆಳೆಯರಿಂದ ಹೆಗ್ಗೋಡಿನಲ್ಲಿ ಸ್ಥಾಪಿತವಾದ 'ಶ್ರೀ ನೀಲಕಂಠೇಶ್ವರ ನಾಟ್ಯ ಸೇವಾಸಂಘ' ಸುಬ್ಬಣ್ಣನವರು 1953ರಲ್ಲಿ ಅದರ ಸಾರಥ್ಯ ವಹಿಸಿದ ಮೇಲೆ ಅನೇಕ ಮೊದಲುಗಳಿಗೆ ಕಾರಣವಾದುದಲ್ಲದೆ ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತಾಯಿತು. ನೀನಾಸಂ ಎಂದರೆ ಸುಬಣ್ಣ, ಸುಬ್ಬಣ್ಣ ಎಂದರೆ ನೀನಾಸಂ ಎನ್ನುವಂತಾಯಿತು. ನೀನಾಸಂ ಚಲನಚಿತ್ರ ಸಮಾಜ (1973), ನೀನಾಸಂ ರಂಗಶಿಕ್ಷಣ ಕೇಂದ್ರ (1980), ನೀನಾಸಂ ತಿರುಗಾಟ (1985), ನೀನಾಸಂ ಸಂಸ್ಕೃತಿ ಶಿಬಿರ (1990), ನೀನಾಸಂ ಪ್ರತಿಷ್ಠಾನ ಅಧ್ಯಯನ ಶಿಬಿರ (1992) ಇತ್ಯಾದಿ ಯೋಜನೆಗಳನ್ನು ಹಾಕಿಕೊಂಡು ಯಶಸ್ವಿಯಾಗಿ ಕಾರ್ಯಗತಗೊಳಿಸಿದರು. ಇವುಗಳಲ್ಲಿ ರಂಗಶಿಕ್ಷಣ ಕೇಂದ್ರ ಹಾಗೂ ರೆಟ್ಟರಿ (ತಿರುಗಾಟ)ಗಳು ಕರ್ನಾಟಕದ ಮಟ್ಟಿಗೆ ಮೊದಲನೆಯವುಗಳಾಗಿವೆ. 1972ರಲ್ಲಿ ಹೆಗ್ಗೋಡಿನಲ್ಲಿ ನಿರ್ಮಾಣವಾದ 'ಶ್ರೀ ಶಿವರಾಮ ಕಾರಂತ ರಂಗಮಂದಿರ'

ಭಾರತದ ಮೊತ್ತ ಮೊದಲ ಗ್ರಾಮೀಣ ರಂಗಮಂದಿರವಾಗಿದೆ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ ಬಿಟ್ಟರೆ ರಂಗಚಟುವಟಿಕೆಗಳಿಗಾಗಿಯೇ ನಿರ್ಮಾಣಗೊಂಡ ಎರಡನೆಯ ರಂಗಮಂದಿರವಿದು. ಅದೇ ರೀತಿ 1973ರಲ್ಲಿ ಆರಂಭವಾದ ಚಿತ್ರಸಮಾಜ ಭಾರತದ ಮೊಟ್ಟ ಮೊದಲ ಗ್ರಾಮೀಣ ಚಿತ್ರಸಮಾಜವಾಗಿದೆ. ಚಿತ್ರ ಸಮಾಜದಲ್ಲಿ ಜಗತ್ತಿನ ಶ್ರೇಷ್ಠ ನಿರ್ದೇಶಕರಾದ ಬರ್ಗಮನ್, ಕುರೊಸವ, ಸತ್ಯಜಿತ್‌ರಾಯ್, ಮೊದಲಾದವರ ಚಿತ್ರಗಳನ್ನು ಸಾಮಾನ್ಯ ಜನರಿಗೆ ತೋರಿಸಿ ಅವರಲ್ಲಿ ಚಲನಚಿತ್ರ ಸದಭಿರುಚಿ ಮೂಡಿಸಿದ್ದು ಗಮನಿಸಬೇಕಾಗಿದೆ.

1957ರಲ್ಲಿ ಸ್ಥಾಪಿಸಿದ 'ಅಕ್ಷರ ಪ್ರಕಾಶನ' ಇಂದು ಕರ್ನಾಟಕದಲ್ಲಿ ಶ್ರೇಷ್ಠ ಪ್ರಕಾಶನವೆಂದು ಹೆಸರಾಗಿದೆ. ಈವರೆಗೆ ಸುಮಾರು 800 ಕ್ಕಿಂತಲೂ ಹೆಚ್ಚು ಕೃತಿಗಳನ್ನು ಹೊರತಂದಿದೆ. 1986ರಲ್ಲಿ ರಂಗಭೂಮಿ ಹಾಗೂ ನೀನಾಸಂನ ಚಟುವಟಿಕೆಗಳನ್ನು ತಿಳಿಸಲು ಆರಂಭವಾದದ್ದೇ 'ನೀನಾಸಂ ಮಾತುಕತೆ' ಎಂಬ ತ್ರೈಮಾಸಿಕ ಪತ್ರಿಕೆ. ಹೀಗೆ ನೀನಾಸಂನ ಪ್ರತಿ ಹೆಜ್ಜೆಯಲ್ಲೂ ಸುಬ್ಬಣ್ಣನವರ ಕ್ರಿಯಾಶೀಲತೆಯನ್ನು ಕಾಣಬಹುದಾಗಿದೆ.

ಸುಬ್ಬಣ್ಣನವರು ರಂಗ ಸಂಘಟನೆ ಮಾಡಿದಂತೆ ನಿರ್ದೇಶಕರಾಗಿ, ನಾಟಕದ ಕರ್ತೃಗಳಾಗಿ, ಸಂಸ್ಕೃತಿ ಚಿಂತಕರಾಗಿ, ವಿಮರ್ಶಕರಾಗಿಯೂ ಹೆಸರು ಮಾಡಿದ್ದಾರೆ. 1968ರಿಂದ 1980ರವರೆಗೆ ಅವರು ಒಟ್ಟು 14 ನಾಟಕಗಳನ್ನು ನಿರ್ದೇಶಿಸಿದ್ದಾರೆ. 'ಆ ಮನಿ', 'ಮೃಚ್ಛಕಟಿಕ', 'ಸಂಗ್ಯಾಬಾಳ್ಯಾ', 'ಲೋಕ ಶಾಕುಂತಲಾ', 'ಸಿರಿಸಂಪಿಗೆ' ಅವರ ನಿರ್ದೇಶನದ ಕೆಲವು ನಾಟಕಗಳು. ಸಂಸ್ಕೃತದ ಧನಂಜಯನ 'ದಶರೂಪಕ' ಹಾಗೂ ರಷ್ಯಾದ ರಂಗತಜ್ಞ ಕೊನ್‌ಸ್ತಾಂತಿನ್ ಸ್ತಾನಿಸ್ಲಾವ್‌ಸ್ಕಿಯ 'AN ACTOR PREPARES' ಗ್ರಂಥವನ್ನು 'ರಂಗದಲ್ಲಿ ಅಂತರಂಗ' ಎಂಬುದಾಗಿ ಅನುವಾದಿಸಿದ್ದಾರೆ. ರಂಗಭೂಮಿಯ ಪ್ರವೇಶಕ್ಕೆ ಅಗತ್ಯವಾದ ಆದ್ಯ ಗ್ರಂಥಗಳಿವು.

'ಅಭಿಸಾರ', 'ಕಾಡಿನಲ್ಲಿ ಕಥೆ', 'ಬೆಟ್ಟಕ್ಕೆ ಚಳಿಯಾದರೆ', 'ಜಯಂಟ್ ಮಾಮ' ಸ್ವತಂತ್ರ ನಾಟಕಗಳಾದರೆ 'ಸೆಜುವಾನ್ ನಗರದ ಸಾಧ್ವಿ', (THE GOOD WOMAN OF SETZUAN) 'ತಾಯಿ' (MOTHER), 'ಮೂರುಕಾಸಿನ ಸಂಗೀತ ನಾಟಕ' (THREE PENNY OPERA) [ಈ ಮೂರು ನಾಟಕಗಳು ಬರ್ಟೋಲ್ಟ್ ಬ್ರೆಕ್ಟನವು). 'ಅಥೆನ್ಸಿನ ಅರ್ಥವಂತ', ಮೊದಲಾದವುಗಳನ್ನು

ಇಂಗ್ಲಿಷಿನಿಂದ ಅನುವಾದಿಸಿದ್ದಾರೆ. ಭಾಸನ 'ಊರುಭಂಗ', ಮಹೇಂದ್ರ ವಿಕ್ರಮವರ್ಮನ 'ಭಗವದಜ್ಜುಕೀಯಂ' ಮೊದಲಾದವುಗಳನ್ನು ಸಂಸ್ಕೃತದಿಂದ ಅನುವಾದಿಸಿದ್ದಾರೆ.

'ಭಗವದಜ್ಜುಕೀಯಂ' ನಾಟಕವನ್ನು 'ಸೂಳೆ ಸನ್ಯಾಸಿ'ಯಾಗಿ ಹಾಗೂ ನಿಖೊಲಾಯ್ ಗೊಗೊಲ್ ಅವರ ಇಂಗ್ಲಿಷ್‌ನ INSPECTOR GENERAL OR GOVERNMENT GERNERAL ನಾಟಕವನ್ನು 'ಸಾಹೇಬರು ಬರುತ್ತಾರೆ' ಎಂಬುದಾಗಿ ರೂಪಾಂತರಿಸಿದ್ದಾರೆ. ಶಿವರಾಮ ಕಾರಂತರ 'ಚೋಮನ ದುಡಿ', ಪೂರ್ಣಚಂದ್ರ ತೇಜಸ್ವಿಯವರ 'ಕಿರಗೂರಿನ ಗಯ್ಯಾಳಿಗಳು' ಸೇರಿದಂತೆ ಅನೇಕ ಕೃತಿಗಳನ್ನು ರಂಗಪ್ರಯೋಗ ಪಠ್ಯ ಮಾಡಿದ್ದಾರೆ.

ಸುಬ್ಬಣ್ಣನವರು 1954ರಿಂದ 2004ರವರೆಗೆ ಸುಮಾರು 40ಕ್ಕಿಂತ ಹೆಚ್ಚು ಸಂಸ್ಕೃತಿ ಚಿಂತನ ಲೇಖನಗಳನ್ನು ಬರೆದಿದ್ದಾರೆ. ಇವುಗಳನ್ನು ಅಭ್ಯಾಸಕ್ಕಾಗಿ ಸಾಂಸ್ಕೃತಿಕ, ಸಾಮಾಜಿಕ ಮತ್ತು ರಾಜಕೀಯ ಎಂದು ಮೂರು ಬಗೆಯಾಗಿ ವಿಂಗಡಿಸಿಕೊಳ್ಳಬಹುದಾಗಿದೆ. ಶ್ರೇಷ್ಠತೆಯ ವ್ಯಸನ, ನವವಸಾಹತುಶಾಹಿ ಆಕ್ರಮಣ, ಸೌಂದರ್ಯ ಸ್ಪರ್ಧೆಯನ್ನು ಪ್ರತಿಭಟಿಸುವುದೇತಕ್ಕೆ (ಸಾಂಸ್ಕೃತಿಕ) ಹವ್ಯಕ ಸಮ್ಮೇಳನ ಒಂದು ಹೇಳಿಕೆ, ಭೂತದ ಸವಾಲಿಗೆ ನಮ್ಮ ಜವಾಬು, ಜಾತಿ ಪದ್ಧತಿಯನ್ನು ಕುರಿತು, ಅಡಕೆಯ ಮಾನ (ಸಾಮಾಜಿಕ), ಪಂಚಾಯತ್ ರಾಜ್ಯದ ಎಳೆಕುಡಿಗೆ ಕೊಡಲಿಯೇಟು, ಬಸವಲಿಂಗಪ್ಪನವರಿಗೆ ಬಹಿರಂಗ ಪತ್ರ (ರಾಜಕೀಯ) ಮೊದಲಾದವುಗಳು ಚಿಂತನಾರ್ಹ ಲೇಖನಗಳಾಗಿವೆ. 'ಕುವೆಂಪುಗೆ ಪುಟ್ಟಕನ್ನಡಿ', 'ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು' ಸುಬ್ಬಣ್ಣನವರ ಎರಡು ಶ್ರೇಷ್ಠ ವಿಮರ್ಶಾ ಸಂಕಲನಗಳು. 'ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ. ಕುವೆಂಪುರವರ 'ಕಾನೂರು ಹೆಗ್ಗಡಿತಿ', 'ಶ್ರೀರಾಮಾಯಣ ದರ್ಶನಂ' ಹಾಗೂ 'ಮಲೆಗಳಲ್ಲಿ ಮದುಮಗಳು' ಮತ್ತು ಅನಂತಮೂರ್ತಿಯವರ 'ಸಂಸ್ಕಾರ', 'ಭಾರತೀಪುರ', 'ಅವಸ್ಥೆ' ಕೃತಿಗಳನ್ನು ಕುರಿತ ಅವರ ಒಳನೋಟಗಳು ವಿಶೇಷವಾಗಿವೆ. ಕವಿರಾಜಮಾರ್ಗ ಕೃತಿ ಕುರಿತ ಅವರ ವಿಶ್ಲೇಷಣೆಯಂತೂ ಅದನ್ನು ಕನ್ನಡದ ಅನನ್ಯ ಕೃತಿಯನ್ನಾಗಿಸಿದೆ.

'ಚಲನಚಿತ್ರದ ಮಹಾನೌಕೆ', 'ಸಿನಿಮಾದ ದೂರ ಮತ್ತು ಸಮೀಪ ಚಿತ್ರಗಳು',. 'ಸಿನಿಮಾದ ಯಂತ್ರ ಭಾಷೆ' ಮೊದಲಾದವು ವಿಶ್ವದ ಚಲನಚಿತ್ರದ ಇತಿಹಾಸ, ಸಾಧನೆ

ಇತ್ಯಾದಿಗಳನ್ನು ತಿಳಿಸುವ ಮಹತ್ವದ ಕೃತಿಗಳಾಗಿವೆ. ಚಲನಚಿತ್ರ ಕುರಿತು ಕನ್ನಡದಲ್ಲಿ ಮೊದಲು ಬರೆದ ಹೆಗ್ಗಳಿಕೆಯೂ ಅವರಿಗೆ ಸಲ್ಲುತ್ತದೆ. ಹೀಗೆ ಕೃಷಿ, ರಂಗಭೂಮಿಯ ಸಂಘಟನೆ, ಚಿತ್ರಸಮಾಜ, ಸಂಸ್ಕೃತಿ ಶಿಬಿರ, ಪ್ರಕಾಶನ, ಲೇಖನ–ವಿಮರ್ಶಾ ಕೃಷಿ ಮೊದಲಾದವುಗಳಿಂದ ಕೂಡಿದ ಸುಬ್ಬಣ್ಣನವರದು ಒಂದು ರೀತಿಯ ವಿಸ್ಮಯ ಜಗತ್ತು. ಅವರ ಸುಮಾರು 60 ವರ್ಷಗಳ ಪ್ರಯೋಗಶೀಲ ಚಟುವಟಿಕೆಗಳಲ್ಲವೂ ಬೆರಗು ಮೂಡಿಸುವಂಥವುಗಳು. ರೈತಾಪಿ ಕುಟುಂಬದಲ್ಲಿ ಹುಟ್ಟಿ, ಗ್ರಾಮೀಣ ಭಾಗದಲ್ಲಿ ಬೆಳೆದು, ಗ್ರಾಮವನ್ನೇ ಕೇಂದ್ರವನ್ನಾಗಿ ಮಾಡಿಕೊಂಡು ವಿಶ್ವವೇ ಗಮನಿಸುವಂಥ ಸಾಧನೆ ಮಾಡಿದ್ದು ಸಾಧಾರಣ ಸಂಗತಿಯಲ್ಲ.

# ಚರಿತ್ರೆಯಲ್ಲಿ ಕಡಿದಷ್ಟು ಕುಡಿಯೊಡೆದ ಕುರನ್ಗ

* ಡಾ. ರವಿಕುಮಾರ್ ನೀಹ

ಚರಿತ್ರೆಯಲ್ಲಿ ಎಲ್ಲಿಯೂ ದಾಖಲಾಗದ ಕುರನ್ಗ ಜನಪದರಲ್ಲಿ ಈಗಲೂ ಜೀವಂತವಾಗಿದ್ದಾನೆ. ತುಮಕೂರು ಜಿಲ್ಲೆ ಕೊರಟಗೆರೆ ತಾಲೂಕಿನ ಬೂದಗವಿ (ಈಗಿನ ಸಿದ್ಧರಬೆಟ್ಟ) ಒಂದು ಸ್ವತಂತ್ರ ಪಾಳ್ಯಕಟ್ಟಾಗಿತ್ತೆಂದು ಅಲ್ಲಿನ ಸ್ಥಳೀಕರು ಹೇಳುತ್ತಾರೆ. ಅದರ ಸುತ್ತಲಿನಲ್ಲಿ ಅದಕ್ಕೆ ಪೂರಕವಾದ ಐತಿಹ್ಯಗಳು, ಸ್ಥಳಪುರಾಣಗಳು ಹೆಣೆದುಕೊಂಡಿವೆ. ಈಗಲೂ ಜೀವಂತವಾಗಿ ಉಸಿರಾಡುತ್ತಿರುವ 'ಕುರಂಕೋಟೆ' ಊರು ಕೊರಟಗೆರೆ ಭೌಗೋಳಿಕ ಪರಿಸರಕ್ಕೆ ಹೊಂದಿಕೊಂಡಂತೆ ಇದೆ. ಇಷ್ಟೆಲ್ಲ ಇದ್ದರೂ ಚರಿತ್ರೆಯಲ್ಲಿ ಮಾತ್ರ ಕುರನ್ಗನ ಸಣ್ಣ ವಿವರವೂ ದಾಖಲಾಗಿಲ್ಲ.

ಮುಖ್ಯ ಚರಿತ್ರೆಯ ಭಾಗದಲ್ಲಿ ಕಾಣಿಸಿಕೊಳ್ಳದ ಕುರನ್ಗ ಕಳೆದ ನಾಲ್ಕೈದು ದಶಕದಿಂದ ಪ್ರತಿ ಹತ್ತು ವರ್ಷಕ್ಕೊಮ್ಮೆ ಮುನ್ನೆಲೆಗೆ ಲಿಖಿತರೂಪದಲ್ಲಿ ಬರುತ್ತಲೇ ಇದ್ದಾನೆ. ಸಿಕ್ಕಿರುವ ಮಾಹಿತಿಯ ಹಿನ್ನೆಲೆಯಲ್ಲಿ 1973ನ್ನೂ ಆರಂಭಿಸಿಕೊಂಡು ಇಲ್ಲಿಯವರೆಗೂ ಕುರನ್ಗನ ಬಗೆಗೆ ಅಧ್ಯಯನ ಸಾಗುತ್ತಿದೆ. ಸರಿಸುಮಾರು ಐದು ದಶಕದಿಂದ ಮುನ್ನೆಲೆಗೆ ಬರುತ್ತಿರುವ ಕುರನ್ಗ ಈಗ ಹೆಚ್ಚು ಅಧ್ಯಯನದ ವಸ್ತುವಾಗುತ್ತಿದ್ದಾನೆ. ಚರಿತ್ರೆಯ ಒತ್ತಾಯವನ್ನು ಮಂಡಿಸುತ್ತಿದ್ದಾನೆ. ಈ ಹಿಂದಿಗಿಂತ ಇಂದು ಹೆಚ್ಚು ಚರ್ಚೆಗೆ ಒಳಗಾಗಲು ಕರ್ನಾಟಕದ ಸಾಂಸ್ಕೃತಿಕ ಚಾರಿತ್ರಿಕ ಸಂಘರ್ಷಗಳೇ ಕಾರಣವೆನಿಸುತ್ತದೆ. ಯಾಕೆಂದರೆ ತೊಂಭತ್ತರ ದಶಕದಿಂದ ಕನ್ನಡದ ವಿದ್ವತ್ ಜಗತ್ತು ಮತ್ತು ಶೋಧನೆಯ ದಿಕ್ಕು ವಿಭಿನ್ನ ತಿರುವನ್ನು ತೆಗೆದುಕೊಂಡಿತು. ಕರ್ನಾಟಕದ ಚಿಂತನಾವಲಯಕ್ಕೆ ವಿಭಿನ್ನ ಸಂಸ್ಕೃತಿ ಚಿಂತಕರು ಪ್ರವೇಶಿಸಿದ್ದು, ಜಾಗತೀಕರಣದ ಬಿಕ್ಕಟ್ಟುಗಳು, ದೇಸಿ ಚಿಂತನೆಯ ಒತ್ತಡಗಳು ಕುರನ್ಗನನ್ನು ಅಧ್ಯಯನದ ಮುನ್ನೆಲೆಗೆ ತಂದು ನಿಲ್ಲಿಸಿವೆ.

ಇಲ್ಲಿಯವರೆಗೂ ಬಂದಿರುವ ಮುಖ್ಯವಾಗಿ ಈ ಪ್ರದೇಶವನ್ನು ಒಳಗೊಂಡಂತೆ ಬಂದಿರುವ ಕೃತಿಗಳನ್ನು ಗಮನಿಸಿದರೆ ಮದ್ದಗಿರಿ ಚರಿತ್ರೆಯಾಗಲೀ, ಮೈಸೂರು

ಒಡೆಯರ ಚರಿತ್ರೆಯಾಗಲೀ, ಇತರ ಪಾಳ್ಯಗಾರರ ಚರಿತ್ರೆಯಲ್ಲಾಗಲೀ ಕುರಂಗರಾಜನ ಬಗೆಗೆ ಉಲ್ಲೇಖವಿಲ್ಲ. ಆ ಪ್ರಯತ್ನವನ್ನೂ ಪಟ್ಟಿಲ್ಲ.

ಹಾಗೆ ನೋಡಿದರೆ ಕುರನ್ಗನ ವಿವರವನ್ನು ಪ್ರಸ್ತಾಪಿಸಿರುವ ಕೃತಿಗಳೆಂದರೆ

1. ಸಿದ್ದಗಿರಿ ಇತಿಹಾಸ –ಎಂ ಎ ಸಿದ್ಧಪ್ಪ, 1973,
2. ತುಮಕೂರು ಜಿಲ್ಲಾ ದರ್ಶನ, ಸಂ: ಸಿ ಎನ್ ಭಾಸ್ಕರಪ್ಪ 1981
3. ಸಿದ್ದರಬೆಟ್ಟ ಒಂದು ದರ್ಶನ, ವೀಚಿ, 1991
4. ದೇವುಗಾನಿಕೆ : ಜನಪದ ಅಧ್ಯಯನ, ಪು.ಮು.ಗಂಗಾಧರಯ್ಯ, 2000
5. ಕುರಂಗರಾಜ ವೈಭವ, ಕಾದಂಬರಿ, ಡಾ.ಓ.ನಾಗರಾಜ್, 2010
6. ಸಿದ್ದರಬೆಟ್ಟ ಒಂದು ಸಾಂಸ್ಕೃತಿಕ ಅಧ್ಯಯನ, ಅಪ್ರಕಟಿತ ಪಿಎಚ್.ಡಿ ಅಧ್ಯಯನ, ಡಾ.ಬಿ ಆರ್ ಜಗದೀಶ್, 2012
7. ಕುರಂಗರಾಜ ವೈಭವ, ನಾಟಕ, ಡಾ ಓ ನಾಗರಾಜ್, 2018
8. ಸಿದ್ದೇಶ್ವರ ಕಗ್ಗ, ಸೂರೇನಹಳ್ಳಿ ಶಿವರಾಮಯ್ಯ (ಅಪ್ರಕಟಿತ)

ಈ ಮೇಲಿನ ಕೃತಿಗಳು ಮಾತ್ರ ಕುರಂಗನ ವಿಷಯದ ಕಡೆ ಬೆಳಕು ಚೆಲ್ಲುತ್ತವೆ. ಇನ್ನುಳಿದ ಅಧ್ಯಯನಗಳಲ್ಲಿ ಕುರಂಗನ ಬಗೆಗೆ ಸಣ್ಣ ಮಾಹಿತಿಯೂ ಇಲ್ಲ.

ಮೇಲಿನವುಗಳನ್ನು ಹೊರತುಪಡಿಸಿ ಇಲ್ಲಿವರೆಗೂ ಬಂದಿರುವ ಕರ್ನಾಟಕದ ಗೆಜೆಟಿಯರ್, ಮೈಸೂರು ಗೆಜೆಟಿಯರ್, BUCHANAN 'A JOURNEY FROM MADRAS THROUGH THE COUNTRIES OF MYSORE, CANARA AND MALABAR. ತುಮಕೂರು ಜಿಲ್ಲಾ ಗೆಜಿಟಿಯರ್, ಡಾ. ಆರ್ ಕಾವಲಮ್ಮನವರ 'ಮಧುಗಿರಿ ಮಹಾನಾಡ ಪ್ರಭುಗಳು', ಎಂ.ಡಿ ಶ್ರೀನಿವಾಸ್ ಬರೆದಿರುವ 'ಮಧುಗಿರಿ ಇತಿಹಾಸ', 'ಕೊರಟಗೆರೆ ಇತಿಹಾಸ', ಕೆ.ನಾರಾಯಣಚಾರ್ಯರವರ 'ಮಧುಗಿರಿ ಚರಿತ್ರೆ', ಎಂ ಎಂ ಕಲಬುರ್ಗಿ ಸಂಪಾದಿಸಿದ 'ಮಹಾನಾಡ ಪ್ರಭುಗಳು'.. ಇತ್ಯಾದಿ ಕೃತಿಗಳನ್ನು ಅವಲೋಕಿಸಿದಾಗ ಇವುಗಳಲ್ಲಿ ಕುರನ್ಗನ ಬಗೆಗೆ ಸಣ್ಣ ವಿವರವು ಇಲ್ಲ. ಇದು ಮರೆವಿನ ರೂಪವೋ? ತಂತ್ರವೋ? ಚರಿತ್ರೆಗೆ ಸಿಕ್ಕದ ಕುರನ್ಗನ ವ್ಯಕ್ತಿತ್ವವೋ ಅರಿಯದು. ಕುರನ್ಗ ಎಂಬುವನು ಇದ್ದವನೋ? ಅದು ಕೇವಲ ಕಲ್ಪಿತ ರೂಪವಾಗಿ ಜನಪದರಲ್ಲಿ ಕಟ್ಟಿಕೊಂಡಿರುವ

ಕತೆಯೋ? ಹಾಗೇನಾದರೂ ಜನಪದದೊಳಗಿನ ಆ ಕುರನ್ಗನಿಗೆ ಚಾರಿತ್ರಿಕವಾಗಿ ಯಾವ ಮಹತ್ವವೂ ಇಲ್ಲವೇ? ಆದರೆ ಕುರನ್ಗನ ಹೆಸರು, ಅವನ ಆಡಳಿತದ ವಿಶೇಷಗಳು ಇಂದಿಗೂ ಜನಮಾನಸದಲ್ಲಿ ಮರೆಯಾಗದೇ ಉಳಿದಿವೆ. ಅದಲ್ಲದೇ ಕುರನ್ಗ ನಿರ್ಮಿಸಿದ 'ಕುರಂಕೋಟೆ' ಹೆಸರಿನ ಊರಿದೆ. ಸಿದ್ದರಬೆಟ್ಟದ ವಿಶಾಲ ಬಂಡೆಯಲ್ಲಿ ಅವನು ಕಟ್ಟಿದ ಕೋಟೆ ಇದೆ. ಸೂಳೆಕಲ್ಲಿನಲ್ಲೂ ಪ್ರೇಯಸಿಗಾಗಿ ಕಟ್ಟಿದ ಅರಮನೆಯ ಕುರುಹು ಇದೆ. ಸೂಳೆಕೆರೆಯಿದೆ. ಸೂಳೆಕೆರೆಯ ದಂಡೆಯಲ್ಲಿ ಗೊಲ್ಲರು ಮಾತ್ರ ನಡೆದುಕೊಳ್ಳುವ ದೇವತೆಯಿದೆ. ಹೊಲತಾಳಿನಲ್ಲಿ ಕಟ್ಟಿರುವ ಈಜುಕೊಳವಿದೆ. ಇಷ್ಟೆಲ್ಲ ಇದ್ದರೂ ಚರಿತ್ರೆಯಲ್ಲಿ ಕುರನ್ಗ ದಾಖಲಾಗಿಲ್ಲ.

ಈಗಾಗಲೇ ನೋಡಿದಂತೆ ಕುರನ್ಗ ಚಾರಿತ್ರಿಕವಾಗಿ ಮಹತ್ವದ ಕಾಲಘಟ್ಟದಲ್ಲಿ ಇದ್ದವನಲ್ಲ. ಅಲ್ಲದೇ ನೇರವಾಗಿ ಯಾವುದೇ ರಾಜನ ಅಧೀನದಲ್ಲಿಯೂ ಇದ್ದವನಲ್ಲ. ಯಾರದಾದರೂ ಅಧೀನದಲ್ಲಿ ಇದ್ದರೇ ಮದ್ದಗಿರಿ ಮಹಾನಾಡ ಪ್ರಭುಗಳ ಅಧೀನದಲ್ಲೇ ಇರಬೇಕಿತ್ತು. ಯಾಕೆಂದರೆ ಬೂದುಗವಿ ಅಕ್ಕಪಕ್ಕದಲ್ಲಿ ಹೆಚ್ಚು ಪ್ರಸಿದ್ಧಿಯಾದ ಮನೆತನವೇ ಮದ್ದಗಿರಿ ಮಹಾನಾಡ ಪ್ರಭುಗಳ ಮನೆತನ. ಆದರೆ ಮದ್ದಗಿರಿ ಮಹಾನಾಡ ಪ್ರಭುಗಳ ಕಾಲದಲ್ಲಿ ಕುರನ್ಗನ ಬಗೆಗೆ ಯಾವುದೇ ಮಾಹಿತಿಯಿಲ್ಲ. ಅದಲ್ಲದೇ ಕುರನ್ಗ ಆಳಿದ ಪ್ರದೇಶವಾದ ಬೂದುಗವಿ ಪ್ರಾಂತ್ಯದ ಉಲ್ಲೇಖವೂ ಇಲ್ಲ. ಹೀಗಾಗಿ ಕುರನ್ಗ ಮದ್ದಗಿರಿ ಮಹಾನಾಡ ಪ್ರಭುಗಳ ಕಾಲದಲ್ಲಿದ್ದ ಎಂಬುದನ್ನು ಒಪ್ಪಿಕೊಳ್ಳಲು ಕಷ್ಟ. ಇನ್ನೂ ಮದ್ದಗಿರಿ ಮಹನಾಡ ಪ್ರಭುಗಳ ಅಂತ್ಯದ ನಂತರ ಮತ್ಯಾವ ರಾಜಮನೆತನಗಳು ಈ ಸುತ್ತಲಿನಲ್ಲಿ ಹುಟ್ಟಲಿಲ್ಲ. ಪ್ರಭಾವಿಸಲಿಲ್ಲ. ಹಾಗಾಗಿ ಕುರನ್ಗನನ್ನು ಆ ಚರಿತ್ರೆಯಲ್ಲಿ ಹುಡುಕಿದರೆ ಸಿಗುವುದಿಲ್ಲ ಎನಿಸುತ್ತದೆ. ಹಾಗಾದರೆ ಮದ್ದಗಿರಿ ಮಹಾನಾಡ ಪ್ರಭುಗಳ ನಂತರದವನೇ ಎಂದರೆ ಅದಕ್ಕೆ ಪೂರಕವಾಗಿ ಜನಪದರಲ್ಲಿ ಐತಿಹ್ಯಗಳಿವೆ. ಕುರನ್ಗ 'ತೊಗಲಿನ ನೋಟು' ಚಲಾವಣೆಗೆ ತಂದಿದ್ದಕ್ಕಾಗಿ ಮೈಸೂರ್ ನವಾಬ ಹೈದರ್ ಕುರನ್ಗನ್ನು ಮೆಚ್ಚಿ 1750ರ ಸುಮಾರಿನಲ್ಲಿ ಇಲ್ಲಿಗೆ ಭೇಟಿಯಿತ್ತ ಕತೆ ಈ ಭಾಗದಲ್ಲಿ ಜನಜನಿತವಾಗಿದೆ.

ಕುರನ್ಗ ಭಾರತದ ಐರಾರ್ಕಿ ವ್ಯವಸ್ಥೆಯಲ್ಲಿ ಆಡಳಿತ ವ್ಯವಸ್ಥೆಯಲ್ಲೂ ಕೆಳಗಡೆ ಇದ್ದ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿಯೂ ಕೆಳಸ್ತರದಲ್ಲಿದ್ದ. ಈ ಕಾರಣದಿಂದ ಪ್ರಮುಖ ಇತಿಹಾಸಕಾರರಿಗೆ ಕುರನ್ಗ ಮುಖ್ಯವಾಗದೇ ಇರಬಹುದು. ಚಾರಿತ್ರಿಕ ದೃಷ್ಟಿಯಿಂದ ಕುರಂಗರಾಯನು ಇಲ್ಲಿ ತನ್ನ ಒಡೆತನವನ್ನು ಸ್ಥಾಪಿಸಿದ್ದನೆನ್ನುವುದಕ್ಕೆ

ಹಲವಾರು ಆಧಾರಗಳು ಲಭ್ಯವಾಗುತ್ತವೆ. ಅಂಥವುಗಳಲ್ಲಿ ಮೊದಲನೆಯದಾಗಿ ಲಿಖಿತರೂಪದಲ್ಲಿ ಇರುವ ದಾಖಲೆಗಳು. ಎರಡನೆಯದಾಗಿ ಕುರನ್ಗ ಕಟ್ಟಿಸಿರುವ ಕೆರೆ, ದೇವಸ್ಥಾನ, ಕೋಟೆಗಳು. ಮೂರನೆಯದಾಗಿ ಬಳಕೆಯಲ್ಲಿರುವ ಆಚರಣೆಗಳು. ಇವುಗಳನ್ನು ಆಧರಿಸಿಯೇ ಕುರನ್ಗನ ಕಾಲವನ್ನು ನಿರ್ಧರಿಸಬೇಕಾಗಿದೆ.

**ಕುರನ್ಗನ ಬಗೆಗೆ ಈ ಸುತ್ತಲಿನಲ್ಲಿ ಇರುವ ಜನಪದೀಯ ಅಂಶಗಳು :**

ಇಲ್ಲಿ ಕುರನ್ಗನನ್ನು ಹುಡುಕಲು ಮುಖ್ಯವಾಗಿ ಜನಪದವನ್ನು, ಅಲ್ಲಿನ ಆಚರಣೆಯನ್ನು ಆಕರವನ್ನಾಗಿ ಬಳಸಿಕೊಳ್ಳಬೇಕಾಗಿದೆ. ಚಾರಿತ್ರಿಕ ವಿವರವು ಕತೆಯಾಗಿ ರೂಪಾಂತರ ಹೊಂದಿರುವುದನ್ನು ಗುರುತಿಸಲು ಆಚರಣೆಯ ಮೊರೆ ಹೋಗಬೇಕಾಗಿರುವುದು ಅನಿವಾರ್ಯ. ಆಚರಣೆ ಒಂದಷ್ಟು ಸ್ಮೃತಿಯನ್ನು, ಚರಿತ್ರೆಯ ಅಂಶವನ್ನು, ಪರಂಪರೆಯ ಚೌಕಟ್ಟಿನಲ್ಲಿ ಉಳಿಸಿಕೊಂಡು ಬಂದಿರುತ್ತದೆ. ಅದರೊಳಗಿನ ರಾಜತ್ವದ ಕಲ್ಪನೆ, ಸಾಮಾಜಿಕ ವ್ಯವಸ್ಥೆ, ಸಾಮಾಜಿಕ ಮೌಲ್ಯಗಳು ಇಂತಹ ಸುಳಿವುಗಳನ್ನು ಹೆಕ್ಕಿಕೊಳ್ಳುವುದರ ಮೂಲಕ ಕುರನ್ಗನ ಕಾಲವನ್ನು ಕಟ್ಟಿಕೊಳ್ಳಬೇಕಾಗಿದೆ. 'ಜನಪದ ನೆಲೆಯಲ್ಲಿ ಚರಿತ್ರೆಯನ್ನು ಅರ್ಥಮಾಡಿಕೊಳ್ಳಲು ಸಾಂಸ್ಕೃತಿಕ ವಲಯಗಳ ಚಿತ್ರಣ ಪೂರಕವಾಗಬಲ್ಲದು ಕರ್ನಾಟಕದ ಚೌಕಟ್ಟನ್ನೂ ಬಿಟ್ಟು ಇಡೀ ಭಾರತದ ಎಲ್ಲಾ ಮೌಖಿಕ ಪರಂಪರೆಯ ಹಿನ್ನೆಲೆಯ ಸಾಂಸ್ಕೃತಿಕ ವಲಯಗಳನ್ನು ಗುರುತಿಸಲು ಸಾಧ್ಯವಾದರೆ ಭಾರತದ ಸಂಸ್ಕೃತಿಯ ಚರಿತ್ರೆ ವಿಸ್ತಾರವಾದ ಅರ್ಥವನ್ನು ಪಡೆದುಕೊಳ್ಳುತ್ತದೆ. ಬಹು ಸಂಸ್ಕೃತಿಯನ್ನು ಹೊಂದಿರುವ ಭಾರತದಲ್ಲಿ ಪ್ರಧಾನ ಸಂಸ್ಕೃತಿಯ ಅಧ್ಯಯನದಿಂದ ಸಂಸ್ಕೃತಿಯ ಚರಿತ್ರೆ ಪೂರ್ಣಗೊಳ್ಳುವುದಿಲ್ಲ. ಅದಕ್ಕೆ ಅಲಿಖಿತವಾದ ಜನಪದ ಪರಂಪರೆ, ಸಂಸ್ಕೃತಿಗಳೂ ಅಷ್ಟೇ ಮುಖ್ಯ' (ಎಂ ವಿ ವಸು, ಮಲೆಯ ಮಾದಪ್ಪನ ಮಹಾಕಾವ್ಯ ಸಾಂಸ್ಕೃತಿಕ ಮುಖಾಮುಖಿ ಪು.50) ವಸು ಅವರ ಮಾತು ಮೌಖಿಕ ಆಧಾರಗಳು ಇತಿಹಾಸದ ಅಧ್ಯಯನದ ಕ್ರಮವನ್ನೇ ಬದಲಿಸುವ ಶಕ್ತಿ ಪಡೆದಿರುವ ಸ್ವರೂಪವನ್ನು ಕುರಿತು ವಿವರಿಸುತ್ತವೆ. ನಾವು ಕಳೆದುಕೊಂಡಿರುವ ಅರಿವಿನ ಒಂದು ಲೋಕ ಈ ಜಾನಪದವೇ ಆಗಿದೆ. ಅರಿವಿನ ಕ್ಷಿತಿಜವನ್ನೇ ತನ್ನೊಡಲಲ್ಲಿ ಕಾಪಿಟ್ಟುಕೊಂಡು ಬಂದಿರುವ ಜಾನಪದವನ್ನು ಮುಖ್ಯ ಆಕರವಾಗಿ ಪರಿಗಣಿಸಬೇಕಾಗಿದೆ. ಈ ಮಾತನ್ನು ಕುರನ್ಗನ ನೆಲಕ್ಕೂ ಅನ್ವಯಿಸಬಹುದಾಗಿದೆ. ಚರಿತ್ರೆಯಲ್ಲಿ ಲವಲೇಶವೂ ಉಲ್ಲೇಖ ಆಗದ ಕುರನ್ಗನನ್ನು ಚಾರಿತ್ರಿಕಗೊಳಿಸುವುದು ಸವಾಲಿನದ್ದೇ. ಆದರೆ ಅದಕ್ಕೆ

ಪೂರಕವಾಗಿ ಜನಪದದ ಅನೇಕ ಅಂಶಗಳು ಕುರನ್ಗನ ಚಾರಿತ್ರಿಕ ನೆಲೆಯನ್ನು ಒಳಗೊಂಡಿವೆ. ಅವುಗಳನ್ನು ಹೆಕ್ಕಿ ತೆಗೆದು ಕುರನ್ಗನ ಕಾಲವನ್ನು ಮತ್ತು ಚಾರಿತ್ರಿಕ ಆಯಾಮವನ್ನು ಕಂಡುಕೊಳ್ಳಬಹುದಾಗಿದೆ. ಅದರ ಜತೆಗೆ ಕೇವಲ ಜನಪದದಲ್ಲಿ ಉಳಿದಿರುವ ಕುರನ್ಗನ ಚಾರಿತ್ರಿಕ ನೆಲೆಯನ್ನು ಶೋಧಿಸುವುದು ಮತ್ತು ಚಾರಿತ್ರಿಕಗೊಳಿಸುವುದು ಸದ್ಯದ ತುರ್ತು.

ಇಲ್ಲಿ ಕುರನ್ಗನದೆಂದು ಹೇಳಬಹುದಾದ ಯಾವುದೇ ಚಾರಿತ್ರಿಕ ದಾಖಲೆಗಳಿಲ್ಲ. ಅಂದರೆ ಅಕ್ಷರರೂಪದಲ್ಲಿ ದಾಖಲಾಗಿರುವ ಯಾವುದೇ ಹಸ್ತಪ್ರತಿ ದೊರಕಿಲ್ಲ. ಅಥವಾ ಈವರೆಗೆ ಗುರುತಿಸಲು ಸಾಧ್ಯವಾಗಿಲ್ಲ. ಬರವಣಿಗೆ, ಹಾಡು, ಸಿದ್ಧಾಂತ ಇತ್ಯಾದಿ ಸಮಕಾಲೀನ ದಾಖಲೆಗಳನ್ನು ಜನಪದ ಆಕರಗಳಿಂದಲೇ ಹುಡುಕಿಕೊಳ್ಳಬೇಕಾಗಿದೆ. ಕುರನ್ಗನು ಕಟ್ಟಿರುವ ಕೋಟೆ, ಅರಮನೆ, ಅವನು ಕಟ್ಟಿರುವ ಊರು, ಗಲ್ಲೆಬಾನಿ ಕೆರೆ, ಶಿವನ ದೇವಸ್ಥಾನ, ದೊಡ್ಡಕಾಯಪ್ಪ ದೇವಸ್ಥಾನ, ಇತ್ಯಾದಿಗಳಷ್ಟೇ ಉಳಿದಿವೆ. ಇವುಗಳನ್ನಿಟ್ಟುಕೊಂಡೇ ಇತಿಹಾಸವನ್ನು ಕಟ್ಟಿಕೊಳ್ಳಬೇಕು. ಯಾಕೆಂದರೆ ಇವೆಲ್ಲ ಈಗಲೂ ಜೀವಂತವಾಗಿವೆ.

ಇವನ ಚರಿತ್ರೆ ಯಾಕೆ ಚರಿತ್ರೆಯಲ್ಲಿ ದಾಖಲೆಯಾಗಿಲ್ಲ ಎಂಬ ಮೂಲ ಪ್ರಶ್ನೆಗೆ ಬರಬಹುದಾದರೆ ಅದಕ್ಕೆ ಉತ್ತರಗಳನ್ನು ಹೀಗೆ ಕಂಡುಕೊಳ್ಳಬಹುದೇನೋ

- ✓ ಕುರನ್ಗ ಕೆಳಜಾತಿ ಮತ್ತು ಅನಕ್ಷರಸ್ಥ ಸಮುದಾಯದವ–ನಾಗಿರುವಂಥದ್ದು.
- ✓ ಕುರನ್ಗ ಆಳಿದ್ದು ಕಾಡಿನಿಂದ ಆವೃತ್ತವಾದ ಪ್ರದೇಶ. ಅದೂ ಅಲ್ಲದೇ ಅದು ಯಾರಿಗೂ ಅರಿವಿಗೆ ಬಾರದ ಮುಖ್ಯ ಪಾಳ್ಯಕಟ್ಟುಗಳಿಂದ ದೂರವಿರುವಂಥದ್ದು.
- ✓ ಕುರನ್ಗ ಆಳಿದ ಪ್ರದೇಶವನ್ನು ಸಾಧು ಸಂತರು ಸೇರುತ್ತಿದ್ದ ಜಾಗವೆಂದು ಅದನ್ನು ಯಾರೂ ಗಮನಿಸಲಿಲ್ಲವೆನಿಸುತ್ತದೆ.
- ✓ ಕುರನ್ಗನ ಕಾಲದವರೆಗೂ ಅದು ಬೂದುಗವಿ ಎಂದು ಹೆಸರಿದ್ದುದು ಕುರನ್ಗನ ಕಾಲದಲ್ಲಿ ಒಬ್ಬ ಕೆಳಜಾತಿಯವನು ಆ ಭಾಗದಲ್ಲಿ ತಪಸ್ಸಿಗೆ ಕೂತದ್ದರಿಂದ ಆ ಮೇಲೆ ಸಿದ್ದರಬೆಟ್ಟ ಎಂದು ಹೆಸರಾಯಿತು. ರಸವಿದ್ಯೆಗಷ್ಟೇ ಪರಿಚಿತವಾದ ನೆಲೆಯಾಗಿತ್ತು.

✓ ಈ ಪ್ರದೇಶವನ್ನು ಆಳಿದ ಮೊದಲ ಮತ್ತು ಕೊನೆಯ ಪಾಳ್ಯಗಾರ ಕುರನ್ಗನೇ ಆಗಿದ್ದರಿಂದ ಅವನನ್ನು ಎಲ್ಲಿಯೂ ದಾಖಲಿಸಿರಲಿಕ್ಕೆ ಸಾಧ್ಯವಾಗಿಲ್ಲ. ಆ ಮನೆತನ ಮುಂದುವರೆದಿದ್ದರೇ ಮತ್ತು ರಾಜ್ಯ ವಿಸ್ತರಣೆಗೆ ಕೈ ಹಾಕಿದ್ದರೇ ಖಂಡಿತವಾಗಿ ಚರಿತ್ರೆಯಲ್ಲಿ ದಾಖಲಾಗುತ್ತಿದ್ದ. (ಕೆಲವು ಭಾಗಗಳ ಕತೆಗಳಲಿ ಕುರನ್ಗನಿಗೆ ಮಗನಿದ್ದನೆಂದು ಅವನಿಗೆ ಕುರನ್ಗನ ನಂತರ ಪಟ್ಟಗಟ್ಟಿನೆಂದು ಹೇಳುತ್ತಾರೆ. ಆದರೆ ಆ ಕತೆ ಅಲ್ಲಿಗೆ ನಿಂತುಕೊಳ್ಳುತ್ತದೆ.)

ಜನಪದದಲ್ಲಿ ಕುರನ್ಗನ ಕತೆಯಿದ್ದರೇ ಸಮಕಾಲೀನದಲ್ಲಿ ಕುರಂಕೋಟೆ, ಸೂಳೆಕೆರೆ, ಹೊಲತಾಳು, ಗುಪ್ಪಟ್ನ, ನೇಗಲಾಲ, ಚನ್ನಪಟ್ನ, ಸಂಗಾಪುರದಮ್ಮ, ಪೂಜಾರಳ್ಳಮ್ಮ, ಬೋರಯ್ಯನಹಟ್ಟಿ, ಜುಂಜರಾಮನಹಳ್ಳಿ, ಕುರುಬರಹಳ್ಳಿ, ಮರೇನಾಯಕನಹಳ್ಳಿ, ಇತ್ಯಾದಿ ಊರುಗಳು. ಚರ್ಮದ ನಾಣ್ಯ, ಉಡದ ರಥ, ಬಗೆಗಿನ ಕತೆಗಳು, ಬೂದುಗವಿ ಬೆಟ್ಟದ ದಕ್ಷಿಣ ತಪ್ಪಲಲ್ಲಿರುವ ಕುರುಹುಗಳು, ದೊಡ್ಡಕಾಯಪ್ಪ ದೇವಸ್ಥಾನ, ಶಿವನ ದೇವನ ದೇವಸ್ಥಾನ, ಗಲ್ಲೇಬಾನಿ ಕೆರೆ, ಕೋಳಿಮೊಟ್ಟೆ ಬಾವಿ, ಅಲಸಂಡೆ ಕೆರೆ, ಬೆಟ್ಟದ ಮೇಲೆ ಕಲ್ಲಿನ ಕೋಟೆ, ಬೆಟ್ಟದ ದಕ್ಷಿಣ ತಪ್ಪಲಿನಲ್ಲಿ 100 ಎಕರೆ ವ್ಯಾಪ್ತಿಯ ಮಣ್ಣಿನ ಕೋಟೆ. ಇವೆಲ್ಲ ಜೀವಂತ ಸಾಕ್ಷಿಯನ್ನೊದಗಿಸುತ್ತವೆ.

ಬೂದುಗವಿ ಪ್ರಾಂತ್ಯದಲ್ಲಿ ಮಾದಿಗರು, ಗೊಲ್ಲರು, ನಾಯಕ ಸಮುದಾಯಗಳು ಹೆಚ್ಚಾಗಿ ಇಲ್ಲಿ ನೆಲೆ ಪಡೆದಿವೆ. ಈ ಅಂಶ ಕುರನ್ಗನ ಪ್ರಾಂತ್ಯಕ್ಕೆ ತಳುಕು ಹಾಕಿಕೊಂಡಿರುವಂತಿದೆ. 'ಸಿದ್ದರಬೆಟ್ಟ' ಎಂದು ಈಗ ಕರೆಯುತ್ತಿರುವ ಈ ಪ್ರದೇಶಕ್ಕೆ ಈ ಹೆಸರು ಹೆಚ್ಚೆಂದರೆ ನೂರು ನೂರಿಪ್ಪತ್ತು ವರ್ಷಗಳ ಈಚೆಗೆ ಬಂದಿರುವಂತದ್ದು. ಮೊದಲು ಈ ಭಾಗಕ್ಕೆ ಬೂದುಗವಿ ಎಂಬ ಹೆಸರು ಬಳಕೆಯಲ್ಲಿತ್ತು. ಈಗಲೂ ಈ ಸುತ್ತಲಿನ ಪ್ರದೇಶ 'ಬೂದುಗವಿ ಗ್ರಾಮಪಂಚಾಯ್ತಿ' ಎಂದೇ ದಾಖಲೆಗಳಲ್ಲಿದೆ. ಹೀಗಾಗಿ ಈಗಿನ ಬೂದುಗವಿಯ ಉತ್ತರ ಭಾಗದ ರಸ್ತೆಗಳು ಪರಿಷ್ಕರಣ ಸಂದರ್ಭದಲ್ಲಿ ರೂಪುಗೊಂಡವು. ವೆಂಕಾವಧೂತರು ಮೈಸೂರಿಗೆ ಹೋಗಿ ತಮ್ಮ ಜಡೆಯನ್ನು ದಾರಿಯುದ್ದಕ್ಕೂ ಹಾಸಿ ಮೈಸೂರ್ ಒಡೆಯರಿಂದ ಈ ರಸ್ತೆ ಮಾಡಿಸಿಕೊಂಡಿರುವ ವಿವರಗಳಿವೆ. ಅದರ ದಕ್ಷಿಣ ದಿಕ್ಕಿನಲ್ಲಿ ಕುರನ್ಗನ ಕುರುಹುಗಳಿವೆ. ವಿಶೇಷ ಎಂದರೆ ಬೂದುಗವಿ (ಈಗಿನ ಸಿದ್ದರಬೆಟ್ಟ)ಯ ಸುತ್ತಮುತ್ತ ಇರುವ ಶಾಕ್ತದೇವತೆಗಳಿಗೂ ಕುರನ್ಗನ ಚರಿತ್ರೆಗೂ ಸಂಬಂಧವಿರುವಂತಿದೆ. ಏಳು ಜನ

ಅಕ್ಕತಂಗಿಯರೆಂದೂ ಗುರುತಿಸುವ ಗುಪ್ಪಟ್ನಮ್ಮ, ನೇಗಲಾಲದಮ್ಮ, ಚನ್ನಪಟ್ಟಣ, ಸಂಗಾಪುರ, ಪೂಜಾರಳ್ಳಿ, ಬೇವಿನಹಳ್ಳಿ .. ಮುಂತಾದವು ಬೂದಗವಿ ಸುತ್ತ ಇವೆ. ಇವೆಲ್ಲವೂ ಮೂರು ವರ್ಷಕ್ಕೊಮ್ಮೆ ಬೂದುಗವಿ ಬೆಟ್ಟದ ಮೇಲೆ ಸೇರುತ್ತವೆ. ವಿಶೇಷ ಎಂದರೆ ಈ ಎಲ್ಲ ದೇವತೆಗಳನ್ನು 'ಕಾವಲ್ಲಮ್ಮ' ಎಂಬ ಹೆಸರಿನಲ್ಲಿಯೇ ಗುರುತಿಸುವುದುಂಟು. ಇವೆಲ್ಲವೂ ಸಿದ್ದರಬೆಟ್ಟಕ್ಕೆ ಸೇರುವ ಆಚರಣೆ ಶುರುಮಾಡಿದ್ದು ಈ ಕುರನ್ಗನೇ ಆಗಿರಬಹುದು. ಈ ಏಳು ದೇವತೆಗಳು ಕುರನ್ಗನ ಪ್ರಾಂತ್ಯದ ಗಡಿಗಳಾಗಿರಬಹುದು. ಅವೆಲ್ಲವೂ ಸಿದ್ದರಬೆಟ್ಟದ ಸುತ್ತಲೂ ಏಳೆಂಟು ಕಿ.ಮೀ ವ್ಯಾಪ್ತಿಯಲ್ಲಿವೆ. ಎಲ್ಲವುಗಳ ಆಚರಣೆಗಳು ಒಂದೇ ಆಗಿವೆ. ಈ ಎಲ್ಲವುಗಳ ಪೂಜಾರಿಕೆಯನ್ನು ನಾಯಕ ಸಮುದಾಯ ನಿರ್ವಹಿಸಿಕೊಂಡು ಬಂದಿದೆ. ಈ ದೇವತೆಗಳಲ್ಲಿ ಹಿರಿಯಳು 'ಗುಪ್ಪಟ್ನದಮ್ಮ' ಈಕೆಯನ್ನು ದೊಡ್ಡಮ್ಮ ಎಂದೂ ಕರೆಯಲಾಗುತ್ತದೆ. ಈಕೆ ಶಾಕ್ತ ಪಂಥದವಳಾಗಿದ್ದರೂ (ಕರ್ನಾಟಕದ ಶಾಕ್ತಪಂಥ: ರಹಮತ್ ತರೀಕೆರೆ) ಮಾಂಸಹಾರ ನಿಷೇಧವಿದೆ. ಈಕೆ ಮೂರು ವರ್ಷಕ್ಕೊಮ್ಮೆ ಬೂದುಗವಿ ಬೆಟ್ಟ ಏರುತ್ತಾಳೆ. ವಿಶೇಷ ಎಂದರೆ ನೂರು ವರ್ಷಗಳೀಚೆಗೆ ಸುಧಾರಿಸಿದ ದಾರಿ ಬೆಟ್ಟದ ಉತ್ತರ ದಿಕ್ಕಲ್ಲಿದ್ದರೂ 'ಗುಪ್ಪಟ್ನ'ದಮ್ಮ ಆ ಭಾಗದಲ್ಲಿ ಏರುವುದಿಲ್ಲ. ಗುಪ್ಪಟ್ನದಿಂದ ಹೊರಟು, ಗಟ್ಲಗೊಲ್ಲಹಳ್ಳಿ, ಗಟ್ಲಹಳ್ಳಿ, ಹೊಲತಾಳುವನ್ನು ಒಳಗೆ ಹಾಕಿಕೊಂಡು ಅಲ್ಲಿಂದ ಕುರುಬರಹಳ್ಳಿ ತಲುಪುತ್ತದೆ. ಅಷ್ಟೊತ್ತಿಗೆ ಅಲ್ಲಿಂದ ಸ್ವಲ್ಪ ದೂರದಲ್ಲಿರುವ ಚನ್ನಪಟ್ನದಮ್ಮನೂ ಅಲ್ಲಿಗೇ ಸೇರಿರುತ್ತಾಳೆ. ಎರಡೂ ಜತೆಗೂಡಿ ಮುಂದೆ ಸಾಗಿ ಕುರಂಕೋಟೆಯನ್ನು ಬಳಸಿಕೊಂಡು ದೊಡ್ಡಕಾಯಪ್ಪ ದೇವಸ್ಥಾನದ ಹತ್ತಿರ ಗದ್ದುಗೆಯಾಗಿ ಪೂಜೆ ಮುಗಿಸಿಕೊಂಡು ದಕ್ಷಿಣ ದಿಕ್ಕಿನಿಂದ ಸಿದ್ದರಬೆಟ್ಟವನ್ನು ಏರುತ್ತವೆ. ಈ ದೇವತೆಗಳು ಏರುವ ದಾರಿ ಗಿಡ, ಮರ, ಮುಳ್ಳು ಕಲ್ಲುಗಳಿಂದ ಕೂಡಿದ್ದು, ಅದು ಹಾದಿ ಎಂದು ಕರೆಯಲು ಯಾವ ಲಕ್ಷಣಗಳು ಆ ದಾರಿಗಿಲ್ಲ. ಅಂಥ ದಾರಿಯನ್ನು ಆ ಭಾಗದ ಮಾದಿಗರು ಪಾರಂಪರಿಕವಾಗಿ ಮಾಡುತ್ತಲೇ ಬಂದಿದ್ದಾರೆ. ಮಾದಿಗರು ಮಾಡಿದ ದಾರಿಯನ್ನು ಅನುಸರಿಸಿ ಬೆಟ್ಟದ ಮೇಲಿನ ಕೋಟೆಯ ಪಕ್ಕದಲ್ಲಿ ಶಿವನ ದೇವಸ್ಥಾನದ ಹತ್ತಿರ ಗದ್ದುಗೆಯಾಗುತ್ತವೆ. ಅಲ್ಲಿ ದೊಡ್ಡಮ್ಮಳನ್ನು ಪಟ್ಟಗಟ್ಟಿಕೊಳ್ಳುವುದು ಗೊಲ್ಲರು. ಅದರಲ್ಲೂ ಹೆರಜೇನಹಳ್ಳಿ ಕಾಡುಗೊಲ್ಲರು. ಈ ದೊಡ್ಡಮ್ಮಳ ಆಚರಣೆ, ಅದರಲ್ಲಿ ಪಾಲ್ಗೊಳ್ಳುವ ಸಮುದಾಯಗಳಾದ ನಾಯಕರು, ಮಾದಿಗರು, ಗೊಲ್ಲರಿಗೂ ಮತ್ತು ಆ ಆಚರಣೆಯನ್ನು ಶುರುಮಾಡಿದ ಕುರನ್ಗನಿಗೂ ಸಂಬಂಧವನ್ನು ಹುಡುಕಿಕೊಳ್ಳಬೇಕಾಗಿದೆ. ಯಾಕೆಂದರೆ ಮಾದಿಗರು ಮಾಡುವ ಹಾದಿ ಈ ಹಿಂದೆ

ಕುರನ್ಗ ಓಡಾಡುತ್ತಿದ್ದ ಹಾದಿ, ದೊಡ್ಡಮ್ಮನನ್ನು ಹೊರುವವರು, ಪೂಜಿಸುವವರು ನಾಯಕರು, ಪಟ್ಟಗಟ್ಟಿಕೊಳ್ಳುವವರು ಗೊಲ್ಲರು ಆಗಿರುವುದರಿಂದ ಈ ಸಮುದಾಯಗಳ ಪರಸ್ಪರ ಹೊಂದಾಣಿಕೆ ರೂಪವಾಗಿ ಕುರನ್ಗ ಇದ್ದಿರಬಹುದೇ ಶೋಧಿಸಬೇಕಾಗಿದೆ.

ಇಲ್ಲಿ ಜನಪದವನ್ನು ತಿಳುವಳಿಕೆಯ ಒಂದು ಮುಖ್ಯ ಆಕರವೆಂದು ಭಾವಿಸಬೇಕಾಗಿದೆ. ಪ್ರಮುಖ ಆಕರವಾಗಿರುವ ಜನಪದವು ನಮ್ಮ ಪರಂಪರೆಯ ನೆನಪುಗಳನ್ನು ಸಂಗೋಪನ ಮಾಡಿಕೊಂಡು ಬಂದಿದೆ. ಲಿಖಿತವಾಗಿ ಲಭ್ಯವಿಲ್ಲದ ಅನೇಕ ಮಾಹಿತಿಗಳನ್ನು ಈ ಜನಪದವು ತನ್ನ ಒಳಗಿರಿಸಿಕೊಂಡಿದೆ. ಅದನ್ನು ಬಿಡಿಸಿ ನೋಡುವ ಕಣ್ಣು ದೊರೆತರೆ ಚರಿತ್ರೆಯ ಅರ್ಥಗಳೇ ಬದಲಾಗುತ್ತವೆ. ಅದೇ ರೀತಿಯಲ್ಲಿ ಈ ಭಾಗದಲ್ಲೂ ಜನಪದವು ಇಲ್ಲಿನ ಕುರನ್ಗನ ಬಗೆಗೆ ಅಪಾರ ಮಾಹಿತಿಯನ್ನು ತನ್ನೊಡಲಲ್ಲಿ ಕಾಪಿಟ್ಟುಕೊಂಡು ಬಂದಿದೆ. ಈ ಜನಪದವು ಬಿತ್ತರಿಸುವ ಕುರನ್ಗನ ಕತೆ ಕೇವಲ ಕತೆಯಲ್ಲ. ಬೇರೆ ಬೇರೆ ರೀತಿಗಳಲ್ಲಿ ಹೆಣೆದುಕೊಂಡಿರುವ, ಬೆಳೆಯುತ್ತಿರುವ ವಿಚಾರ, ನಂಬಿಕೆ, ಆಚರಣೆ, ಆಶಯ, ಸಾಂಸ್ಕೃತಿಕ ಅಪೇಕ್ಷಗಳ ಮೊತ್ತ. ಕುರನ್ಗನನ್ನು ನಂಬುವ, ತಮ್ಮವನೆಂದು ಭಾವಿಸುವ ಅನೇಕ ಜನರ ಬದುಕಿನಲ್ಲಿ, ಸಾಮಾಜಿಕ ವರ್ತನೆಗಳಲ್ಲಿ, ಧಾರ್ಮಿಕ ಆಚರಣೆಗಳಲ್ಲಿ ಕುರನ್ಗ ಮತ್ತು ಅವನ ಕಾಲದ ಸಂಗತಿಗಳು ಅಡಗಿವೆ.

**ಚಾರಿತ್ರಿಕವಾಗುತ್ತಿರುವತ್ತ ಕುರನ್ಗ :**

ಲಿಖಿತರೂಪದಲ್ಲಿ ಇಲ್ಲಿಯವರೆಗೆ ಕುರನ್ಗನ ಕಾಲದ ಯಾವುದೇ ಲಿಖಿತ ಬರಹಗಳು ದೊರಕಿರಲಿಲ್ಲ. ಹಾಗಾಗಿ ಅವನು ಕೇವಲ ಜಾನಪದ ನಾಯಕ ಎಂದೇ ಭಾವಿಸಲಾಗಿತ್ತು. ಈಗಿನ ಸಿದ್ಧರಬೆಟ್ಟದ ದಕ್ಷಿಣ ಭಾಗದ ತಪ್ಪಲಲ್ಲಿ ಅನೇಕ ಚಾರಿತ್ರಿಕ ಕುರುಹುಗಳು ಕುರನ್ಗನ ಬಗೆಗೆ ಸಾಕ್ಷಿಯೊದಗಿಸುತ್ತವೆ. ಮೊದಲ ಬಾರಿಗೆ 28–10–2020ರಂದು ಡಾ.ರವಿಕುಮಾರ್ ನೀಹ, ಡಾ.ಬೀರಂ ಜಗದೀಶ್, ಕಾಂತರಾಜ್ ಗುಪ್ಪಟ್ನ, ಲಕ್ಷ್ಮೀಶ ಪಾಳೇಗಾರ ನಾಲ್ಕು ಜನ ಸಂಶೋಧಕರು ಅಲ್ಲಿನ ಶಾಸನವನ್ನು ಕಂಡುಕೊಂಡರು. ಆ ಶಾಸನ 18 ಸಾಲುಗಳನ್ನು ಒಳಗೊಂಡಿದ್ದು ಕಲ್ಲು ಒರಟಾದ್ದರಿಂದ ಅಕ್ಷರಗಳು ಸಾಕಷ್ಟು ದೋಷ ಮತ್ತು ಲೋಪದಿಂದ ಕೂಡಿವೆ. ಇಡೀ ಶಾಸನ 15 ಅಡಿ ಬಂಡೆಯ ಮೇಲೆ ನಾಲ್ಕೂವರೆ ಅಗಲ ಮತ್ತು ಆರು ಅಡಿ ರೂಪದಲ್ಲಿ

ರಚನೆಯಾಗಿದೆ. ಅದನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಕುರನ್ಗನ ಚರಿತ್ರೆ ವಿಶಿಷ್ಟವಾಗಿ ತೆರೆದುಕೊಳ್ಳುವುದರಲ್ಲಿ ಯಾವುದೇ ಅನುಮಾನವಿಲ್ಲ. ಇದಷ್ಟೇ ಅಲ್ಲದೇ ಆ ತಪ್ಪಲಿನಲ್ಲಿ ಸಾಕಷ್ಟು ಶಾಸನಗಳು ರಚಿತಗೊಂಡಿರುವುದನ್ನು ಕಾಣಬಹುದು. ಕೆಲವು ಹಾಳಾಗಿವೆ. ಪಾತಪ್ಪನ ಗುಂಡು ಮತ್ತು ಕೊಲುಮೆಗುಂಡಿನ ಅಕ್ಕಪಕ್ಕದಲ್ಲೂ ಶಾಸನದ ಅಕ್ಷರಗಳಿವೆ. ಶಾಸನಗಳೇ ಇಲ್ಲ ಎಂದು ಭಾವಿಸಿದ್ದ ಜಾಗದಲ್ಲಿ ಶಾಸನಗಳ ಸರಮಾಲೆಯೇ ಇರುವುದು ಚರಿತ್ರೆಗೆ ಹೊಸ ಹಾದಿ ತರುವ ಸೂಚನೆಯನ್ನು ನೀಡುತ್ತದೆ.

ಕುರನ್ಗ ಕೇವಲ ರಾಜನಾಗದೇ ಆರ್ಥಿಕ, ತಾಂತ್ರಿಕ ನಿಪುಣನಾಗಿದ್ದ ಎಂಬುದಕ್ಕೆ ಅನೇಕ ಅಂಶಗಳು ಅಲ್ಲಿನ ಕುರುಹುಗಳಲ್ಲಿ ಮತ್ತು ಜನಪದೀಯ ಅಂಶಗಳಲ್ಲಿ ಗುರುತಿಸಬಹುದು. ತನ್ನ ಕೋಟೆ ಕೊತ್ತಲಗಳನ್ನು ನಿರ್ಮಿಸಲು ಅವನು ಮಾಡಿಕೊಂಡ ತಯಾರಿಗಳ ನೀಲನಕ್ಷೆಯನ್ನು ಬಂಡೆಯಲ್ಲಿ ಕೆತ್ತಿದ್ದಾನೆ. ದಕ್ಷಿಣ ಭಾಗದಿಂದ ಆ ಸಿದ್ದರಬೆಟ್ಟವನ್ನು ಹೇಗೆ ಹತ್ತಬೇಕು ಎಂಬುದರ ನೀಲನಕ್ಷೆ ಅದರಲ್ಲಿ ಒಂದು. ಈ ನೀಲನಕ್ಷೆಯ ದಾರಿಯಲ್ಲಿಯೇ ಗುಪ್ಪಟ್ನದ ದೊಡ್ಡಮ್ಮ ಮೂರು ವರ್ಷಕ್ಕೊಮ್ಮೆ ಸಿದ್ದರಬೆಟ್ಟ ಏರುವುದುಂಟು. ವಿಶೇಷ ಎಂದರೆ ಈ ದಾರಿ ದಕ್ಷಿಣ ದಿಕ್ಕಲ್ಲಿರುವುದರಿಂದ ಪೂರ್ಣ ನಿಷೇಧಗೊಂಡಿದೆ. ಆದರೆ ಗುಪ್ಪಟ್ನದ ದೊಡ್ಡಮ್ಮ ಆ ದಾರಿಯಲ್ಲಿಯೇ ಏರುತ್ತಾಳೆ. ಗಿಡಮರ ಬಂಡೆಗಳಿಂದ ಮುಚ್ಚಿ ಹೋಗಿರುವ ಈ ದಾರಿಯನ್ನು ಈಗಲೂ ಸರಿಪಡಿಸಿ ದೊಡ್ಡಮ್ಮ ಹೋಗಲು ಅನುವು ಮಾಡಿಕೊಡುವವರು ಬರಕ, ಕುರಂಕೋಟೆ, ಗುಪ್ಪಟ್ನದಲ್ಲಿರುವ ಮಾದಿಗ ಸಮುದಾಯದವರು. ಸಿದ್ದರಬೆಟ್ಟ ಏರುವ ನೀಲನಕ್ಷೆಯ ಜತೆ ಮತ್ತೊಂದು ನೀಲನಕ್ಷೆಯೂ ಅಲ್ಲಿದೆ. ಅದು ಜಾನಪದರಲ್ಲಿ ಈಗಲೂ ಬಳಕೆಯಲ್ಲಿರುವ ಕತೆಗೆ ಕೂಡಿಕೊಳ್ಳುತ್ತದೆ. ಕುರನ್ಗ ಉಪಪತ್ನಿಯೊಬ್ಬಳನ್ನು ಕೋಡುಗಲ್ಲ ಬೆಟ್ಟದ ಮೇಲೆ ಅರಮನೆ ಕಟ್ಟಿಸಿ ಇಟ್ಟುಕೊಂಡಿದ್ದ, ಅವಳನ್ನು ಭೇಟಿಯಾಗಲು ಮರಗಳ ಮೇಲೆ ರೈಲ್ವೇ ಹಳಿಗಳಂತೆ ತಂತಿ ಕಟ್ಟಿ ಉಡದಗಾಡಿಯಲ್ಲಿ ಹೋಗುತ್ತಿದ್ದ ಎಂಬುದು ಆ ಕತೆ. ಆ ಎರಡು ಬೆಟ್ಟಗಳ ನಡುವಿನ ಅಂತರ ಸುಮಾರು ಮೂರ್‍ನಾಲ್ಕು ಕಿ.ಮೀ. ಆ ಎರಡು ಬೆಟ್ಟಗಳ ನಡುವೆ ಸೇತುವೆಯಾಗಿಸಿದ್ದ ಆ ಹಳಿ ರೂಪದ ದಾರಿ ಮತ್ತು ಉಡದ ಗಾಡಿ ರಚನೆಯ ನೀಲನಕ್ಷೆಯ ರೀತಿಯಲ್ಲಿಯೇ ಅಲ್ಲಿ ಎರಡು ಚಿತ್ರಗಳಿವೆ. ಒಂದರಲ್ಲಿ ಎರಡು ಬೆಟ್ಟಗಳ ನಡುವಿನ ಸೇತುವೆಯ ರೀತಿಯಿದ್ದರೇ, ಮತ್ತೊಂದು ಎರಡು

ಬೆಟ್ಟಗಳ ನಡುವೆ ಸೇತುವೆ ಜತೆಗೆ ಒಂದು ಕಡೆ ರಥದ ಚಿತ್ರ, ಆ ರಥದೊಳಗೆ ಎರಡು ಮನುಷ್ಯಾಕೃತಿ ಚಿತ್ರಗಳಿವೆ. ಈ ತಂತ್ರಜ್ಞಾನ ವಿಶಿಷ್ಟವಾಗಿದೆ. ಇದರ ಜೊತೆಗೆ ಕುರಂಗನ ಮತ್ತೊಂದು ತಂತ್ರಜ್ಞಾನ 'ತೊಗಲನೋಟು'. ತನ್ನ ಕಾಲದಲ್ಲಿ 'ತೊಗಲ ನಾಣ್ಯ' ಪರಿಕಲ್ಪನೆ. ಈಗಲೂ ಇದನ್ನು ಸಾಕ್ಷಿ ಒದಗಿಸುವಂತೆ ಸಿದ್ದರಬೆಟ್ಟದ ಮೇಲೆ ಗಲ್ಲೆಬಾನಿ, ಕೋಳಿಮೊಟ್ಟೆ ಬಾವಿಗಳು ಈಗಲೂ ಇವೆ. ಚರ್ಮವನ್ನು ನಾಣ್ಯವಾಗಿ ಹೇಗೆ ರೂಪಿಸಿದ ಎಂಬುದೇ ಕುತೂಹಲದ ವಿಷಯವಾಗಿದೆ. ಕೊರಟಗೆರೆ ನೆಲ ವಿಶೇಷ ನೆಲ. ತಳಸಮುದಾಯಗಳು ಕೋಟೆ ಕಟ್ಟಿ ಈ ಸುತ್ತಮುತ್ತಲಿನಲ್ಲಿ ಆಳಿದ್ದಾರೆ. ಇಲ್ಲಿಯವರೆಗೂ ಮೇಲಿನ ಜಾತಿಗಳು ರಾಜ್ಯ, ಪ್ರದೇಶ, ಪಾಳ್ಯಕಟ್ಟುಗಳನ್ನು ಆಳಿದ್ದ ವಿವರಗಳು ಚರಿತ್ರೆಯಲ್ಲಿ ದಾಖಲಾಗಿದ್ದವು. ಕೆಳಗಿನ ಜಾತಿಗಳು ಅಧಿಕಾರ ನಡೆಸಿದ ವಿವರಗಳಿರಲಿಲ್ಲ. ಹೆಚ್ಚೆಂದರೆ ನಾಯಕ ಸಮುದಾಯದವರಲ್ಲಿಗೆ ನಿಂತು ಬಿಡುತ್ತಿದ್ದವು. ಆದರೆ ಅಲ್ಲಲ್ಲಿನ ಜನಪದ ಕತೆಗಳಲ್ಲಿ ಕೆಳಜಾತಿಗಳು ಅಧಿಕಾರ ನಡೆಸಿದ ವಿವರಗಳಿದ್ದವು. ಆದರೆ ಚರಿತ್ರೆಯಲ್ಲಿ ದಾಖಲಾಗಿರಲಿಲ್ಲ. ಮಾದಿಗ, ಕೊರಮ ಇತ್ಯಾದಿ ಸಮುದಾಯಗಳು ಅಧಿಕಾರ ನಡೆಸಿದ ಅಂಶಗಳು ಚರಿತ್ರೆಯಲ್ಲಿಲ್ಲದಿದ್ದರೂ ಒಂದೆರಡು ಕಡೆ ನಡೆಸಿದ ವಿವರಗಳಿವೆ. ಕೊಡಗು ಜಿಲ್ಲೆ 'ಚೆನ್ನಯ್ಯ ಕೋಟೆ'ಯಲ್ಲಿ 'ಚೆನ್ನಯ್ಯ' ಎಂಬ ಮಾದಿಗ ಜಾತಿಯ ವ್ಯಕ್ತಿ ಅಧಿಕಾರ ನಡೆಸಿದ ಬಗೆಗೆ ಜಾನಪದ ಐತಿಹ್ಯಗಳಿವೆ. ಡಾ.ಸಿದ್ದಲಿಂಗಯ್ಯನವರು ಒಮ್ಮೆ ಚರ್ಚೆಯಲ್ಲಿ ಮಳವಳ್ಳಿ ತಾಲ್ಲೂಕಿನ ಒಂದು ಹಳ್ಳಿಯಲ್ಲಿ 'ಮಾದಿಗರಾಜ'ನಿದ್ದ ಬಗೆಗೆ ಹೇಳಿದ್ದರು. ಅಧ್ಯಯನ ನಡೆಯಬೇಕಷ್ಟೇ.

ಕೊರಟಗೆರೆ ತಾಲೂಕಿನಲ್ಲಿ 8–10 ಕಿ.ಮೀ. ವ್ಯಾಪ್ತಿಯಲ್ಲಿ ಕೊರಮರು, ಮಾದಿಗರು ಪಾಳ್ಯಕಟ್ಟು ಕಟ್ಟಿಕೊಂಡು ಆಳಿದ್ದಾರೆ. ಕೊರಮರ ಚರಿತ್ರೆ ಇತಿಹಾಸದಲ್ಲಿ ಉಲ್ಲೇಖಿತವಾಗಿದೆ. ಆದರೆ ಇವೆರಡು ಪಾಳ್ಯಕಟ್ಟುಗಳು ಒಂದೇ ಕಾಲದವಲ್ಲ. ಕೊರಟಗೆರೆ ಪಕ್ಕದಲ್ಲಿನ ಹೊಳವನಹಳ್ಳಿ ಮೊದಲು ಕೊರಮಪುರ ಎಂಬ ಹೆಸರಿದ್ದು 'ಕೊರಮೇಗೌಡ' ಆಳಿದ್ದ ಕಾರಣಕ್ಕೆ ಈ ಹೆಸರು ಬಂದಿದೆ. ಮಾದಿಗ ಸಮುದಾಯದವನು ಕುರಂಕೋಟೆಯ ಕುರಂಗ. ಈ ಎರಡು ತಳಸಮುದಾಯಗಳು ಇಲ್ಲಿ ಪಾಳ್ಯಕಟ್ಟು ಕಟ್ಟಿಕೊಂಡು ಆಳಿದ ಈ ಕೊರಟಗೆರೆ ನೆಲ ಕರ್ನಾಟಕದ ಚರಿತ್ರೆಯಲ್ಲಿಯೇ ವಿಶೇಷವಾದುದಾಗಿದೆ.

# ವಿಜಯಶಂಕರ ಅವರ 'ವಸುಧಾ ವಲಯ'ವನ್ನು ಕುರಿತು ಕೆಲವು ಮಾತುಗಳು

* ಡಾ. ಕೇಶವಶರ್ಮ. ಕೆ

ವಿಜಯಶಂಕರ ಅವರು ನನಗೆ ಅನೇಕ ವರ್ಷಗಳಿಂದ ಸ್ನೇಹಿತರು. ನಮ್ಮ ಸ್ನೇಹ ದೊಡ್ಡದು. ಅವರಿಗಿಂತ ನಾನು ಕಿರಿಯ. ಆದರೂ ಅವರು ನನ್ನ ಪ್ರೀತಿಯಿಂದ ನೋಡಿದ್ದಾರೆ. ನನಗೂ ಅವರ ಬಗ್ಗೆ ತುಂಬಾ ಗೌರವ. ಕನ್ನಡದ ಅತ್ಯಂತ ಮುಖ್ಯ ವಿಮರ್ಶಕರಲ್ಲಿ ಅವರು ಒಬ್ಬರು ಎನ್ನುವುದು ನಿರ್ವಿವಾದ. ಅವರು ಹೆಚ್ಚು ಖಚಿತವಾಗಿ ಬರೆಯುತ್ತಾರೆ. ಅವರ ಮಾತು ಕೂಡಾ ಸ್ಪಷ್ಟ.  ಬೊಳುವಾರು, ಅವಧಾನಿ, ರಾಜಶೇಖರ್, ಆರ್ಸ್ವಿ ಭಂಡಾರಿ, ಕಟಪಾಡಿ, ಉಚ್ಚಿಲ. ವಿಜಯಶಂಕರ ಮೊದಲಾದವರು ತಿಂಗಳಿಗೊಮ್ಮೆ ಭೇಟಿಯಾಗುತ್ತಿದ್ದೆವು. ಆರ್ಕೆಯವರ ಮನೆ ನಮಗೆ ಜಾಗ.  ತುಂಬಾ ಚರ್ಚೆಗಳು ಆಗುತ್ತಿದ್ದವು. ಬಂಡಾಯ, ಸಮುದಾಯ, ಎಡ ಚಿಂತನೆಗಳು – ಹೀಗೆ ಅನೇಕ. ನನ್ನನ್ನು ಬೆಳೆಸಿದವರಲ್ಲಿ ಇವರೆಲ್ಲಾ ಇದ್ದಾರೆ. ವಿಜಯಶಂಕರ ಅವರು ತಮಗೆ ಏನು ಕಂಡಿದೆಯೋ ಅದನ್ನು ಹೇಳುತ್ತಿದ್ದರು. ಆಗಲೇ ಅವರು ವಿಮರ್ಶೆ ಮತ್ತು ಸಂಸ್ಕೃತಿಯನ್ನು ಜೊತೆಗೆ ಇಟ್ಟುಕೊಂಡು ಮಾತಾಡುತ್ತಿದ್ದರು.

ಸಾಹಿತ್ಯ ವಿಮರ್ಶೆಯು ಸಂಸ್ಕೃತಿಯನ್ನು ಕುರಿತು ತೆಗೆದುಕೊಳ್ಳುವ ನಿಲುವು ಎಷ್ಟರ ಮಟ್ಟಿಗೆ ಸಂಸ್ಕೃತಿಯನ್ನು ನಿರ್ಧರಿಸುತ್ತದೆ ಎನ್ನುವುದೂ ಅಷ್ಟೇ ಮುಖ್ಯ ಎನ್ನುವುದು ಅವರ ನಿಲುವು. 'ವಸುಧಾ ವಲಯ' ಎನ್ನುವುದು ಈ ದೃಷ್ಟಿಯಿಂದ ಅತ್ಯಂತ ಮಹತ್ವದ ಕೃತಿ. ಈ ಕೃತಿಯು ಅವರ ವಿಮರ್ಶೆಯ ಮತ್ತೊಂದು ದಿಕ್ಕನ್ನು ಹೇಳುತ್ತದೆ. ಅವರ ನಿಲುವು ಇದರಲ್ಲಿ ಖಚಿತವಾದ ಒಂದು ಬದಲಾವಣೆಯನ್ನು ಸೂಚಿಸುತ್ತದೆ. ವಿವಿಧ ರೀತಿಯ ಲೇಖನಗಳು ಇದರಲ್ಲಿ ಇದೆ. ಅವು ಈವತ್ತು ಚರ್ಚೆಯಾಗಬೇಕಾದ ವಿಷಯಗಳೂ ಹೌದು.

ಇಲ್ಲಿ ಇನ್ನೊಂದು ಪ್ರಶ್ನೆಯನ್ನು ನೋಡಬೇಕು – ರೂಪನಿಷ್ಠ ವಿಮರ್ಶೆಯು ಭಾಷೆಯ ಪಲ್ಲಟಗಳನ್ನು ಮಾತ್ರವೇ ಇರಿಸಿಕೊಂಡು ಅಧ್ಯಯನವನ್ನು ನಡೆಸುತ್ತದೆ. ಸಾಹಿತ್ಯ ವಿಮರ್ಶೆಯ ತತ್ವಗಳು ಇವುಗಳನ್ನು ಮಾತ್ರವೇ ಗಮನಿಸಿಕೊಂಡು ಅಧ್ಯಯನವನ್ನು ನಡೆಸುವುದು ಅಸಾಧ್ಯ. ಈ ದೃಷ್ಟಿಯಿಂದ ಸಾಹಿತ್ಯ ವಿಮರ್ಶೆಯು ತೆಗೆದುಕೊಳ್ಳಬೇಕಾದ ನಿಲುವುಗಳು ಭಿನ್ನವಾಗಿರುತ್ತದೆ. ಭಾಷೆಯ ಆಕರ್ಶಕ ಗುಣಗಳು ಮಾತ್ರವೇ ಮುಖ್ಯವೆಂದು ತಿಳಿದುಕೊಳ್ಳುವವರು ಯಾವಾಗಲೂ ಒಂದು ರೀತಿಯ ಪಕ್ಷಪಾತದ ದೃಷ್ಟಿಯನ್ನು ಹೊಂದಿರುವುದು ಸಾಧ್ಯ. ಕೃತಿಯನ್ನು ವಿಮರ್ಶಿಸುವುದೆಂದರೆ ಅದು ಸೌಂದರ್ಯದ ವಿಮರ್ಶೆಯೂ ಅಲ್ಲವೆನ್ನುವುದನ್ನು ನಾವು ಮನಗಾಣಬೇಕು ಎನ್ನುವುದಕ್ಕೆ ವಿಜಯಶಂಕರ ಅವರ ವಸುಧಾವಲಯ ಕೃತಿಯಲ್ಲಿ ನಮಗೆ ಹೇರಳವಾದ ಉದಾಹರಣೆಯು ದೊರೆಯುತ್ತದೆ. ಹಾಗೆಂದು ಅವರು ಬರೀ ರೂಪವನ್ನು ಮಾತ್ರವೇ ಗಣನೆಗೆ ತಗೆದುಕೊಳ್ಳುವುದಿಲ್ಲ. ರೂಪನಿಷ್ಠರಿಗೆ ಸಾಹಿತ್ಯವೆಂದರೆ ಭಾಷೆಯಲ್ಲಿ ಸೂಚನೆಗಳು ಮಾತ್ರವೇ ಮುಖ್ಯವಾಗಿರುತ್ತದೆ. ಆದುದರಿಂದ ರಚನಾವಾದಿಗಳು ಹೇಳುವ ಸಂಗತಿಗಳು ಮಾತ್ರ ಭಿನ್ನ. ಆದರೆ ರಚನಾವಾದಿಗಳಿಗೆ ಕೃತಿಯ ವಸ್ತು ಮತ್ತು ಅದರ ಅಭಿವ್ಯಕ್ತಿಯೂ ಮುಖ್ಯ. ಉದಾರವಾದಿಗಳು ಸಾಹಿತ್ಯವನ್ನು ನೋಡುವ ಕ್ರಮವು ಬೇರೆ. ಅವರ ಪ್ರಕಾರ ಸಾಹಿತ್ಯವೆನ್ನುವುದು ಸೌಂದರ್ಯ ಮತ್ತು ಅವರು ಅದಕ್ಕೆ ತಕ್ಕ ನುಡಿಗಟ್ಟುಗಳನ್ನು ಹುಡುಕುತ್ತಾರೆ. ಈ ದೃಷ್ಟಿಯಿಂದ ಅವರ ಮಾತುಗಳು ಅಮೂರ್ತವೇ ಆಗಿರುತ್ತದೆ. ಅವರು ಅದರ ಮೂಲಕವೇ ಆದರ್ಶವನ್ನು ಹುಡುಕುತ್ತಾರೆ. ವಸುಧಾವಲಯದ ಮೊದಲ ಭಾಗದ ವಿಮರ್ಶೆಯು ಸಾಹಿತ್ಯ, ಸಂಸ್ಕೃತಿ, ಕೃತಿಗಳನ್ನು ಈವತ್ತು ಗ್ರಹಿಸಬೇಕಾದ ಕ್ರಮಗಳನ್ನು ಹೇಳುತ್ತವೆ. ಹಾಗೆಂದು ಅತ್ಯಂತ ಉದಾರವಾದಿ ನೆಲೆಯನ್ನು ಹೇಳುತ್ತದೆ ಎಂದು ಭಾವಿಸಬೇಕಾಗಿಲ್ಲ. ಕನಕದಾಸರ ಬಗ್ಗೆ ಅವರು ಬರೆದ ಕ್ರಮವು ಹೇಗೆ ಮುಖ್ಯವಾಗಿದೆಯೋ ಅದೇ ರೀತಿಯಲ್ಲಿ ಆರ್ಕೆಯವರ ಕೃತಿಯೂ ವಿಜಯಶಂಕರರಿಗೆ ಮುಖ್ಯವಾಗಿದೆ. ನೆನಪಿನ ಹಳ್ಳಿ ಕೃತಿಯನ್ನು ಅವರು ಗಮನಿಸಿದ ರೀತಿಯು ಅತ್ಯಂತ ಮುಖ್ಯ. ಉದಾರತೆ ಎನ್ನುವುದು ಇಲ್ಲಿ ಪ್ರಧಾನವಲ್ಲ. ಉದಾರವಾದಿಗಳ ನೆಲೆಯು ಬೇರೆ ಇರುತ್ತದೆ ಎನ್ನುವುದನ್ನು ಇಲ್ಲಿ ಗಮನಿಸುವುದು ಅತ್ಯಂತ ಸೂಕ್ತ.

ಉದಾರವಾದಿ ಮಾನವತಾವಾದಿಗಳದ್ದು ಈ ದೃಷ್ಟಿಯಿಂದ ಅರೆ ನಗರ ಕೇಂದ್ರಿತವಾದ ದೃಷ್ಟಿಯೂ ಹೌದು. ಉದಾರವಾದಿ ಮಾನವತಾವಾದಿಗಳದ್ದು ಈ

ದೃಷ್ಟಿಯಿಂದ ವಿಶಿಷ್ಟವಾದ ನಿಲುವೂ ಹೌದು ಎನ್ನುವುದನ್ನು ನಾವು ಒಪ್ಪಿಕೊಳ್ಳಬಹುದು. ಉದಾರವಾದಿಗಳು ಮನುಷ್ಯನಲ್ಲಿ ಔನ್ನತ್ಯದ ನಿಲುವುಗಳನ್ನು ಮಾತ್ರವೇ ಹುಡುಕುತ್ತಾರೆ. ಆದರೆ ಅವರು ಹೇಳುವ ನಿಲುವುಗಳು ವಾಸ್ತವವಾಗಿ ನಿಲ್ಲುವುದು ನೈತಿಕ ವ್ಯಾಖ್ಯಾನದಲ್ಲಿ ಎನ್ನುವುದನ್ನು ನಾವು ಇಲ್ಲಿ ಉಲ್ಲೇಖಿಸಬೇಕು. ಅವರು ಸಾಧ್ಯವಾದಷ್ಟು ರಾಜಕಾರಣದಿಂದ ಮುಕ್ತವಾದ ಮನುಷ್ಯರನ್ನು ಹುಡುಕುತ್ತಾರೆ. ಆದರೆ ರಾಜಕಾರಣವೆನ್ನುವುದು ವ್ಯಕ್ತಿಗಳಿಗೆ ಹೊರತುಪಡಿಸಿ ಇರುವುದೂ ಇಲ್ಲ. ಚರಿತ್ರೆ ಮತ್ತು ಸಮಾಜ ಹಾಗೂ ಮನುಷ್ಯನ ವಾಸ್ತವತೆಯು ರಾಜಕಾರಣದಿಂದ ಹೊರತಾಗಿಯೂ ಇರುವುದಿಲ್ಲ. ಇದನ್ನು ನಾವು ಅವರ ಈಗಿನ ಬರಹಗಳಲ್ಲಿ ಕಾಣುತ್ತೇವೆ. ಅವರ ನಿಜಗುಣ ಮತ್ತು ವಸುಧಾ ವಲಯಕ್ಕೆ ಈ ದೃಷ್ಟಿಯಿಂದ ಅತ್ಯಂತ ಮಹತ್ವದ ಅಂತರವೂ ಇದೆ.

ಈ ಸಂಕಲನದ ಮಾಸ್ತಿಯವರ ವಿಮರ್ಶಾ ಪರಿಕಲ್ಪನೆಗಳು ಅತ್ಯಂತ ಮುಖ್ಯವಾದ ಲೇಖನ. ಸಾಹಿತ್ಯ ವಿಮರ್ಶೆಯು ಸಮಾಜಕ್ಕೆ ಸಂಬಂಧಪಟ್ಟುಕೊಂಡು ಇರಬೇಕಾಗುತ್ತದೆ. ಅದನ್ನು ಸಾಮಾಜಿಕ ಜೀವನಕ್ರಮದಲ್ಲಿ ಇಟ್ಟುಕೊಂಡು ಮಾತಾಡಬೇಕಾಗುತ್ತದೆ ಹಾಗೂ ಅದನ್ನು ನಾವು ಗಮನಿಸುವಾಗ ಎಚ್ಚರವೂ ಬೇಕಾಗುತ್ತದೆ. ಸಾಹಿತ್ಯ ವಿಮರ್ಶೆಯು ಯಾವುದೇ ಗುರಿಯಿಲ್ಲದೆ ಇರುವುದು ಅಸಾಧ್ಯ. ಎಲ್ಲರಿಗೂ ಗೊತ್ತಿರುವಂತೆ ಸಾಹಿತ್ಯವು ಮತ್ತು ಮತ್ತೆ ಬರೆಯಲಾಗುವುದಿಲ್ಲ. ಹಾಗೂ ಮುದ್ರಿತವಾದ ಕೃತಿಗಳನ್ನು ಮತ್ತೆ ಮತ್ತೆ ಒರಸಿ ಹಾಕಲು ಸಾಧ್ಯವೂ ಇಲ್ಲ ಎನ್ನುವುದನ್ನು ಇದು ನಮಗೆ ಸೂಚಿಸುತ್ತದೆ.

ಸಮಾಜ – ಸಂಸ್ಕೃತಿ ತಂತ್ರಜ್ಞಾನದ ಭಾಗವೂ ಈ ಮೊದಲು ಹೇಳಿದ ಅಂಶಗಳನ್ನು ಸೂಚಿಸುತ್ತವೆ. ಯಾವುದನ್ನು ನಾವು ಈಗ ಆಧುನಿಕತೆಯೆಂದು ಹೇಳುತ್ತೇವೆಯೋ ಅದು ಬರೀ ವಿಷಯನಿಷ್ಟವಾದ ನಿಲುವನ್ನು ಪಡೆಯುತ್ತದೆ. ಅಂದರೆ ಅದರಲ್ಲಿ ವ್ಯಕ್ತಿ ಮತ್ತು ಅವನ ಆಂತರಂಗಿಕವಾದ ನಿಲುವು ಮಾತ್ರವೇ ಇರುತ್ತೆಯಾದರೆ ಆತ್ಯಂತ ಪ್ರಗತಿಪರವಾದ ಯಾವುದೇ ನಿಲುವುಗಳು ವಾಸ್ತವವಾದದಲ್ಲಿ ಬೇರೆಯಾಗುತ್ತದೆ. ಅದರಲ್ಲಿ ಸಾಮಾಜಿಕ ಮತ್ತು ಚಾರಿತ್ರಿಕ ಮುಖಾಮುಖಿಯಾಗುತ್ತವೆ. ವಾಸ್ತವವಾದದಲ್ಲಿ ಭಾಷೆ ಮತ್ತು ಅದರ ನೀತಿಗಳು ಬೇರೆಯಾಗುತ್ತವೆ ಮತ್ತು ಅದರಲ್ಲಿ ವಿಶಿಷ್ಟತೆಯು ಇರುತ್ತದೆ. ವಾಸ್ತವವಾದದಲ್ಲಿ ಲೇಖಕನು ಹೇಳುವ ವಿಚಾರಗಳು ಅದರಲ್ಲಿ ನೇರವಾಗಿಯೂ ವ್ಯಕ್ತವಾಗುತ್ತದೆ. ಅದು

ಸಮಾಜ ಮತ್ತು ಅದರ ಸ್ವರೂಪವನ್ನು ಭಾಷೆಯಲ್ಲಿ ಹೇಳುತ್ತದೆ. ಸಮಾಜ ಮತ್ತು ಅದರ ಸತ್ಯಗಳು ವ್ಯಕ್ತವಾಗುತ್ತವೆ. ವ್ಯಕ್ತಿಯ ಅನುಭವಗಳು ಭಾಷೆಯ ಮೂಲಕ ಸಾರ್ವಜನಿಕವಾಗುತ್ತದೆ ಎಂದು ಲುಕಾಕ್ಸ್ ಹೇಳುತ್ತಾನೆ. ಯಾವುದನ್ನು ಸಾಮಾಜಿಕ ಜೀವನದ ಸಮಗ್ರತೆಯೆನ್ನುವುದೂ ಈ ಮೂಲಕ ವ್ಯಕ್ತವಾಗುತ್ತದೆ. ಆದರೆ ಬಹುತ್ವ ಮತ್ತು ಅದರ ಸ್ವಭಾವಗಳನ್ನು ಭಕ್ತಿನ್ ಹೇಳುತ್ತಾನೆ. ವಾಸ್ತವವಾಗಿ ಬಂಡವಾಳವಾದವು ವ್ಯಕ್ತಿ ಮತ್ತು ಅವನ ಸಮಗ್ರತೆಯನ್ನು ಛಿದ್ರೀಕರಣ ಮಾಡಿದೆ.

ಮಾಹಿತಿ ತಂತ್ರಜ್ಞಾನದಿಂದ ಪ್ರಾರಂಭಮಾಡಿ ವಿಜ್ಞಾನ ಚಿಂತನೆಯ ಪ್ರೇರಣೆಯ ವರೆಗೆ ಇಲ್ಲಿ ಲೇಖನದ ಹರಹುಗಳನ್ನು ನಾವು ಕಾಣಬಹುದು. ಇಂಥ ಚರ್ಚೆ ಕನ್ನಡದಲ್ಲಿ ನಡೆದದ್ದು ತುಂಬಾ ಕಡಿಮೆ. ವ್ಯಕ್ತಿ ಮತ್ತು ಅವನ ಒಂಟಿತನವನ್ನು ಹೇಳುವ ಅವನ ದುಃಖವನ್ನು ನಿರೂಪಿಸುವ ಕ್ರಮಗಳು ವಾಸ್ತವವಾದದಲ್ಲಿ ಬೇರೆಯಾಗುತ್ತದೆ. ಆದರೆ ಅದು ಆಧುನಿಕತಾವಾದದಲ್ಲಿ ಬೇರೆಯಾಗುತ್ತದೆ. ಯಾವಾಗ ವ್ಯಕ್ತಿಯು ಸಮಾಜದಿಂದ ಹೊರಗೆ ಉಳಿಯುತ್ತಾನೆಯೋ ಆಗ ಅವನ ವ್ಯಕ್ತಿತ್ವದಲ್ಲಿ ಬೇರೆಯಾದ ಸ್ವರೂಪವೂ ಕಾಣಿಸಿಕೊಳ್ಳುತ್ತದೆ. ಮಾತು ಮತ್ತು ಸಂಬಂಧಗಳು ಹೇಗೆ ಒಂದು ಸಂಸ್ಕೃತಿಯಲ್ಲಿ ಅತ್ಯಂತ ಮುಖ್ಯವಾಗುತ್ತವೆ ಎಂದು ಇಲ್ಲಿ ವಿಜಯಶಂಕರರು ಹೇಳುತ್ತಾರೆ. ಇದು ಅತ್ಯಂತ ಕುತೂಹಲಕಾರಿಯಾದ ಲೇಖನವೂ ಹೌದು.

ಇದರಲ್ಲಿ ಸಂಸ್ಕೃತಿಯು ವಿಶಿಷ್ಟವಾಗಿಯೂ ವ್ಯಕ್ತವಾಗುತ್ತದೆ ಮತ್ತು ಇಲ್ಲಿ ಹೀಗೆಯೂ ಹೇಳಬಹುದು : ವ್ಯಕ್ತಿತ್ವ ಮತ್ತು ಅದರ ಹಿಂದೆ ಇರುವ ಒತ್ತಡವನ್ನು ನಾವು ಒಂದೇ ರೀತಿಯಲ್ಲಿ ಗ್ರಹಿಸಲು ಬರುವುದೂ ಇಲ್ಲ. ಅದರಲ್ಲಿ ಬೇರೆ ಬೇರೆ ಸಂಗತಿಗಳು ಅಡಕವಾಗಿವೆ. ಅದರಲ್ಲಿ ಕಂಡು ಬರುವ ಒತ್ತಡಗಳನ್ನು ಕೇವಲ ಘೋಷಣೆ ಎಂದು ಹೇಳಲು ಬರುವುದೂ ಇಲ್ಲ. ಆದರೆ ಈ ವಿಷಯದ ಕುರಿತು ಬೇರೆ ಬೇರೆ ಹೇಳಿಕೆಗಳೂ ಇವೆ. ವಾಸ್ತವತೆ ಮತ್ತು ಆಧುನಿಕತೆಯ ಕುರಿತು ಅನೇಕರು ವಾದ ವಿವಾದವನ್ನೂ ಮಾಡಿದ್ದಾರೆ. ಜನಪ್ರಿಯಕಲೆ, ಸಹಜವಾದ, ಸಮಾಜವಾದಿ ವಾಸ್ತವ, ಮಾಧ್ಯಮಗಳು, ಆಧುನಿಕತಾವಾದ, ಆಧುನಿಕೋತ್ತರವಾದ ಮುಂತಾದವುಗಳನ್ನು ಹೇಳಿಕೊಳ್ಳುವುದು ಎಂದರೆ ಅದರಲ್ಲಿ ಮತ್ತೆ ಮತ್ತೆ ರಾಜಕಾರಣವನ್ನು ನಿರೂಪಿಸುವುದೂ ಹೌದು. ಆದರೆ ಯಾವಾಗ ನಾವು ಇದನ್ನು ಹೀಗೆ ನೋಡುತ್ತೇವೆ ಮತ್ತು ಯಾವ ರೀತಿಯಲ್ಲಿ ನೋಡುತ್ತೇವೆ ಎನ್ನುವುದೂ ಬಹಳ

ಮುಖ್ಯವಾಗಿದೆ. ಅಂದರೆ ಇದರಲ್ಲಿ ಅತ್ಯಂತ ಜಟಿಲವಾದ ಪ್ರಶ್ನೆಯೂ ಇದೆ ಮತ್ತು ಅದರಲ್ಲಿ ಯಾವುದೇ ಸಮಸ್ಯೆಗಳು ಬಂದರೂ ಅದನ್ನು ನಾವು ನೋಡುವಾಗ ಅದರ ಸ್ವರೂಪದಲ್ಲಿ ಇರುವ ತಾತ್ವಿಕ ಗ್ರಹಿಕೆಯನ್ನು ನೋಡಬೇಕಾಗುತ್ತದೆ. ಆದ್ದರಿಂದಲೇ ನಮಗೆ ವಸುಧಾವಲಯದ ಮೂರನೆಯ ಭಾಗ ಮುಖ್ಯ ಎಂದು ಅನಿಸುತ್ತದೆ. ಆಧುನಿಕತೆ ಮತ್ತು ಅದರ ಪರಿಣಾಮಗಳನ್ನು ನಾವು ಭಿನ್ನವಾಗಿಯೂ ಗಮನಿಸಬೇಕಾಗುತ್ತದೆ. ಅದರಲ್ಲಿ ಬರೀ ನೆಗೆಟಿವ್ ಆದ ಭಾವನೆಗಳು ಮಾತ್ರವೇ ಇದೆ ಎಂದು ಯಾರೂ ಭಾವಿಸಬಾರದು. ಅದರಲ್ಲಿ ಅನೇಕ ಅಂಶಗಳು ಇವೆ. ಮತ್ತು ಅದರ ಕುರಿತು ಮತ್ತೆ ಮತ್ತೆ ಯೋಚನೆಯನ್ನು ಮಾಡಬೇಕಾಗುತ್ತದೆ. ಎಚ್.ಎಂ.ಟಿಯ ಕುರಿತ ಲೇಖನವು ಈ ಕಾರಣದಿಂದ ಅತ್ಯಂತ ಮುಖ್ಯ. ಸಾಮೂಹಿಕವಾದ ಪ್ರಾತಿನಿಧೀಕರಣಕ್ಕೂ ಮತ್ತು ಅದರ ಅಭಿವ್ಯಕ್ತಿಗೂ ಒಂದು ಸಂಬಂಧವಿದೆ. ಮತ್ತು ಅದನ್ನು ನೋಡುವಾಗ ನಾವು ಯಾವ ರೀತಿಯಲ್ಲಿ ಗ್ರಹಿಸುತ್ತೇವೆಯೋ ಅದರಲ್ಲಿ ಅನೇಕ ಅಂಶಗಳು ಸೇರ್ಪಡೆಯಾಗಿರುತ್ತದೆ. ಮತ್ತು ಅನೇಕ ಸಂದರ್ಭದಲ್ಲಿ ವ್ಯಕ್ತಿವಾದ ಮತ್ತು ಸಮಾಜವು ಜೊತೆಯಲ್ಲಿ ಇರುತ್ತದೆ. ಮತ್ತು ಅದನ್ನು ಬೇರ್ಪಡಿಸಲು ಆಗುವುದೇ ಇಲ್ಲ. ಸಮೂಹ ಮತ್ತು ಜೀವನವು ಹೇಗೆ ಅಭಿವ್ಯಕ್ತಿಯಾಗುತ್ತದೆ ಮತ್ತು ಯಾವ ರೀತಿಯಲ್ಲಿ ಅದು ವ್ಯಕ್ತವಾಗುತ್ತದೆ ಎನ್ನುವುದೂ ಅಷ್ಟೇ ಮುಖ್ಯವಾದ ಸಂಗತಿಯೂ ಆಗಿದೆ. ಒಂದು ಗಡಿಯಾರ ಮತ್ತು ಅದರ ಜೊತೆಗೆ ಇರುವ ತಂತ್ರಜ್ಞಾನ, ದೇಶಕ್ಕೆ ಅದರ ಕೊಡುಗೆ ಹೀಗೆ ಅನೇಕ ವಿಷಯಗಳನ್ನು ಇದು ಹೇಳುತ್ತದೆ.

ಇಲ್ಲಿ ಗಮನಿಸಬೇಕಾದ ಮತ್ತೆ ಕೆಲವು ಅಂಶಗಳೂ ಇವೆ. ಈವತ್ತು ಸಮಾಜ ಮತ್ತು ಅದರ ಅಭಿವ್ಯಕ್ತಿಯ ಕ್ರಮದಲ್ಲಿ ಯಾವುದನ್ನು ನಾವು ಕಾಣಬಹುದು ಎನ್ನುವುದೂ ವಿಜಯ ಶಂಕರರಿಗೆ ಮುಖ್ಯ. ಅದರ ಮುಖಗಳು ಒಂದೇ ಆಗಿಲ್ಲ. ಅದರ ಕ್ರಿಯೆಗಳೂ ಕೂಡಾ ಒಂದೇ ರೀತಿಯದು ಅಲ್ಲ. ಅದು ಬೇರೆಯಾಗುತ್ತದೆ. ಮತ್ತು ಅದರ ಲಕ್ಷಣವೂ ಒಂದೇ ಅಲ್ಲ. ಯಾವುದನ್ನು ಈಗ ಹೊಸ ನಿರೂಪಣೆ ಎಂದು ಹೇಳುತ್ತವೆಯೋ ಅದನ್ನು ನಾವು ನೋಡವುದು ಎಂದರೆ ಅದರ ರಾಜಕಾರಣವು ಎಲ್ಲಿದೆ ಎಂದು ನೋಡುವುದೂ ಹೌದು. ವಸುಧಾವಲಯದ ಕೊನೆಯ ಲೇಖನಗಳು ಇದನ್ನು ಸೂಚಿಸುತ್ತವೆ. ನಿರೂಪಣೆಯ ಶಾಸ್ತ್ರವೂ ಒಂದು ಬಗೆಯಲ್ಲಿ ನಿರ್ದಿಷ್ಟವಾದ ನಿಲುವನ್ನು ಹೊಂದಿರುತ್ತದೆ. ಅದನ್ನು ಶಾಸ್ತ್ರವೇ

ಅಲ್ಲವೆಂದು ಯಾರೂ ಭಾವಿಸಬಾರದು. ಯಾವುದೇ ನಿರೂಪಣೆಯನ್ನು ಒಬ್ಬರು ಮಾಡುತ್ತಿದ್ದಾರೆ ಎಂದರೆ ಅದನ್ನು ಸ್ವಾಯತ್ತವಾದ ಒಂದು ಪ್ರಕ್ರಿಯೆ ಎಂದು ಭಾವಿಸಬೇಕಾದ ಯಾವ ಅಗತ್ಯವೂ ಇಲ್ಲ. ಆಧುನಿಕತಾವಾದ ಅದರ ಪ್ರತಿನಿಧೀಕರಣ, ಭಾಷೆ, ಮತ್ತು ಅದರ ಪ್ರಕಾರದಲ್ಲಿ ಕಾಣಿಸಿಕೊಳ್ಳುತ್ತದೆ. ಸಾಂಪ್ರದಾಯಿಕವಾದ ಕಾಮಿಡಿ, ದುರಂತ, ಲಿರಿಕ್, ಎಪಿಕ್ ಮತ್ತು ನಾಟಕೀಯತೆಯ ಸ್ವರೂಪವು ಈಗ ಇಲ್ಲವಾಗಿದೆ ಅಥವಾ ಬದಲಾಗಿದೆ. ಸಾಮಾಜಿಕ ಜೀವನವು ಕೆಲವನ್ನು ಉಳಿಸಿಕೊಳ್ಳುತ್ತದೆ, ಕೆಲವನ್ನು ನಿರಾಕರಿಸುತ್ತದೆ. ಹೀಗೆ ನಿರಾಕರಿಸಲು ಕಾರಣವೆಂದರೆ ಅದರ ಕ್ರಿಯೆಗಳು ಮತ್ತು ಅವುಗಳ ಅರ್ಥವಂತಿಕೆಗಳು. ಹಾಗೆ ನೋಡುವುದಿದ್ದರೆ ಯಾವುದೇ ಸಾಂಪ್ರದಾಯಿಕವಾದ ಕಲೆಯು ಆ ಕಾಲದ ಅಗತ್ಯಗಳೂ ಆಗಿದ್ದವು. ಎಚ್.ಎಂ.ಟಿಯ ಬಗ್ಗೆ ಲೇಖನವನ್ನು ನಾವು ಈ ದೃಷ್ಟಿಯಿಂದಲೂ ಗಮನಿಸಬಹುದು.

ಸಾಮಾಜಿಕ ಜೀವನ ಮತ್ತು ಅದರ ಸಾಧ್ಯತೆಯೇ ಬಹಳ ಮುಖ್ಯವಾಗುತ್ತದೆ. ಸಾಹಿತ್ಯದ ರೂಪವನ್ನು ನೋಡುವುದರಿಂದ ಅದು ಗೈರುಹಾಜರಿಯಾಗುವ ಸಾಧ್ಯತೆಯು ಇದೆ ಎನ್ನುವುದು ಇಲ್ಲಿ ಉಲ್ಲೇಖನೀಯ. ಆದರೆ ಯಾವುದೇ ವಾಸ್ತವವಾದಿ ಕಲೆಯನ್ನು ನೋಡಿದರೆ ಅದರಲ್ಲಿ ಪ್ರಾತ ನಿಧಿಕತೆಯು ಭಿನ್ನವಾಗುತ್ತದೆ. ಅದನ್ನು ನೋಡುವಾಗ ಅದರ ರೂಪವನ್ನು ಮಾತ್ರವೇ ನಾವು ಗಮನಿಸಬೇಕಾದ ಯಾವ ಅಗತ್ಯವೂ ಇಲ್ಲ. ಅದರ ಬದಲು ಅದು ತಳೆಯುವ ಸಾಮಾಜಿಕ ನಿಲುವನ್ನು ನೋಡಬೇಕಾಗುತ್ತದೆ. ಅಂದರೆ ಅದರಲ್ಲಿ ಭಿನ್ನತೆಯು ಇದೆ. ಅನಂತಮೂರ್ತಿಯವರ ಸಂದರ್ಶನವು ಇದರ ಕಡೆಗೆ ಹೆಚ್ಚಿನ ಒತ್ತನ್ನು ಕೊಟ್ಟಿದೆ. ಆರ್ಥಿಕ ಪ್ರಶ್ನೆಯನ್ನು ಮತ್ತು ಸಾಹಿತ್ಯ ಹಾಗೂ ಭಾಷೆಯನ್ನು ಜೊತೆಗೆ ಇಟ್ಟು ಇಲ್ಲಿ ಅವರು ನೋಡಿದ್ದು ಅತ್ಯಂತ ವಿಶೇಷವಾಗಿದೆ. ಆಧುನಿಕತಾವಾದ ಮತ್ತು ರಾಜಕೀಯ ಆಧುನಿಕತೆಯ ಪ್ರಶ್ನೆಯು ಈ ದೃಷ್ಟಿಯಿಂದ ಭಿನ್ನವಾದ ಪ್ರಕ್ರಿಯೆಗಳು. ಆಧುನಿಕತಾವಾದದ ರಾಜಕೀಯ ಚಿಂತಕರು ಮಂಡಿಸುವ ವಿಚಾರಗಳು ಈ ದೃಷ್ಟಿಯಿಂದ ಭಿನ್ನವಾದ ನಿಲುವನ್ನು ತಳೆಯುತ್ತಾರೆ. ಆಧುನಿಕ ರಾಜಕೀಯ ಚಿಂತಕರು ಅಭಿವೃದ್ಧಿಯು ಒಂದು ರೀತಿಯಲ್ಲಿಯೂ ಇದೆ. ಅವರು ವ್ಯಕ್ತಿ ಮತ್ತು ಅವನ ಸ್ವಾಯತ್ತ ವಿಚಾರಗಳು ಮಾತ್ರವೇ ಪ್ರಧಾನವಾಗಿದೆ ಎಂದು ತಿಳಿದುಕೊಂಡಂತೆಯೂ ಇದೆ. ಅವರ ತಾತ್ವಿಕತೆಯು ಎಲ್ಲಿಗೆ ಹೋಗಿದೆ ಮತ್ತು ಹೇಗೆ

ಹೋಗಿದೆ ಎನ್ನುವುದೂ ಇಲ್ಲಿ ಉಲ್ಲೇಖನೀಯ. ಆಧುನಿಕ ಮಾರುಕಟ್ಟೆಯು ಮಾಡುತ್ತಿರುವ ಹಣ ಮತ್ತು ಅದರ ಚಲಾವಣೆಯು ಮಾತ್ರವೇ ಅವರಿಗೆ ಬಹಳ ಮುಖ್ಯವಾಗಿದೆ. ಆದರೆ ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೂ ಇದೆ. ಆಧುನಿಕ ಆರ್ಥಿಕ ತಜ್ಞರು ಪ್ರಭುತ್ವಕ್ಕೆ ಬೇಕಾದ ಕೆಲವು ನೀತಿಗಳನ್ನು ಮಾತ್ರವೇ ಹೇಳುತ್ತಾರೆ. ಇವುಗಳನ್ನು ಲೇಖಕರು ಗುರುತಿಸುತ್ತಾರೆ.

ಇಲ್ಲಿ ಮತ್ತೆ ಆಧುನಿಕತೆಯನ್ನು ಅರ್ಥ ಮಾಡಿಕೊಳ್ಳಬೇಕು. ಆಧುನಿಕತೆಯು ಮೂಲತಃ ಇಡೀ ಸಮಾಜದ ಬಿರುಕುಗಳನ್ನು ಸೂಚಿಸುತ್ತದೆ. ಹತ್ತೊಂಬತ್ತನೆಯ ಶತಮಾನದ ಅರ್ಧ ಭಾಗದಿಂದ ಬಂದ ಅನೇಕ ಪ್ರಶ್ನೆಗಳು ಕೂಡಾ ಈ ಅಂಶಗಳನ್ನು ಸೂಚಿಸುತ್ತದೆ. ಉದಾರತೆ, ಪ್ರಜಾಪ್ರಭುತ್ವ, ವ್ಯಕ್ತಿವಾದ, ವೈಜ್ಞಾನಿಕತೆ, ಚಾರಿತ್ರಿಕ ವಿಕಾಸಶೀಲತೆಯ ಪ್ರಶ್ನೆಗಳು ಒಂದು ಸಂಕೀರ್ಣವಾದ ಸ್ವರೂಪವನ್ನು ಪಡೆಯಿತು. ತಾಂತ್ರಿಕತೆಯು ಮುಂಚೂಣಿಗೆ ಬಂದ ಮೇಲೆ ಮತ್ತೆ ಒಂದು ಪ್ರಶ್ನೆಯು ಬಂತು. ತಾಂತ್ರಿಕತೆಯು ವಿನಾಶವನ್ನು ಸೃಷ್ಟಿಸಿತು. ಅದರಿಂದ ರಾಜಕೀಯ ಅಸ್ಥಿರತೆಯೂ ಬಂತು. ಹಾಗೂ ಆಧುನಿಕತೆಯು ಬಂದಾಗ ವಾಸ್ತವತೆಯು ನಿರಾಕರಣೆಗೆ ಗುರಿಯಾಯಿತು. ನವ್ಯತೆಯು ಸಾಂಸ್ಕೃತಿಕ ಸಿದ್ಧಾಂತಗಳನ್ನು ಒಡೆದು ಹಾಕಿತು.

ವಿಜ್ಞಾನ, ಜ್ಞಾನ ಮತ್ತು ಆಧುನಿಕತೆಯ ನಡುವಣ ಸಮಸ್ಯೆಯು ಬಹಳ ವಿಶಿಷ್ಟವೂ ಆಗಿದೆ ಎನ್ನುವುದರ ಅರಿವು ವಿಜಯಶಂಕರ ಅವರಿಗೆ ಇದೆ. ಯಾವುದನ್ನೂ ಈಗ ನಾವು ಸಂಸ್ಕೃತಿಯ ಒಳಗಿನದು ಎಂದು ಹೇಳುವಂತೆ ಇಲ್ಲ. ಜ್ಞಾನ ಮತ್ತು ಅದರ ಸಮಸ್ಯೆಯೂ ಈಗ ಬೇರೆಯಾಗಿದೆ. ಸಂಸ್ಕೃತಿಯ ಒಳಗಿನದು ಮತ್ತು ಸಂಸ್ಕೃತಿಯ ಹೊರಗಿನದು ಎನ್ನುವುದಕ್ಕೆ ಯಾವುದೇ ಅರ್ಥವೂ ಉಳಿದಿಲ್ಲ ಎನ್ನುವುದೂ ಅವರಿಗೆ ಗೊತ್ತಿದೆ ಈ ಕಾರಣಗಳಿಂದ 'ವಸುಧಾ ವಲಯ' ಮಹತ್ವದ ಕೃತಿಯಾಗಿದೆ.

# ಜಿ.ಕೆ.ರವೀಂದ್ರ ಕುಮಾರ್ ಅವರ 'ತಾರಸಿಮಲ್ಹಾರ'

* ಪ್ರಜ್ಞಾ ಮತ್ತೀಹಳ್ಳಿ

ಕಾವ್ಯಕ್ಷೇತ್ರದಲ್ಲಿ ಮೂರು ದಶಕಗಳಿಗಿಂತಲೂ ಹೆಚ್ಚಿನ ಸಮಯದಿಂದ ಚಿರಪರಿಚಿತ ಪ್ರತಿಭೆಯೆಂದು ಗುರುತಿಸಿಕೊಂಡಿರುವ ರವೀಂದ್ರರು ಕವಿತೆಯ ಇನ್ನೊಂದು ಮಗ್ಗುಲಿರಬೇಕು ಎಂದೆನ್ನಿಸುವಂತಹ ಲಲಿತ ಪ್ರಬಂಧಗಳನ್ನು ಬರೆದಿದ್ದಾರೆ. 2018ರ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ಪಡೆದಿರುವ ಈ ಕೃತಿಯನ್ನು ಮೈಸೂರಿನ ಅನನ್ಯ ಪ್ರಕಾಶನ 2018ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಿಸಿದೆ. ನೂರಿಪ್ಪತ್ತು ಪುಟಗಳ ಹೊತ್ತಿಗೆಯ ಬೆಲೆ ರೂಪಾಯಿ 110/ ಆಕಾಶವಾಣಿಯಲ್ಲಿ ಅನೇಕ ದಶಕಗಳಿಂದ ಸೇವೆ ಸಲ್ಲಿಸುತ್ತಿದ್ದ ರವೀಂದ್ರ ಕುಮಾರರ ಸಹೋದ್ಯೋಗಿಯೂ ಹಾಗೂ ಸ್ವತ: ಒಬ್ಬ ಒಳ್ಳೆಯ ಕವಿ–ಕಾದಂಬರಿಕಾರರಾಗಿರುವ ಅಬ್ದುಲ್ ರಶೀದ ಈ ಪುಸ್ತಕಕ್ಕೆ ಬಹಳ ಸೊಗಸಾದ ಮುನ್ನುಡಿ ಬರೆದಿದ್ದಾರೆ. ಸ್ವತ: ಒಳ್ಳೆಯ ಬರಹಗಾರರಾದ ರಘುನಾಥ ಚ.ಹ. ಬೆನ್ನುಡಿ ಬರೆದಿದ್ದಾರೆ. ಹನ್ನೊಂದು ಪ್ರಬಂಧಗಳೂ ಕೂಡ ತಮ್ಮದೇ ಆದ ವಿಷಯ ವೈವಿಧ್ಯತೆಯಿಂದ ಓದುಗರನ್ನು ಹಿಡಿದಿಡುತ್ತವೆ.

ಮಳೆಯ ಕುರಿತಾದ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತ ರವೀಂದ್ರರು ಬಯಲು ಸೀಮೆಯ ಸಿಡಿಲು ಸಮೇತ ಮಳೆಯನ್ನು ಸೊಗಸಾಗಿ ವರ್ಣಿಸುತ್ತಾರೆ. ಸೀಡ್‌ಲೆಸ್ ಹಣ್ಣಿನಂತೆ ಸಿಡಿಲು ಲೆಸ್ ಮಳೆ ಕಂಡುಹಿಡಿಯಬೇಕೆಂದು ಫರ್ಮಾನು ಹೊರಡಿಸುತ್ತಾರೆ. ಹಾಗೆಯೇ ನೌಕರಿಗಾಗಿ ಬಂದು ಸೇರಿಕೊಂಡ ಕಾರವಾರದಲ್ಲಿ ಮಳೆಯು ಸಮುದ್ರವ ನುಂಗಿ, ಮುಗಿಲೇ ಇಳೆಯನ್ನು ನುಂಗಿ ಎಂದು ಹಾಡುವಂತೆ ಸುರಿಯುವ 51 ಇಂಚುಗಳ ಮಳೆಯ ಕುರಿತು ಪ್ರಸ್ತಾಪಿಸುತ್ತಾರೆ. ಆ ನಂತರ ಮಡಿಕೇರಿಯಲ್ಲಿ ಅಸಾಧ್ಯ ಛಳಿಯ ಜೊತೆಗೆ ಮಂಜು ಮತ್ತು ಮಳೆ ಸುರಿಯುವ ಬಗೆಯನ್ನು ವರ್ಣಿಸುತ್ತಾರೆ. ಅಲ್ಲಿ ಅವರಿರುವ ಕ್ವಾರ್ಟಸ್ ಸುರಿಯುವ ರೀತಿಯನ್ನು ತಮ್ಮ ಸಂಗೀತ ಪ್ರೀತಿಯೊಂದಿಗೆ ಸಮೀಕರಿಸಿಕೊಂಡು ತಾವು ತಾರಸಿ ಮಲ್ಹಾರ

ಎಂದು ಹೆಸರಿಟ್ಟಿದ್ದನ್ನು ವಿನೋದ ಬೆರೆಸಿದ ಜಾಣತನದೊಂದಿಗೆ ಬರೆಯುತ್ತಾರೆ. ಬೆಂಗಳೂರಲ್ಲಿ ಮಳೆ ತರಿಸಬೇಕೆಂದು ಒಬ್ಬರು ವಯಲಿನ್ ನುಡಿಸಿ ವಿಫಲವಾಗಿದ್ದನ್ನು ಪ್ರಸ್ತಾಪಿಸಿ ಆ ಮನುಷ್ಯನ ವಯಲಿನ್ ಸಿ.ಡಿ. ಹಾಕಿಕೊಂಡರೆ ಮಳೆ ನಿಲ್ಲಬಹುದೆಂಬ ಸಾಲುಗಳನ್ನು ಓದಿದಾಗ ಆ ವ್ಯಂಗ್ಯದ ಹಿಂದಿನ ಸೂಕ್ಷ್ಮ ಗ್ರಹಿಕೆಯನ್ನು ಮೆಚ್ಚದಿರಲಾಗುವುದಿಲ್ಲ.

ಹೋಟೆಲಿನ ಊಟ–ತಿಂಡಿ–ವಸತಿ ಇವೆಲ್ಲವುಗಳ ರೋಚಕ ಅನುಭವವನ್ನು ಬಹಳ ಸೊಗಸಾಗಿ ಹಿಡಿದಿಡುವ ಪ್ರಬಂಧವೊಂದಿದೆ. ರಘು ಹೋಟೆಲಿನ ಒಳ ಕೋಣೆಯ ಹೊಗೆ, ಬಿಸಿಲು ಕೋಲು, ಪಾತ್ರೆ ತೊಳೆಯುವ ಸದ್ದು, ದೋಸೆ ತವಾದ ಚುಂಯ್ ಸದ್ದುಗಳ ಆಪ್ತ ಚಿತ್ರಣವನ್ನು ಕಟ್ಟಿಕೊಡುತ್ತ ಲೇಖಕರು ಚೆನ್ನೈನ ಲೀಮೆರಿಡಿಯನ್ ಎಂಬ ಸೆವೆನ್ ಸ್ಟಾರ್ ಹೋಟೆಲಿನ ಕಾಂಪ್ಲಿಮೆಂಟರಿ ಬ್ರೆಕ್ ಫಾಸ್ಟಿನ ಪೇಚನ್ನು ತೆರೆದಿಡುತ್ತಾರೆ. ಬೆಳ್ಳುಳ್ಳಿ ಹಾಕದ ಶುದ್ಧ ಶಾಕಾಹಾರಿ ಹೋಟೆಲ್ ಹುಡುಕುವುದರಲ್ಲೇ ಹನಿಮೂನ್ ಮುಗಿದ ತಮ್ಮದೇ ಕತೆಯನ್ನು ಬಿಚ್ಚಿಡುತ್ತ ಹಾಗೆಯೇ ಮಾನಾ ಎಂಬ ಭಾರತದ ಗಡಿಯಲ್ಲಿರುವುದ ಕೊನೆಯ ಟೀಸ್ಟಾಲ್ ಯಾಕೆ? ಮೊದಲ ಟೀ ಸ್ಟಾಲ್ ಯಾಕಲ್ಲ? ಎಂದು ಪ್ರಶ್ನಿಸಿ ಓದುಗನನ್ನು ಜಿಜ್ಞಾಸೆಗೆ ದೂಡುತ್ತಾರೆ.

ರವೀಂದ್ರಕುಮಾರರ ಒಳಗೆ ತನ್ನ ಪರಿಸರವನ್ನು ಅದರ ಎಲ್ಲ ಒಳ ವಿವರಗಳೊಂದಿಗೆ ಗ್ರಹಿಸುವ ಕವಿಯೊಬ್ಬನಿದ್ದ ಹಾಗೂ ಸನ್ನಿವೇಶದ ಭಾವುಕ ಹರಿವಿನಲ್ಲಿ ಕೊಚ್ಚಿ ಹೋಗದಂತೆ ಥಟ್ಟನೆ ಎದುರಾಗುವ ಗಟ್ಟಿ ಬಂಡೆಯಂತಹ ದೃಢ ವಿಚಾರಗಳ ವಿವೇಕಿಯಿದ್ದ. ಈ ಮಾತಿಗೆ ಸಾಕ್ಷಿಯಾಗಿ ಇಲ್ಲಿನ ಎಲ್ಲ ಪ್ರಬಂಧಗಳಲ್ಲೂ ಸಾಕಷ್ಟು ಪಾಂಡಿತ್ಯಪೂರ್ಣ ಹೇಳಿಕೆಗಳು, ವಾಸ್ತವ ಬದುಕಿನ ಜಿಜ್ಞಾಸೆಗಳು ಕಾಣಸಿಗುತ್ತವೆ. ಆದರೆ ಅವ್ಯಾವವೂ ನೀರಸ ದಾಟಿಯ ಒಣಚರ್ಚೆಗಳಾಗದಂತೆ ಅವುಗಳನ್ನು ಆವರಿಸಿಕೊಂಡಿರುವ ರಸಪೂರ್ಣ ವಿನೋದದ ಹರಿವು ಓದುಗನನ್ನು ಕಿರುನಗೆಯ ಪ್ರಸನ್ನಭಾವಕ್ಕೆ ದೂಡುತ್ತದೆ. ಅಸ್ತವ್ಯಸ್ತ ಮೀಮಾಂಸೆ ಎನ್ನುವ ಪ್ರಬಂಧವನ್ನು ಓದುವಾಗಲಂತೂ ಈ ಕಿರುನಗೆಯು ಅಗಲವಾಗುತ್ತ ಕಿಲಕಿಲ ನಗುವಿಗೆ ತನ್ನ ಸ್ಥಾನವನ್ನು ಬಿಟ್ಟು ಕೊಡುತ್ತದೆ. ಮುಂದುವರಿದು ಪಧ್ಯವಂತರಿಗಿದು ಕಾಲವಲ್ಲ ಎಂಬ ಬರಹವನ್ನು ಓದುವಾಗಲಂತೂ ನೀವು ಕಚಗುಳಿಯಿಡಿಸಿ–ಕೊಂಡವರಂತೆ ಬಿದ್ದುಬಿದ್ದು ನಗುತ್ತಿರುತ್ತೀರಿ. ಆದಿಯಿಲ್ಲದ ಅಂತ್ಯ ಕಾಣದ

ಅನಂತಕಾವ್ಯದ ಬಗ್ಗೆ ಉದಾಹರಿಸುತ್ತ ಎದುರಿಗೆ ಕೂತವನ ಪಾಪ ಅಥವಾ ಪುಣ್ಯಕ್ಕೆ ಅನುಗುಣವಾಗಿ ಆತನಿಗೆ ಸಾಲುಗಳು ಪ್ರಾಪ್ತವಾಗುತ್ತವೆ ಎನ್ನುತ್ತಾರೆ.

ಉಲ್ಟಾ ಉಲ್ಲಾಸ ಎನ್ನುವ ಪ್ರಬಂಧದಲ್ಲಿ ಭಾಷೆಯಲ್ಲಿನ ವೈವಿಧ್ಯತೆಗಳನ್ನು ಮತ್ತು ಮಾತನಾಡುವಾಗ ಅನುಸರಿಸುವ ಅನೇಕ ವಿಧದ ಕೌತುಕಪೂರ್ಣ ಅಭ್ಯಾಸಗಳನ್ನು ವಿಶ್ಲೇಷಣೆಗೆ ಒಳಪಡಿಸುತ್ತಾರೆ. ಇದು ಚಿತ್ರಗೀತೆಗಳ ಸಮಯ ಎಂಬುದು ಸಿನಿಮಾ ಹಾಡುಗಳ ಲೋಕವನ್ನು ಅದ್ಭುತವಾದ ನೆನಪುಗಳೊಂದಿಗೆ ನೆನಪಿಸಿಕೊಳ್ಳುತ್ತ ಹೋಗುವ ಒಂದು ಚೆಂದದ ಬರಹ. ಚುಕ್ಕೀ ಚುಕ್ಕೀ ಎಂಬುದು ಬಿಂದುವಿನ ಆಕೃತಿಯಲ್ಲಿ ಇರುವ ಎಲ್ಲವುಗಳನ್ನು ಒಳಗೊಂಡಂತೆ ಲಘು ಶೈಲಿಯಲ್ಲಿ ಮುನ್ನಡೆಯುವ ಒಂದು ಹರಟೆಯಂತಿದೆ. ಒಂದು ಅಸಂಗತ ಲಹರಿ ಎಂಬ ಪ್ರಬಂಧವು ಅಸಂಗತ ಎಂಬ ಶಬ್ದವು ಕನ್ನಡ ಸಾಹಿತ್ಯದಲ್ಲಿ ಸ್ಥಾನ ಪಡೆದುಕೊಳ್ಳುತ್ತಿದ್ದ ಸಂದರ್ಭದ ಪ್ರೇರಣೆಯಿಂದ ಹೇಗೆ ಯುವ ಪೀಳಿಗೆಯ ಮೇಲೆ ಪ್ರಭಾವ ಬೀರಿತ್ತು ಎನ್ನುವ ಸಂಗತಿಯೊಂದಿಗೆ ಆರಂಭವಾಗುತ್ತದೆ. ಈ ಸಂಕಲನದ ಇತರ ಪ್ರಬಂಧಗಳಿಗಿಂತ ಭಿನ್ನವಾಗಿರುವ ಇದು ತುಸು ಗಂಭೀರವಾದ ಜಿಜ್ಞಾಸೆಗೆ ಇಳಿಯುತ್ತದೆ. ಕಳಿಂಗ ಯುದ್ಧದಲ್ಲಿ ಗೆದ್ದ ನಂತರ ವೈರಾಗ್ಯ ಭಾವ ತಾಳುವ ಅಶೋಕ ಚಕ್ರವರ್ತಿ ಜಗತ್ತಿನ ಕಣ್ಣಿಗೆ ಮಹಾಪುರುಷನಾಗಿ ಕಾಣಬಹುದು. ಆದರೆ ಅವನಿಗಾಗಿ ಹೋರಾಡಿ ಸಾವು-ನೋವಿಗೆ ತುತ್ತಾದ ಸೈನಿಕರ ದೃಷ್ಟಿಯಲ್ಲಿ ಈ ನಿರ್ಣಯ ಹೇಗೆ ಕಾಣಿಸಿರಬಹುದು? ಇದು ಲೇಖಕರ ಮನದಲ್ಲಿ ಹುಟ್ಟುವ ಮಾನವೀಯತೆಯ ಜಿಜ್ಞಾಸೆ. ಹೀಗೆ ಯುದ್ಧ ವಿರೋಧಿ ನಿಲುವನ್ನು ತಾಳುವುದೇ ಆಗಿದ್ದರೆ ಅಪಾರ ಪ್ರಮಾಣದ ಸಾವು-ನೋವನ್ನು ತಪ್ಪಿಸಬಹುದಿತ್ತಲ್ಲವೆ? ಯುದ್ಧಕ್ಕಿಂತ ಮೊದಲೇ ನಿರ್ಣಯಕ್ಕೆ ಬಂದಿದ್ದರೆ ಬಡಪಾಯಿ ಸೈನಿಕರ ಜೀವ ಹಾನಿಯನ್ನು ಉಳಿಸಬಹುದಿತ್ತು. ಹೀಗೆ ಓದುಗರನ್ನು ವಿಭಿನ್ನ ನೆಲೆಯಿಂದ ಯೋಚಿಸುವ ಹೊಸ ಸವಾಲಿಗೆ ತೆರೆದುಕೊಳ್ಳುವಂತೆ ಮಾಡುವ ಶಕ್ತಿ ರವೀಂದ್ರರ ಲೇಖನಿಗಿದೆ.

ಕುನ್ನಕುಡಿ ಮತ್ತು ನಾನು ಎಂಬ ಬರಹವನ್ನು ಓದುವಾಗ ಇದೊಂದು ಕತೆಯೆಂದೇ ಭಾಸವಾಗುತ್ತದೆ, ಅಥವಾ ಕಾದಂಬರಿಯೊಂದರ ಅಧ್ಯಾಯವಿರಬಹುದು ಎಂದೂ ಅನ್ನಿಸುತ್ತದೆ. ಲೇಖಕರ ಬಾಲ್ಯಕಾಲದ ಸಂಗೀತ ಪ್ರೀತಿಯೊಂದಿಗೆ ಶುರುವಾಗುವ ಬರಹದಲ್ಲಿ ಆ ಕಾಲದ ಏಕಮೇವ ಮನರಂಜನಾ ಮಾಧ್ಯಮವಾದ ರೇಡಿಯೊ ಮತ್ತು ಅದನ್ನು ಪ್ರಸಾರವಾಗುವಾಗ ಮಾತ್ರ

ಕೇಳಬೇಕಾದ ಅನಿವಾರ್ಯತೆ, ಆ ಘಳಿಗೆಯನ್ನು ತಪ್ಪಿಸಿಕೊಂಡರೆ ಮತ್ತೆ ಆಮೇಲೆ ಕೇಳಲು ಸಾಧ್ಯವಿಲ್ಲದಿದ್ದ ಅಸಹಾಯಕತೆ ಮುಂತಾದ ಸಂಗತಿಗಳನ್ನು ಬಿಂಬಿಸುತ್ತ ಸಂಗೀತಗಾರರನ್ನು ಪ್ರತ್ಯಕ್ಷ ಭೆಟ್ಟಿಯಾದಾಗ ಉಂಟಾದ ನಿರಾಶೆಯನ್ನು ವರ್ಣಿಸುತ್ತಾರೆ. ಇದೆ ಮತ್ತು ಇಲ್ಲದ ಎರಡೂ ದೋಣಿಗಳಲ್ಲಿ ಕಾಲಿಟ್ಟುಕೊಂಡೇ ನಮ್ಮ ಜೀವನ ಸಾಗುವುದೆ? ಎಂಬ ಲೇಖಕರ ಮಾತು ಇಡೀ ಬರಹವನ್ನು ಮತ್ತೊಂದು ಎತ್ತರಕ್ಕೆ ತೆಗೆದುಕೊಂಡು ಹೋಗುತ್ತದೆ. ಟೀಂ ಗುಂಜಿಗನೂರು ಎನ್ನುವುದೂ ಕೂಡ ಕಾದಂಬರಿಯ ಆರಂಭಿಕ ಅಧ್ಯಾಯವೆಂದೇ ಭಾಸವಾಗುವ ಬರವಣಿಗೆ. ಇದನ್ನು ಓದಿದಾಗ ಬಹಳಷ್ಟು ಪುರುಷ ಓದುಗರು ನಮ್ಮ ಬಾಲ್ಯದಲ್ಲೂ ಹೀಗೇ ಮಾಡಿದ್ದೆವು, ಹೀಗೇ ಆಗಿತ್ತು ಎಂಬಿತ್ಯಾದಿ ಉದ್ಗಾರಗಳನ್ನು ತೆಗೆಯುತ್ತಾರೆ. ಹೀಗೆ ತಮ್ಮ ಬಾಲ್ಯ ಕಾಲದ ಆಟ-ಪಾಟಗಳ ಬಗ್ಗೆ ಮತ್ತು ಲೀಲಾವಿನೋದಗಳ ಬಗ್ಗೆ ಹಲವಾರು ಜನ ಹಲವಾರು ಲೇಖನಗಳನ್ನು ಬರೆದಿರಬಹುದು. ಇಲ್ಲಿ ರವೀಂದ್ರ ಏಕೆ ಬೇರೆಯಾಗುತ್ತಾರೆಂದರೆ ಅವರು ಆ ಎಲ್ಲ ವಿದ್ಯಮಾನಗಳನ್ನು ಅಪಾರ ವಿನೋದದಿಂದ ಬರೆಯುತ್ತಿರುವಾಗಲೇ ತರ್ಕಯುತವಾಗಿ ಅದನ್ನು ವಿಶ್ಲೇಷಿಸುತ್ತಾರೆ. ಸಿನಿಮಾದ ಛಾಯಾಗ್ರಹಣದಲ್ಲಿ ದೃಶ್ಯವೊಂದನ್ನು ತೋರಿಸುವಾಗ ಥಟ್ಟನೆ ಕ್ಯಾಮೆರಾ ಎತ್ತರಕ್ಕೊಯ್ದು ಡ್ರೋಣ್ ಕ್ಯಾಮೆರದಂತೆ ಆಚೀಚೆ ಓಡಾಡುತ್ತ ಪಕ್ಷಿನೋಟದಲ್ಲಿ ದೃಶ್ಯವನ್ನು ಕಾಣಿಸುವಂತೆ ಈ ಬರಹ ನಮಗೆ ದಕ್ಕುತ್ತದೆ. ಬೌಂಡರಿ ಹೊಡೆದಾಗ ಪಕ್ಕದ ಹೊಲದವರು ಬೈಯುವುದನ್ನು ಮಕ್ಕಳು ಹೇಗೆ ಸ್ಫೂರ್ತಿದಾಯಕವಾಗಿ ತೆಗೆದುಕೊಳ್ಳುತ್ತಿದ್ದೆವು, ಗುಡಿಯ ಗೋಪುರಕ್ಕೆ ಕಟ್ಟಿದ ಸ್ಪೀಕರಿನಲ್ಲಿ ಬೆಳಿಗ್ಗೆ ಐದಕ್ಕೆಲ್ಲ ಚಳಿಯಲ್ಲಿ ಹೊದ್ದುಕೊಂಡು ಕಾಮೆಂಟರಿ ಕೇಳುತ್ತಿದ್ದೆವು ಎಂಬ ಸ್ವಾರಸ್ಯಕರ ಸಂಗತಿಗಳನ್ನು ಹೇಳುತ್ತ ಶಿವಮೊಗ್ಗೆಯಲ್ಲಿ ರಣಜಿ ಟ್ರೋಫಿ ಪಂದ್ಯವನ್ನು ಪ್ರತ್ಯಕ್ಷ ನೋಡಿದ ಅನುಭವವನ್ನು ಓದುಗರು ಬಹಳ ರುಚಿಕಟ್ಟಾಗಿ ಆಸ್ವಾದಿಸಬಹುದು.

ರವೀಂದ್ರರ ಸುಂದರ ಕವಿತೆಗಳನ್ನು ಮತ್ತು ಬೆರಗುಗೊಳಿಸುವ ಪ್ರಬಂಧಗಳನ್ನು ಇನ್ನು ಮೇಲೆ ಹೊಸದಾಗಿ ಓದಲು ಪಡೆಯುವಂತಿಲ್ಲ ಎಂಬ ಸತ್ಯವನ್ನು ನೆನಪಿಸಿಕೊಂಡಾಗ ಹುಟ್ಟುವ ಖೇದವನ್ನು ಮರೆಯಬೇಕೆಂದರೆ ಈಗಾಗಲೇ ಅವರು ಬರೆದಿರುವ ಕೃತಿಗಳನ್ನು ಪುನರ್ ಓದಿಗೆ ದಕ್ಕಿಸಿಕೊಳ್ಳಬೇಕು. ಈ ಅರಿವಿನೊಂದಿಗೆ ಸಂವಾದಿಯಾಗಿ ತಾರಸಿ ಮಲ್ಹಾರವನ್ನು ಕನ್ನಡದ ಎಲ್ಲ ಮನಸ್ಸುಗಳು ಖುಷಿಯಿಂದ ಓದಬಹುದು.

# ಒಳನೋಟಗಳ 'ಮೂರನೇ ಕಣ್ಣು!'

* ಡಾ. ನವೀನ್ ಕುಮಾರ್ ಎಚ್.ಸಿ.

ಕೃತಿ: ಮೂರನೇ ಕಣ್ಣು
ಪ್ರಕಾರ: ಪ್ರಬಂಧಗಳು
ಲೇಖಕರು: ಚಿದಾನಂದ ಸಾಲಿ
ಪ್ರಕಾಶನ: ಪಲ್ಲವ ಪ್ರಕಾಶನ
ಪ್ರಕಟಣೆ: 2018
ಪುಟಗಳು: 123

ಕವಿತೆ, ಕಥೆ, ಗಝಲ್, ತತ್ತ್ವಪದ, ಸಂಶೋಧನೆ, ಅನುವಾದ, ನಾಟಕ, ಮುಂತಾದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಗಮನಾರ್ಹ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದ ಹೈದರಾಬಾದ್-ಕರ್ನಾಟಕ ಭಾಗದ ಮುಂಚೂಣಿಯ ಬರಹಗಾರರಲ್ಲೊಬ್ಬರಾದ ಚಿದಾನಂದ ಸಾಲಿಯವರ ಪ್ರಬಂಧಗಳ ಸಂಕಲನ 'ಮೂರನೇ ಕಣ್ಣು' ಹಲವು ಕಾರಣಗಳಿಗಾಗಿ ಮುಖ್ಯ ಕೃತಿಯೆನಿಸುತ್ತದೆ.

ಒಟ್ಟು ಹನ್ನೆರಡು ಪ್ರಬಂಧಗಳಿರುವ ಈ ಪುಸ್ತಕವು ಹನ್ನೆರಡು ತೀರಾ ಸಾಮಾನ್ಯವಾಗಿ ಎಲ್ಲರ ಜೀವನದಲ್ಲಿ ಒಂದಿಲ್ಲೊಂದು ಬಾರಿ ಮಹತ್ವದ ಸಂಗತಿಗಳಾಗಿ ಕಾಡಿರುವ ವಿಷಯಗಳ ಬಗ್ಗೆ ಸಾಲಿಯವರು ತಮ್ಮ ಮುಕ್ತ ಆಲೋಚನೆಗಳನ್ನು ಹರಿಯಬಿಟ್ಟಿದ್ದಾರೆ. ಆ ವಿಷಯಗಳೆಂದರೆ ಬಾಲ್ಯ, ಬಸ್ ಪ್ರಯಾಣ, ಹಳ್ಳಿಯ ಚಹಾದಂಗಡಿ, ಮಾತು, ಈಜು, ಲಿಂಗಭಿನ್ನತೆ, ಆಟ, ಹಾಡು, ಜಾತಿ, ಗುರು, ಮಲವಿಸರ್ಜನೆ ಹಾಗೂ ನಿದ್ದೆ. ಇಲ್ಲಿನ ಬಹುತೇಕ ಬರಹಗಳು ಸುಲಲಿತ ಪ್ರಬಂಧಗಳಾಗಿದ್ದರೂ ಜಾತಿ, ಆಟ ಮತ್ತು ಗುರುವಿನ ಬಗ್ಗೆ ಇರುವ ಬರಹಗಳು ಉಳಿದ ಪ್ರಬಂಧಗಳ ಲಘುಹಾಸ್ಯ ಪ್ರವೃತ್ತಿಯನ್ನು ಬಿಟ್ಟು ಗಂಭೀರವಾಗಿ ವಿಷಯಗಳನ್ನು ವಿಶ್ಲೇಷಿಸಿ ಓದುಗರನ್ನು ಗಹನವಾದ ಚಿಂತನೆಗೆ ಹಚ್ಚುತ್ತವೆ.

‘ಸುಖದ ನೆಪದಲ್ಲಿ ಬಾಲ್ಯವ ನೆನೆದು’ ಎಂಬ ಮೊದಲ ಪ್ರಬಂಧ ಸುಖದ ಪರಿಕಲ್ಪನೆಗಳನ್ನು ವಿವಿಧ ದೃಷ್ಟಿಕೋನಗಳಲ್ಲಿ ನೋಡಿ, ಬಾಲ್ಯದ ನೆನಪುಗಳ ಸುಖಕ್ಕಿಂತ ಸುಖವಿಲ್ಲ ಎಂಬ ತೀರ್ಮಾನದೊಂದಿಗೆ ಮುಗಿಯುತ್ತದೆ. ನಮ್ಮ ಬಾಲ್ಯದಲ್ಲಿ ಸುಖದ ಪರಿಕಲ್ಪನೆಯ ಬಗ್ಗೆ ಗಮನ ಹರಿಸದೇ ಬದುಕಿದ ನಾವು ಈಗ ಹಿಂದಿರುಗಿ ನೋಡಿ ಆ ದಿನಗಳೇ ಖುಷಿಯಾಗಿದ್ದವು ಅಲ್ಲವೇ ಎಂಬುದು ಇಲ್ಲಿ ವ್ಯಕ್ತವಾಗಿದೆ.

ಬಸ್ ಪ್ರಯಾಣದ ಸಂಕಟ ಮತ್ತು ಮೋಜಿನ ಕುರಿತ ಮುಂದಿನ ಪ್ರಬಂಧವೂ ಬಾಲ್ಯದೊಂದಿಗೇ ಆರಂಭವಾಗುತ್ತದೆ. ಬಸ್ಸುಗಳ ಕೊರತೆ, ಬಸ್ಸುಗಳಿದ್ದರೂ ಜನದಟ್ಟಣೆಯ ಸಮಸ್ಯೆ, ಸೀಟು ಹಿಡಿಯುವ ಸಮಸ್ಯೆ, ಮುಂತಾದವುಗಳೆಲ್ಲ ಸಮಸ್ಯೆಗಳೇ ಅಲ್ಲ ಬದಲಿಗೆ ನೋಡುಗರಿಗೆ ಮಜಾ ನೀಡುವ ದೃಶ್ಯಾವಳಿಗಳೆಂದು ವಿನೋದಮಯವಾಗಿ ಉದಾಹರಣೆಗಳೊಂದಿಗೆ ವಿವರಿಸಲಾಗಿದೆ.

ಹಳ್ಳಿಯ ಚಾದಂಗಡಿಗಳು ಮತ್ತು ಅಲ್ಲಿ ನೆರೆಯುವ ಜನರು ಹೇಗೆ ಆ ಹಳ್ಳಿಯ ವಿಷಯ ಸಂಗ್ರಹಣೆ ಮತ್ತು ಸುದ್ದಿ ಬಿತ್ತರಿಸುವ ಪ್ರಮುಖ ಕೇಂದ್ರಗಳಾಗಿರುತ್ತವೆ, ಯಾವುದೇ ಧಾವಂತವಿಲ್ಲದೇ ಅಲ್ಲಿ ಕುಳಿತ ಜನರ ಜಾಣ್ಮೆ, ಮಾತುಗಾರಿಕೆಯ ಚತುರತೆ ಮತ್ತು ಅಲ್ಲಿನ ಮಾಲೀಕನ ಗಮ್ಮತ್ತುಗಳನ್ನು ಪರಿಚಯಿಸುವ ಪ್ರಬಂಧ ಇದಾಗಿದೆ.

ಮಾತಿನಿಂದಲೇ ಎಲ್ಲವೂ ಆರಂಭವಾಗಿ, ಎಲ್ಲವೂ ಮುಕ್ತಾಯವಾಗುವುದು ಎಂಬ ಧಾಟಿಯಲ್ಲಿ ಮಾತಿಗಿರುವ ಮಹತ್ತ್ವ, ಸಮಯಕ್ಕೆ ತಕ್ಕಂತೆ ಮಾತನಾಡುವುದರ ಮತ್ತು ಮಾತಿಗೆ ತಕ್ಕಂತೆ ನಡೆದುಕೊಳ್ಳುವುದರ ಪ್ರಾಮುಖ್ಯತೆ, ಅತಿಯಾದ ಮಾತುಗಾರಿಕೆಯ, ಒಗಟಿನ ಮಾತುಗಾರಿಕೆಯ ಉದಾಹರಣೆಗಳು, ಹೆಂಗಸರ ವಾಚಾಳಿತನ ಮುಂತಾದವುಗಳ ಬಗ್ಗೆ ಇಲ್ಲಿ ಸಾಕಷ್ಟು ಮಾತನಾಡಲಾಗಿದೆ.

ಈಜಿನ ಬಗ್ಗೆ, ಅದರ ಕಲಿಕೆಯ ಮೋಜು, ಆ ವಿದ್ಯೆಯ ವೈವಿಧ್ಯತೆ, ಅಪಾಯಗಳು ಮತ್ತು ದುರಂತಗಳ ಬಗ್ಗೆ ಇರುವ ಪ್ರಬಂಧ ಸಂಕಲನದ ಮೊದಲ ಗಂಭೀರ ಪ್ರಬಂಧವಾಗಿ ತೋರುತ್ತದೆ. ತಮ್ಮ ಊರಿನ ವಿವಿಧ ಈಜಿನ ತಾಣಗಳನ್ನು ಪರಿಚಯಿಸುತ್ತಾ ಓದುಗರಿಗೂ ತಮ್ಮ ಸುತ್ತಲಿನಲ್ಲಿ ಇರಬಹುದಾದ ಅದೇ ರೀತಿಯ ತಾಣಗಳನ್ನು ನೆನಪಿಸುತ್ತಾ ಹೋಗುತ್ತಾರೆ ಪ್ರಬಂಧಕಾರರು.

ಇಂಥದ್ದೇ ಇನ್ನೊಂದು ಗಂಭೀರ ಪ್ರಬಂಧ 'ಒಂದು ಕಣ್ಣು ಬರೆದ ಇನ್ನೊಂದರ ಚಿತ್ರ'. ಸಮಾಜದಲ್ಲಿ ಗಂಡು ಮತ್ತು ಹೆಣ್ಣುಗಳನ್ನು ಭಾವಿಸುವ ದೃಷ್ಟಿಕೋನಗಳು ಅದೆಷ್ಟು ಭಿನ್ನವಾಗಿರುತ್ತವೆ, ಹೆಣ್ಣಿನ ಬಗ್ಗೆ ಸಮಾಜ ಇಟ್ಟುಕೊಂಡಿರುವ ತಾತ್ಸಾರದ ಭಾವಗಳು, ಹೆಣ್ಣನ್ನು ಅರ್ಥ ಮಾಡಿಕೊಳ್ಳಲು ಹೆಣಗಿರುವ ವಿವಿಧ ಕವಿಗಳು, ಅದರ ಹಿಂದಿನ ತರ್ಕಗಳು ಮುಂತಾದವುಗಳನ್ನು ಇಲ್ಲಿ ಚರ್ಚಿಸಲಾಗಿದೆ. ಒಬ್ಬ ಪುರುಷ ಸ್ತ್ರೀಯನ್ನು ಪರಿಭಾವಿಸುವುದಕ್ಕೂ, ಒಬ್ಬ ಸ್ತ್ರೀ ತನ್ನನ್ನು ತಾನು ಪರಿಭಾವಿಸುದಕ್ಕೂ ಇರುವ ಅಂತರವೂ ಇಲ್ಲಿ ಕಂಡುಬರುತ್ತದೆ.

ಆಟಕ್ಕೆ ಸಂಬಂಧಿಸಿದ ಪ್ರಬಂಧ 'ಮುಗಿಯದ ಆಟಕೆ ಮೊದಲಾಗಿ...' ನಮಗಿರಬೇಕಾದ ಕ್ರೀಡಾ ಮನೋಭಾವವನ್ನು ಕುರಿತದ್ದಾಗಿದೆ. ಆಟದಂಗಳದಲ್ಲಿ ಸೋಲು ಗೆಲುವುಗಳನ್ನು ಮೀರಿದ ಹೃದಯವಂತಿಕೆ ನಮಗೆ ಮುಖ್ಯ ಎಂದು ಆರಂಭವಾಗುವ ಪ್ರಬಂಧ, ವಿವಿಧ ಆಟಗಳ, ಆಟಗಾರರ ಮನೋಧರ್ಮಗಳನ್ನು ವಿವರಿಸುತ್ತಾ, ಆಟಗಳ ಕುರಿತಾದ ಸಿನಿಮಾಗಳು, ಹಾಡುಗಳ ಕುರಿತೂ ಬೆಳಕು ಚೆಲ್ಲುತ್ತದೆ.

ಹಾಡುಗಳು ಮತ್ತು ಸಂಗೀತದ ಕುರಿತ ಪ್ರಬಂಧ ಹಾಡುಗಳು ನಮ್ಮ ಜೀವನದ ಸಂಗಾತಿಗಳಾಗಿ ಹೇಗೆ ನಮ್ಮ ಬದುಕನ್ನು ಸಹ್ಯಗೊಳಿಸುತ್ತವೆ ಎಂದು ತೋರುವ ಒಂದು ಆಹ್ಲಾದಕರ ಬರಹ. ಸಿನಿಮಾ ಹಾಡುಗಳು, ಕವಿಗಳು ಸಿನಿಮಾಕ್ಕೆ ಬರೆದ ಹಾಡುಗಳು, ಲಾಲಿ ಹಾಡುಗಳು ಎಲ್ಲ ಬಗೆಯ ಹಾಡುಗಳ ಬಗ್ಗೆ ಗಮನಹರಿಸುತ್ತಾ, ತಮ್ಮ ತಂದೆ ಒಂದು ಹೊತ್ತು ಊಟವಿಲ್ಲದಿದ್ದರೂ ಒಂದು ಹಾಡು ಇರಬೇಕೆನ್ನುವ ಮಹತ್ತರ ಮಾತಿನೊಂದಿಗೆ ಪ್ರಬಂಧ ಬೇರೊಂದು ಎತ್ತರಕ್ಕೇ ಹಾಡುಗಳ ಮಹತಿಯನ್ನು ಕೊಂಡೊಯ್ಯುತ್ತದೆ.

'ಜಾತಿ ಎಂಬ ಸೂತಕ' ಇಡೀ ಸಂಕಲನದ ಅತ್ಯಂತ ಗಂಭೀರ, ಸಮಯೋಚಿತ ಮತ್ತು ನಮ್ಮ ಸಮಾಜದ ಜಾತಿ ವ್ಯವಸ್ಥೆಯ ಬಗ್ಗೆ ಪಿಚ್ಚೆನಿಸುವಂತೆ ಮಾಡುವ ಪ್ರಬಂಧವಾಗಿದೆ. ಶೋಷಿತ ಜಾತಿಯ ಜನರು ಅನುಭವಿಸುವ ಹೇಳಿಕೊಳ್ಳಲಾಗದ ನೋವು, ಮುಜುಗರಗಳನ್ನು ಮನಸ್ಸಿಗೆ ನಾಟುವಂತೆ ಇಲ್ಲಿ ಹೇಳಲಾಗಿದೆ. ಮೇಲ್ಜಾತಿ ಮತ್ತು ಮೇಲ್ವರ್ಗಗಳು ಒಂದಕ್ಕೊಂದು ತಳುಕು ಹಾಕಿಕೊಂಡು ತಳ ಸಮುದಾಯಗಳ ಸಂಕಷ್ಟಗಳನ್ನು ಇನ್ನಷ್ಟು ತೀವ್ರವಾಗಿರುವುದನ್ನೂ ಲೇಖಕರು ಮನಗಾಣಿಸುತ್ತಾರೆ.

ಜಾತಿಯನ್ನು ತಿಳಿದುಕೊಳ್ಳಲು ಮೇಲ್ಜಾತಿಯವರು ಬಳಸುವ ಜಾಣತನಗಳು ಮುಸುಕಿನೇಟುಗಳಂತೆ ಭಾಸವಾಗುತ್ತವೆ. ಒಂದು ಸೂತಕದ ಛಾಯೆ ಈ ಪ್ರಬಂಧವನ್ನು ಓದಿದಾಗ ಆವರಿಸುತ್ತದೆ.

ಗುರು ಶಿಷ್ಯರ ಸಂಬಂಧ, ಇಬ್ಬರೂ ಹೇಗಿದ್ದರೆ ಆ ಪಾತ್ರಗಳಿಗೆ ಒಪ್ಪುತ್ತದೆ ಎಂಬುದನ್ನು ವಿವರವಾಗಿ ದಾಖಲಿಸಿರುವ ಪ್ರಬಂಧ 'ಗುರು ಕರುಣೆಯ ವರ ತಾಗಿ'. ಜಾಣ ಗುರುಗಳು, ಜಾಣ ಶಿಷ್ಯರ ಹಲವು ಉದಾಹರಣೆಗಳನ್ನು ಕೊಡುತ್ತಾ, ನಮ್ಮ ಸಮಾಜದಲ್ಲಿನ ಝೆನ್ ಗುರುಗಳಿಂದ ಹಿಡಿದು ಢೋಂಗಿ ಗುರುಗಳವರಗೆ ಈ ಪ್ರಬಂಧ ಕಣ್ಣು ಹಾಯಿಸುತ್ತದೆ.

ಸಂಕಲನದ ಕೇಂದ್ರಬಿಂದುವೆನಿಸಿರುವ ಪ್ರಬಂಧ 'ಮೂರನೇ ಕಣ್ಣಿಗೆ ನೂರಾರು ಗಾಯ' ಕನ್ನಡ ಸಾಹಿತ್ಯ ಜಗತ್ತಿನಲ್ಲಿ ಗಮನಾರ್ಹ ಪ್ರಬಂಧವಾಗಿದೆ. ಇದರ ವಿಷಯವೇ ಮಲವಿಸರ್ಜನೆಯ ಕುರಿತಾಗಿದ್ದು, ಇದು ಬಹುಶಃ ಕನ್ನಡದಲ್ಲಿ ಈ ಕುರಿತು ಬರೆಯಲಾಗಿರುವ ಪೂರ್ಣಪ್ರಮಾಣದ ಪ್ರಬಂಧವಾಗಿದೆ. ಹಲವಾರು ಸಾಹಿತಿಗಳೂ ಈ ಪ್ರಬಂಧದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿರುವುದು ಹಿಂಬದಿಯ ರಕ್ಷಾಪುಟದಲ್ಲಿ ಉಲ್ಲೇಖವಾಗಿದೆ. ಇದರ ವಸ್ತು ವಿಷಯದ ಆಯ್ಕೆಯೇ ಈ ಪ್ರಬಂಧವನ್ನು ವಿಶಿಷ್ಠಗೊಳಿಸಿರುವುದು. ಟ್ಯಾಬೂ ಎಂದು ಬೇರೆಲ್ಲರೂ ಅಭಿವ್ಯಕ್ತಿಸದೇ ಬಿಟ್ಟಿರುವ ವಿಷಯವನ್ನಿಟ್ಟುಕೊಂಡು ಎಲ್ಲ ದೃಷ್ಟಿಕೋನಗಳಿಂದ ಶೌಚದ ಕಷ್ಟ ಸುಖಗಳನ್ನು ಸಾದ್ಯಂತವಾಗಿ ಈ ಪ್ರಬಂಧವು ದಾಖಲಿಸುತ್ತದೆ. ಮುನ್ನುಡಿಯಲ್ಲಿ ನಾಗೇಶ ಹೆಗಡೆಯವರು ಹೇಳುವಂತೆ 'ಶೌಚದ ಬಗಗೆ ಇಷ್ಟೊಂದು ಸಮಗ್ರ ಸಮೀಕ್ಷೆ ಬೇರೆಲ್ಲೂ ಬಂದಿಲ್ಲ' ಎಂಬುದು ಈ ಪ್ರಬಂಧದ ಅನನ್ಯತೆಯನ್ನು ಸೂಚಿಸುತ್ತದೆ.

ಶೌಚಕ್ಕೆ ಹೋಗುವುದು ಎಷ್ಟು ಮುಖ್ಯವೋ ನಿದ್ದೆ ಹೋಗುವುದೂ ಅಷ್ಟೇ ಮುಖ್ಯವೆಂದು ಸೂಚಿಸುವಂತಿದೆ ಈ ಸಂಕಲನದ ಕೊನೆಯ ಪ್ರಬಂಧ 'ನಿದ್ದಿ ಮಾಡಬೇಕು ಜಗದೊಳಗೆ!' ನಿದ್ರೆಯ ವೈವಿಧ್ಯಮಯ ಅಭ್ಯಾಸಗಳ ಬಗ್ಗೆ ಈ ಪ್ರಬಂಧ ಗಮನ ಹರಿಸುತ್ತದೆ. ನಿದ್ದೆಯೊಂದಿಗೆ ತಮ್ಮ ಅವಿನಾಭಾವ ಸಂಬಂಧವನ್ನು ಹೇಳಿಕೊಳ್ಳುತ್ತಾ ಹೋಗುವ ಈ ಪ್ರಬಂಧ ಹೆಚ್ಚು ವೈಯಕ್ತಿಕ ಅನುಭವಗಳನ್ನು ಹೊಂದಿದೆ. ಸಾವು ಒಂದು ಶಾಶ್ವತ ನಿದ್ದೆ, ನಿದ್ದೆ ಒಂದು ತಾತ್ಕಾಲಿಕ ಸಾವು ಎಂಬ ಮಾತನ್ನು ಈ ಪ್ರಬಂಧ ನೆನಪಿಸುತ್ತದೆ.

ಹೀಗೆ ನಮ್ಮೆಲ್ಲರ ಜೀವನದಲ್ಲಿ ಹಾಸುಹೊಕ್ಕಾಗಿರುವ ಸಾಮಾನ್ಯ ಆಸಕ್ತಿಯ ವಿಷಯಗಳ ಸುತ್ತ ಈ ಪ್ರಬಂಧಗಳು ಸಾವಕಾಶವಾಗಿ ನಡೆದಾಡಿವೆ. ಒಂದು ವಿಷಯದ ಕುರಿತು ಯಾವುದೇ ವಿಶ್ಲೇಷಣೆಯನ್ನು ಮಾಡುವಾಗ ಅದರ ಸುತ್ತ, ಅದರ ಅಕ್ಕ-ಪಕ್ಕ, ಹಿಂದೆ-ಮುಂದೆ ಇರುವ ಎಲ್ಲಾ ವಿವರಗಳನ್ನೂ, ವ್ಯಾಖ್ಯೆಗಳನ್ನೂ, ನೆನಪುಗಳನ್ನೂ, ಹಳಹಳಿಕೆಗಳನ್ನೂ ಸಮಗ್ರ (ಎಕ್ಸಾಸ್ಟೀವ್) ಎಂಬಂತೆ ನಮೂದಿಸಬೇಕೆಂಬ ಹಟಕ್ಕೆ ಬಿದ್ದಂತೆ ಪ್ರಬಂಧಗಳನ್ನು ವಿಸ್ತರಿಸುತ್ತಾ ಹೋಗಿರುವುದು ಕಂಡುಬರುತ್ತದೆ. ಇದು ಕೆಲವು ಪ್ರಬಂಧಗಳಲ್ಲಿ ಸಹಜವೆನಿಸಿದರೂ ಮತ್ತೆ ಕೆಲವರಲ್ಲಿ ಒತ್ತಾಯಪೂರ್ವಕವಾಗಿ ಬೆಳೆಸಿದಂತೆಯೂ ಭಾಸವಾಗುತ್ತವೆ.

ಕೃತಿಯ ಕುರಿತ ತಮ್ಮ ಮಾತುಗಳಲ್ಲಿ ಸಾಲಿಯವರು ಇಲ್ಲಿನ ಪ್ರಬಂಧಗಳು 'ಕಥೆಯಲ್ಲದ ಕಥೆಗಳಿವು' ಎಂದು ಹೇಳುತ್ತಾರೆ. ಹಾಗೆ ನೋಡಿದರೆ, ಕಥೆಗಳಲ್ಲಿ ಕಾಣಿಸಿಯೂ ಇಲ್ಲಿ ಕಾಣಸಿಗದ ಒಂದು ಪ್ರಮುಖ ಲಕ್ಷಣವೆಂದರೆ ಇಲ್ಲಿ ಕಲ್ಪನೆಗಳೇ ಇಲ್ಲ. ಇಲ್ಲಿನ ಎಲ್ಲ ವಿಚಾರಗಳಲ್ಲಿಯೂ ಪ್ರಬಂಧಕಾರರು ತಮಗೆ ಆ ವಿಷಯದ ಪರಿಚಯವಾದದ್ದು ಹೇಗೆ, ಅದರ ಬಗ್ಗೆ ಬೇರೆಯವರು ಏನೆಲ್ಲಾ ಹೇಳಿದ್ದಾರೆ, ಇದಕ್ಕೆ ಸಂಬಂಧಿಸಿದಂತೆ ತಮ್ಮ ಜೀವನದಲ್ಲಿ ಕಂಡ, ಕೇಳಿದ, ಓದಿದ, ಅನುಭವಿಸಿದ ಎಲ್ಲ ಝಲಕುಗಳನ್ನು ಮೆಲುಕು ಹಾಕುತ್ತಾರೆ. ಹಾಗಾಗಿ ಇವು ಬಹುತೇಕ ಆತ್ಮಚರಿತ್ರೆಯಲ್ಲಿ ಬರುವ ವಿಷಯಾಧಾರಿತ ಅಧ್ಯಾಯಗಳಂತೆ ಭಾಸವಾಗುತ್ತವೆ. ಆ ಮೂಲಕ ಪ್ರಬಂಧಕಾರರು ತಮಗೆ ಇರುವ ಆಸಕ್ತಿಗಳು, ಸಾಮಾನ್ಯ ಜ್ಞಾನ, ಕನ್ನಡ, ಹಿಂದಿ, ತೆಲುಗು, ಸಂಸ್ಕೃತ ಮತ್ತು ಇಂಗ್ಲಿಷ್ ಸಾಹಿತ್ಯದ ಜ್ಞಾನ, ಅಭಿರುಚಿ, ಮೆಚ್ಚಿನ ಹಾಡುಗಳು, ಗಾದೆಗಳು, ಕೀರ್ತನೆಗಳು, ಲೇಖಕರು, ವಿಜ್ಞಾನಿಗಳು, ಸ್ನೇಹಿತರು, ಸಾಹಿತ್ಯ ಎಲ್ಲವುಗಳಿಂದ ಬರೆಯತೊಡಗಿರುವ ವಿಷಯಗಳಿಗೆ ಪೂರಕವಾಗಿರುವ ವಿಚಾರಗಳನ್ನು ಸಂದರ್ಭೋಚಿತವಾಗಿ ಬಳಸುತ್ತಾರೆ. ಹೀಗಾಗಿ ಒಂದು ಸಾಮಾನ್ಯ ವಿಷಯದ ಬಗ್ಗೆ ಇರುವ ಎಲ್ಲಾ ದೃಷ್ಟಿಕೋನಗಳನ್ನೂ ಹಾಗೂ ಜ್ಞಾನವನ್ನೂ ಆಸಕ್ತಿಕರ ಹೂರಣವಾಗಿಸಿ ಸಹೃದಯರಿಗೆ ಉಣಬಡಿಸಲಾಗಿದೆ.

ಇಲ್ಲಿನ ಪ್ರಬಂಧಗಳಲ್ಲಿ, ವಿಚಾರಗಳನ್ನು ಪ್ರಸ್ತುತಪಡಿಸುವಾಗ ಲೋಕೋಭಿರಾಮವಾಗಿ ಆತ್ಮೀಯರ ಜೊತೆ ಕುಳಿತು ಹರಟುತ್ತಿರುವಂತಹ ಶೈಲಿಯನ್ನು ಬಳಸಲಾಗಿದೆ. ಪ್ರಥಮ ಪುರುಷದಲ್ಲಿರುವ ನಿರೂಪಣೆಗಳೇ ಹೆಚ್ಚಿರುವ ಇಲ್ಲಿನ ಪ್ರಬಂಧಗಳಲ್ಲಿ, ಪ್ರಬಂಧಕಾರರ ವೈಯಕ್ತಿಕ ವಿವರಗಳೂ ಬಂದು ಅವರ

ತಂದೆ, ತಾಯಿ, ತಮ್ಮ, ಹೆಂಡತಿ, ಮಕ್ಕಳು ಎಲ್ಲರ ಜೊತೆಗಿನ ಸಂಬಂಧದ ಸ್ವರೂಪಗಳು, ಓದುಗನನ್ನು ಒಂದು ಭಾವನಾತ್ಮಕ ಲೋಕಕ್ಕೆ ಕರೆದೊಯ್ಯುತ್ತವೆ.

'ಇದನ್ನು ನೀವು ಕೇಳಿಯೇ ಇರುತ್ತೀರಿ' ಎಂದು ಆರಂಭವಾಗಿ 'ಬರ್ತೀನಿ ಮತ್ತೊಮ್ಮೆ ಸಿಕ್ಕಾಗ ಮಾತಾಡೋಣ' ಎನ್ನುವವರೆಗೆ ನಡುವಿನಲ್ಲಿ ಎಷ್ಟೋ ಬಾರಿ ಓದುಗನನ್ನು ಪ್ರಬಂಧಗಳ ಸಾಲುಗಳ ಮಧ್ಯೆ ಚಕ್ಕಳಮಕ್ಕಳ ಹಾಕಿ ಕೂರುವಂತೆ ಮಾಡುವ, ಆಸಕ್ತಿಯನ್ನು ಉಳಿಸಿಕೊಂಡು ಮುಂದುವರಿಯುವಂತೆ ಮಾಡುವ ತಂತ್ರವೂ ಇಲ್ಲಿ ಕಂಡುಬರುತ್ತದೆ.

ತಮ್ಮಂಥದ್ದೇ ಅನುಭವ ಓದುಗನಿಗೂ ಆಗಲಿ ಎಂಬ ಆಶಯದಿಂದ ಕೆಲವು ಪ್ರಬಂಧಗಳು ಮುಗಿಯುವುದನ್ನು ಕೂಡಾ ಗಮನಿಸಬಹುದು.

"ಅನುಭವಿಸಲೇಬೇಕೆಂದರೆ ಒಳನಾಡಿನ ಹಳ್ಳಿಗೆ ದಿನಕ್ಕೊಮ್ಮೆ ಮಾತ್ರ ಹೋಗಿ ಬರುವ ಬಸ್ಸಿಗೆ ಅದೂ ಬೆಟ್ಟಾನ ಬೇಸಗೆಯಲ್ಲಿ ಹೋಗಿ ಬರುವ ಟೂರನ್ನು ನೀವು ಪ್ಲ್ಯಾನ್ ಮಾಡಬಹುದು." –ರಸ್ತೆ ಮೇಲೆ ಬಸ್ಸಿನೊಳಗೆ ದೃಶ್ಯವೈಭವ!

"ನನ್ನ ತೀರ್ಮಾನ ಸರಿಯೋ ತಪ್ಪೋ ಎಂದು ನಿರ್ಧರಿಸಬೇಕಾದರೆ ನೀವೊಮ್ಮೆ ಹಳ್ಳಿಯ ಚಾದಂಗಡಿಗೆ ಹೋಗಿ ಒಂದು ಗಂಟೆ ಅಲ್ಲಿಯ ಮಾತುಕತೆಗಳಿಗೆ ಕಿವಿಯಾಗುತ್ತ ಚಹ ಕುಡೀತಾ ಕೂರಬೇಕಾಗುತ್ತೇನೋ" –ಚಾದಂಗಡಿಯಲ್ಲಿ ಹಸಿದ ನೊಣ...

'ಆಗ ಇವೆಲ್ಲಾ ಇದ್ದವು, ಈಗೆಲ್ಲಿ?' ಎಂಬ ಭಾವದಿಂದಲೂ ಕೆಲವು ಪ್ರಬಂಧಗಳು ಮುಗಿಯುವುದನ್ನು ನಾವು ಕಾಣುತ್ತವೆ. ಕನಿಷ್ಠ ಸೌಲಭ್ಯದ, ಕಷ್ಟಗಳ, ಹಿಂಸೆಯ ವಿಷಯವಾದರೂ ಈಗ ಹಿಂದಿರುಗಿ ನೋಡುವಾಗ ಅವುಗಳತ್ತ ಒಂದು ತುಂಟ ನಗೆ ಬೀರಿ, ತಮ್ಮ ಕಷ್ಟದ ದಿನಗಳನ್ನೂ ಹಾಸ್ಯ ಪ್ರಜ್ಞೆಯನ್ನು ಬಳಸಿ ನೆನಪಿಸಿಕೊಳ್ಳುವುದು ಇಲ್ಲಿದೆ. ಹಾಗೆ ಹೇಳಿಕೊಳ್ಳುವ ತಮ್ಮದೇ ಕುಟುಂಬದ ಚಿತ್ರಣಗಳಲ್ಲಿಯೂ ಯಾವುದೇ ಅನುಕಂಪವನ್ನು ನಿರೀಕ್ಷಿಸದೇ, ಇದ್ದದ್ದನ್ನು ಇದ್ದ ಹಾಗೇ, ಅನಿಸಿದ ಹಾಗೇ ವಸ್ತುನಿಷ್ಠವಾಗಿ ಹೇಳಿಕೊಂಡು ಭಾವನೆಗಳಿಗೆ ಒತ್ತುಕೊಡುತ್ತಾರೆ.

"ಆದರೆ ಅಪ್ಪ ತಾನು ಹೊದ್ದು ಮಲಗಿರುತಿದ್ದ ಚಾದರವನ್ನು ಎತ್ತಿ ನಮ್ಮನ್ನು ಸದ್ದಿಲ್ಲದೆ ಒಳಗೆಳೆದುಕೊಳ್ಳುತ್ತಿದ್ದ. ಅಪ್ಪನ ಬಿಸಿಯಪ್ಪುಗೆ, ಮೂಗಿಂದ ಬರುವ ಬೀಡಿಯ ಘಾಟು ಬೆರೆತ ಬಿಸಿಗಾಳಿ ನಮ್ಮನ್ನು ಮತ್ತೆ ನಿದ್ರಾದೇವತೆಯ ಲೋಕಕ್ಕೆಳೆಯುತ್ತಿದ್ದವು." –ನಿದ್ದಿ ಮಾಡಲಿಬೇಕು ಜಗದೊಳಗ!

ಇಲ್ಲಿನ ಚಾದರ ಮತ್ತು ಬೀಡಿಗಳಿಗಿಂತ 'ಬಿಸಿಯಪ್ಪುಗೆ'ಯೇ ಹೆಚ್ಚು ಕಾಡುತ್ತದೆ.

ಮಲವಿಸರ್ಜನೆಯ ಕಷ್ಟ–ಸುಖಗಳಿಗೆ ಸಂಬಂಧಿಸಿದ 'ಮೂರನೇ ಕಣ್ಣು' ಕುರಿತು ಇರುವ ಈ ಕೃತಿಯ ಒಂದು ಪ್ರಬಂಧ 'ಮೂರನೇ ಕಣ್ಣಿಗೆ ನೂರಾರು ಗಾಯ' ಎಂದಿದ್ದರೂ, ಸಂಕಲನದ ಹೆಸರು 'ಮೂರನೇ ಕಣ್ಣು' ಎಂಬ ಹೆಸರು ಓದುಗರ ಎರಡು ಕಣ್ಣುಗಳಿಗೆ ಸುಲಭವಾಗಿ ಕಾಣದ ಸೃಜನಶೀಲ ಬರಹಗಾರನೊಬ್ಬನಿಗೆ ವಿಶೇಷವಾಗಿ ದಕ್ಕಿರುವ(ದಕ್ಕಬೇಕಿರುವ) ಒಂದು ಎಚ್ಚರದ, ಕುತೂಹಲದ ಒಳಗಣ್ಣನ್ನು 'ಮೂರನೇ ಕಣ್ಣು' ಎಂದು ಪರಿಗಣಿಸುವ ಅರ್ಥವನ್ನು ಸಂಕಲನದ ಹೆಸರು ಸೂಚಿಸುವಂತಿದೆ. ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ತಮ್ಮ ಛಾಪು ಮೂಡಿಸುತ್ತಾ ಸಾಗುತ್ತಿರುವ ಚಿದಾನಂದ ಸಾಲಿಯವರ ಲೇಖನಿಯಿಂದ ಇಂಥ ಸಮರ್ಥ ಬರಹಗಳು ಹೊರಹೊಮ್ಮುತ್ತಿರಲಿ ಎಂಬುದು ನಮ್ಮ ಆಶಯ.

# ಭರವಸೆಯ ಬೆಳಕು

* ಮೀನಾ ಮೈಸೂರು

ಹಿಂದೆ ಸಾಹಿತಿಗಳೆಂದು ಗುರುತಿಸಿಕೊಳ್ಳುತ್ತಿದ್ದವರು ಸಾಮಾನ್ಯವಾಗಿ ಸಾಹಿತ್ಯದ ವಿದ್ಯಾರ್ಥಿಗಳು ಮತ್ತು ಸಾಹಿತ್ಯದ ಅಧ್ಯಾಪಕರುಗಳು ಮಾತ್ರ, ಎಲ್ಲೋ ಕೆಲವರು ಬೇರೆ ಕ್ಷೇತ್ರಗಳಲ್ಲಿದ್ದವರು ಸಾಹಿತ್ಯ ರಚನೆಯಲ್ಲಿ ಅಪರೂಪಕ್ಕೆ ತೊಡಗಿಸಿಕೊಳ್ಳುತ್ತಿದ್ದರು. ಆದರೆ ಈಗ ಎಲ್ಲಾ ಕ್ಷೇತ್ರದವರೂ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡಿರುವುದು, ಯಶಸ್ವಿ ಬರಹಗಾರರಾಗಿರುವುದು ಆರೋಗ್ಯಕರ ಬೆಳವಣಿಗೆ. ಐಟಿ ಬಿಟಿಯವರು, ವೈದ್ಯರು, ಕಾರ್ಪೆಂಟರ್, ಬೇರೆ ಬೇರೆ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವವರು, ಉನ್ನತ ಅಧಿಕಾರಿಗಳು, ನೌಕರರು......ಹೀಗೆ ಸಾಹಿತಿಗಳಾಗುತ್ತಿರುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಅದರಲ್ಲೂ ಯುವ ಕವಿಗಳ ಸಂಖ್ಯೆ, ಕವನ ಸಂಕಲನಗಳ ಸಂಖ್ಯೆ ಏರುಗತಿಯಲ್ಲಿದೆ. ಹಾಗೆ ಚೆನ್ನಾಗಿ ಬರೆಯುತ್ತಿರುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಇದೊಂದು ಆಶಾದಾಯಕ ಬೆಳವಣಿಗೆ.

2018ರಲ್ಲಿ ಪ್ರಕಟವಾದ "ನಿಷೇಧಕ್ಕೊಳಪಟ್ಟ ಒಂದು ನೋಟು" ವಿಲ್ಸನ್ ಕಟೀಲ್ ಅವರ ಕನ್ನಡದ ಮೊದಲ ಕವನ ಸಂಕಲನ. ಕೊಂಕಣಿಯಲ್ಲಿ ಮೂರು ಕವನ ಸಂಕಲಗಳು ಈಗಾಗಲೇ ಪ್ರಕಟಗೊಂಡಿದ್ದು ಕೆಲವು ಪ್ರಶಸ್ತಿ ಪುರಸ್ಕಾರಗಳಿಗೂ ಮಾನ್ಯರಾಗಿದ್ದಾರೆ. ಕನ್ನಡಕ್ಕೆ ಹೊಸಬರಾದರೂ ಕವಿಯಾಗಿ ಹಳಬರು. ಇಂದಿನ ಯುವ ಜನಾಂಗ ಕಾವ್ಯದ ಮೂಲಕ ಪ್ರಸ್ತುತ ಸಂಗತಿಗಳಿಗೆ ತೀಕ್ಷ್ಣವಾಗಿ ಸ್ಪಂದಿಸುತಿದೆ. ಇಂತಹ ಸ್ಪಂದನೆಯನ್ನು ವಿಲ್ಸನ್ ಅವರ ಪದ್ಯಗಳಲ್ಲೂ ಕಾಣಬಹುದು. ಅವುಗಳನ್ನು ಕವನವಾಗಿಸಲು ಬೇಕಾದ ಲವಲವಿಕೆಯ ಭಾಷೆ, ಅಭಿವ್ಯಕ್ತಿಯಲ್ಲಿ ಸಂಯಮ ಮತ್ತು ಜೀವನಪರವಾದ ಸಕಾರಾತ್ಮಕವಾದ ಮನಸ್ಥಿತಿಯಿಂದಾಗಿ ಈ ಸಂಕಲನವು ಓದುಗರ ಮನ ತಟ್ಟುತ್ತದೆ.

ಶೀರ್ಷಿಕೆಯ ಕವನವು ನೋಟು ಅಮಾನ್ಯೀಕರಣವಾಗಿದ್ದರ ಬಗ್ಗೆ ಅದು ನೇರವಾಗಿ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯೊಂದಿಗೆ ಹೇಗೆ ತಳುಕು

ಹಾಕಿಕೊಂಡಿದೆ ಎಂಬುದನ್ನು ತೀಕ್ಷ್ಣವಾಗಿ ಟೀಕಿಸುವ ಧೈರ್ಯವನ್ನು ಕವಿ ತೋರಿದ್ದಾರೆ. ಇಡೀ ಜಗತ್ತನ್ನು ತನ್ನ ಅಂಗೈಯಲ್ಲಿ ಆಡಿಸುತ್ತಿರುವ ದುಡ್ಡು ಬಡವ ಉಳ್ಳವ, ದರಿದ್ರನೆನ್ನದೆ, ಯಾವ ಜಾತಿ ಧರ್ಮದ ಹಂಗೂ ಇಲ್ಲದೆ ಎಲ್ಲೆಂದರಲ್ಲಿ ಸರಾಗವಾಗಿ ಸರಿದೋಡುತ್ತಿದ್ದ ನೋಟಿಗೆ ಗಕ್ಕನೆ ತಡೆ ಬಂದು, ಮೌಲ್ಯ ಕಳೆದುಕೊಂಡರೂ ಕವಿಯ ಪುಸ್ತಕದ ಹಾಳೆಗಳ ನಡುವೆ ಬೆಚ್ಚಗೆ ವಿರಮಿಸಿದೆ. ನಿಷೇಧಕ್ಕೊಳಪಟ್ಟ ಆ ನೋಟಿನ ಮೇಲೆ ಕವಿತೆ ಗೀಚಿ ಅದು ಅಮಾನ್ಯವಾಗುವುದನ್ನು ತಡೆ ಹಿಡಿದಿರುವೆ ಎಂದಿದ್ದಾರೆ ಕವಿ. ಇದು ಅವರ ಎಚ್ಚರದ ಜವಾಬ್ದಾರಿಯುತ ನಡೆವಳಿಕೆಯನ್ನು ಹೇಳುತ್ತದೆ. ಆದರೆ ಆ ನೋಟು ಈಗಾಗಲೇ  ಹತ್ತಾರು ಕೈ ಧಾಟಿ ಸವೆದು, ಮಾಸಿ, ಹರಿದು ತೇಪೆ ಹಾಕಿಸಿಕೊಂಡಿದ್ದು ಅಲ್ಲದೆ ಅದು ಈಗ ಅಮಾನ್ಯವಾಗಿರುವುದರಿಂದ ಕವಿ ಅದರ ಮೇಲೆ ಕವಿತೆ ಗೀಚಿದರೂ ಗೀಚದಿದ್ದರೂ ಅದರಿಂದೇನು ಪ್ರಯೋಜನವಿಲ್ಲವೆಂಬ ಅರಿವಿನೊಂದಿಗೆ ವ್ಯಂಗದ ಚಾಟಿ ಬೀಸಿದ್ದಾರೆ.

ಅತ್ಯಂತ ಆರ್ದ್ರವಾಗಿ ಮೂಡಿ ಬಂದಿರುವ ಮನಕಲಕುವ ಪದ್ಯ "ಬಲೂನು, ಮಕ್ಕಳು, ರಸ್ತೆ". ಮಕ್ಕಳಿಗೆ ಸಂತೋಷ ತರುವ ಬಲೂನು ದುರಂತಕ್ಕೀಡಾಗಿಸುವ ಚಿತ್ರ ಯಾತನಾಮಯವಾಗಿದ್ದು ಮೈ ಝುಲ್ಲೆನಿಸುತ್ತದೆ. ಅಪಘಾತಕ್ಕೀಡಾಗಿ ಮಗುವಿನ ದೇಹ ಛಿದ್ರಗೊಂಡಿದೆ, ಮಗುವಿನ ಕೈಲಿದ್ದ ಬಲೂನು ರಸ್ತೆಯಲ್ಲಿ ಹೊರಳಾಡುತ್ತಿದೆ. ಆದರೆ ಆ ಬಲೂನಿನಲ್ಲಿ ಆ ಮಗು ಊದಿದ ಉಸಿರು ಇನ್ನೂ ಇದೆ. ಕವಿ ಮನವಿಯೊಂದನ್ನು  ಮಾಡುತ್ತಿದ್ದಾರೆ.

" ರಸ್ತೆ ಬದಿಯಲ್ಲಿ ಬಲೂನು ಮಾರಬೇಡಿ
ಮಾರಿದರೂ ಅವಕ್ಕೆ
ಉಸಿರನ್ನು ಊದಬೇಡಿ".

ಇಲ್ಲಿ ಕವಿಯ ಚಿಂತನೆಯಲ್ಲಿ, ಅಭಿವ್ಯಕ್ತಿಯಲ್ಲಿ ಹೊಸತನವಿದೆ. ಕ್ಲೀಷೆಯಿಲ್ಲದೆ ಶಿಲ್ಪವನ್ನು ಕಡೆಯುವ ಕ್ರಮದಲ್ಲಿ ತಾಜಾತನವಿದೆ.

"ಶವಸಂಸ್ಕಾರವೆಂದರೆ........"ಶವ ಸಂಸ್ಕಾರದ ಕ್ರಿಯೆಗಳನ್ನು ಮೃದುವಾಗಿ, ನಾಜೂಕಾಗಿ ಮಾಡುವ ಪರಿಯನ್ನು ಕಂಡು ಅತ್ಯಾಚಾರಕ್ಕೊಳಗಾದವಳು ತಾನೂ ಹೆಣವಾಗಬಾರದಿತ್ತೆ ಎಂದು ಹಳಹಳಿಸುವುದನ್ನಿಲ್ಲಿ ಕಾಣಬಹುದು. ಇಲ್ಲಿ ಎರಡು ಅಂಶಗಳಿವೆ. ಒಂದು ತನ್ನನ್ನು ಕ್ರೂರವಾಗಿ ನಡೆಸಿಕೊಳ್ಳುವ ಸಮಾಜದ ಬಗ್ಗೆ

ಆಕ್ರೋಶ, ಮತ್ತೊಂದು ಕ್ರೂರವಾದ ಅತ್ಯಾಚಾರದಿಂದ ರೋಸಿ ಹೋಗಿರುವುದು. ಬದುಕು ಸಾಕಾಗಿ ತಾನೂ ಹೆಣವಾಗ ಬಯಸಿದ್ದು, ಬದುಕಿಗೆ ವಿಮುಖವಾಗುವ ನಕಾರಾತ್ಮಕ ಚಿಂತನೆಯಿಂದ ಮನಸು ಬಾಡುತ್ತದೆ. ಇಂದಿನ ಮಾಧ್ಯಮಗಳ ವಿವೇಚನಾರಹಿತ ಧೋರಣೆಯನ್ನು, ಪ್ರಸಾರಕರ ಬೇಜವಾಬ್ದಾರಿಯನ್ನು ಖಂಡಿಸುವ ಪದ್ಯ "ನಮ್ಮನೆಯ ಟಿ,ವಿ." ಬೇರೆ ಬೇರೆ ಕಾರ್ಯಕ್ರಮದ ಹೆಸರಲ್ಲಿ ಅದಕ್ಕೆ ಅರ್ಥಾತ್ ಸಂಬಂಧವಿಲ್ಲದ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವ ಬಗ್ಗೆ ಕವಿಯ ಟೀಕೆ ಹೀಗಿದೆ:

"ವಾರ್ತಾ ವಿಶ್ಲೇಷಣೆಯಲ್ಲಿ
ಮದುವೆಯ ನೇರ ಪ್ರಸಾರ
ವಿಜ್ಞಾನ ವೇದಿಕೆಯಲ್ಲಿ
ಜ್ಯೋತಿಷಿಗೆ ಸನ್ಮಾನ"

ನಮ್ಮನೆಯ ಟಿವಿ ಎಲ್ಲರ ಮನೆಯ ಟಿವಿಯೂ ಹೌದು, ಅಸಂಬದ್ಧವಾಗಿ ಬರುತ್ತಿರುವ ಕಾರ್ಯಕ್ರಮಗಳು ವಿವೇಚನಾರಹಿತವಾಗಿ ಅಬ್ಬರದಲ್ಲಿ ದಿಕ್ಕೆಡಿಸುತ್ತಿರುವ ಎಲ್ಲರ ಮನೆಯ, ಮನೆ ಮನೆಯ ಟಿವಿ ಕಥೆಯೆ ಆಗಿದ್ದು, ಈ ಪದ್ಯದ ಮೂಲಕ ಮಾಧ್ಯಮಗಳನ್ನು ಕಟುವಾಗಿ ಟೀಕಿಸಿದ್ದಾರೆ.

"ದಡದ  ಮೇಲೆ ಗೀಚಿದ
ಕವಿತೆ ಸಾಲನ್ನು
ಅಲೆಯೊಂದು ಅಳಿಸಿ ಹಾಕಿದೆ
ಬೆರಳಿಗಿನ್ನೂ ಅಂಟಿದ ಮರಳಿದೆ"

ಮೇಲಿನ ಈ ಸಾಲುಗಳು "ಮರಳ ಮೇಲೆ ಗೀಚಿದ್ದು" ಪದ್ಯದ್ದು. ಒಂದು ರೀತಿಯ ಹೊಸತನವನ್ನಿಲ್ಲಿ ಕಾಣಬಹುದು. ಒಂದು ಘಟನೆ ಅಥವಾ ಒಂದು ಕೆಲಸ ಮುಗಿದ ನಂತರವೂ ಅದು ಮುಂದಿನ ಸಾಲುಗಳಲ್ಲಿ ಜೀವಂತವಾಗಿರುವಂತೆ ಬರೆಯುವ ಕಲೆ ಈ ಕವಿಗೆ ಸಿದ್ದಿಸಿದೆ. "ಬಲೂನು ಮಕ್ಕಳು,ರಸ್ತೆ" ಪದ್ಯದಲ್ಲೂ ಇಂತಹ ಸಾಲನ್ನು ಗಮನಿಸಬಹುದು.

"ರಸ್ತೆಯ ಮೇಲೆ
ಹೊರಳಡುವ ಬಲೂನು

ಇನ್ನೂ ಹಿಡಿದುಕೊಂಡಿದೆ
ಕೊಂಚ ಹೊತ್ತಿನ ಮುಂಚೆ
ಮಗು ಊದಿದ ಉಸಿರನ್ನು"

ಇಲ್ಲಿ ನೋಡಿ ಮಗು ಕೈಲಿ ಬಲೂನು ಹಿಡಿದು ರಸ್ತೆ ಅಪಘಾತದಲ್ಲಿ ಅಸುನೀಗಿದೆ, ಆದರೆ ಆ ಮಗು ಸ್ವಲ್ಪ ಹೊತ್ತಿನ ಮುಂಚೆ ಆ ಬಲೂನಿಗೆ ಊದಿದ ಉಸಿರು ಆ ಬಲೂನಿನಲ್ಲಿ ಇನ್ನೂ ಇದೆ. ಹಾಗೆ "ಮರಳ ಮೇಲೆ ಗೀಚಿದ್ದು" ಪದ್ಯದಲ್ಲಿ, ದಡದ ಮೇಲೆ ಬರೆದದ್ದನ್ನು ಅಲೆ ಅಳಿಸಿ ಹಾಕಿದೆ, ಆದರೆ ಮರಳ ಮೇಲೆ ಗೀಚಿದಾಗ ಅಂಟಿದ ಮರಳು ಇನ್ನೂ ಬೆರಳಿನಲ್ಲಿ ಅಂಟಿದೆ. ಈ ಎರಡೂ ಪದ್ಯಗಳಲ್ಲೂ ಘಟನೆಗಳು ಘಟಿಸಿ ಹೋಗಿವೆ, ಅವು ಕಣ್ಮರೆಯಾದರೂ ಘಟನೆಗೆ ಸಾಕ್ಷಿಯಾಗಿ ಬಲೂನಿನಲ್ಲಿ ಉಸಿರು, ಕೈಯಲ್ಲಿ ಮೆತ್ತಿದ ಮರಳಿದೆ. ಹೀಗೆ ಕವನ ಕಟ್ಟುವ ಕ್ರಿಯೆಯಲ್ಲಿ ಸ್ವಂತಿಕೆಯನ್ನೂ ತಾಜಾತನವನ್ನು ಕಾಣಬಹುದಾಗಿದೆ.

ಈ ಸಂಕಲನದ ಕವನಗಳು ಸಾಕಷ್ಟು ವೈವಿಧ್ಯಮಯವಾದ ವಸ್ತು-ವಿಶೇಷಗಳೊಂದಿಗೆ ಕೂಡಿವೆ. ಬೀಡಿ ಕಟ್ಟುವ ಹುಡುಗಿ, ಆಸ್ಪತ್ರೆ, ಮಳೆ ಹೂಗಳು, ತಮಟೆ, ಅಜ್ಜಿ, ರೇಖಾಗಣಿತ, ಸಂತೆ, ಸಂಸ್ಕಾರ, ಶವಸಂಸ್ಕಾರ, ಗಡಿ, ಸೈನಿಕರು, ಘುಟ್ಪಾತು.....ಹೀಗೆ ವಸ್ತು ವೈವಿಧ್ಯಮಯವಾಗಿದ್ದು, ನಗರ ಮತ್ತು ಗ್ರಾಮೀಣ ಹಿನ್ನಲೆಯ ಸೂಕ್ಷ್ಮ ಒಳನೋಟಗಳಿಂದ ಕೂಡಿವೆ. ಸಿಟಿ ಸರ್ಕಲ್ ಎಂಬ ಕವಿತೆಯು ಕೊನೆಗೊಳ್ಳುವುದು ಬೀದಿ ದೀಪದ ಮಂದ ಬೆಳಕು ನಾಚಿಕೆಯಿಲ್ಲದೆ, ಸಮಾಜದ ಕೊಳಕಿನ ಮೇಲೆಲ್ಲ ಬಿದ್ದು ಹೊರಳಾಡುತ್ತಿದೆ....ಎಂದು ಅಣಕಿಸುತ್ತಿದ್ದಾರೆ. ಕೊಳಕಿನ ಮೇಲೆ ಬೆಳಕು ಬಿದ್ದಿರುವುದು ಅದರ ತಪ್ಪಲ್ಲ, ಬೆಳಕಿನಡಿ ನಾವು ಕೊಳಕನ್ನು ಸುರಿಯುತ್ತಿದ್ದೇವೆ, ಆ ಬೆಳಕು ಯಾವ ತಾರತಮ್ಯವನ್ನೂ ಮಾಡದೆ ತನ್ನ ಪರಿಧಿಯಲ್ಲಿರುವ ಎಲ್ಲದರ ಮೇಲೂ ಬೆಳಕನ್ನು ಬೀರುತ್ತದೆಯೇ ಹೊರತು, ಕೊಳಕನ್ನು ಅರಸಿ ಅದರ ಮೇಲೆ ಖುಷಿಯಾಗಿ ಹೊರಳಾಡುತ್ತಿಲ್ಲ, ಎಂಬುದನ್ನು ಕವಿ ಗಮನಿಸ ಬೇಕು, ನಾವು ದೀಪದಡಿಯೆ ಕೊಳಕನ್ನು ಸುರಿದರೆ ಬೆಳಕು ತಾನೆ ಏನು ಮಾಡೀತು? ನಾವು ಸುರಿದ ಕೊಳಕನ್ನು ಅದು ನಮಗೆ ತೋರಿಸುತ್ತಿದೆ.

ರಾಮನನ್ನು ಹುಡುಕುವ "ರಾಮ ರಾಮ" ಕವನ ಪ್ರಸ್ತುತ ಸಾಮಾಜಿಕ, ಧಾರ್ಮಿಕ ಸಂಗತಿಗಳ ಮೇಲೆ ಬೆಳಕು ಬೀರುವಂತಿದೆ. ಮನುಷ್ಯನ ಅಸ್ತಿತ್ವಕ್ಕಿಂತ ಅವನ "ಗುರುತು" ಮುಖ್ಯವಾಗಿರುವ ಇಂದಿನ ಸಾಮಾಜಿಕ, ತಾಂತ್ರಿಕ ಜಗತ್ತಿನಲ್ಲಿ

ಎಲ್ಲವುದಕ್ಕೂ ಸಾಕ್ಷಿ ಬೇಕಾಗುತ್ತದೆ. ಕವಿ ಇಲ್ಲಿ  ತನ್ನ ಜೀವಕ್ಕೂ ಮೊದಲು, ತನ್ನನ್ನು ಗುರುತಿಸುವ ರೇಷನ್ ಕಾರ್ಡು, ವೋಟರ್ ಐಡಿ, ಆಧಾರ್ ಕಾರ್ಡುಗಳನ್ನು ರಕ್ಷಿಸಿ ಎಂದು ಬೇಡಿಕೊಳ್ಳುತಿದ್ದಾರೆ. ಅವುಗಳನ್ನು ಸರಿಯಾಗಿ ಕಾಪಿಟ್ಟುಕೊಂಡರಷ್ಟೇ ತನ್ನ ಉಳಿವಿಗೆ ಸಾಕ್ಷಿ  ಎಂಬುದನ್ನು

"ಸಾಕ್ಷಿಗೆ ಬೇಕು-
ರೇಷನ್‌ಕಾರ್ಡಿನಲ್ಲಿ ಹೆಸರು
ವೋಟರ್ ಐ.ಡಿ,ಯಲ್ಲಿ ಅಡ್ರೆಸ್ಸು
ಮತ್ತು
ಆಧಾರ್ ಕಾರ್ಡಿನಲ್ಲಿ ಫೋಟೋ!"

ಎನ್ನುವುದರ ಮೂಲಕ ಜೀವಕ್ಕಿಂತ ಹೆಚ್ಚಾಗಿ ನಮ್ಮ ಭೌತಿಕ ಗುರುತಿಗೆ ಮಾತ್ರ ಬೆಲೆ ಎಂಬುದನ್ನು ಸಶಕ್ತವಾಗಿ ಚಿತ್ರಿಸಿದ್ದಾರೆ. "ಯಾತನಾ ಶಿಬಿರದ ಚಿತ್ರಗಳು" ನಿಜಕ್ಕೂ ಯಾತನಾಮಯವಾಗಿದೆ.

"ಕಲ್ಲು ಮುಳ್ಳುಗಳು ಕಂತದಿರಲೆಂದಲ್ಲ
ದೇಶಭಕ್ತರು ಬೂಟು ತೊಟ್ಟಿದ್ದು
ಎದೆಗೂಡಿನ ಪಕ್ಕೆಲುಬುಗಳು ಚುಚ್ಚದಿರಲೆಂದು"

ನಕಲಿ ದೇಶಭಕ್ತರ ಅಸಲಿ ಬುದ್ದಿಯನ್ನು ಅನಾವರಣ ಮಾಡಿದ ಪದ್ಯವಿದು.

"ರಾಮಾ ರಾಮಾ" "ಭೂಕಂಪ" ಕವನಗಳಲ್ಲಿ ಕವಿಯ ಧರ್ಮಾತೀತ ಚಿಂತನೆಗಳು ಢಾಳಗಿ ವ್ಯಕ್ತವಾಗಿವೆ. ಪರಂಪರಾಗತ ಮೌಲ್ಯಗಳನ್ನು ಟೀಕಿಸುವಲ್ಲಿ ಇತರ ಕವಿಗಳಿಗಿಂತ ಭಿನ್ನವಾಗಿ ನಿಲ್ಲುತ್ತಾರೆ. ಮತ್ತು ಪ್ರಸ್ತುತ ಸಾಮಾಜಿಕ, ರಾಜಕೀಯ ಸ್ಥಿತಿಗತಿಗಳ ಬಗ್ಗೆ ಟೀಕೆ ಕಟುವೆನಿಸಿದರೂ ಸಂದರ್ಭಕ್ಕೆ ತಕ್ಕಂತೆ ಸಹಜವೆಂಬಂತೆ ಮೂಡಿಬಂದಿವೆ. ಇವರ ಕವನಗಳಲ್ಲಿ ಸುಕೋಮಲತೆಯಿದೆ, ಆರ್ದ್ರಭಾವವಿದೆ, ತೀಕ್ಷ್ಣ ಪ್ರತಿಕ್ರಿಯೆಯೂ ಇದೆ. ಹಾಗೆ ಬದುಕಿನ ಬಗ್ಗೆ ಸಕಾರಾತ್ಮಕ ಚಿಂತನೆಗಳೂ ಹರಳುಗಟ್ಟಿವೆ. ಅಲ್ಲಲ್ಲಿ ಒಂಚೂರು ವ್ಯಂಗ್ಯ, ಒಂದಿಷ್ಟು ಫ್ಯಾಂಟಸಿ, ಪ್ರತಿಭಟನೆಯ ಅಂಶಗಳನ್ನು ಒಳಗೊಂಡ ಇವರ ಕವನಗಳು ಯುವ ಕವಿಯೊಬ್ಬನ ಭರವಸೆಯ ಬೆಳಕೆನ್ನಲು ಅಡ್ಡಿಯಿಲ್ಲ. ಭವಿಷ್ಯದಲ್ಲಿ ಮತ್ತಷ್ಟು ಉತ್ತಮ ಕವನಗಳನ್ನು ನಿರೀಕ್ಷಿಸಬಹುದಾದಂತ ಪ್ರತಿಭಾವಂತ ಕವಿ ವಿಲ್ಸನ್ ಕಟೀಲ್.

# ಮಾಯೆಗೆ ಮೂಡಿದ ಕಣ್ಣು

* ಡಾ.ಎ.ರಘುರಾಂ

ಕನ್ನಡದ ಸಂದರ್ಭದಲ್ಲಿ ವಚನ ಚಳವಳಿ ಮಾಡಿದ ಪ್ರಭಾವ ಗಮನಾರ್ಹ. ಅದು ನೀಡಿದ ಬಹುಮುಖಿ ಚಿಂತನೆ ಇನ್ನೂ ಹಲವಾರು ಶತಮಾನಗಳಿಗೆ ಸ್ಫೂರ್ತಿಯಾಗುತ್ತದೆ. ಅದೊಂದು ಚಳವಳಿ ಮಾತ್ರವಾಗದೇ ಮನುಷ್ಯ ಬದುಕನ್ನು ಹೇಗೆಲ್ಲ ಕಟ್ಟಿಕೊಳ್ಳಬೇಕು ಎನ್ನಲಿಕ್ಕೆ ಅಲ್ಲಿ ನೂರಾರು ಚಿಂತನೆಗಳಿವೆ. ಮೊಗೆದಷ್ಟು ನೀರು, ಕುಡಿದಷ್ಟು ತೀರ್ಥ. ಅದೇ ಈ ಚಳವಳಿಯ ಒಟ್ಟು ಅರ್ಥ. ಅಕ್ಕ ಈ ಶತಮಾದಲ್ಲಿ ಕಾಣಿಸಿದ ಒಬ್ಬ ಪ್ರಬುದ್ಧೆ. ಆಕೆಯ ಧೈರ್ಯದ ನಡೆ ಜಗಕ್ಕೆ ದಾರಿಯಾಗಿದೆ. ಅಕ್ಕ ಈ ಸಮಾಜದಲ್ಲಿ ಏನೆಲ್ಲ ಪಾಡು ಪಟ್ಟಳೋ ಅವಳಿಗೇ ಗೊತ್ತು, ಆದರೂ ಪಟ್ಟ ಪಾಡುಗಳೆಲ್ಲ ಹಾಡಾಗಿ ನಮ್ಮೆದುರಿಗಿವೆ. ಲೌಕಿಕದ ಒಡಲಿನಲ್ಲಿ ಮೂಡಿದ ಮಡಿವಂತಿಕೆಯ ಪ್ರಜ್ಞೆಯ ಕಾರಣದಿಂದ ಲೋಕದಲ್ಲಿ ಗಂಡು, ಹೆಣ್ಣು ಎಂಬ ಭೇದ ಮೂಡಿ ಇಲ್ಲಿ ಒಂದು ಮುಂದಾಗಿ, ಇನ್ನೊಂದು ಹಿನ್ನೆಲೆಗೆ ಬಂದ ಕಾರಣವನ್ನು ಅಕ್ಕ ತುಂಬ ಸಮರ್ಥವಾಗಿ ವಿವೇಚನೆಗೆ ಒಳಪಡಿಸಿದ್ದಾಳೆ. ಇಹ, ಪರ ಇದ್ದಂತೆ ಇಲ್ಲಿ ಗಂಡು, ಹೆಣ್ಣು ಎಂಬ ಭಿನ್ನ ಭೇದಗಳು ಮೂಡಿ ಸಮುದಾಯವನ್ನು ಹಾದರಗೊಳಿಸಿವೆ ಎನ್ನುವುದು ಅಕ್ಕನ ವಿರೋಧ. ಗಂಡಿಗೆ ಪ್ರಶ್ನಿಸುವ ಅಹಂಕಾರವನ್ನು ಯಾರು ಕೊಟ್ಟರು? ತರ್ಕವೇ ಇಲ್ಲದೆ ಪ್ರಶ್ನಿಸಿಸುವ ಅವರ ಪ್ರಶ್ನೆಗಳು ಹೆಣ್ಣಿನಲ್ಲಿ ಅಸಹನೆಯನ್ನು, ಕ್ರೌರ್ಯವನ್ನು ಹುಟ್ಟುಹಾಕುತ್ತಿವೆ. ಯಾರೇ ಹೆಣ್ಣನ್ನು ಪ್ರಶ್ನಿಸಬೇಕೆಂದರೂ ಲಜ್ಜೆಗೆಟ್ಟವರಂತೆ ಪ್ರಶ್ನಿಸುವ ಅವರ ಮನೋಭಾವವನ್ನು ಆಕೆ ವಿರೋಧಿಸುತ್ತಿದ್ದಾಳೆ. ಹೆಣ್ಣನ್ನು ಪ್ರಶ್ನಿಸುವಾಗಲೇ ಅವಳಿಗೆ ಯಾರಿದ್ದಾರೆ? ಎಂದು ಕೆಣಕುವ, ಕೆದಕುವ ಕ್ರಮ ಪ್ರಶ್ನಾರ್ಹ ಎನ್ನುವುದು ಅಕ್ಕನ ದಿಟ್ಟ ವೈಚಾರಿಕತೆಯನ್ನು ತೋರುತ್ತದೆ.

'ಆರೂ ಇಲ್ಲದವಳೆಂದು
ಅಳಿಲುಗೊಳಲುಬೇಡ ಕಂಡೆಯಾ
ಏನ ಮಾಡಿದರೂ ಆನಂಜುವಳಲ್ಲ

ತರಗೆಲೆಯ ಮೆಲಿಯ ಆನಿಹೆನು
ಚೆನ್ನಮಲ್ಲಿಕ್ಕಾರ್ಜುನ'

'ಏನು ಮಾಡಿದರೂ ನಾನು ಅಂಜುವಳಲ್ಲ' ಎನ್ನುವುದು ಆಕೆಯ ಮನೋಸ್ಥೈರ್ಯವನ್ನು ತೋರುತ್ತದೆ. ಪ್ರಜಾಪ್ರಭುತ್ವವಾದಿ ಸಮಾಜದಲ್ಲಿ ಹೆದರುತ್ತಿರುವ ಈ ಹೊತ್ತಿನಲ್ಲಿ ಏನೂ ಇಲ್ಲದ ಸಂದರ್ಭದಲ್ಲಿ ಪುರುಷ ಪ್ರಧಾನ ಸಮಾಜದ ಎದುರು ಆಕೆ ತೋರುವ ಧೈರ್ಯ ಯಾರನ್ನೂ ಮೆಚ್ಚಿಸುತ್ತದೆ. ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಆಕೆಯ ಪ್ರಯಾಣಕ್ಕೆ ಒಂದು ವಿಶೇಷತೆಯಿದೆ. ಶಿವಮೊಗ್ಗ ಜಿಲ್ಲೆಯ 'ಉಡುತಡಿ'ಯಿಂದ ಆಂಧ್ರ ಪ್ರದೇಶದ 'ಕದಳಿ'ಯವರೆಗೂ ಆಕೆಯ ಪ್ರಯಾಣ ದೈಹಿಕ, ಮಾನಸಿಕ ಹಾಗೂ ಅಧ್ಯಾತ್ಮಿಕ ದೃಷ್ಟಿಯಿಂದ ಗಮನಾರ್ಹ. ಇಲ್ಲಿ ಮೂರು ನೆಲೆಗಳಿಂದ ಗುರುತಿಸಿದ ಕಾರಣವಿಷ್ಟೆ. ದೈಹಿಕ ಎಂದರೆ ಸ್ತ್ರಿಗೆ ಒಂದು ವಿಶೇಷವಾದ ದೈಹಿಕ ಚಹರೆಗಳಿವೆ. ಇಲ್ಲಿ ಅಕ್ಕ ತನ್ನ ಉಡುಪು ತ್ಯಜಿಸಿದ ಕಾರಣ ಆಕೆಯನ್ನು ಈ ಸಮಾಜ ನೋಡಿದ ರೀತಿಯೇ ಬೇರೆ ಎನ್ನುವುದನ್ನು ಗಮನಿಸಬೇಕು. ಮಾನಸಿಕ ಎಂದರೆ ಲೌಕಿಕ ಜಗತ್ತಿನಲ್ಲಿ ಆಕೆ ಈಗಾಗಲೇ 'ಕೌಶಿಕ' ಎನ್ನುವ ಗಂಡನನ್ನು ತೊರೆದು ಅಲೌಕಿಕದ ಗಂಡನಾದ ಚೆನ್ನಮಲ್ಲಿಕಾರ್ಜುನನೇ ನನ್ನ ನಲ್ಲ, ಗಂಡ, ದೈವ ಎಂದು ಎಲ್ಲವನ್ನೂ ಏಕತ್ರಗೊಳಿಸಿ ನಡೆಯುವ ಅವಳ ಧ್ಯಾನವನ್ನು ಗಮನಿಸಬೇಕಿದೆ. ಲೌಕಿಕ ಹಾಗೂ ಅಲೌಕಿದ ನಡುವಿನ ಆಕೆಯ ತಳಮಳ, ನೋವು, ಅನುಸಂಧಾನ ಇವೆಲ್ಲವೂ 'ಚೆನ್ನ'ನನ್ನು ಹುಡುಕುವಲ್ಲಿ ಗಮನಾರ್ಹವಾದರೂ ಇವು ಒಂದು ಹೆಣ್ಣಿನಲ್ಲಿ ನಡೆಯುತ್ತಿರುವ ವಿಚಿತ್ರ ವಿದ್ಯಮಾನಗಳೇ ಆಗಿವೆ. ಲೌಕಿಕವನ್ನು ತ್ಯಜಿಸುತ್ತ ಅಲ್ಲಿರುವ ಎಲ್ಲ ವೈಚಿತ್ರ್ಯಗಳನ್ನು ಪ್ರಶ್ನಿಸುತ್ತ ತುಂಬ ಗಟ್ಟಿಗಿತ್ತಿಯಾಗಿ ಆಕೆ ನಡೆಯುವ ಹಾದಿ ತುಂಬ ಗಟ್ಟಿಯಾದದ್ದು, ಹಾಗೂ ಪ್ರಚೋದನಕಾರಿಯಾದದ್ದು. ಅನೇಕ ಕಾರಣಗಳಿಂದ ಈ ಶತಮಾನದ ಸ್ತ್ರೀಯರು ಆಕೆಯನ್ನು ತಮ್ಮ ಬದುಕಿನ ಧೈರ್ಯಕ್ಕೆ ಹಾಗೂ ಧ್ಯೇಯಕ್ಕೆ ಪ್ರತೀಕವಾಗಿಸಿಕೊಂಡಿದ್ದಾರೆ. ಇದೊಂದು ಹುಡುಗಾಟದ ಮಾತಲ್ಲ, ಅವರು ತಮ್ಮ ನೆಲೆಯನ್ನು ಗಟ್ಟಿಗೊಳಿಸಿಕೊಳ್ಳಲು ಹುಡುಕಾಡುತ್ತಿದ್ದಾರೆ. ಈ ಕಾರಣಕ್ಕಾಗಿಯೇ ಆಕೆ ಮೇಲಿನ ವಚನದಲ್ಲಿ ಹೀಗೆ ಹೇಳುತ್ತಾಳೆ.

'ಏನ ಮಾಡಿದರೂ ಆನಂಜುವಳಲ್ಲ
ತರಗೆಲೆಯ ಮೆಲಿಯ ಆನಿಹೆನು

ಚೆನ್ನಮಲ್ಲಿಕ್ಕಾರ್ಜುನ' ಎಂದು ಹೇಳುತ್ತಿದ್ದಾಳೆ.

ಆಕೆಯ ಆಧ್ಯಾತ್ಮಿಕ ಪಯಣ ವಿಶೇಷವಾದುದು. ಇಹದ ಗಂಡನಿಗಿಂತ ಪರದ ಗಂಡನೇ ಶ್ರೇಷ್ಠ ಎನ್ನುವ ಕಾರಣಗಳೇನು? ಎನ್ನುವುದನ್ನು ಗಮನಿಸಬೇಕು.

'ಎನ್ನ ಮನವ ಮಾರುಗೊಂಡೆನವ್ವಾ
ಎನ್ನ ತನುವ ಸೂರೆಗೊಂಡೆನವ್ವಾ
ಎನ್ನ ಸುಖವನೊಪ್ಪುಗೊಂಡೆನವ್ವಾ
ಎನ್ನ ಇರವನಿಂಬುಗೊಂಡನವ್ವಾ
ಚನ್ನಮಲ್ಲಿಕಾರ್ಜುನನ ಒಲುಮೆಯಾಳಾನು'

ಈ ವಚನದಲ್ಲಿ ಕಾಣುವ 'ಮಾರು', 'ಸೂರೆ', 'ಒಪ್ಪು', 'ಇರವ' ಎನ್ನುವ ಎಲ್ಲ ಶಬ್ದಗಳನ್ನು ಗಮನಿಸಿ ಕೊನೆಯಲ್ಲಿ ಕಾಣುವ ಶಬ್ದವನ್ನು ಗಮನಿಸಬೇಕು. ಒಲುಮೆಯ ಮೂಲಕ ಅವನಿಗೆ ಮಾರುಹೋಗಿದ್ದಾಳೆ, ಸೂರೆಗೊಂಡಿದ್ದಾಳೆ ಅಷ್ಟೇ ಅಲ್ಲ, ಅಲ್ಲೇ ಇಂಬುಗೊಂಡವಳೂ ಕೂಡ. ಅಲ್ಲಿ ಅವಕಾಶ ಪಡೆಯಲು ಆಕೆ ಶತಗತಾಯ ಪ್ರಯತ್ನಿಸುತ್ತಿದ್ದಾಳೆ. ಅವನ ಒಲುಮೆಗೆ ಆಳು ಎನ್ನುವ ಆಕೆಯ ದೃಷ್ಟಿಯನ್ನು ವಿಶೇಷವಾಗಿ ಗಮನಿಸಬೇಕು.

ಆಧ್ಯಾತ್ಮಿಕ ಎನ್ನುವ ಸಂದರ್ಭಕ್ಕೆ ಇನ್ನೊಂದು ವಚನವನ್ನು ನೋಡಿದರೆ ಸ್ಪಷ್ಟವಾದೀತು. ಇಹವನ್ನು ನಿರಾಕರಿಸಲು ಇದು ಸಾಕ್ಷಿಯೂ ಆಗಬಲ್ಲದು.

'ನೋಡುವ ಕಂಗಳಿಗೆ ರೂಪಿಂಬಾಗಿರಲು
ನೀವು ಮನ ನಾಚದೆ ಬಂದಿರಣ್ಣಾ
ಕೇಳಿದ ಶ್ರೋತ್ರಸೊಗಸಿಗೆ ನೀವು ಮರುಳಾಗಿ ಬಂದಿರಣ್ಣಾ
ನಾರಿಯೆಂಬ ರೂಪಿಂಗೆ ಒಲಿದು ಬಂದಿರಣ್ಣಾ
ಮೂತ್ರವು ಬಿಂದು ಒಸರುವ ನಾಳವೆಂದು
ಕಂಗಾಣದೆ ಮುಂದುಗೆಟ್ಟು ಬಂದಿರಣ್ಣಾ
ಬುದ್ಧಿಗೇಡಿತನದಿಂದ ಪರಮಾರ್ಥದ ಸುಖವ ಹೋಗಲಾಡಿಸಿಕೊಂಡು
ಇದಾವ ಕಾರಣವೆಂದರಿಯದೆ
ನೀವು ನರಕ ಹೇತುವೆಂದರಿತು ಮನ ಹೇಸದೆ ಬಂದಿರಣ್ಣಾ

ಚನ್ನಮಲ್ಲಿಕಾರ್ಜುನನಲ್ಲದೆ ಮಿಕ್ಕಿಹ ಪುರುಷರೆನಗೆ ಸಹೋದರರು
ಛೀ ಹೋಗಾ ಮರುಳೆ'

ಪರಮಾರ್ಥ ಪಡೆಯುವುದು ಹುಡುಗಾಟದ ಮಾತಲ್ಲ ಎಂದು ಅಕ್ಕನಿಗೆ ಗೊತ್ತು. ನೀವು ಏನೇ ಅಪಮಾನ ಮಾಡಿದರೂ ನಾನು ನಿಶ್ಚಯಿಸಿ ಬಂದಿರುವುದರಿಂದ ನನಗೆ ಅಪಮಾನವಾಗಲು ಸಾಧ್ಯವೇ ಇಲ್ಲ ಎಂದು ಹೇಳುವ ಆಕೆಯ ಮನಸ್ಸು ಧೃಢತೆಯನ್ನು ಹೊಂದಿದೆ ಎನ್ನುವುದನ್ನು ತೋರುತ್ತದೆ.

ನೀವು ನರಕ ಹೇತುವೆಂದರಿತು ಮನ ಹೇಸದೆ ಬಂದಿರಣ್ಣಾ
ಚನ್ನಮಲ್ಲಿಕಾರ್ಜುನನಲ್ಲದೆ ಮಿಕ್ಕಿಹ ಪುರುಷರೆನಗೆ ಸಹೋದರರು
ಛೀ ಹೋಗಾ ಮರುಳೆ'

ಹೆಣ್ಣು ಎಂದ ಮಾತ್ರಕ್ಕೆ ನೀವು ನೋಡುವ ಕಣ್ಣಾಗಲೀ, ಮನವಾಗಲೀ, ನಿಮ್ಮ ಮಾತಾಗಲೀ ಸರಿಯಿಲ್ಲವೆಂದೇ ಹೇಳುವ ಆಕೆ ಗಂಡಸರ ಕಾಮುಕ ದೃಷ್ಟಿಕೋನವನ್ನು ವ್ಯಂಗ್ಯ ಮಾಡುವುದೇ ಅಲ್ಲದೇ ನೀವೆಲ್ಲ ಪರಮಾರ್ಥ ಎಂದರೆ ಏನೆಂದು ತಿಳಿದುಕೊಂಡಿದ್ದೀರಿ? ಎನ್ನುವ ಆಕೆಯ ಮಾತು ಕಠೋರ ಅಲಗಾಗಿದೆ. ಮಿಕ್ಕೆಲ್ಲ ಪುರುಷರು ಎನಗೆ ಸಹೋದರರೇ ಎಂದು ಹೇಳುವ ಆಕೆಯ ಧೈರ್ಯವನ್ನು ನಾವು ಮೆಚ್ಚಬೇಕು. ಅದಲ್ಲದೆ ಪುರುಷ ಅಹಂಕಾರದಿಂದ ನೀವು ನೋಡುವ ದೃಷ್ಟಿ, ನಿಮ್ಮ ನಡೆ ಎಲ್ಲವನ್ನೂ ತಾನು ಅನುಮಾನಿಸುತ್ತೇನೆ ಎಂದೂ ಕೂಡ ಹೇಳುತ್ತಿದ್ದಾಳೆ. 'ಮೂತ್ರ ಬಿಂದು ಒಸರುವ ನಾಳ'ಕ್ಕೆ ಇಷ್ಟೊಂದು ವ್ಯಾಮೋಹ ಏಕೆ ಇರಿಸಿಕೊಂಡಿದ್ದೀರಿ. ಪರಮಾರ್ಥದಲ್ಲಿ ಇದಕ್ಕೂ ಜಾಗವಿದೆಯೇ ಎಂದು ಹೇಳುತ್ತಾ ಅಸಹ್ಯದಿಂದ 'ಛೀ ಹೋಗಾ ಮರುಳೆ' ಎನ್ನುತ್ತಾಳೆ. ದೇಹ ನಿರಾಕರಣೆಯ ಮೂಲಕ ತಾನು ಉತ್ತರಿಸುತ್ತಿದ್ದಾಳೆ. ನೀವು ಪರಮಾರ್ಥ ಎನ್ನುವ ವಲಯಕ್ಕೆ ಬಂದೇ ಇಲ್ಲ ನೀವೆಲ್ಲ ಅದರ ಅರ್ಥವನ್ನೂ ತಿಳಿದಿಲ್ಲ ಎಂದು ವ್ಯಂಗ್ಯ ಮಾಡುತ್ತಿದ್ದಾಳೆ. ಸಾಮಾನ್ಯವಾಗಿ ನಮ್ಮ ಸಮಾಜದಲ್ಲಿ ಹೆಣ್ಣುಮಕ್ಕಳು ಗಂಡಸರನ್ನು ಅಣ್ಣಾ ಎಂದು ಸಂಬೋಧಿಸುವ ಉದ್ದೇಶವೆಂದರೆ ಅನ್ಯ ದೃಷ್ಟಿಯಿಂದ ನೋಡಬಾರದೆನ್ನುವ ಮಡಿವಂತಿಕೆಯಿಂದಲೇ ಎನ್ನವುದನ್ನು ಗಮನಿಸಬೇಕು. ಅಕ್ಕನ ವಿನಯವೂ, ಗಂಡಿನ ಅಹಂಕಾರದ ನೆಲೆಗೆ ಉತ್ತರವೂ ಆಗಿ ಈ ವಚನ ಇದೆ ಎನ್ನುವುದನ್ನು ಗಮನಿಸಬೇಕು.

ಒಳಗಣ ಗಂಡನಯ್ಯಾ ಹೊರಗಣ ಮಿಂಡನಯ್ಯಾ
ಎರಡನೂ ನಡೆಸಲು ಬಾರದಯ್ಯಾ
ಲೌಕಿಕ ಪರಮಾರ್ಥವೆಂಬೆರಡನೂ ನಡೆಸಲು ಬಾರದಯ್ಯಾ
ಚನ್ನಮಲ್ಲಿಕಾರ್ಜುನಯ್ಯಾ
ಬಿಲ್ವ ಬೆಳವಲಕಾಯಿ ಒಂದಾಗಿ ಹಿಡಿಯಲು ಬಾರದಯ್ಯಾ

ಈ ಲೋಕದಲ್ಲಿ 'ಹೊರಗೆ' ಮತ್ತು 'ಒಳಗೆ' ಎಂಬ ಎರಡು ನೆಲೆಗಳಲ್ಲಿ ಮನುಷ್ಯನ ಬದುಕಿದೆ. ಹೊರಗಡೆಯೂ ಸ್ವಚ್ಚ ಕಾಣದೆ ಒಳಗಡೆಯೂ 'ಶುಚಿ' ಇರದೇ ಹೋದರೆ ಎಡಬಿಡಂಗಿಗಳಾಗುತ್ತೇವೆ. 'ಲೌಕಿಕ' ಹಾಗೂ 'ಅಲೌಕಿಕ' ಎನ್ನುವೆಡೆಯಲ್ಲಿಯೂ ಹೀಗೆಯೇ ಎನ್ನುವುದನ್ನು ಅಕ್ಕ ಹೇಳುತ್ತಿದ್ದಾಳೆ. ನೀವು ಎರಡನ್ನೂ ನಂಬಿದ್ದೀರಿ. ನಾನು ಅಲೌಕಿಕ ನಡೆಯನ್ನು ಆಯ್ದುಕೊಂಡು ಅತ್ತ ನಡೆಯಲು ಮುಂದಾಗಿದ್ದೇನೆ. ನೀವು 'ಬಿಲ್ವ'ವನ್ನೂ 'ಬೆಳವಲಕಾಯಿ' ಎರಡನ್ನೂ ಹಿಡಿಯಲು ಹೊರಟಿರುವುದು ಸೋಜಿಗ ಎನ್ನುತ್ತಿದ್ದಾಳೆ. ನನಗೆ ಇರುವುದೇ ಒಂದೇ ಅದು 'ಚನ್ನಮಲ್ಲಿಕಾರ್ಜುನ' ಎಂದು ಸ್ಪಷ್ಟವಾಗಿ, ನಿಷ್ಠುರವಾಗಿ ಹೇಳುತ್ತಿದ್ದಾಳೆ.

'ಹಣ್ಣ ಮೆದ್ದ ಬಳಿಕ ಆ ಮರನನಾರು ತರಿದಡೇನು
ಹೆಣ್ಣ ಬಿಟ್ಟ ಬಳಿಕ ಆಕೆಯನಾರು ಕೂಡಿದಡೇನು
ಮಣ್ಣ ಬಿಟ್ಟ ಬಳಿಕ ಆ ಕೈಯ್ಯನಾರು ಉತ್ತಡೇನು
ಚನ್ನಮಲ್ಲಿಕಾರ್ಜುನನರಿಯದ ಬಳಿಕ
ಆ ಕಾಯವ ನಾಯಿ ತಿಂದಡೇನು ನೀರು ಕುಡಿದಡೇನು'

ಈ ವಚನವಂತೂ ಪುರುಷ ಪ್ರಧಾನ ಸಮಾಜ ಮಾಡಿದ ಅವಮಾನಕ್ಕೆ ಪ್ರತೀಕಾರವಾಗಿ ಹೇಳಿದ ಮಾತಾಗಿದೆ. ನಾನು ಎಲ್ಲವನ್ನೂ ಬಿಟ್ಟು ಬಂದವಳು ನನಗೆ ಯಾವುದೇ ಕುರುಹುಗಳಿಲ್ಲ, ಆದರೂ ನನ್ನನ್ನು ಕುರುಹುಗಳಿಂದಲೇ ಗುರುತಿಸುವ ನಿಮ್ಮ ಈ ಮಾತಿಗೆ ನಾನು ಏನು ಹೇಳಲಿ ಎಂದು ಕಠೋರವಾಗಿ ಪ್ರಶ್ನಿಸುತ್ತಿದ್ದಾಳೆ. ಬಳೆ, ಬೊಟ್ಟು, ಮಾಂಗಲ್ಯ, ಉಡುಪು, ಮುಡಿ ಈ ಎಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡೇ ಅಕ್ಕ ಮಾತನಾಡುತ್ತಿದ್ದಾಳೆ. ಇವೆಲ್ಲ ಹೆಣ್ಣಿಗೆ ಕುರುಹು ಆದಂತೆ, ಹೆಣ್ಣು ನಡೆಯುವ ನಡಿಗೆಯೂ ಒಂದು ಕುರುಹು. ಆ ಹೆಣ್ಣಿನ ನಡಿಗೆಯನ್ನು ಬಿಟ್ಟವಳೆಂದು ಆ ಸಮಾಜ ಛೀಮಾರಿ ಹಾಕಿರಬೇಕು. ಇಂತಹ ಹಕ್ಕನ್ನು ನಿಮಗೆ

ಯಾರು ಕೊಟ್ಟರು. ನನ್ನನ್ನು ಸ್ವತಂತ್ರವಾಗಿ ಇರಲು, ನಡೆಯಲು, ಚಿಂತಿಸಲು, ಬದುಕಲು ಬಿಡಿ ಎನ್ನುವ ಆಕೆಯ ತಳಮಳ ಬಹಳ ಘನವಾದುದು. ಅದಕ್ಕಾಗಿ ಆಕೆ 'ಆ ಕಾಯವ ನಾಯಿ ತಿಂದಡೇನು? ನೀರು ಕುಡಿದಡೇನು?'ಎನ್ನುತ್ತಾಳೆ. ನಿಮಗೆ ನನ್ನಿಂದ ಏನಾಗಬೇಕು? ನೀವೆಲ್ಲ ಏಕೆ ಹೀಗೆ? ಎಂದು ನೊಂದು ಕ್ರೌರ್ಯದಿಂದ ನುಡಿಯುತ್ತಿದ್ದಾಳೆ. ಹೆಣ್ಣನ್ನು ಇಷ್ಟೊಂದು ಕಠೋರವಾಗಿ ಪ್ರಶ್ನಿಸಬೇಕಾದ ಅಗತ್ಯವೇನು? ಎಂಬ ಕಠೋರ ಸಂಗತಿಗಳೇ ಇಲ್ಲಿ ವಚನವಾಗಿದೆ.

ಕೈಸಿರಿಯ ದಂಡವ ಕೊಳಬಹುದಲ್ಲದೆ
ಮೈಸಿರಿಯ ದಂಡವ ಕೊಳಲುಂಟೆ
ಉಟ್ಟಂತಹ ಉಡುಗೆ ತೊಡಿಗೆಯನೆಲ್ಲ
ಸೆಳೆದುಕೊಳಬಹುದಲ್ಲದೆ
ಮುಚ್ಚಿರ್ದ ಮುಸುಕಿರ್ದ ನಿರ್ವಾಣವ
ಸೆಳೆದುಕೊಳಬಹುದೆ
ಚನ್ನಮಲ್ಲಿಕಾರ್ಜುನ ದೇವರ ಬೆಳಗನುಟ್ಟು
ಲಜ್ಜೆಗೆಟ್ಟವಳಿಗೆ ಉಡುಗೆ ತೊಡುಗೆಯ ಹಂಗೇಕೋ ಮರುಳೆ

ಉಡುಗೆ ತೊಡುಗೆ ಶುದ್ಧವಿರುವುದೇ ವ್ಯಕ್ತಿಯ ವ್ಯಕ್ತಿತ್ವಲ್ಲ. ನನಗೆ ಯಾವುದೇ ಉಡುಗೆಯ ಅಗತ್ಯವಿಲ್ಲ. ಮತ್ತೆ ಮತ್ತೆ ನನ್ನ ಉಡುಗೆಯನ್ನಿಟ್ಟೇ ನೀವು ಪ್ರಶ್ನಿಸುತ್ತ ಬಂದಿರಾದರೆ ಅದಕ್ಕೆ ನನ್ನಲ್ಲಿ ಇದೇ ಉತ್ತರ ಎಂದು 'ಚನ್ನಮಲ್ಲಿಕಾರ್ಜುನ ದೇವರ ಬೆಳಗನುಟ್ಟು ಲಜ್ಜೆಗೆಟ್ಟವಳಿಗೆ ಉಡುಗೆ ತೊಡುಗೆಯ ಹಂಗೇಕೋ ಮರುಳೆ' ಎಂದು ಹೇಳುತ್ತಾಳೆ. ಎಲ್ಲ ಹಂಗನ್ನು ತೊರೆದವಳಿಗೆ ಮತ್ತೆ ಹಂಗೇಕೆ? ಎಂದು ಪ್ರಶ್ನಿಸುತ್ತಲೇ ಉತ್ತರ ನೀಡುವ ಆಕೆಯ ಧೈರ್ಯವನ್ನು ಮೆಚ್ಚಬೇಕು. ನನಗೆ ಉಡುಗೆ ತೊಡುಗೆಗಳಿಲ್ಲ. 'ದೇವರ ಬೆಳಗನುಟ್ಟು' ಬಂದಿದ್ದೇನೆ ಎಂದು ಮಾರ್ಮಿಕವಾಗಿ ನುಡಿಯುತ್ತಾಳೆ. ನೀವು ಎಂತಹ ನಿರ್ವಾಣವನ್ನು ಬಯಸುತ್ತಿದ್ದೀರೋ? ಗೊತ್ತಿಲ್ಲ. ನಾನು ಸ್ಪಷ್ಟವಾಗಿ ಲೌಕಿಕವನ್ನು ತ್ಯಜಿಸಿಯೇ ಬಂದವಳು. ತ್ಯಜಿಸಿದರೂ ಕೂಡ ಲಜ್ಜೆಗೆಟ್ಟವಳು ಎಂದು ಮೂದಲಿಸಿ ಮತ್ತೆ ಮತ್ತೆ ಅಪಮಾನಿಸುವುದಾದರೂ ಏತಕ್ಕೆ? ಹೀಗೆಲ್ಲ ಪ್ರಶ್ನಿಸುವುದನ್ನು ನಿಮಗೆ ಯಾರು ಹೇಳಿದರು? ನಾನು ಲೌಕಿಕವನ್ನು ಬಿಟ್ಟೇ ಇಲ್ಲಿ ಬಂದಿರುವುದು. ಇಲ್ಲೂ ಮತ್ತೆ ಲೌಕಿಕವೇ ಇದೆ ಎಂದಾದರೆ ಅಂತಹ ಲೌಕಿಕದ

ಜಂಜಡ ನನಗೆ ಬೇಕಾಗಿಲ್ಲ ಎಂದು ಸ್ಪಷ್ಟಪಡಿಸುತ್ತಿದ್ದಾಳೆ. ಅದನ್ನು ಇನ್ನೊಂದು ವಚನದಲ್ಲಿ ಸ್ಪಷ್ಟಪಡಿಸಿದ್ದಾಳೆ.

'ನೀನೊಲಿದಡೆ ಸುಖಿಯಾಗಿಪ್ಪೆ
ನೀನೊಲ್ಲದಿರೆ ದು:ಖಿಯಾಗಿಪ್ಪೆನಯ್ಯಾ
ಚನ್ನಮಲ್ಲಿಕಾರ್ಜುನಾ
ಇಹಕ್ಕೊಬ್ಬ ಗಂಡನೆ? ಪರಕೊಬ್ಬ ಗಂಡನೆ?
ಲೌಕಿಕ್ಕೊಬ್ಬ ಗಂಡನೆ? ಪರಮಾರ್ಥಕ್ಕೊಬ್ಬ ಗಂಡನೆ?
ಎನ್ನ ಗಂಡ ಚನ್ನಮಲ್ಲಿಕಾರ್ಜುನ ದೇವರಲ್ಲದೆ
ಮಿಕ್ಕಿನ ಗಂಡರೆಲ್ಲ ಮುಗಿಲ ಮರೆಯ ಬೊಂಬೆಯಂತೆ'

ಈ ಲೋಕದಲ್ಲಿ ಹೆಣ್ಣನ್ನು ಎಷ್ಟೆಲ್ಲ ಕಾರಣಗಳಿಂದ ಗುರುತಿಸುತ್ತ ಬಂದಿದ್ದಾರೆ ಎನ್ನುವ ಪ್ರಶ್ನೆಗಳಿಗೆ ಉತ್ತರ ಈ ವಚನವಾಗಿದೆ. ಇವರಿಗೆ ಇಹ ಮತ್ತು ಪರ, ಲೌಕಿಕ ಮತ್ತು ಅಲೌಕಿಕ ಗೊತ್ತೇ ಇಲ್ಲವೇ? ನನಗೆ 'ಎನ್ನ ಗಂಡ ಚನ್ನಮಲ್ಲಿಕಾರ್ಜುನ' ಎಂದು ಹೇಳಿದರೂ ಇವರೇಕೆ ಇನ್ನೂ ಮೂದಲಿಸುತ್ತಾ ಕೆಣಕುತ್ತಿದ್ದಾರೆ ಎನ್ನುವುದೇ ಆಕೆಗೆ ಅರ್ಥವಾಗುತ್ತಿಲ್ಲ. ವ್ಯಕ್ತಿ ಸ್ವಾತಂತ್ರ್ಯವಿದ್ದಂತೆ, ಆಕಗೊಂದು ಮಾನಸಿಕ ಸ್ವಾತಂತ್ರ್ಯವೂ ಇರುತ್ತದೆ ಎನ್ನುವುದನ್ನು ತಿಳಿಯಬೇಕು. ಇದನ್ನು 'ಅರಿಯದ' ಈ ಲೋಕದ ಜನ ಏನೆಲ್ಲ ಹಿಂಸೆ ನೀಡುತ್ತಿದ್ದಾರೆ ಎನ್ನುವುದೇ ಇಲ್ಲಿನ ಗಂಭೀರ ತರ್ಕವಾಗಿದೆ. ನನಗೊಂದು ಆತ್ಮಸಾಕ್ಷಿಯಿದೆ. ಆ ಆತ್ಮಸಾಕ್ಷಿಯೇ ಚನ್ನಮಲ್ಲಿಕಾರ್ಜುನ ಅದನ್ನು ಬಿಟ್ಟು ಬೇರೆ ಇಲ್ಲ ಎಂದು ಹೇಳುವ ಮಾತುಗಳನ್ನು ಗಮನಿಸಬೇಕಿದೆ. ಸುಖ ಮತ್ತು ದು:ಖಕ್ಕೆ ಕಾರಣ ನಂಬಿಕೆಯ ಪ್ರಶ್ನೆ. ನಂಬಿಕೆ ಇಲ್ಲದಿದ್ದರೆ ಏನನ್ನೂ ಕಟ್ಟಲಾಗುವುದಿಲ್ಲ. ನಿಜದ ಬೊಂಬೆ ಚನ್ನಮಲ್ಲಿಕಾರ್ಜುನ ಮಾತ್ರ. ಉಳಿದವರೆಲ್ಲ ಮುಗಿಲ ಮರೆಯ ಬೊಂಬೆಗಳೇ ಎಂದು ಅಕ್ಕ ಜಗದ ಪುರುಷಾಹಂಕಾರವನ್ನು ಧಿಕ್ಕರಿಸುತ್ತಿದ್ದಾಳೆ.

ಈ ಜಗದೊಳಗೆ ಎರಡು ಧೃವಗಳಿವೆ. ಅವುಗಳೆಂದರೆ ಒಂದು ಹೆಣ್ಣು, ಮತ್ತೊಂದು ಗಂಡು. ಗಂಡು ಎನ್ನುವುದು ಈ ಲೋಕದಲ್ಲಿ ಇಲ್ಲ ಎನ್ನುವ ಉತ್ತರ ಈ ವಚನದಲ್ಲಿದೆ.

ಹೆಣ್ಣು ಹೆಣ್ಣಾದಡೆ ಗಂಡಿನ ಸೂತಕ
ಗಂಡು ಗಂಡಾದಡೆ ಹೆಣ್ಣಿನ ಸೂತಕ

ಮನದ ಸೂತಕ ಹಿಂಗಿದಡೆ
ಅಯ್ಯಾ ಮೊದಲಿಲ್ಲದ ಸೂತಕಕ್ಕೆ ಮರುಳಾಯಿತ್ತು ಜಗವೆಲ್ಲ
ಎನ್ನದೇವ ಚನ್ನಮಲ್ಲಿಕಾರ್ಜುನನೆಂಬ ಗರುವಂಗೆ
ಜಗವೆಲ್ಲ ಹೆಣ್ಣು ನೋಡಾ ಅಯ್ಯಾ

ಗಂಡು, ಹೆಣ್ಣು ಎಂದು ಎರಡು ಮಾಡಿ ನೋಡುತ್ತಿರುವ ಈ ಜಗಕ್ಕೆ ಅಕ್ಕ ಈ ಜಗವೆಲ್ಲ ಹೆಣ್ಣು ಎಂದೇ ಹೇಳುತ್ತಿದ್ದಾಳೆ. ಗಂಡು ಅಲೌಕಿಕದ ಅತೀಂದ್ರಿಯತೆ ಎಂದು ಹೇಳುತ್ತಾ ಚನ್ನಮಲ್ಲಿಕಾರ್ಜುನ ಗಂಡು ಉಳಿದುದೆಲ್ಲ ಹೆಣ್ಣು ಎಂದು ಅರ್ಥೈಸುತ್ತಿದ್ದಾಳೆ. ಈ ಮೂಲಕ ಗಂಡು ಎಂಬ ಪುರುಷಹಂಕಾರವನ್ನು ತ್ಯಜಿಸಲು ಈ ಲೋಕಕ್ಕೆ ಹೇಳುತ್ತಿದ್ದಾಳೆ. 'ಜಗವೆಲ್ಲ ಹೆಣ್ಣು ನೋಡಾ ಅಯ್ಯಾ' ಎಂದು ಹೇಳುತ್ತಾ ಪುರುಷ ಪ್ರಧಾನ ಸಮುದಾಯ ಹೊಸದೇ ಅರ್ಥಪರಂಪರೆಗೆ ಮುಂದಾಗಬೇಕು ಎನ್ನುತ್ತಿದ್ದಾಳೆ. ಅಕ್ಕ ಈ ಲೋಕದಲ್ಲಿ ತನ್ನನ್ನು ಪ್ರಶ್ನೆ ಮಾಡಿದ್ದು ಬರೀ ಪುರುಷ ಸಮಾಜವೇ ಹೊರತು ಸ್ತ್ರೀ ಸಮಾಜವಲ್ಲ ಎಂದು ಇಡೀ ಪುರುಷ ಪ್ರಧಾನ ಸಮಾಜವನ್ನು ತರಾಟೆಗೆ ತೆಗೆದುಕೊಳ್ಳುತ್ತಾಳೆ. ಅಂದರೆ ಇಡೀ ಜಗವು ಪುರುಷ ಅಹಂಕಾರದಿಂದಲೇ ತುಂಬಿದೆ. ಹೀಗಾಗಿ ಈ ಲೋಕದ ಒಡೆಯ ಚೆನ್ನ ಅವನೇ ಗಂಡು ಉಳಿದುದೆಲ್ಲವೂ ಹೆಣ್ಣು ಎಂದು ಹೇಳುತ್ತಿದ್ದಾಳೆ. ಇದುವರೆವಿಗೂ ಈ ಲೌಕಿಕವನ್ನು ಗಂಡು, ಹೆಣ್ಣು ಎಂದು ವರ್ಗೀಕರಿಸಿ ನೋಡುವ ನಿಮ್ಮ ಕ್ರಮವೇ ತರವಲ್ಲ ಎಂದು ಹೊಸ ಚಿಂತನೆಯನ್ನು ಹೇಳಿ ಸೋಜಿಗಕ್ಕೀಡುಮಾಡುತ್ತಾಳೆ.

ಕಾಯ ಮೀಸಲಾಗಿ ನಿನಗರ್ಪಿತವಾಗಿತ್ತು
ಕರಣ ಮೀಸಲಾಗಿ ನಿನಗರ್ಪಿತವಾಗಿತ್ತು ಆನೊಂದರಿಯೆನು
ಎನ್ನ ಗತಿ ನೀನಾಗಿ ಎನ್ನ ಮತಿ ನಾನಾಗಿ
ಪ್ರಾಣ ನಿನಗರ್ಪಿತವಾಗಿತ್ತು
ನೀನಲ್ಲದೆ ಪೆರತೊಂದ ನೆನೆದರೆ ಆಣೆ
ನಿಮ್ಮಾಣೆ ಚೆನ್ನಮಲ್ಲಿಕಾರ್ಜುನ

ಈ ಲೋಕದಲ್ಲಿ 'ಶರೀರ' ಬೇರೆ 'ಇಂದ್ರಿಯ' ಬೇರೆ ಎಂದು ಹೇಳ ಹೊರಟ ಜಗದ ಜಂಗುಳಿಯನ್ನು ವ್ಯಂಗ್ಯ ಮಾಡುತ್ತಿದ್ದಾಳೆ. 'ಮತಿ' ಇಲ್ಲದೆ 'ಗತಿ' ಇಲ್ಲ. 'ಗತಿ' ಇಲ್ಲದೆ 'ಮತಿ' ಇಲ್ಲ ಇವೆರಡೂ ಸರಿ ಇದ್ದರೆ ಮಾತ್ರವೇ ನಮ್ಮ ನಿಲವು

ಸ್ಪಷ್ಟವಾಗುವುದು. ನಾನು ಕಾಯ, ಕರಣ, ಗತಿ, ಮತಿ ಎಲ್ಲವನ್ನೂ 'ಪ್ರಾಣ'ವಾದ ಚೆನ್ನನಲ್ಲಿ ಇಟ್ಟಿರುವೆ. ಇದು ನನ್ನ ಸದಾಚಾರ ಮಾತ್ರವಲ್ಲ ನನ್ನ ಜೀವ, ಆತ್ಮ, ಬದುಕಿನ ಸಕಲವೂ ಆಗಿದೆ ಎನ್ನುವ ವಿನಮ್ರ ತಿಳಿವಳಿಕೆ ಅಕ್ಕನದು. ಶರೀರ ಮತ್ತು ಗತಿ ಭೌತಿಕ ಜಗದ ಕಾಣುವ ನೆಲೆಯಾದರೆ, ಕರಣ ಮತ್ತು ಮತಿ ನಿರಾಕಾರದ ಸುಪ್ತ ತಿಳಿವಳಿಕೆಯ ಮೂಲಕ ಗತಿಗೆ ತಾರ್ಕಿಕ ಅನುಸಂಧಾನದ ಮಾರ್ಗ ಎನ್ನುವುದನ್ನು ಸೂಕ್ಷ್ಮವಾಗಿ ಹೇಳಿದ್ದಾಳೆ. ಈ ಜಗದ ಮಾಯೆಗೆ ಹೊಸದೇ ಕಣ್ಣಾಗಿ ಅಕ್ಕನ ಮಾತುಗಳಿವೆ.

# ಪ್ರಖರ ಸ್ತ್ರೀತ್ವದ ಪ್ರತೀಕವಾಗಿ 'ಅಂಬೆ'

* ಡಾ. ಚೈತಾಲಿ ಕೆ.ಎಸ್.

ಸಾಹಿತ್ಯ ಚರಿತ್ರೆಯನ್ನು ಕಾಲದಿಂದ ಕಾಲಕ್ಕೆ ಪುನಾರಚಿಸಬೇಕಾದ ಅಗತ್ಯ ಇದೆ ಎಂಬುದು ಈಗಾಗಲೇ ತೀರ್ಮಾನಿತವಾದ ವಿಷಯ. ಪುನಾರಚನೆಯನ್ನು ಯಾರು ಮಾಡಬೇಕೆಂಬುದು ಸಂಕೀರ್ಣ ಸಂಗತಿ. ಇದುವರೆಗಿನ ಸಾಹಿತ್ಯ ಚರಿತ್ರೆ ಯಾರನ್ನು ನಿರ್ಲಕ್ಷ್ಯಿಸಿದೆಯೋ ಅವರಿಂದ ಚರಿತ್ರೆಯ ಪುನಾರಚನೆ ಆಗಬೇಕಾಗಿರುವುದು ಸದ್ಯದ ಅಗತ್ಯ. ಈ ಹಿನ್ನೆಲೆಯಲ್ಲಿ ಮಹಿಳೆಯರ ದೃಷ್ಟಿಯಿಂದ ಪುನಾರಚಿತವಾಗಬೇಕಾದ ಸಾಹಿತ್ಯ ಚರಿತ್ರೆಗೆ ಎರಡು ನೆಲೆಗಳಿವೆ. ಒಂದು ಮಹಿಳೆಯರಿಂದ ರಚಿತವಾದ ಅಂಚಿಗೆ ತಳ್ಳಲ್ಪಟ್ಟ ಕೃತಿಗಳನ್ನು ಮರುಶೋಧಿಸುವುದು. ಎರಡನೆಯದು ಪುರುಷ ನಿರ್ಮಿತ ಸಾಹಿತ್ಯವನ್ನು ಅದರಲ್ಲಿಯ ಮಹಿಳಾ ಪಾತ್ರಗಳನ್ನು ಮರು ವ್ಯಾಖ್ಯಾನಕ್ಕೆ ಒಳಪಡಿಸುವುದು. ಅದರಂತೆ ಪ್ರಾಚೀನ ಕನ್ನಡ ಸಾಹಿತ್ಯವನ್ನು ಸ್ತ್ರೀವಾದಿ ನೆಲೆಯಲ್ಲಿ ಅಧ್ಯಯನ ನಡೆಸುವ ಪ್ರಕ್ರಿಯೆಯ ಭಾಗವಾಗಿ ಈ ಲೇಖನವನ್ನು ಗುರುತಿಸಬಹುದು. ಸಬಾಲ್ಟ್ರನ್ ಚಿಂತನೆಯ ಗೃಹೀತ ನೆಲೆಯಲ್ಲಿ ಸಾಹಿತ್ಯ ಚರಿತ್ರೆಯನ್ನು ಪುನರ್ ವ್ಯಾಖ್ಯಾನಿಸಬೇಕಾದ ಅಗತ್ಯತೆಯನ್ನು ಈ ಲೇಖನ ಒತ್ತಿ ಹೇಳುತ್ತದೆ.

ಭಾರತೀಯ ಮಹಿಳೆಯ ಬದುಕು ಮಗಳಾಗಿ ಆರಂಭಗೊಂಡು ಹೆಂಡತಿಯಾಗಿ ಮುಂದುವರೆದು ತಾಯಿಯಾಗುವ ಮೂಲಕ ತನ್ನ ಪರಿಪೂರ್ಣತೆಯನ್ನು ಪಡೆದುಕೊಳ್ಳುವ ಸ್ವರೂಪದ್ದಾಗಿದೆ. ಈ ಪೂರ್ವನಿರ್ಧಾರಿತ ಚಕ್ರದಲ್ಲಿ 'ಮದುವೆ' ಆಕೆಯ ಜೀವನದ ಒಂದು ಮಹತ್ವದ ಗುರಿ. ಆ ಗುರಿ ಸಾಧನೆಗೆ ಪೂರಕವಾದ ತರಬೇತಿ ಆಕೆಗೆ ಹುಟ್ಟಿನಿಂದಲೆ ದೊರೆಯುತ್ತದೆ. ಆದರ್ಶ ಸೊಸೆಯಾಗಿ, ಸಹನಶೀಲ ಪತ್ನಿಯಾಗಿ, ಪ್ರೀತಿ ಪಾತ್ರ ತಾಯಿಯಾಗಿ ಆಕೆ ತನ್ನ ಬದುಕನ್ನು ಪರಿಪೂರ್ಣಗೊಳಿಸಿಕೊಳ್ಳಲುಬೇಕಾದ ಮಾರ್ಗದರ್ಶನವನ್ನು ಆಕೆಗೆ ಕುಟುಂಬ, ಸಮಾಜ ನಿರಂತರವಾಗಿ ಒದಗಿಸಿರುತ್ತದೆ. ತನ್ನ ತ್ಯಾಗದ ಮೂಲಕ ತಂದೆ ಮತ್ತು ಗಂಡನ ಮನೆಯ ಕೀರ್ತಿ ಕಾಪಾಡಬೇಕೆಂಬ ತರಬೇತಿಯೂ ಆಕೆಗೆ

ದೊರೆತಿರುತ್ತದೆ. ನಮ್ಮ ಪರಂಪರೆ ರೂಪಿಸಿರುವ ಇಂತಹ ಅಸಂಖ್ಯಾತ ನಿಯಮಗಳನ್ನು ಚಾಚೂ ತಪ್ಪದೆ ಒಪ್ಪಿ ನಡೆದ ಸಹಸ್ರಾರು 'ಹೆಣ್ಣು' ವ್ಯಕ್ತಿತ್ವಗಳು ನಮ್ಮ ಚರಿತ್ರೆಯ ವಿಶಾಲ ವ್ಯಾಪ್ತಿಯೊಳಗೆ ಗುರುತೇ ಇಲ್ಲದಂತೆ ಕಳೆದು ಹೋಗಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ ಸಮಾಜದ ನಿರಂತರ ಬೋಧನೆಯ ಹೊರತಾಗಿಯೂ ತಮಗಾದ ಅನ್ಯಾಯವನ್ನು ಪ್ರತಿಭಟಿಸಿ ನಿಂತು ತಮ್ಮ ಅಸ್ಮಿತೆಯನ್ನು ಉಳಿಸಿಕೊಳ್ಳಲು ಹೋರಾಡಿದ ದಿಟ್ಟ ಮಹಿಳೆಯರೂ ನಮ್ಮೊಂದಿಗಿದ್ದಾರೆ. ಇಂತಹ ವಿಶೇಷ ವ್ಯಕ್ತಿತ್ವದ ಸ್ತ್ರೀಯರನ್ನು ಕನ್ನಡ ಸಾಹಿತ್ಯ ಕಾಣಿಸಿದ ಬಗೆಯನ್ನು, ಅವರ ವ್ಯಕ್ತಿತ್ವವನ್ನು ಕಟ್ಟಿಕೊಟ್ಟ ಬಗೆಯನ್ನು ಪುನರ್ ಪರಿಶೀಲನೆಗೆ ಒಳಪಡಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ನಮ್ಮ ಸಮಾಜ ರೂಪಿಸಿರುವ ಸಿದ್ಧ ಪಡಿಯಚ್ಚುಗಳ ಮಾದರಿಯನ್ನು ಮೀರಿ ನಿಂತ ಮಹಿಳಾ ಪಾತ್ರಗಳಲ್ಲಿ ನಮಗೆ ಎದ್ದು ಕಾಣುವ ವ್ಯಕ್ತಿತ್ವ 'ಅಂಬೆ'ಯದು. ಸ್ತ್ರೀ ಸ್ವಾತಂತ್ರ್ಯದ ಹಿರಿಮೆಯನ್ನು ಪ್ರತಿಪಾದಿಸುವ ಪಾತ್ರ ಅಂಬೆ. ಮಹಿಳೆ ತನ್ನ ಅಸ್ತಿತ್ವಕ್ಕೆ ಒಂದು ಘನತೆಯನ್ನು ನಿರೀಕ್ಷಿಸುವುದರಿಂದ ಉಂಟಾಗುವ ದುರಂತಕ್ಕೆ ನಿದರ್ಶನಾತ್ಮಕವಾದ ಪಾತ್ರ ಈಕೆಯದು. ಸರ್ವಧರ್ಮಶಾಸ್ತ್ರಪಂಡಿತನಾದ ಆಚಾರ್ಯ ಭೀಷ್ಮ ಮಹಾನ್ ವಿವೇಕಿ. ಎಂತಹ ಸಂದರ್ಭ ಬಂದರೂ ತಪ್ಪು ಮಾಡುವವನಲ್ಲ. ಹಸ್ತಿನಾಪುರದ ಅರಸರನ್ನು ಸ್ವಯಂವರಕ್ಕೆ ಆಹ್ವಾನಿಸಲಿಲ್ಲವೆಂಬ ನೆಪವೊಡ್ಡಿ ಕಾಶೀರಾಜ ಏರ್ಪಡಿಸಿದ್ದ ಸ್ವಯಂವರಕ್ಕೆ ನುಗ್ಗಿ ಆತನ ಮಕ್ಕಳಾದ ಅಂಬೆ, ಅಂಬಿಕೆ ಮತ್ತು ಅಂಬಾಲಿಕೆಯರನ್ನು ಹೊತ್ತುತಂದು ತನ್ನ ಸಹೋದರನಾದ ವಿಚಿತ್ರವೀರ್ಯನಿಗೆ ವಿವಾಹ ಮಾಡಿಸುತ್ತಾನೆ. ಕಾಶಿರಾಜನು ಭೀಷ್ಮನ ಪರಾಕ್ರಮಕ್ಕೆ ಹೆದರಿ ತನ್ನ ಮಕ್ಕಳ ಮೇಲಾದ ದೌರ್ಜನ್ಯವನ್ನು ವಿರೋಧಿಸುವುದಿಲ್ಲ. ಪರಾಕ್ರಮ ಒಂದು ಮೌಲ್ಯವಾಗಿರುವ ಅಂದಿನ ಸಂದರ್ಭದಲ್ಲಿ ಶ್ರೇಷ್ಠ ಕುಲಕ್ಕೆ ತನ್ನ ಹೆಣ್ಣುಮಕ್ಕಳು ಸೇರಿದರೆಂಬುದೇ ಆತನಿಗೆ ಸಮಾಧಾನದ ಸಂಗತಿ. ಅಂಬೆಯ ಅಸಮಾಧಾನದ ಅರಿವು ಆತನಿಗಿದ್ದರೂ ಮಗಳ ಪರ ವಹಿಸದ ಅನುಕೂಲಸಿಂಧು ರಾಜಕಾರಣಿ ಆತ. ಈ ಬಗೆಯ ವಿವಾಹ ಕ್ರಮಕ್ಕೆ ಅಂದಿನ ಸಮಾಜದಲ್ಲಿ ಮಾನ್ಯವಿದೆ. ತನ್ನನ್ನೆದುರಿಸಿದ ರಾಜರನ್ನು ಹಿಮ್ಮೆಟ್ಟಿಸಿ ಹೆಣ್ಣುಗಳನ್ನು ಹೊತ್ತು ತರುವುದು ಕ್ಷತ್ರಿಯ ರಾಜರಿಗೆ ಪರಾಕ್ರಮದ ಮತ್ತು ಶೌರ್ಯದ ಸಂಕೇತ. ಈ ಬಗೆಯ ವಿವಾಹವು ಅಷ್ಟ ವಿಧದ ವಿವಾಹಗಳಲ್ಲಿ ಒಂದು. ವಿರೋಧಿಸಿದ ರಾಜರನ್ನು ಸೋಲಿಸಿ ಸ್ವಯಂವರದಿಂದ ತಾನು ಗೆದ್ದು ತಂದ ಹೆಣ್ಣುಗಳನ್ನು ತನ್ನ ಸೋದರನಿಗೆ ವಿವಾಹ ಮಾಡಿಸಿದ

ಧರ್ಮಸೂಕ್ಷ್ಮವನ್ನು ಸಮಾಜ ಪ್ರಶ್ನಿಸಲಿಲ್ಲ, ಕಾಶಿರಾಜನೂ ಸೊಲ್ಲೆತ್ತಲಿಲ್ಲ; ಭೀಷ್ಮನಿಗೆ ತಾಯಿಯ ಸ್ಥಾನದಲ್ಲಿದ್ದ ಸತ್ಯವತಿಗೂ ಅದು ಮುಖ್ಯವಾಗಲಿಲ್ಲ. ಆದರೆ ಈಗಾಗಲೆ ಸಾಲ್ವರಾಜನಿಗೆ ಮನಸೋತಿದ್ದ ಅಂಬೆಗೆ ಭೀಷ್ಮನ ವರ್ತನೆಯು ಸಮಂಜಸವೆನಿಸುವುದಿಲ್ಲ. ಆದರೂ ಸಂದರ್ಭಕ್ಕೆ ರಾಜಿಯಾಗಿ ಶೌರ್ಯದ ಬಲದಿಂದ ಸ್ವಯಂವರದಲ್ಲಿ ತನ್ನನ್ನು ಗೆದ್ದುತಂದ ಭೀಷ್ಮನೇ ತನ್ನನ್ನು ವರಿಸಲಿ ಎಂಬ ನಿಲುವನ್ನು ವ್ಯಕ್ತಪಡಿಸುತ್ತಾಳೆ. ಬ್ರಹ್ಮಚರ್ಯ ವ್ರತವನ್ನು ಪಾಲಿಸುತ್ತಿದ್ದೇನೆಂಬ ನೆಪವೊಡ್ಡಿ ತಾನು ಗೆದ್ದುತಂದ ಹೆಣ್ಣುಗಳನ್ನು ಇನ್ನೊಬ್ಬರೊಂದಿಗೆ ಮದುವೆ ಮಾಡಿಸುವುದು ಆಕೆಗೆ ಸರ್ವಥಾ ಸಮ್ಮತವಲ್ಲ. ಭೀಷ್ಮ ತನ್ನನ್ನು ವಿವಾಹವಾಗುವುದಿಲ್ಲವಾದರೆ ತಾನು ಈ ಮೊದಲೆ ಒಲಿದಿದ್ದ ಸಾಲ್ವರಾಜನನ್ನಾದರೂ ವಿವಾಹವಾಗುವೆನೆನ್ನುತ್ತಾಳೆ. ಆದರೆ ಸ್ವಯಂವರದ ಸಂದರ್ಭದಲ್ಲಿ ಭೀಷ್ಮನಿಂದ ಪರಾಜಿತನಾದ ಸಾಲ್ವದರಸು ಅಂಬೆಯನ್ನು ಪತ್ನಿಯಾಗಿ ಸ್ವೀಕರಿಸಲು ನಿರಾಕರಿಸುತ್ತಾನೆ. ಭೀಷ್ಮನಿಂದ ತಿರಸ್ಕೃತಳಾಗಿ, ಸಾಲ್ವನಿಂದ ವರ್ಜಿತಳಾದ ಅಂಬೆಗೆ ಹಿಂದಿರುಗಿ ತನ್ನ ತಂದೆಯ ಮನೆಗೂ ಹೋಗಲಾರದ ಇಕ್ಕಟ್ಟಿನ ಸ್ಥಿತಿ. ತನ್ನ ಸಹಾಯಕ್ಕಾಗಿ ಯಾವ ರಾಜರನ್ನು ಭೇಟಿಯಾದರು ಭೀಷ್ಮನ ಪರಾಕ್ರಮವನ್ನು ಎದುರಿಸಲಾಗದ ಅವರಿಂದ ಅಂಬೆಗೆ ನಿರಾಕರಣೆಯ ಉತ್ತರವೇ ದೊರೆಯುತ್ತದೆ. ಕೊನೆಯ ಪ್ರಯತ್ನವಾಗಿ ಪರಶುರಾಮರಲ್ಲಿ ಸಹಾಯ ಯಾಚಿಸುತ್ತಾಳೆ. ಅವರೂ ಆಕೆಗೆ ಸಹಾಯ ಮಾಡುವಲ್ಲಿ ವಿಫಲರಾಗುತ್ತಾರೆ. ತನ್ನವರೆಲ್ಲರಿಂದ ನಿರಾಕರಿಸಲ್ಪಟ್ಟ ಅಂಬೆ ಹತಾಶಳಾಗಿ ತನಗಾದ ಅವಮಾನ, ಅನ್ಯಾಯಕ್ಕೆ ಪ್ರತೀಕಾರವನ್ನು ತೀರಿಸಿಕೊಳ್ಳುವ ಮನಸ್ಸು ಮಾಡುತ್ತಾಳೆ. ತನ್ನನ್ನು ತಾನೇ ಬೆಂಕಿಗೆ ಆಹುತಿಯಾಗಿಸಿಕೊಂಡು ಮುಂದಿನ ಜನ್ಮದಲ್ಲಾದರೂ ಭೀಷ್ಮನನ್ನು ನಾಶಗೊಳಿಸುತ್ತೇನೆಂದು ಪ್ರತಿಜ್ಞೆಗೈದು ಸಾವನ್ನಪ್ಪುತ್ತಾಳೆ.

ಸೋಲನ್ನೇ ಅರಿಯದ ಭೀಷ್ಮನನ್ನು ಜನ್ಮಗಳನ್ನೆತ್ತಿಯಾದರೂ ಸೋಲಿಸಿದ ದಿಟ್ಟ ಹೆಣ್ಣು ಅಂಬೆ. ಇಂತಹ ವಿಶಿಷ್ಟ ಮಹಿಳಾ ಪಾತ್ರವೊಂದನ್ನು ನಮ್ಮ ಪ್ರಾಚೀನ ಕನ್ನಡದ ಕವಿಗಳು ಕಟ್ಟಿಕೊಟ್ಟ ಬಗೆಯನ್ನು ಅರಿಯುವುದು ಒಂದು ಕುತೂಹಲದಾಯಕ ಪ್ರಯತ್ನವಾಗಿದೆ. ಕನ್ನಡದ ಆದಿಕವಿ ಪಂಪ ತನ್ನೆರಡು ಕೃತಿಗಳ ಮೂಲಕ ಇಂದಿಗೂ ಪ್ರಸ್ತುತನಾಗಿರುವ ಕವಿ. ಕವಿತ್ವದ ಬಂಧದ ದೃಷ್ಟಿಯಿಂದ, ಆಯ್ಕೆ ಮಾಡಿಕೊಂಡಿರುವ ವಸ್ತು ವೈವಿಧ್ಯತೆಯ ದೃಷ್ಟಿಯಿಂದ ಪಂಪ ಪರಂಪರೆಯ ನಿರ್ಮಾಪಕ ಎನಿಸಿದ್ದಾನೆ.

ರಾಜಕೇಂದ್ರಿತ ಸಾಮಾಜಿಕ ವ್ಯವಸ್ಥೆಯೊಳಗಿದ್ದು ಕಾವ್ಯ ರಚಿಸಿದ ಪಂಪನಿಗೆ ರಾಜಸತ್ತೆಯ ನಿಯಮಗಳಿಂದಾಚೆಗೆ ಯೋಚಿಸುವುದು ಕಷ್ಟ. ಅಲ್ಲದೆ ಪುರುಷ ಪ್ರಧಾನತೆಯನ್ನು ಒಪ್ಪಿಕೊಂಡ ಪುರುಷ ಪ್ರಜ್ಞೆ ಪಂಪನೊಳಗೆ ಇರುವುದರಿಂದ 'ಅಂಬೆ'ಯಂತಹ ವಿಶಿಷ್ಟ ಸ್ವಭಾವದ ಮಹಿಳೆ ಪಂಪನಿಗೆ ಒಂದು ಪಾತ್ರವಾಗಿ ಮಾತ್ರ ಕಂಡು ಬರುತ್ತಾಳೆ. ಭೀಷ್ಮ ಅಂಬೆಯನ್ನೊಳಗೊಂಡಂತೆ ಆಕೆಯ ಸಹೋದರಿಯರನ್ನು ಗೆದ್ದು ತರುವುದರಲ್ಲಾಗಲಿ, ತನ್ನ ಪ್ರತಿಜ್ಞೆಯನ್ನು ಹೆಮ್ಮೆಯಿಂದ ಅಂಬೆಯ ಬಳಿ ಹೇಳಿಕೊಳ್ಳುವುದರಲ್ಲಾಗಲಿ, ಆಕೆಯನ್ನು ಸಾಲ್ವನಲ್ಲಿಗೆ ಕಳುಹಿಸುವುದರಲ್ಲಾಗಲಿ, ಪರಶುರಾಮನನ್ನು ಎದುರಿಸಿ ನಿಲ್ಲುವುದರಲ್ಲಾಗಲಿ ಭೀಷ್ಮನ ವ್ಯಕ್ತಿತ್ವವನ್ನು ಕಡೆದು ನಿಲ್ಲಿಸುವ ಕೆಲಸ ಮಾಡಿದ್ದಾನೆ ಪಂಪ. ಪರಾಕ್ರಮದ ಪುರುಷ ಪ್ರಜ್ಞೆಯ ಅನಾವರಣ ಆತನ ಉದ್ದೇಶ. ತನ್ನದಲ್ಲದ ತಪ್ಪಿಗೆ ಬೆಲೆ ತೆರಬೇಕಾದ ಅಂಬೆಯ ಮನಸ್ಥಿತಿ ಪಂಪನಿಗಿಲ್ಲಿ ಮುಖ್ಯವಲ್ಲ. ಆತನ ಗಮನವಿರುವುದು ಭೀಷ್ಮನ ವ್ಯಕ್ತಿತ್ವಕ್ಕೆ ಚ್ಯುತಿ ಬರದಂತೆ ರೂಪಿಸುವಲ್ಲಿ. ಪರಶುರಾಮನ ಮಾತಿಗೂ ಭೀಷ್ಮ ಸೋಲದಿದ್ದಾಗ "ಅಂಬೆಯೆಂಬ ದಂಡುರಂಬೆ ನಿನಗೆ ವಧಾರ್ಥಮಾಗಿ ಪುಟ್ಟುವೆನ್" ಎಂದು ಕೋಪಾಗ್ನಿಯಿಂದ ಅಗ್ನಿ ಶರೀರೆಯಾಗುತ್ತಾಳೆ ಎನ್ನುತ್ತಾನೆ ಪಂಪ. ಅಗ್ನಿಗಾಹುತಿಯಾದ ಅಂಬೆ ಮುಂದಿನ ಜನ್ಮದಲ್ಲಿ ದ್ರುಪದನ ಮಗನಾಗಿ ಶಿಖಂಡಿಯಾಗಿ ಜನಿಸಿದ ಎಂದು ಹೇಳುವಷ್ಟರಲ್ಲಿ ಪಂಪನ ಗಮನ ಭೀಷ್ಮನೆಡೆಗೆ ಹರಿಯುತ್ತದೆ. ಅಂಬೆಯಂತಹ ಹೆಣ್ಣೊಬ್ಬಳಿಂದ ಎಷ್ಟು ಅಡೆತಡೆಗಳು ಬಂದರೂ ಭೀಷ್ಮ ತನ್ನ ಪ್ರತಿಜ್ಞೆಯನ್ನು ಹೇಗೆ ಕಾಪಿಟ್ಟುಕೊಂಡ ಎಂದು ಹೇಳುವಲ್ಲಿಯೇ ಪಂಪನ ಸಂಪೂರ್ಣ ಗಮನವಿದೆ. ಗಂಡು ಕವಿ ಪಂಪ ತನ್ನ ಕಾವ್ಯದಲ್ಲಿ ಬರುವ ಹೆಣ್ಣಿನ ಪಾತ್ರ ರೂಪಿಸಿರುವುದು ಗಂಡಿನ ಮನೋಧರ್ಮದ ಮೂಲಕವೇ. "ಹೆಣ್ಣು-ಗಂಡಿನ ಸಂಬಂಧದ ನಿರ್ವಚನ ಪಂಪನ ಕೃತಿಯಲ್ಲಿ ಗಂಡಿನ ದೃಷ್ಟಿಯ ಮೂಲಕವೇ ಬಿಂಬಿತವಾಗಿದೆ. 'ಸಮಸ್ತ ಭಾರತ' ವನ್ನು ಧಾರೆಯೆರೆದ ಪಂಪನಿಗೆ ಸ್ತ್ರೀಯರ ಒಳತೋಟಿಯು ಅರಿವಿಗೆ ಬರಲಿಲ್ಲ ಎನ್ನುವುದು ಗಮನಾರ್ಹ"- ಎಂಬ ಕೇಶವ ಶರ್ಮರ ಮಾತು ಇದನ್ನೇ ಸೂಚಿಸುತ್ತದೆ. ಪಂಪನ ಕಾವ್ಯಗಳುದ್ದಕ್ಕೂ ಕೆಲಸ ಮಾಡುವ ದ್ವಂದ್ವಾತ್ಮಕ ದೃಷ್ಟಿಕೋನ ಸ್ತ್ರೀಯರನ್ನು ಕುರಿತ ನಿಲುವಿನಲ್ಲಿಯೂ ವ್ಯಕ್ತಗೊಂಡಿದೆ. ತಂದೆಯ ಮಾತಿಗೆ ಎದುರಾಡದ ಮಗಳು, ಪತಿಯೇ ಪರದೈವವೆಂದು ಭಾವಿಸುವ ಪತ್ನಿ, ಗುರು, ಹಿರಿಯರಿಗೆ ತಲೆಬಾಗುವ ಹೆಣ್ಣುಮಗಳು,

ತವರಿಗೆ ಕಳಂಕ ತರದ ಸ್ತ್ರೀಯರು ಪಂಪನಲ್ಲಿ ಆದರ್ಶೀಕೃತ ಪಾತ್ರಗಳಾಗಿ ಚಿತ್ರಿಸಲ್ಪಟ್ಟಿದ್ದಾರೆ. ಈ ವಿನಯದ ಚೌಕಟ್ಟಿನೊಳಗಿಲ್ಲದ 'ಅಂಬೆ'ಯಂತಹ ಹೆಣ್ಣುಮಕ್ಕಳು ಪಂಪನ ಪ್ರಕಾರ ಕೇಡಿನ ಮಾದರಿಗಳು.

ಇನ್ನು ಕೃಷ್ಣನನ್ನು ಕಾವ್ಯದ ನಾಯಕನನ್ನಾಗಿಸಿ ಮಹಾಭಾರತದ ಕಥೆಯನ್ನು ಹೇಳಿದ ಕುಮಾರವ್ಯಾಸನು ಅಂಬೆಯನ್ನು ಚಿತ್ರಿಸಿದ ಬಗೆಯೂ ಈ ಮನೋಭಾವಕ್ಕೆ ಹೊರತಲ್ಲ. ತನಗಾದ ಅವಮಾನ, ಅನ್ಯಾಯಕ್ಕೆ ತಕ್ಕ ಹೋರಾಟವನ್ನು ಮಾಡುವ ಅಂಬೆಯ ಪಾತ್ರ ಆತನಿಗೆ ಮುಖ್ಯವಾಗುವುದಿಲ್ಲ. "ಅರಸ ಚಿತ್ತೈಸಂಬೆಯೆಂಬಳು ದುರುಳೆ" ಎಂಬುದಾಗಿ ಕವಿಯೇ ಆಕೆಯ ವ್ಯಕ್ತಿತ್ವದ ಕುರಿತು ತೀರ್ಮಾನ ನೀಡುತ್ತಾನೆ. ತನ್ನ "ಛಲದ ಬಿಗುಹಿನಿಂದ" ಮರಣದೆಡೆಗೆ ಆಕೆ ಮುಖಮಾಡುವಂತಾಯಿ–ತೆಂಬುದು ಕುಮಾರವ್ಯಾಸನ ಅನಿಸಿಕೆ. ನಮ್ಮ ಸಮಾಜ ರೂಪಿಸಿರುವ ರೀತಿ–ರಿವಾಜುಗಳೆಂಬ ಪ್ರವಾಹದ ದಾರಿಯಲ್ಲಿ ಈಜಿಹೋದ "ಅಂಬಿಕೆ–ಅಂಬಾಲಿಕೆಯರು ನಮ್ಮ ಸಂಸ್ಕೃತಿಯ ವಕ್ತಾರರಂತೆ, ಪರಂಪರೆಯ ವಾಹಕರಂತೆ ಕಾಣಿಸುತ್ತಾರೆ. ಆದರೆ ವ್ಯವಸ್ಥೆಯನ್ನು ಪ್ರಶ್ನಿಸುವ ಅಂಬೆಯಂತಹವರ ಬದುಕು ಅಪವಿತ್ರವೆನಿಸುತ್ತದೆ; ಪೀಡೆಯೆನಿಸುತ್ತದೆ". ಸಿದ್ಧ ಪಡಿಯಚ್ಚುಗಳೆಂದು ನಾವು ಭಾವಿಸುವ ಮಹಿಳಾ ಮಾದರಿಗಳಲ್ಲಿ 'ಅಂಬೆ' ಸೇರುವುದಿಲ್ಲ. ಆಕೆ ತ್ಯಾಗಮಯಿಯೂ ಅಲ್ಲ; ವಿಧೇಯಳೂ ಅಲ್ಲ; ಎಲ್ಲ ಸಂಕಟಗಳಿಗೂ ಹೆಣ್ಣಾಗಿ ಹುಟ್ಟಿರುವ ತನ್ನದೇ ಅಪರಾಧವೆಂಬ ಪಾಪ ಪ್ರಜ್ಞೆಯೂ ಆಕೆಗಿಲ್ಲ; ಬಂದುದೆಲ್ಲವನ್ನೂ ಕಣ್ಣು ಮುಚ್ಚಿ ಸ್ವೀಕರಿಸುವ ಮನಸ್ಥಿತಿಯವಳೂ ಅಲ್ಲ. ತನಗಾದ ಅನ್ಯಾಯವನ್ನು ದಿಟ್ಟತನದಿಂದ ಪ್ರಶ್ನಿಸಿದ ಕಾರಣಕ್ಕಾಗಿ ಆಕೆ ನಮ್ಮ ಕವಿಗಳ ಗಂಡು ಪ್ರಜ್ಞೆಯಲ್ಲಿ ದಂಡುರುಂಬೆ, ದುರುಳೆ ಅಂಬೆ.

ಪೌರಾಣಿಕ ನೆಲೆಯಲ್ಲಿ 'ಅಂಬೆ'ಯ ಪಾತ್ರವನ್ನು ಗಮನಿಸಿದಾಗ ಆಕೆ ಸಾಮಾಜಿಕವಾಗಿ, ಆರ್ಥಿಕವಾಗಿ ಉತ್ತಮ ಸ್ಥಾನದಲ್ಲಿದ್ದ ಸ್ತ್ರೀ ವಿದ್ಯಾವಂತಳು; ವಿಚಾರಪರಳು; ಸರಿ–ತಪ್ಪುಗಳ ವಿವೇಚನೆಯನ್ನು ಮಾಡಬಲ್ಲಷ್ಟು ಶಕ್ತಳು. ಇಷ್ಟಾಗಿಯೂ ಆಕೆಗೆ ತನ್ನ ಆಯ್ಕೆಯ ಬದುಕು ದೊರೆಯುವುದಿಲ್ಲ. ಆದರೆ ವಿಚಿತ್ರವೀರ್ಯನನ್ನು ವಿವಾಹವಾಗಲು ಸಮ್ಮತಿಸುವುದರಿಂದ ತನಗೆ ದೊರೆಯಬಹುದಾಗಿದ್ದ ಕುಲದ ಘನತೆ, ನೆಮ್ಮದಿಯ ಸಮೃದ್ಧ ಬದುಕು ಅಂಬೆಗೆ ಮಹತ್ವದ್ದಾಗಿ ಕಾಣುವುದಿಲ್ಲ. ಕಾರಣ ಆಕೆ ಭಾರತೀಯ ಪಾರಂಪರಿಕ ಮೌಲ್ಯಗಳನ್ನು ಜತನದಿಂದ ಕಾಪಿಟ್ಟುಕೊಳ್ಳುವ ಹೆಣ್ಣುಮಕ್ಕಳ ಸಾಲಿಗೆ ಸೇರಿದವಳಲ್ಲ. ಅಂದಿನಿಂದ

ಇಂದಿನವರೆಗಿನ ಎಲ್ಲ ಕಾಲದ ಹೆಣ್ಣುಮಕ್ಕಳ ಬಯಕೆಯಾದ ಆತ್ಮಗೌರವ ಮತ್ತು ಘನತೆಯ ಬದುಕನ್ನು ಅಂದಿನ ಅಂಬೆ ಪ್ರತಿಪಾದಿಸಿದ್ದಾಳೆ. ಎಲ್ಲ ಸಮಸ್ಯೆಗಳಿಗೆ ಪ್ರತಿಭಟನೆ ಮತ್ತು ಹೋರಾಟಗಳೆ ಅಂತಿಮ ಪರಿಹಾರವಲ್ಲವೆಂಬುದು ನಿಜವಾದರೂ ತನ್ನ ಇಷ್ಟಾನಿಷ್ಟಗಳೊಂದಿಗೆ ರಾಜಿಮಾಡಿಕೊಂಡು ಬದುಕುವ ಅನಿವಾರ್ಯತೆಯನ್ನು ಆಕೆ ಒಪ್ಪಿಕೊಳ್ಳುವುದಿಲ್ಲ. ಆಕೆಗೆ ಮುಖ್ಯವೆನಿಸುವುದು ತನ್ನ ವ್ಯಕ್ತಿ ಗೌರವ. ತನ್ನ ಆತ್ಮಾಭಿಮಾನವನ್ನು ಕಳೆದುಕೊಂಡು ವ್ಯವಸ್ಥೆಯೊಂದಿಗೆ ರಾಜಿಯಾಗಿ ಬದುಕುವುದಕ್ಕಿಂತ ಏಕಾಂಗಿಯಾಗಿ ಹೋರಾಡುವುದೇ ಸರಿ ಎಂದು ಹೋರಾಟದ ಕಠಿಣ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳುತ್ತಾಳೆ ಅಂಬೆ. ತನ್ನ ಆಯ್ಕೆಯ ಬದುಕನ್ನು ಕಟ್ಟಿಕೊಳ್ಳಲು ಬಯಸಿ ಪ್ರತಿರೋಧದ ಬದುಕನ್ನು ಆರಿಸಿಕೊಳ್ಳುವ ಪ್ರಖರ ಸ್ತ್ರೀತ್ವದ ಅಂಬೆ ಇಂದಿನ ಎಷ್ಟೋ ಹೆಣ್ಣುಮಕ್ಕಳ ಜೀವಂತ ಪ್ರತೀಕವಾಗಿ ಕಾಣುತ್ತಾಳೆ. ಪ್ರತಿಭಟನೆಯ ಕೊನೆಯ ಅಸ್ತ್ರವಾಗಿ ಸಾವನ್ನು ಆರಿಸಿಕೊಳ್ಳುವ ಅಂಬೆಗೆ ತನಗಾದ ಅನ್ಯಾಯಕ್ಕೆ ನ್ಯಾಯ ದೊರೆಯುವುದು ಮುಂದಿನ ಜನ್ಮದಲ್ಲೇ ಎಂಬುದು ನಾವು ಅರಗಿಸಿಕೊಳ್ಳಬೇಕಾದ ಕಹಿ ಸತ್ಯ.

ಪರಾಮರ್ಶನ ಗ್ರಂಥಗಳು :


1. ಕಣ್ಣ ಹನಿಗಳೆ ಕಾಣಿಕೆ : ಎಚ್. ಎಸ್. ರಾಘವೇಂದ್ರರಾವ್
2. ಸ್ತ್ರೀವಾದಿ ಆಖ್ಯಾನ : ಡಾ. ಕೆ. ಕೇಶವ ಶರ್ಮ
3. ಅವಧಿ : ನವೆಂಬರ್ 2018.

# ಚಿಕ್ಕಮನೆ

ಚಿಕ್ಕಮನೆಯಲ್ಲಿ
ಮಂಚವೇ ದಿವಾನಖಾನೆಯಾಗುತ್ತದೆ.
ಕುರ್ಚಿಯು  ಧಡೂತಿ ಶರೀರವನ್ನು ಒಲ್ಲೆ ಎನ್ನುತ್ತದೆ.
ಮೇಜು, ಮಣಭಾರವನ್ನು ಹೇರಿಕೊಂಡಿರುತ್ತದೆ.
ಪುಸ್ತಕಗಳು ಕಪಾಟಿನಲ್ಲಿ ತಮ್ಮ ಜಾಗವೆಲ್ಲಿ ಎಂದು ಹುಡುಕುತ್ತವೆ.
ಸಂಜೆಯ ವೇಳೆಗೆ,
ಕತ್ತಲಿನ ಗಂಟಲ ನರ ಅದುರತೊಡಗುತ್ತದೆ.
ವಿವಿಧ ವಸ್ತುಗಳ ಆಕಾರಗಳು ಮುಲುಗತೊಡಗುತ್ತವೆ.
ಸೂರ್ಯನ ಹಿಡಿಯಷ್ಟು ತೇಪೆ ಬೆಳಕು
ವಿವಿಧ ರೂಪಗಳಿಗೆ ಆಕಾರ ಕೊಡುತ್ತಾ
ಅಲ್ಲಿ ಇಲ್ಲಿ ಚದುರಿರುತ್ತದೆ.
ಅರೆನಿದ್ರಿಸಿದ ಸಮಯದ ಹಕ್ಕಿ
ಮಕ್ಕಳ ಹೆಜ್ಜೆ ಸಪ್ಪಳಕ್ಕೆ ಕಿವಿಗೊಟ್ಟು
ಗಡಿಯಾರದ ಮುಳ್ಳಿನೊಡನೆ ಸುತ್ತುತ್ತಾ
ತನ್ನ ರೆಕ್ಕೆಗಳನ್ನು ಬಡಿಯುತ್ತದೆ.
ಕತ್ತಲು,
ಪುಸ್ತಕದ ರಾಶಿಯ ಹಿಂದೆ ಅವಿತಿರುವ ಕತ್ತಲು
ಮಣ್ಣಿನಗೋಡೆಯ ಮಾತುಗಳನ್ನು ಕೇಳುತ್ತದೆ.
ಈ ಸಂಭಾಷಣೆ, ಬಾವಲಿಗಳ ಕಿವಿ ಮುಟ್ಟುತ್ತದೆ.
ಚದುರಿದ ಇರುವೆಗಳಿಗೆ
ಮನೆಯಲ್ಲಿ ಹರಿಯಲು ಎಡೆಯಿಲ್ಲ.
ಮುರಿದ ಚಾವಣಿ ಶೋಕದ ಚರಮಗೀತೆಯನ್ನು  ಬರೆಯುವುದಿಲ್ಲ.

ಜೇಡರ ಬಲೆಯೊಳಗೆ ಕುಳಿತು
ನಾನು ಕತ್ತಲ ರುಚಿ ನೋಡಿದ್ದೇನೆ.
ಬಡತನದ ಕಣ್ಣೀರಿನಿಂದ ತೋಯ್ದು ಎಬ್ಬಿಹೋದ ಗಾರೆಯ ಹೆಕ್ಕಳಿಕೆಯನ್ನು
ಕಂಡಿದ್ದೇನೆ.

ನಾನು ಮನೆಗೆ ಕಾಲಿಟ್ಟಾಗ
ನನ್ನೊಡನೆ
ವರ್ತುಲ, ತ್ರಿಕೋನ ಹಾಗೂ ಚೌಕಾಕಾರದ
ಆಕಾಶದ ತುಣುಕುಗಳನ್ನು ತರುತ್ತೇನೆ.

ಉರ್ದು ಮೂಲ : **ಜಯಂತ್ ಪರ್ ಮಾರ್**
ಕನ್ನಡಕ್ಕೆ: **ಸಿ.ಎಚ್.ಭಾಗ್ಯ.**

(ಜಯಂತ್ ಪರ್ ಮಾರ್ ಉರ್ದು, ಗುಜರಾತಿ ಎರಡೂ ಭಾಷೆಗಳಲ್ಲಿ ಶ್ರೇಷ್ಠ ಕವಿತೆಗಳನ್ನು ರಚಿಸಿರುವ ಕವಿ. ಇವರು ಅಷ್ಟೇ ಶೇಷ್ಠ ಕಲಾವಿದರೂ ಹೌದು. ಕ್ಯಾಲಿಗ್ರಾಫರ್ ಕೂಡ ಆಗಿರುವ ಇವರ ಕವಿತೆಗಳಲ್ಲಿ ಕಲೆಯ ಬಣ್ಣಗಳು ಹಾಗೂ ಕಲಾಕೃತಿಗಳಲ್ಲಿ ಕಾವ್ಯ ಇದೆ. ಇವರ ಒಂದು ಉರ್ದು ಕವಿತೆಯ ಅನುವಾದವಿದು.)

# ಲೇಖಕರ ವಿಳಾಸ

1. **ಡಾ.ಸಿ.ಪಿ.ಸಿದ್ಧಾಶ್ರಮ**
   ವಿಶ್ರಾಂತ ಕನ್ನಡ ಪ್ರಾಧ್ಯಾಪಕರು
   ನಂ.249, 'ಕಾವ್ಯಕುಟೀರ'
   20ನೇ ಮುಖ್ಯರಸ್ತೆ, 'ಬಿ'ಬ್ಲಾಕ್,
   3ನೇ ಹಂತ, ವಿಜಯನಗರ
   ಮೈಸೂರು–30 ಮೊ : 9845930889

2. **ಡಾ.ಮೋಹನ ಕುಂಟಾರ್,**
   ಪ್ರಾಧ್ಯಾಪಕರು,
   'ಪಯಸ್ವಿನಿ' ಶಾಂತಿನಗರ,
   ಕಾಲೇಜು ರಸ್ತೆ, ಹೊಸಪೇಟೆ 583001.
   ಮೊ : 9448997450

3. **ಡಾ.ಹಾಲತಿ ಸೋಮಶೇಖರ್,**
   # 10, 'ಬೆಳಕು', ಪೃಥ್ವಿ ಬಡಾವಣೆ, ದಟ್ಟಹಳ್ಳಿ,
   3ನೇ ಹಂತ, ಮೈಸೂರು – 5700 033
   ಮೊ: 9886622833

4. **ಡಾ.ಜಿ.ಸಣ್ಣಹನುಮಪ್ಪ**
   ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,
   ಶ್ರೀಮತಿ ಇಂದಿರಾಗಾಂಧಿ ಸರ್ಕಾರಿ ಪ್ರಥಮ
   ದರ್ಜೆ ಮಹಿಳಾ ಕಾಲೇಜು, ಸಾಗರ.
   ಮೊ : 9481063545

5. **ಡಾ. ರೋಹಿಣಾಕ್ಷ ಶಿರ್ಲಾಲು**
ಸಹಾಯಕ ಪ್ರಾಧ್ಯಾಪಕರು,
ಜಾನಪದಶಾಸ್ತ್ರ ಮತ್ತು ಬುಡಕಟ್ಟು ಅಧ್ಯಯನ ವಿಭಾಗ,
ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರ್ಗಿ.
ಮೊ: 9449663744

6. **ಡಾ. ವಿಠಲರಾವ್ ಟಿ. ಗಾಯಕ್ವಾಡ್,**
ಪ್ರಾಧ್ಯಾಪಕರು, ಭಾಷಾಂತರ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ– 583276, ಹೊಸಪೇಟೆ.
ಮೊಬೈಲ್: 94496 22596

7. **ಡಾ.ಕೆ.ವೈ. ನಾರಾಯಣಸ್ವಾಮಿ,**
ಸಹ ಪ್ರಾಧ್ಯಾಪಕರು,
ಮಹಾರಾಣಿ ಮಹಿಳಾ ಕಲಾ, ವಾಣಿಜ್ಯ ಮತ್ತು
ನಿರ್ವಹಣಾ ಕಾಲೇಜು,
ಶೇಷಾದ್ರಿ ರಸ್ತೆ, ಬೆಂಗಳೂರು – 560 001
ಮೊ : 9739007127

8. **ಡಾ. ಅಪ್ಪಗೆರೆ ಸೋಮಶೇಖರ್**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ,
ಕಡಗಂಚಿ, ಆಳಂದ ರಸ್ತೆ, ಕಲಬುರಗಿ–585367
ಮೊಬೈಲ್–9902933772

9. **ಅನಿತ ಕೆ.ವಿ**
ಸಹಾಯಕ ಪ್ರಾಧ್ಯಾಪಕರು,
ಮೌಂಟ್ ಕಾರ್ಮಲ್ ಕಾಲೇಜು ಸ್ವಾಯತ್ತ,
ಬೆಂಗಳೂರು – 560 052
ಮೊ : 9972347304

10. **ಡಾ.ಚನ್ನೇಶ. ಬಿ.ಜಿ**
'ಅನಿಕೇತನ', 32/ಆರ್, ಎಂ.ಐ.ಜಿ,
ಕೆ.ಎಚ್.ಬಿ. ಕಾಲೋನಿ,
ಆದರ್ಶ ಕಾಲೋನಿ ಹಿಂಭಾಗ, 2ನೇ ಹಂತ,
ವಿನೋಬನಗರ, ಶಿವಮೊಗ್ಗ 577 204.
ಮೊ: 94499 95744

11. **ಡಾ.ರವಿಕುಮಾರ್ ನೀಹ**
'ಜಲಜಂಬೂ' ಹೊಸಬಡಾವಣೆ,
ಎಚ್.ಪಿ.ಪೆಟ್ರೋಲ್ ಮುಂಭಾಗ,
ತುಮಕೂರು–ಮಧುಗಿರಿ ಮುಖ್ಯರಸ್ತೆ,
ಯಲ್ಲಾಪುರ, ತುಮಕೂರು – 572106
ಮೊ: 9945752022

12. **ಡಾ.ಕೇಶವಶರ್ಮ.ಕೆ**
ಪ್ರಾಧ್ಯಾಪಕರು, ಕನ್ನಡ ಭಾರತಿ,
ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
ಶಿವಮೊಗ್ಗ ಜಿಲ್ಲೆ.

13. **ಪ್ರಜ್ಞಾ ಮತ್ತೀಹಳ್ಳಿ**
# 46, ಸಂತೋಷ ನಗರ, ಕೆಲಗೇರಿ ರಸ್ತೆ,
ಧಾರವಾಡ–580008.
ಮೊ: 9448267410

14. **ಡಾ. ನವೀನ್ ಕುಮಾರ್ ಎಚ್**.ಸಿ.
ಇಂಗ್ಲಿಷ್ ಉಪನ್ಯಾಸಕರು,
ಸರ್ಕಾರಿ ಪದವಿಪೂರ್ವ ಕಾಲೇಜು
ಲಕ್ಷ್ಮೀಪುರ, ರಾಮನಗರ ತಾ/ಜಿ – 561201.
ದೂರವಾಣಿ: 8660363855

15. **ಮೀನಾ ಮೈಸೂರು,**
66/ಎ 'ಅಮೂರ್' 2ನೇ ಕ್ರಾಸ್
ಕೆ ಹೆಚ್ ಬಿ ಕಾಲೋನಿ,
ಚಾಮುಂಡಿವನದ ಬಳಿ,
ವಿದ್ಯಾರಣ್ಯಪುರಂ, ಮೈಸೂರು.
ಮೊ: 9845790862

16. **ಡಾ. ಎ.ರಘುರಾಂ,**
ಸಹ ಪ್ರಾಧ್ಯಾಪಕರು,
ಕನ್ನಡ ವಿಭಾಗ,
ಮಹಾರಾಣಿ ಮಹಿಳಾ ಕಲಾ, ವಾಣಿಜ್ಯ &
ನಿರ್ವಹಣಾ ಕಾಲೇಜು, ಶೇಷಾದ್ರಿ ರಸ್ತೆ,
ಬೆಂಗಳೂರು – 560 001.
ಮೊ: 9449779217

17. **ಡಾ. ಚೈತಾಲಿ ಕೆ.ಎಸ್.**
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ
ಕಾಲೇಜು(ಸ್ವಾಯತ್ತ), ಗುಬ್ಬಿ.
ಮೊ: 9449306576

18. **ಸಿ.ಹೆಚ್. ಭಾಗ್ಯ**
ನಂ–303, ರಾಮಲೀಲಾ ಅಪಾರ್ಟ್ಮೆಂಟ್,
6ನೆಯ ಅಡ್ಡರಸ್ತೆ, ಅಶೋಕನಗರ,
ಎನ್.ಆರ್. ಕಾಲೋನಿ ಸಮೀಪ,
ಬೆಂಗಳೂರು–50.
ಮೊ: 9341732990